ಸಂವಾದ

ನವೆಂಬರ್ ೨೦೧೦
ರೂ. ೨೦

9ನೇ ವರ್ಷಕ್ಕೆ

ಜೈಲಿನ ಕಥೆ
ಬಂಧಿಗಳ ವ್ಯಥೆ

ರಥಯಾತ್ರೆಯಿಂದ
ಪಾದಯಾತ್ರೆವರೆಗೆ...

ಅರವತ್ತು ವರ್ಷಗಳ ಸಂವಿಧಾನ

ತಳ ವರ್ಗಗಳಿಗೆ ಏನು ಮಾಡಿದೆ?

ಸಂವಾದ

ಮಾಸ ಪತ್ರಿಕೆ

ಸಂಪುಟ ೯ ಸಂಚಿಕೆ ೧
ನವೆಂಬರ್ ೨೦೧೦

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
© Editorial: 9448048306
© Circulation: 9945264687,
080-23480278
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩

❑ ಹೊಸ ಪುಸ್ತಕ ೩೪

❑ ಸಂಪಾದಕರೊಂದಿಗೆ ಸಂವಾದ:
○ ಆನಂದ ಝುಂಜರವಾಡ ೦೪
○ ಜ.ಹೊ ನಾರಾಯಣಸ್ವಾಮಿ ೦೬
○ ಮಲ್ಲಿಕಾರ್ಜುನ ಗುಮ್ಮಗೋಳ ೦೭

❑ ಅಯೋಧ್ಯೆ ತೀರ್ಪು:
ಮಸೀದಿ ಕೆಡವಿ ಮಂದಿರ
ಕಟ್ಟಿದ ನ್ಯಾಯಾಲಯ
○ ಶಿವಸುಂದರ್ ೦೮

❑ ನೀನ್ಯಾರಿಗಾದೆಯೊ ಎಲೆ ಮಾನವ...
○ ಡಾ.ಹಿ.ಶಿ. ರಾಮಚಂದ್ರೇಗೌಡ ೧೪



❑ ಸಮಾಜವಾದಿಯೊಬ್ಬನ ಚದುರಿದ ಚಿಂತನೆಗಳು
ಅರವತ್ತು ವರ್ಷಗಳ ಸಂವಿಧಾನ:
ತಳ ವರ್ಗಗಳಿಗೆ ಏನು ಮಾಡಿದೆ..?
○ ಡಿ.ಎಸ್ ನಾಗಭೂಷಣ ೧೮

❑ ಜೈಲಿನ ಕಥೆ ಬಂಧಿಗಳ ವ್ಯಥೆ
○ ಭರತ್ ಚಂದ್ರ ೨೨

❑ ರಥಯಾತ್ರೆಯಿಂದ ಪಾದಯಾತ್ರೆಯವರೆಗೆ
○ ನಾ ದಿವಾಕರ ೨೪

❑ ಹಾವಳಿ ಮಂಜನ ಕಾರ್ಮಿಕ ಹೋರಾಟ
○ ಡಾ. ವಿಠ್ಠಲ ಭಂಡಾರಿ, ಕೆರೆಕೋಣ ೨೮

❑ 'ವಿಶ್ವಾಸಮತ' ಗೆದ್ದ ಅದ್ಭುತ ನಟನೆ!
○ ಜ್ಯೋತಿ ಗುರುಪ್ರಸಾದ್ ೩೬

❑ ಕಾಲಮಾನ...೧೧
○ ಡಾ. ಮುಜಾಫ್ಫರ್ ಅಸ್ಸಾದಿ ೩೮

❑ ಧರೆ ಹತ್ತಿ ಉರಿದರೆ... ೨೬
○ ಡಾ. ಟಿ.ಆರ್ ಚಂದ್ರಶೇಖರ್ ೪೨

❑ ದಲಿತ್ ಡೈರಿ
○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬

❑ ಬುದ್ಧಾಯಣ
○ ಸಿ. ಎಚ್ ರಾಜಶೇಖರ್ ೫೦

ಕವನಗಳು : ❑ ಝುನಾಯಣ ೩೩

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಸಮಕಾಲೀನ ಚರ್ಚೆಗಳ ದುರಂತ

ಪತ್ರಗಳು

ಪ್ರಿಯ ಸಂಪಾದಕರೇ,

'ಸಂವಾದ'ದ ಸೆಪ್ಟಂಬರ್ ಸಂಚಿಕೆಯಲ್ಲಿ 'ದೊಂಬರಾಟ' ಪದ ಪ್ರಯೋಗದ ಬಗ್ಗೆ ನಾನು ಬರೆದ ಟಿಪ್ಪಣಿಯ ಬಗ್ಗೆ ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟವಾಗಿರುವ ಪತ್ರಗಳನ್ನು ಗಮನಿಸಿರುವೆ. ಅವು ನನ್ನಲ್ಲಿ ವಿಷಾದವನ್ನುಂಟು ಮಾಡಿದುವಾದರೂ, ಆಶ್ಚರ್ಯವನ್ನೇನೂ ಉಂಟು ಮಾಡಲಿಲ್ಲ. ಏಕೆಂದರೆ, ಈ ಟಿಪ್ಪಣಿಯನ್ನು ಪ್ರಕಟಣೆಗೆ ಕಳಿಸಿದಾಗಲೇ ಸಂಪಾದಕರಾದ ಇಂದೂಧರರು, ಇಂತಹ ಪ್ರತಿಕ್ರಿಯೆಗಳ ಬಗ್ಗೆ ಎಚ್ಚರಿಸಿದ್ದರಾದರೂ, ನಾನು ಅಂತಹ ಪ್ರತಿಕ್ರಿಯೆಗಳು ಹೊರಬಂದು ಜಾತಿ–ಸಮಾಜದ ಮನಸ್ಸು ಬರಿದಾಗಲಿ ಎಂದೇ ಅದನ್ನು ಪ್ರಕಟಿಸಲು ಮನವಿ ಮಾಡಿದ್ದೆ. ಆದರೆ ಈ ಟಿಪ್ಪಣಿ ಪ್ರಕಟವಾದಾಗ, ಅದನ್ನು ಒಪ್ಪಿ, ಮೆಚ್ಚಿಕೊಂಡು ನನ್ನೊಂದಿಗೆ ಮುಖತಃ ಮತ್ತು ದೂರವಾಣಿಯಲ್ಲಿ ಮಾತಾಡಿದ ಗೆಳೆಯರಾರೂ ಪ್ರತಿಕ್ರಿಯೆ ಬರೆಯದೆ, ಅದನ್ನೊಪ್ಪದವರು ಮತ್ತು ಟೀಕೆ ಮಾಡುವವರು ಮಾತ್ರ ಪ್ರತಿಕ್ರಿಯೆ ಬರೆದಿರುವುದು ನನಗೆ ಸೋಜಿಗವನ್ನುಂಟು ಮಾಡಿದೆ. ಇದು ನಮ್ಮ ಎಲ್ಲ ಸಮಕಾಲೀನ ಚರ್ಚೆಗಳ ದುರಂತ ಮುಖವನ್ನು ಸೂಚಿಸುತ್ತದಷ್ಟೆ. ಸಿದ್ಧ ಎರಕಗಳ ಜನಪ್ರಿಯ ಮಾದರಿಗಳಲ್ಲಿ ಯೋಚಿಸುವವರದ್ದೇ ಇದರಲ್ಲಿ ಕಾರುಬಾರು ಮತ್ತು ಆಟಾಟೋಪ! ಮಿಕ್ಕವರದ್ದೇನಿದ್ದರೂ, 'ರಿಸ್ಕ್' ಇಲ್ಲದ ಅನೌಪಚಾರಿಕ ಅಥವಾ ಖಾಸಗಿ 'ಮಾತುಕತೆ'ಗೆ ಸೀಮಿತವಾದ ಪಂಡಿತ ಚರ್ಚೆ!

ಅದೇನೇ ಇರಲಿ, ನನ್ನ ಟಿಪ್ಪಣಿಯನ್ನು ಸಾರಾಸಗಟಾಗಿ ಟೀಕಿಸಿರುವವರು ನನ್ನ ಅಭಿಪ್ರಾಯವನ್ನು ಬದಲಿಸಿಕೊಳ್ಳುವಂತೆ ಮಾಡುವ ಹೊಸದೇನನ್ನೂ ಹೇಳಿಲ್ಲ. ನನ್ನ ಪ್ರಕಾರ, ಸಾಮಾಜಿಕ ನ್ಯಾಯ ಎಂದರೆ ಜಾತಿ ನ್ಯಾಯವೆಂದಷ್ಟೇ ತಿಳಿದು ಬರೆದ ಪತ್ರಗಳವು. ಸಾಮಾಜಿಕ ನ್ಯಾಯವೆಂಬುದು ಸಮಾಜವಾದಿ ರಾಜಕಾರಣದ ಒಂದು ಭಾಗವಷ್ಟೇ. ಆದರೆ ಕಳೆದ ಕೆಲವು ವರ್ಷಗಳಿಂದೀಚೆಗೆ ಸಮಾಜವಾದವನ್ನೇ ಕೈಬಿಟ್ಟು, ಬರೀ ಸಾಮಾಜಿಕ ನ್ಯಾಯದ ಕೂಗು ಹಾಕುತ್ತಿರುವುದರಿಂದಾಗಿ; ಸಾಮಾಜಿಕ ನ್ಯಾಯ ಎಂದರೆ ಜಾತಿ ನ್ಯಾಯವೆಂದೇ ಪ್ರತಿಬಿಂಬಿಸಲ್ಪಟ್ಟು, 'ಜಾತಿ ವ್ಯವಸ್ಥೆ'ಗೆ ಇಂದು ಹೊಸ ಮತ್ತು ಹಿಂದಿಗಿಂತ ಹೆಚ್ಚು ಅಪಾಯಕಾರಿಯಾದ ಮಾನ್ಯತೆಯನ್ನು ಒದಗಿಸಲಾಗುತ್ತಿದೆ. ಅದು ಈ ಎಲ್ಲ ಪತ್ರಗಳಲ್ಲೂ ಹಲವು ರೂಪಗಳಲ್ಲಿ–ಕೆಲವುಗಳಲ್ಲಿ ಉಗ್ರವಾಗಿಯೂ!–ಕಾಣಿಸಿಕೊಂಡಿದೆಯಷ್ಟೆ. ಇದರ ರಾಜಕೀಯ ಪರಿಣಾಮವೆಂದರೆ, ಸಮಾಜವಾದಿ ದೃಷ್ಟಿಯಿಲ್ಲದ ಈ ಸಾಮಾಜಿಕ ನ್ಯಾಯದ ಬಹುಪಾಲು ಫಲಾನುಭವಿಗಳು ಕಳೆದ ಕೆಲವುವರ್ಷಗಳಿಂದೀಚೆಗೆ, ಬಲಪಂಥೀಯ ಕೋಮುವಾದಿ ರಾಜಕಾರಣದ ಕಡೆ ಸುಲಭವಾಗಿ ಆಕರ್ಷಿತರಾಗುತ್ತಿರುವುದು.

ಇದರ ಹಿಂದಿನ ತಾತ್ವಿಕತೆಯನ್ನು ನಾನು ಕಳೆದ ಸಂಚಿಕೆಯಲ್ಲಿ ರಹಮತ್ ತರೀಕೆರೆಯವರಿಗೆ ಬರೆದ ಉತ್ತರದಲ್ಲಿ (ಮತ್ತು ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ನನ್ನ ಇನ್ನೊಂದು ಲೇಖನದಲ್ಲಿ) ವಿವರವಾಗಿ ಪ್ರಸ್ತಾಪಿಸಿರುವುದರಿಂದ ಇಲ್ಲಿ ಇನ್ನು ಹೆಚ್ಚಿನ ವಿವರಣೆ ಅಗತ್ಯವಿಲ್ಲವೆಂದು ಭಾವಿಸಿದ್ದೇನೆ.

ಡಿ.ಎಸ್.ನಾಗಭೂಷಣ, ಶಿವಮೊಗ್ಗ

ಲಜ್ಜೆಗೆಟ್ಟ ರಾಜಕಾರಣ: ಪ್ರಜಾಪ್ರಭುತ್ವದ ಅಣಕ!

ಮಾನ್ಯ ಸಂಪಾದಕರೇ,

ಕರ್ನಾಟಕದ ಇಂದಿನ ರಾಜಕಾರಣ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ನಂಬಿದವರಿಗೆ ದಂಗು ಬಡಿಸಿದೆ. ತನ್ನ ಅಧಿಕಾರ ಉಳಿಸಿಕೊಳ್ಳಲು ಬಿಜೆಪಿ ಸರ್ಕಾರ ಅನುಸರಿಸಿದ ವಾಮಮಾರ್ಗ ಸಂವಿಧಾನದ ಆಶಯಗಳಿಗೆ ತಿಲಾಂಜಲಿ ನೀಡಿದೆ. ರಾಜಕಾರಣಿಗಳ ರೌಡಿಯಿಸಂ ವರ್ತನೆಗಳು ವಿಧಾನಸಭೆಗೂ ವಕ್ಕರಿಸಿ ಅದರ ಪಾವಿತ್ರತೆಯನ್ನು ಹಾಳು ಮಾಡಿವೆ. ಅಕ್ರಮವಾಗಿ ಒಮ್ಮೆ ಧ್ವನಿಮತದ ಮೂಲಕ ಮತ್ತೊಮ್ಮೆ ತಲೆಎಣಿಸಿ ಬಹುಮತ ಪಡೆದಾಗಿನ ಮುಖ್ಯಮಂತ್ರಿ ಯಡಿಯೂರಪ್ಪನವರ ವಿಜಯ ಸಂಕೇತದ ಚಿತ್ರಗಳು, ನಿದ್ದೆ ಮಾಡುತ್ತಿದ್ದಾಗ ಬಂದು ಹೆದರಿಸುವ 'ಭೂತ'ದಂತೆ ಕಾಡುತ್ತವೆ.

'ದೇಶ ಭಕ್ತರ' ಹೀನ ಚರಿತ್ರೆಯನ್ನು ಸರಿಯಾಗಿ ಗ್ರಹಿಸದ ಕನ್ನಡಿಗರು ಇವರಿಗೆ ಮತ ನೀಡಿ ಚುನಾಯಿಸಿದ್ದಕ್ಕೆ ಪರಿತಪಿಸುವಂತಾಗಿದೆ. ತಮ್ಮ ಶಾಂತಿಪ್ರಿಯತೆಯ ಘನತೆಗೆ ಬಂದ ದುರ್ಗತಿ ಕಂಡು ಹೌಹಾರುವಂತಾಗಿದೆ. ಹಿಂದಿನೆಲ್ಲಾ ಸರ್ಕಾರಗಳನ್ನು ಮೀರಿಸಿದ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಭಾರಿ ಹಗರಣ, ಯಾವುದೇ ಎಗ್ಗಿಲ್ಲದೆ ನಿರಂತರ ಕೊಳ್ಳೆ ಹೊಡೆಯುತ್ತಿರುವುದನ್ನು ನೋಡಿ ಕಂಗಾಲಾಗಿದ್ದಾರೆ. ಎಲ್ಲದಕ್ಕೂ ರೆಡಿಯಾಗಿ ನಿಂತಿರುವ ಗಣಿ, ಭೂ ಮಾಫಿಯಾಗಳ ಠೇಂಕಾರ, ವ್ಯವಸ್ಥೆಯನ್ನೆ ಬುಡಮೇಲು ಮಾಡಲು ಹೊರಟ ಇವರ ಜನವಿರೋಧಿ ನಡವಳಿಕೆ ಆತಂಕಕ್ಕೀಡು ಮಾಡಿದೆ.

ತಮ್ಮನ್ನು ಅಧಿಕಾರಕ್ಕೆ ತಂದ ಜನ ಏನೆಂದುಕೊಂಡಾರು? ಮತ್ತೆ ಅವರಿಗೆ ಮುಖ ತೋರಿಸುವುದು ಹೇಗೆ? ಎಂಬ ಅಂಜಿಕೆ ಲೇಶಾವಲೇಷವೂ ಇವರಿಗಿಲ್ಲ. ಕುರ್ಚಿ ಉಳಿಸಿಕೊಳ್ಳಲು ವಾಮಚಾರಕ್ಕೂ ಇಳಿಯ ಬಲ್ಲರೆಂಬುದು ಈ ಗಾಗಲೇ ಸಾಬಿತಾಗಿದೆ. ಜನರ ಬಳಿಗೆ ಹೋಗುವ ಬದಲು ತಮ್ಮ ಪಾಪಕರ್ಮಗಳನ್ನು ಮುಚ್ಚಿಕೊಳ್ಳಲು ಇವರಿಗೆ ಮಠಾದೀಶರ, ದೇವರ ಇನ್‌ಪ್ಲೂಯೆನ್ಸ್ ಬೇಕು. ಅದಕ್ಕಾಗಿ ನಿರಂತರ ಸುತ್ತಾಟ. ಮೂಢನಂಬಿಕೆಯ ಪರಮಾವಧಿ. ಇಷ್ಟಕ್ಕೆಲ್ಲ ಕಾರಣ ಹುಡುಕುವುದರ ಬದಲು ಕುಟಿಲೋಪಾಯಗಳನ್ನೇ ಹಾಸಿ ಹೊದ್ದು ಮಲಗುವ ಚಾಳಿ. ನಿಜಕ್ಕೂ ಇವರು ಕ್ಷಮೆಗೆ ಅರ್ಹರಲ್ಲ.

ಇಂದಿನ ನೀತಿಗೆಟ್ಟ ರಾಜಕಾರಣಕ್ಕೆ ಎಲ್ಲಾ ಪಕ್ಷಗಳ ಧೋರಣೆಗಳು ಪಾತಾಳಕ್ಕಿಳಿದಿರುವುದೇ ಕಾರಣ. ಹೇಗಾದರೂ ಸರಿ ಅಧಿಕಾರ ಹಿಡಿಯಬೇಕೆಂಬ ಹಸಿವು ಅನೈತಿಕ, ಅಕ್ರಮ ಮಾರ್ಗದತ್ತ ಎಳೆದೊಯ್ಯುತ್ತದೆ. ಇಂದಿನವರೆಗಾದದ್ದೇ ಮುಂದೆ ನಮಗೂ ಎಂಬ ವಿವೇಕ ಯಾರಲ್ಲೂ ಇಲ್ಲ. ರಾಜ್ಯಪಾಲ, ಸ್ಪೀಕರ್, ಬಂಡಾಯವೆದ್ದವರು, ವಿರೋಧ ಪಕ್ಷಗಳ ಆದಿಯಾಗಿ ಎಲ್ಲರೂ ಪಾಖಂಡಿಗಳೇ. ಜನರ ಆಶಯಗಳನ್ನು ಗಾಳಿಗೆ ತೂರಿದವರೇ. ಈ ಎಲ್ಲಾ ಘಟನೆಗಳನ್ನು ಮತ್ತೆ ಮತ್ತೆ ತೋರಿಸಿ ಟಿಆರ್‌ಪಿ ಹೆಚ್ಚಿಸಿ ಕೊಳ್ಳುವ ತವಕ ಮಾಧ್ಯಮಗಳದ್ದು. ಬಾಯಿದ್ದು ಮೂಕರಾಗಬೇಕಾದ ಸ್ಥಿತಿ ಪ್ರಗತಿಪರರದ್ದು. ಅಂತೂ ಕರ್ನಾಟಕಕ್ಕೆ ಈ ದುಸ್ಥಿತಿ ಬರಬಾರದಿತ್ತು.

'ಮಾಡಿದ್ದುಣ್ಣೊ ಮಾರಾಯ' ಎಂಬ ಮಾತು ಅಕ್ಷರಸಹ ಬಿಜೆಪಿಯ ಇಂದಿನ ದುಸ್ಥಿತಿಗೆ ಕಾರಣವಾಗಿದೆ. ಎರಡು ವರ್ಷಗಳ ಹಿಂದೆ ಸರ್ಕಾರ ರಚಿಸುವಾಗ ಹಣ ಮತ್ತು ಅಧಿಕಾರದ ಅಮಿಷವೊಡ್ಡಿ ಕರೆತಂದವರೇ ಈಗ ಇವರಿಗೆ ತಿರುಗು ಬಾಣವಾಗಿದ್ದಾರೆ. ಇಷ್ಟೆಲ್ಲಾ ಆದರೂ ಬಿಜೆಪಿಯವರು ಬುದ್ಧಿ ಕಲಿತರಾ ಎಂದರೆ, ಅದು ಅವರ ಜಾಯಮಾನದಲ್ಲೇ ಇಲ್ಲ. ಮತ್ತೆ ಆಪರೇಶನ್ ಕಮಲಾ ಎನ್ನುತ್ತಾ ನೂರಾರು ಕೋಟಿ ರೂಗಳನ್ನು ಹಿಡಿದು ಶಾಸಕರ ಭೇಟೆ ಆರಂಭಿಸಿದ್ದಾರೆ. ಇಂಥ ಲಜ್ಜೆಗೆಟ್ಟವರಿಗೆ ಇತಿಹಾಸವೇ ಪಾಠ ಕಲಿಸುತ್ತೆ.

ಭೈರಸಂದ್ರ ಗಂಗರಾಜು,
ಬೆಂಗಳೂರು

ದೇಶಿಯ ತಳಿಗಳ ನಾಶ

ಪ್ರೀಯ ಸಂಪಾದಕರೇ,

ಸಪ್ಟೆಂಬರ್ ತಿಂಗಳ 'ಸಂವಾದ'ದಲ್ಲಿ ಪ್ರಕಟವಾದ ಆರ್.ಎಸ್. ಮಾಲಗತ್ತಿ ಅವರ ಹಸಿವೆಬ ಹಕ್ಕಿ ಹಾರುತಿದೆ ನೊಡಿದಿರಾ ಎಂಬ ಲೇಖನ ತುಂಬ ಆಸಕ್ತಿ ದಾಯಕವಾಗಿತ್ತು, ಆದರೆ ಲೇಖಕರು ಇನ್ನು ಹಲವು ದೃಷ್ಟಾಂತಗಳನ್ನು, ಅಳಕ್ಕಿಸಬಹುದಾಗಿತ್ತೇನೋ ಎಂಬ ನಂಬಿಕೆ ನಮ್ಮದು.

ಗೋಹತ್ಯೆ ನಿಷೇಧ ಮಸೂದೆ ರಾಷ್ಟ್ರಪತಿ ಅವರ ಅಂಗೀಕಾರಕ್ಕಾಗಿ ಒತ್ತಾಯಿಸುತ್ತಿರುವ ಸಂದರ್ಭದಲ್ಲಿ ಲೇಖನ ಮೂಡಿ ಬಂದಿರುವುದು ಉಪಯುಕ್ತವಾಗಿದೆ. ಗೋಹತ್ಯೆ ನಿಷೇಧಿಸುವುದರಿಂದ ಈ ದೇಶದ ಸಂಸ್ಕೃತಿ ಉಳಿಯುತ್ತದೆ ಎಂಬಂತೆ ವರ್ತಿಸುತ್ತಿರುವ ಸರಕಾರ ಹಾಗೂ ಸಂಘಪರಿವಾರದವರು ದೇಶಿಯ ತಳಿಗಳು ವಿನಾಶದಂಚಿಗೆ ಸೇರಲು ಕಾರಣ ಯಾರು ಎಂಬುವುದನ್ನು ಮರೆತಂತಿದೆ.

ಚೆಟ್ಟೆಪ್ಪ ಈ. ಹೊಸ್ಮನಿ
ಗುಲಬರ್ಗಾ

ಸಂಪಾದಕರೊಡನೆ ಸಂವಾದ

ತತ್ವ ಮತ್ತು ತತ್ವಾರ್ಥ ಪರಂಪರೆ

ಆನಂದ ಝುಂಜರವಾಡ

ಕುಮಾರವ್ಯಾಸ ಭಾಗವತ-ಕವಿ. ಆತನೇನು ಮಾಧ್ವನಾಗಿದ್ದನೆ?, ಭಾಗವತ ಸಂಪ್ರದಾಯದ ಸ್ಮಾರ್ತನಾಗಿದ್ದನೆ?, ಶಿವ ಸರ್ವೋತ್ತಮತ್ವದ ಸ್ಮಾರ್ತನಾಗಿದ್ದನೆ? ನನಗೆ ತಿಳಿಯದು. ಹಾಗೆ ನೋಡಿದರೆ ಹೊಸಗನ್ನಡ ಸಾಹಿತ್ಯ ಪರಂಪರೆಯಲ್ಲಿ ಮಾಧ್ವ-ಲೇಖಕರ ಮಾಧ್ವ-ಅಭಿನಿವೇಷಪೂರ್ಣ ಬರಹ ಕಡಿಮೆಯೇ. ನಾನಂತು ಅಂಥ ಕೃತಿಗಳನ್ನು ಕಂಡಿಲ್ಲ. ಸಂಸ್ಕಾರದ ಪ್ರಾಣೇಶಾರ್ಯರು, ಗ್ರಾಮಾಯಣದ ಬಾಳಾಚಾರ್ಯರು, ಕಟ್ಟಿ ಶೇಷಾಚಾರ್ಯರು ಅನುವಾದಿಸಿದ "ಶೂರ್ಪಾಲಿಯ ಆಚಾರ್ಯರು" ("ವಿಕಾರ್ ಆಫ್‌ದ ವೇಕಪೀಲ್ಡ್" ಕಾದಂಬರಿಯ ಅನುವಾದ) ಇವರೆಲ್ಲ ಮಾಧ್ವರೇ, ಇರಬಹುದು. ಆದರೆ ಅವರೆಲ್ಲರೂ ಒಟ್ಟಾಗಿ ಹೇಳುತ್ತಿರುವದು, ತೋರುತ್ತಿರುವದು, ಮಾಧ್ವತ್ವದ ವಿಘಟನೆಯ ಚಾರಿತ್ರಿಕ ಸತ್ಯಗಳನ್ನೇ ಹೊರತು, ಇವರ್‍ಯಾರೂ 'ದಾಸ'ರಾಗಿಲ್ಲ. ಕುಮಾರವ್ಯಾಸ, ಮಧ್ವಾಚಾರ್ಯರು ಬಂದು ಹೋದ 100-150 ವರ್ಷಗಳ ಅಂತರದಲ್ಲೇ ಬಂದವನು. ಮಧ್ವರ ನಂತರದ ಅವರ ಮಠೀಯ-ಸಂಸ್ಕೃತಿಯ ಒಳಗಿನ ಏಳು -ಬೀಳುಗಳನ್ನು ಕಂಡವನು ಆತ ತನ್ನ ಕಾವ್ಯದಲ್ಲಿ ತನ್ನೊಳಗಿನ ಈ ಬಗೆಯ ಪ್ರತಿಕ್ರಿಯೆಗೆ ಒಂದು ಸಂದರ್ಭವನ್ನು ಬಳಸಿಕೊಳ್ಳುತ್ತಾನೆ. ವಿದುರ-ನೀತಿಯ ಸಂದರ್ಭದಲ್ಲಿ ವಿದುರ ಧೃತರಾಷ್ಟ್ರನಿಗೆ, ಜೀವನದ ಹಲವಾರು ಸತ್ಯಗಳ ಸ್ವರೂಪಗಳನ್ನು ತಿಳಿಸುವಾಗ ಈ ಮಾತು ಹೇಳುತ್ತಾನೆ.

ಮಾನ್ಯ ಸಂಪಾದಕರೇ,

ಶಕ್ತ ಲೇಖಕ, ಚಿಂತಕ, ದೇವನೂರ ಮಹಾದೇವ ಅವರು ಪೇಜಾವರರ "ಮಾದಿಗ-ವೈಷ್ಣವೀಕರಣ" ಕುರಿತು ಬರೆದ ಲೇಖನ ಅತ್ಯಂತ ಮಹತ್ವದ್ದಾಗಿದೆ. ಮೂಲತತ್ವದ ಕೇಂದ್ರಬಿಂದುವಿನಿಂದ ಬಹುದೂರ ಚಲಿಸಿ ಬಂದಿರುವ, ಮಾಧ್ವ-ಸಂಸ್ಕೃತಿಯ ವರ್ತಮಾನಿಕ ವರ್ತನೆಯು, ಮಾಧ್ವ-ತತ್ವದ ಮೂಲ ಪರಿಭಾವನೆಗಳಿಂದ ಅಪಾಯಕಾರೀ ಹಂತಕ್ಕೆ ಬರುವಷ್ಟು ಚ್ಯುತವಾಗಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಜೀವ-ವೈವಿಧ್ಯದ ಒಟ್ಟು ಪರಿಭಾವನೆಯ-ಸಾಮಾಜಿಕ-ನ್ಯಾಯಕ್ಕೆ ಬದ್ಧವಾದ-ಸಮಕಾಲೀನ ಅರ್ಥಾನುಸಂಧಾನವನ್ನು ಮಾಡಲು 'ಲೇಖನ'ದ ಚೌಕಟ್ಟೇ ಸಾಲದು. ಅದರಲ್ಲೂ ಇಂಥ ಪ್ರಯತ್ನಗಳು ಒಂದಿಷ್ಟೂ ನಡೆಯದ-8 ಶತಮಾನಗಳ ಕಾಲದ ಅಂತರವನ್ನು ಅರಗಿಸಿಕೊಳ್ಳುವ ಕ್ರಮದಲ್ಲೇ ಎರಡು ಅಪಾಯಗಳಿರುತ್ತವೆ.

ಒಂದೆಂದರೆ ಮಧ್ವಾಚಾರ್ಯರು ಹೇಳದೆ ಇದ್ದುದನ್ನು ಹೇಳಿದ್ದಾರೆಂದು ತಪ್ಪು ತಿಳಿಯುವದು ಅಥವಾ ಹೇಳಿದ್ದ ಮಾತಿನ ತತ್ವ, ದೇಶ, ಕಾಲಗಳ ಸಂದರ್ಭವನ್ನೇ ಕಡೆಗಣಿಸಿ, ಅದನ್ನು ಅತಿ-ವ್ಯಾಖ್ಯಾನಕ್ಕಳವಡಿಸುವ ಮೂಲಕ, ಅದಕ್ಕೊಂದು ಸುಳ್ಳು ತತ್ವಾರ್ಥದ ಶಾಲು ಹೊದಿಸುವದು. ಈ ಎರಡೂ ಆಗದಂತೆ ಮಾಧ್ವ- ಸಂಸ್ಕೃತಿಯ ಒಟ್ಟು ಚರಿತ್ರೆಯ ಕುರಿತು ನಾನೇ ಒಂದು ಕೃತಿಯನ್ನು, - ಒಬ್ಬ ಕವಿಯಾಗಿ - ಒಬ್ಬ ಮಾಧ್ವ ಸಂಸ್ಕಾರಗಳ ಹೊರೆ ಹೊತ್ತವನಾಗಿ - ಏಟಿಎಂ, ಮೊಬಾಯಿಲ್, ಮೌಸ್‌ಗಳ ಜಗತ್ತಿನೊಳಗಿನ ಅನಾಥನಾಗಿ - ನಾನೇ ಬರೆಯುತ್ತಿದ್ದೇನೆ.

ಆದರೆ ನಾನಿಲ್ಲಿ ಹೇಳಬಯಸುತ್ತಿರುವುದು ಮತ್ತೊಂದು ಮಾತು. ನಿಜ, ಮಾಧ್ವದ ಜೀವ-ವೈವಿಧ್ಯದಂತಹ ಪರಿಕಲ್ಪನೆಗಳ ಚಾರಿತ್ರಿಕ ಅರ್ಥ-ಪ್ರತೀಕಗಳ ಬೆಳವಣಿಗೆಯಾಗಲೇ ಇಲ್ಲ. ಈ ಬಗೆಯಿಂದಾಗಿ ಜೀವನದ ಜೀವಂತಿಕೆಗೆ ಮಾಂಪಲವಾಗಿ ಮಿಡಿದ ಎಲ್ಲ ತತ್ವವೇತ್ತರಿಗೆ, ಕಲಾವಿದರಿಗೆ, ಚಿಂತಕರಿಗೆ, ಮಾಧ್ವ-ತತ್ವಜ್ಞಾನ ಒಂದು ವಿಚಿತ್ರ-ಬಗೆಯ ಏಕೈಕ ತಳಿಯ ಮಾದರಿಯಾಗಿಯೇ ಕಂಡಿತು. ಹಾಗಾದರೆ ಕುವೆಂಪು ಅವರು ಅದನ್ನು ವಿರೋಧಿಸುವ ಮೊದಲು, ಕನ್ನಡದ ಕಾವ್ಯ ಚರಿತ್ರೆಯಲ್ಲಿ ಆ ಬಗೆಯ ಸ್ಪಷ್ಟವಾದ ವಿರೋಧೀ-ಧ್ವನಿ,-ಮಾಧ್ವ-ವಿರೋಧೀ ಧ್ವನಿ,-ಎಲ್ಲಿಯಾದರೂ ಬಂದಿತ್ತೆ?, ಎಂದು ನಾನು ಹುಡುಕುತ್ತಾ ಹೋದೆ. (ನಾನು ಬರೆಯುತ್ತಿರುವ ಕೃತಿಗಾಗಿ)

ಕುಮಾರವ್ಯಾಸ ಭಾಗವತ-ಕವಿ. ಆತನೇನು ಮಾಧ್ವನಾಗಿದ್ದನೆ?, ಭಾಗವತ ಸಂಪ್ರದಾಯದ ಸ್ಮಾರ್ತನಾಗಿದ್ದನೆ?, ಶಿವ ಸರ್ವೋತ್ತಮತ್ವದ ಸ್ಮಾರ್ತನಾಗಿದ್ದನೆ? ನನಗೆ ತಿಳಿಯದು. ಹಾಗೆ ನೋಡಿದರೆ ಹೊಸಗನ್ನಡ ಸಾಹಿತ್ಯ ಪರಂಪರೆಯಲ್ಲಿ ಮಾಧ್ವ-ಲೇಖಕರ ಮಾಧ್ವ-ಅಭಿನಿವೇಷಪೂರ್ಣ ಬರಹ ಕಡಿಮೆಯೇ. ನಾನಂತು ಅಂಥ ಕೃತಿಗಳನ್ನು ಕಂಡಿಲ್ಲ. ಸಂಸ್ಕಾರದ ಪ್ರಾಣೇಶಾರ್ಯರು, ಗ್ರಾಮಾಯಣದ ಬಾಳಾಚಾರ್ಯರು, ಕಟ್ಟಿ ಶೇಷಾಚಾರ್ಯರು ಅನುವಾದಿಸಿದ "ಶೂರ್ಪಾಲಿಯ ಆಚಾರ್ಯರು" ("ವಿಕಾರ್ ಆಫ್‌ದ ವೇಕಪೀಲ್ಡ್" ಕಾದಂಬರಿಯ ಅನುವಾದ) ಇವರೆಲ್ಲ ಮಾಧ್ವರೇ, ಇರಬಹುದು.

ಆದರೆ ಅವರೆಲ್ಲರೂ ಒಟ್ಟಾಗಿ ಹೇಳುತ್ತಿರುವದು, ತೋರುತ್ತಿರುವದು, ಮಾಧ್ವತ್ವದ ವಿಘಟನೆಯ ಚಾರಿತ್ರಿಕ ಸತ್ಯಗಳನ್ನೇ ಹೊರತು, ಇವರ್‍ಯಾರೂ 'ದಾಸ'ರಾಗಿಲ್ಲ. ಕುಮಾರವ್ಯಾಸ, ಮಧ್ವಾಚಾರ್ಯರು ಬಂದು ಹೋದ 100-150 ವರ್ಷಗಳ ಅಂತರದಲ್ಲೇ ಬಂದವನು. ಮಧ್ವರ ನಂತರದ ಅವರ ಮಠೀಯ-ಸಂಸ್ಕೃತಿಯ ಒಳಗಿನ ಏಳು -ಬೀಳುಗಳನ್ನು ಕಂಡವನು ಆತ ತನ್ನ ಕಾವ್ಯದಲ್ಲಿ ತನ್ನೊಳಗಿನ ಈ ಬಗೆಯ ಪ್ರತಿಕ್ರಿಯೆಗೆ ಒಂದು ಸಂದರ್ಭವನ್ನು ಬಳಸಿಕೊಳ್ಳುತ್ತಾನೆ. ವಿದುರ-ನೀತಿಯ ಸಂದರ್ಭದಲ್ಲಿ ವಿದುರ ಧೃತರಾಷ್ಟ್ರನಿಗೆ, ಜೀವನದ ಹಲವಾರು ಸತ್ಯಗಳ ಸ್ವರೂಪಗಳನ್ನು ತಿಳಿಸುವಾಗ ಈ ಮಾತು ಹೇಳುತ್ತಾನೆ.

ಜೀವ-ಪರಮನಬೇಧವನು ಸಂ
ಭಾವಿಸದೆ, ವೇದಾಂತ ಶಾಸ್ತ್ರ ವಿ
ದಾವ ಮುಖವೆಂದರಿಯದೆಯೆ
ದಾಸೋಹವೆಂದೆನುತ
ಕೋವಿದರ ಸಂಗವನುಳಿದು ಮಾ
ಯಾ ವಿಲಾಸದ ನೆಲೆಯ ನೋಡದೆ
ಸಾಯುತಿಹುದೇ ದ್ವೈತ ಚಿತ್ತ್ಯೆಸಂದನಾ ಮುವಿಪ.

(ಉ.ಪರ್ವ\ ನಾಲ್ಕನೇ ಸಂಧಿ\75)

ಆಚಾರ್ಯ ಮಧ್ವರ ಹಿನ್ನೆಲೆಯ ದ್ವೈತ ಪಂಥೀಯರ ತಿಳುವಳಿಕೆ, ಬದುಕು, ಸಾಮಾಜಿಕ ವರ್ತನೆ, ಎಲ್ಲವನ್ನೂ ಕೂಡಿಸಿ ಕುಮಾರವ್ಯಾಸ ಒಟ್ಟಾರೆ ಐದು ಆರೋಪಗಳನ್ನು ಮಾಡುತ್ತಾನೆ.

೧) ಜೀವ ಮತ್ತು ಪರಮಾತ್ಮನಲ್ಲಿ ಭೇದವನ್ನು ಇವರು ಸಂಭಾವಿಸುತ್ತಿಲ್ಲ ಅಂದರೆ ಸಮ್ಯಕ್ ಸ್ವರೂಪದಲ್ಲಿ ಸರಿಯಾಗಿ ಪರಿಭಾವಿಸುತ್ತಿಲ್ಲ. ಭೇದದ ಈ ಸಮ್ಯಕ್-ಸಂಭಾವನೆಯ ಬಗೆಗೆ ಕುಮಾರವ್ಯಾಸನಿಗೆ ಯಾವ ಪರಿಭಾವನೆಗಳಿದ್ದವು ಎಂಬುದನ್ನು, ಅವನ ಕೃಷ್ಣನ ಪಾತ್ರ ಚಿತ್ರಣದ ಮೂಲಕವೇ ನಾವು ತಿಳಿಯಬಹುದು. ಅಂದರೆ ಭೇದವೆಂಬುದು ಅಂತಿಮವಾಗಿ, ಅದೊಂದು ಚಲನಶೀಲತೆಯನ್ನು ಕಳೆದುಕೊಂಡ "ಖಾನೇ-ಸುಮಾರಿ"ಯ ದಾಖಲೆಯಲ್ಲವೆಂದೇ ಅವನ ಅಭಿಪ್ರಾಯವಾಗಿದೆ. ಈ ಅಭಿಪ್ರಾಯವನ್ನು ಅನುಸಂಧಾನಿಸಲೊಲ್ಲದವರಿಂದ ಅವರ ತತ್ವ ಸಾಯುತ್ತಿದೆ ಎನ್ನುತ್ತಾನೆ ಕುಮಾರವ್ಯಾಸ.

೨) ವೇದಾಂತ -ಶಾಸ್ತ್ರದ ಒಟ್ಟೂ ಚಲನೆ, ಯಾವ ಅನುಭಾವದ ಕಡೆಗೆ, ಇಡೀ ಮನುಕುಲವನ್ನೇ ಕರೆದುಕೊಂಡು-ಯಾವ ದಿಕ್ಕಿಗೆ ಚಲಿಸುತ್ತಿದೆ ಎಂಬುದನ್ನು ಅರಿಯದೇ ನನ್ನದೇ -ಸತ್ಯ, ನನ್ನದಷ್ಟೇ-ಸತ್ಯ, ಎಂದು ಹೂರಡುವ ವಾದ-ಜಡರ ಬಗೆಗೆ ಕುಮಾರವ್ಯಾಸ ಹೇಳುವ ಮಾತಿದು. ಬಹುಶಃ ಅವನಿಗೆ, ನ್ಯಾಯ-ವೈಶೇಷಿಕ, ಸಾಂಖ್ಯ, ಇತ್ಯಾದಿ ಗುಂಪುಗಳು ವೇದಾಪೌರಷೇಯತ್ವದಂತಹ ವಿಷಯದ ಬಗೆಗೆ ನಡೆಸಿದ್ದ ಜಟಿಲ ಶಾಸ್ತ್ರ-ಚರ್ಚೆ

ತಲೆಚಿಟ್ಟು ಹಿಡಿಸಿರಬೇಕು. ಮನುಷ್ಯನ ಒಳ-ಸತ್ವಕ್ಕೂ, ಅಧ್ಯಾತ್ಮಿಕತೆಗೂ ಇರುವ ಸಂಬಂಧವನ್ನೇ ಅಲಕ್ಷಿಸುವ ಇಂಥ ವಾದ-ಶಾತ್ಯಗಳನ್ನು ಕವಿ ಇಲ್ಲಿ ಖಂಡಿಸಿದ್ದಾನೆ.

೩) ಹೀಗೆ, ತನ್ನದೇ ಆದ ಶಾಸ್ತ್ರ-ಲೋಕದಲ್ಲಿ ಪ್ರಚಂಡ ಅಹಂಕಾರದೊಂದಿಗೆ ಬದುಕುವ ಇವರು 'ದಾಸೋಹ'ವೆಂದೆನ್ನುವದು ಬರಿ ತೋರಿಕೆ ಮಾತ್ರ.

೪) ಕೋವಿದರ ಸಂಗವನ್ನು ಈ ದ್ವೈತಿಗಳು ದೂರವಿಟ್ಟಿದ್ದಾರೆ. ಬಹುಶಃ ಕುಮಾರವ್ಯಾಸ ಹೇಳುತ್ತಿರುವದು, ಆಧುನಿಕಾರ್ಥದಲ್ಲಿ ನಾವು ಯಾವುದನ್ನು ಇಹ-ಕೇಂದ್ರಿತ ಪ್ರಪಂಚಾನುಭವಗಳಿಂದ ಪುಷ್ಟಗೊಂಡ ಕಲೆ ಎಂದು ಕರೆಯುತ್ತೇವೋ ಅದನ್ನು ಮಾಧ್ವ-ಪ್ರತಿಭೆ ಒಪ್ಪುವದಿಲ್ಲ ಎಂಬುದು. ಹಾಗೇ ನೋಡಿದರೆ ಮಾಧ್ವ-ಪಂಡಿತರು, ಸ್ವಾಮಿಗಳು ಬರೆದ ಕೃತಿಗಳ ಹಿಂದೆ ಕೆಲಸಮಾಡಿದ 'ಮಾಧ್ವ ಕಾವ್ಯ-ಮೀಮಾಂಸೆ'ಯೊಂದನ್ನು ನಾವು ಕಟ್ಟಿಕೊಂಡರೆ ಕುಮಾರವ್ಯಾಸನ ಮಾತು ನೂರಕ್ಕೆ ನೂರರಷ್ಟು ಸತ್ಯವಾಗಿದೆ.

ಮಾಧ್ವ ಪರಂಪರೆಯ ವಾದಿರಾಜರು ಪುಣೆಯಲ್ಲಿದ್ದಾಗ, ಅಲ್ಲಿನ ಪಂಡಿತರು ಮಾಘ ಕವಿಯ "ಶಿಶುಪಾಲವಧ"ವನ್ನು ಶ್ರೇಷ್ಠ ಕಾವ್ಯವೆಂದು ಮೆರವಣಿಗೆ ಮಾಡಲು ನಿರ್ಧರಿಸಿದರಂತೆ ಆಗ ವಾದಿರಾಜರು ಇಪ್ಪತ್ತೇ ದಿನಗಳಲ್ಲಿ ಅದೇ ಕಥಾವಸ್ತುವಿನ ಇನ್ನೊಂದು ಕಾವ್ಯ ಬರೆದುಕೊಟ್ಟರಂತೆ ಅದರ ಹೆಸರು "ರುಕ್ಮೀಣೇಶ-ವಿಜಯ" "ಶಿಶುಪಾಲ-ವಧ"ದಕ್ಕಿಂತ ಈ ಕಾವ್ಯವೇ ಶ್ರೇಷ್ಠವೆಂದು ವಾದಿರಾಜರ ಕೃತಿಯ ಮೆರವಣಿಗೆಯಾಯಿತಂತೆ. ಮಾಧ್ವ ಕಾವ್ಯ-ಮೀಮಾಂಸೆ ಯಾವ ಕಾಲಕ್ಕೂ 'ಶಿಶುಪಾಲ-ವಧೆ'ಯನ್ನು "ರುಕ್ಮಿಣೇಶ-ವಿಜಯ"-ವನ್ನಾಗಿಯೇ ನೋಡುವ ಹಠ ಉಳ್ಳದ್ದು ಕುಮಾರವ್ಯಾಸನ ಕಾವ್ಯ-ಪ್ರತಿಭೆಗೆ ಈ ಬಗೆಯ ತಿಳುವಳಿಕೆ ಅರ್ಥಹೀನವಾದದ್ದೇ. ವಚನಕಾರರು, ಕುವೆಂಪು, ಅವರನ್ನು ದಾಟಿ ಬಂದ ನಮಗೂ ಇದು ಹೊಂದಲಾಗದ ದೃಷ್ಟಿಯೇ.

೫) ಕುಮಾರವ್ಯಾಸ ಹೇಳುವ ಇನ್ನೊಂದು ಮಾತೆಂದರೆ, ಈ ದ್ವೈತಿಗಳು ಮಾಯಾ ವಿಲಾಸದ ನೆಲೆಯನ್ನು ಕಣ್ಣು ಬಿಟ್ಟು ನೋಡದವರು. ತತ್ವಜ್ಞಾನದ ನಿರ್ವಚನಗಳು ಮನುಷ್ಯನ ಮನಸ್ಸಿನ ಮತ್ತು ಸಮಾಜದ ಸಂಕೀರ್ಣವಾದ ಸಂರಚನೆಯನ್ನು ಪರಿಭಾವಿಸದೇ, ಕೇವಲ ನಶ್ವರತೆ, ವೈರಾಗ್ಯ, ಮೋಹ ವಿಸರ್ಜನೆ, ಅಹಂ ಮುಕ್ತ, ಇತ್ಯಾದಿ ಅನುಭವ-ರಹಿತ ಶುಷ್ಕ ಪರಿಭಾಷೆಗಳಲ್ಲಿ ಬೆಳೆಯುತ್ತ ಹೋದರೆ ಅವು ಬಹುಬೇಗ ನಿರ್ಜೀವವಾಗುತ್ತವೆ. ಕಲೆಯ ಜೀವನ್ಮುಖೀ ಸಹ-ಭಾವದ ತೀವ್ರ ಸಂಕಟವಿಲ್ಲದ ಇಂಥ ಮಾತುಗಳೇ ಒಂದು ಕೃತಕ ಆಚಾರ-ಪಂಥದ ರೂಪು ತಾಳುತ್ತವೆ. ಮಾಧ್ವ ತತ್ವಜ್ಞಾನದ ಶಾಸ್ತ್ರೀಯ ವಿವೇಚನೆ ಈ ಬಗೆಯ ಸಂಕಟವನ್ನು ಹಿನ್ನಲೆಗಿಟ್ಟುಕೊಂಡಿಲ್ಲ.

ಮಾಧ್ವ ತತ್ವಜ್ಞಾನದ ಕನ್ನಡೀಕೃತ ಅಭಿವ್ಯಕ್ತಿಯಾದ ದಾಸ ಸಾಹಿತ್ಯದಲ್ಲಿ ಒಂದಿಷ್ಟು ಈ ಬಗೆಯ 'ಮಾಯಾ ವಿಲಾಸದ ನೆಲೆಯ ಗಮನ' ಕಾಣುತ್ತದೆಯಾದರೂ, ಅದು, ಮಾಧ್ವ - ಶಾಸ್ತ್ರೀಯತೆಗೆ ಬದ್ಧವಾಗಬೇಕೆನ್ನುವ ಅದರ ಪ್ರಾಜ್ಞಿಕ ಹೋರಾಟದಲ್ಲಿ, ಮಿತಗೊಳ್ಳುತ್ತದೆ. ಇಷ್ಟಾಗಿಯೂ ಅದು ಅಷ್ಟಾದರೂ ಸಾಧ್ಯವಾದದ್ದು ಹೆಚ್ಚಾಗಿ ದಾಸ-ಸಾಹಿತ್ಯದ ಎರಡನೇ ಘಟ್ಟದ ಗೋಪಾಲದಾಸರಂತಹವರ ಕಾಲದಲ್ಲಿ. ಸಂಸ್ಕೃತದ ಭಾಷಾ-ಸಂಸ್ಕೃತಿಯನ್ನೇ ಅವಲಂಬಿಸಿದ ಮಾಧ್ವ ತತ್ವಾಭಿವ್ಯಕ್ತಿ ಹೀಗೆ, ಜೀವನಾನುಭವಗಳ ದಟ್ಟ ಸ್ಪರ್ಶದಿಂದ ವಂಚಿತವಾಗಿದೆ ಎಂಬುದು ಕುಮಾರವ್ಯಾಸನ ನಿಲುವಾಗಿದೆ.

ಈ ಐದೂ ಆರೋಪಗಳ ಹಿನ್ನಲೆಯಲ್ಲಿ ದ್ವೈತವು ಸಾಯುತ್ತಿದೆ ಎಂಬುದು, ಆತನ ಅಭಿಪ್ರಾಯವಾಗಿದೆ. ಆದರೆ ನಿಜ ಹೇಳಬೇಕೆಂದರೆ ವಿದುರನು ಧೃತರಾಷ್ಟನಿಗೆ ಹೇಳುವ ಈ ಮಾತಿನ ಒಟ್ಟು ಸಂದರ್ಭದ ಹಿನ್ನಲೆಯಲ್ಲಿ, ಆತ ಹೇಳಿದ ಇನ್ನಿತರ ಸತ್ಯಗಳ ಪಾರ್ಶ್ವದಲ್ಲಿ, ಈ ದ್ವೈತ-ವಿವೇಚನೆ ತುಸು ವಿಷಯಾಂತರವೆಂದೇ ಎನ್ನಿಸುತ್ತದೆ. ಕುಮಾರವ್ಯಾಸ ವಿದುರನ ಕೈಯಿಂದ 'ಮೈಕು' ಕಸಿದುಕೊಂಡು ಇದೊಂದು ಮಾತನ್ನು ಹೇಳಿದಂತೆನಿಸುತ್ತದೆ. ಕುಮಾರವ್ಯಾಸನ ಧೀಮಂತ ಪ್ರತಿಭೆಗೆ ಇದು ಗೊತ್ತಿರದಿರಲಾರದು. ಆದರೂ ಆತ ಈ ಮಾತನ್ನು ಹೇಳಿಸುತ್ತಾನೆಂದರೆ, ಅವನಿಗೆ ಒಂದು ತೀವ್ರವಾದ ಒಳ-ಒತ್ತಡ ಕಾಡಿರಬೇಕೇನೋ ಎನ್ನಿಸುತ್ತದೆ. ಇದೇ ಸಂಧಿಯ ಮುಂದುವರೆದ ಭಾಗದಲ್ಲಿ ಇನ್ನೊಂದು ಇಂತಹದೇ ಮಾತಿದೆ ಅದನ್ನು ಸನತ್ತು ಜಾತೀಯ ಹೇಳುತ್ತಾನೆ. ಅದು ದ್ವೈತಾ-ದ್ವೈತಿಗಳ ನಡುವಿನ ಅಹಂಕಾರದ ಜಗಳಗಳ ಕುರಿತು ಕುಮಾರವ್ಯಾಸನ ನಿಲುವನ್ನು ಪ್ರತಿಪಾದಿಸುತ್ತದೆ.

"ಹರಿ ಭಕುತಿಯ ಲೋಲುಪರು ಎನಿಸಿ ಶಂಕರನ ಬದ್ಧ ದ್ವೇಷ ಮಾಡುವವರು ಶಂಕರನಲ್ಲಿ ಭಕ್ತಿ ಅತಿಯಾಗಿ ವೈಷ್ಣವರ ಬಗೆಗೆ ಗೌರವವಿಲ್ಲದವರು, ಈ ಕರ್ಮ-ಚಾಂಡಾಲರು, ಎಪ್ಪತ್ತೈದು ಕೋಟಿ ನರಕಗಳಲ್ಲಿ ಬಿದ್ದು ಶಿಕ್ಷೆ ಅನುಭವಿಸುವರು" ಎಂಬುದು ಈ ನುಡಿಯ ಭಾವಾರ್ಥ. ಹರಿಭಕುತಿ ಲೋಲುಪರು ವೈಷ್ಣವರು. ಇವರದು ಭಕ್ತಿಯಲ್ಲ ಬರೀ ಭಾವದ ಲೋಲುಪತೆ, ಶಂಕರನಲ್ಲಿ ಭಕ್ತಿ ಅತಿಯಾದವರು ಅದ್ವೈತಿಗಳು. (ಅಥವಾ ಶಿವಾದ್ವೈತಿಗಳೂ ಇರಬಹುದು) ಇವರಿಬ್ಬರೂ ಕರ್ಮ-ಚಾಂಡಾಲರೇ. ಆದರೆ ಇವರು ಎಪ್ಪತ್ತೈದು ಕೋಟಿ ನರಕಗಳಲ್ಲಿ "ಓಲಾಡುತಿಹರು" ಎನ್ನುತ್ತಾನೆ ಕವಿ. ಎಂದರೆ ಈ ನರಕದಲ್ಲೂ ಅವರೂ ಓಲಾಡುತ್ತಿದ್ದಾರೆ. ಈ ನರಕಗಳಿಂದಲೂ ಅವರು ಯಾವುದೇ ಪಾಠವನ್ನು ಕಲಿಯದ ಸ್ಥಿತಿಯಲ್ಲಿದ್ದಾರೆ ಎಂದು ಬಹಳ ವ್ಯಂಗ್ಯವಾಗಿಯೇ ಕುಮಾರವ್ಯಾಸ ಹೇಳುತ್ತಾನೆ.

ಇದನ್ನೆಲ್ಲ ನೋಡಿದರೆ ಕನ್ನಡದ ನಿಜವಾದ ಸೃಜನಶೀಲ ಮನಸ್ಸು, ಮಾಧ್ವ-ತತ್ವವನ್ನು ಸ್ವವಿಮರ್ಶಾತ್ಮಕವಾಗಿಯೂ ಎದುರಾಗಿದೆ. ಕುವೆಂಪು ಅವರು ಅದನ್ನು ವಾಚ್ಯವಾಗಿಯೇ ಹೇಳಿದರು ಅಷ್ಟೇ. ಈ ನೆಲೆಯಲ್ಲಿ ಕನ್ನಡದ ಮೂವರು ಕವಿಗಳು, ಸು.ರಂ. ಎಕ್ಕುಂಡಿ, ಬೇಂದ್ರೆ, ಅಡಿಗರು ಬರೆದಿರುವ-ಮಧ್ವರನ್ನು ಕುರಿತು ಬರೆದಿರುವ- ಕವಿತೆಗಳು ನಮಗೆ ಲಭ್ಯವಿವೆ. ಈ ಕಾವ್ಯ-ಪ್ರತಿಕ್ರಿಯೆಯ ಅಧ್ಯಯನದ ಮೂಲಕ ಕನ್ನಡದ ಸೃಜನಶೀಲತೆ ಮಧ್ವರನ್ನೂ, ಮಧ್ವ ತತ್ವವನ್ನೂ, ಕಾಣುತ್ತಾ ಬಂದ ರೀತಿಯನ್ನು ಗಮನಿಸಿದರೆ, ಕುಮಾರವ್ಯಾಸನ ಪರಂಪರೆಯ ಜೊತೆಗೆ ಅದು ತಳಕು ಹಾಕಿಕೊಂಡಂತಹ ಮಾದರಿಯಲ್ಲಿಯೇ ಹೆಚ್ಚು ಶಕ್ತಿಯುತವಾಗಿದೆ ಎನ್ನಿಸುತ್ತದೆ.

ಈ ಅರ್ಥದಲ್ಲೆ ಅಡಿಗರ "ಆನಂದತೀರ್ಥರಿಗೆ" ಹೆಚ್ಚು ಆಧುನಿಕ ಬಗೆಯ ಬಗೆಯುವಿಕೆ ಎನ್ನಬಹುದು. ಮೂಲ ತತ್ವವನ್ನೇ ನಿರಾಕರಿಸದೇ ತತ್ವಾರ್ಥ ಪರಂಪರೆಯನ್ನು ಮಾತ್ರ ವಿರೋಧಿಸುವ ಅಡಿಗರೂ, ಹೊಸ ವೈಚಾರಿಕ 'ಉಗ್ರಗಾಮಿ'ಗಳಿಗೆ ಸಂಶಯಾಸ್ಪದರಾಗಿ ಕಂಡಾರು. ಆದರೆ ಅದೇನಿದ್ದರೂ, ಒಂದು ವಿಮರ್ಶಾ-ದೃಷ್ಟಿಯ ಸಣ್ಣ ಎಳೆಯ ಮಾಧ್ವ-ವಿಮರ್ಶೆಯ ಪರಂಪರೆ ಕನ್ನಡದಲ್ಲಿ ಇದೆ ಎಂಬುದಂತೂ ಸತ್ಯ. ದೇವನೂರರೂ ಇದರದೇ ಮುಂದುವರಿಕೆಯಾಗಿರಲಾರರೆ? □

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಾಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಸಂಪಾದಕರೊಡನೆ ಸಂವಾದ

ಜ.ಹೊ. ನಾರಾಯಣಸ್ವಾಮಿ

ಮಾನ್ಯ ಸಂಪಾದಕರೇ,

ಪೇಜಾವರ ಮಠದ ವಿಶ್ವೇಶತೀರ್ಥರದು ಸುಮ್ಮನಿರುವ ಸ್ವಭಾವವಲ್ಲ. ತಲೆಯ ತುಂಬ ಭ್ರಮೆಯನ್ನು ತುಂಬಿಕೊಂಡಿರುವ ಅವರು ಒಂದಲ್ಲ ಒಂದು ವಿಷಯವನ್ನು ಕೆಣಕುತ್ತಾ ಸದಾ ಸುದ್ದಿಯಲ್ಲಿರುತ್ತಾರೆ.

ಬಾಬ್ರಿ ಮಸೀದಿಯನ್ನು ಕೆಡುವುವ ಕರಸೇವೆಯ ಕಾರ್ಯಕ್ಕೆ ಕುಮ್ಮಕ್ಕು ಕೊಡುತ್ತಲೆ ಮುಸ್ಲಿಂ ಬಾಂಧವರು ಸಹನೆಯಿಂದ, ಐಕ್ಯತೆಯಿಂದ ಇರಬೇಕೆಂಬ ಉಪದೇಶದ ವೇದಿಕೆಯಲ್ಲಿಯೂ ಕಾಣಿಸಿಕೊಳ್ಳುತ್ತಾರೆ. ದಲಿತರ ಕೇರಿಗೆ ಹೋಗಿ ಅವರು ನಮ್ಮ ಬಂಧುಗಳು ಎಂದು ಹೇಳುತ್ತಲೇ ಅವರೊಂದಿಗೆ ಊಟ ಮಾಡಲು ನಿರಾಕರಿಸುತ್ತಾರೆ. ದಲಿತರಿಗೆ ಬಹಿಷ್ಕಾರ ಹಾಕಿರುವ ಅಂಕನಹಳ್ಳಿ ಘಟನೆಗೆ ಸಂಬಂಧಿಸಿದಂತೆ ಉಪವಾಸ ಕೂತು ಇದು ಪ್ರಾಯಶ್ಚಿತ್ತವಲ್ಲ ಪ್ರಾರ್ಥನ ಉಪವಾಸ ಎಂಬ ಪದಗಳ ದೊಂಬರಾಟವಾಡುತ್ತಾರೆ. ಕನಕದಾಸರನ್ನು ಕುರಿತು ಕನಕನು ಮಹಾಮಹಿಮ ಎಂದು ಏಕವಚನದಲ್ಲಿ ಕರೆಯುತ್ತಾರೆ. ಆದರೆ ಕನಕದಾಸರ ಪ್ರತಿಮೆಯನ್ನು ದೇವಸ್ಥಾನದ ಹೊರಗೆ ಇಡುತ್ತಾರೆ. ಕನಿಷ್ಠ 'ಕನಕನ ಕಿಂಡಿ' ಎನ್ನುವುದನ್ನು ಸಹಿಸದೆ ಅದನ್ನು 'ನವಗ್ರಹ ಕಿಂಡಿ' ಎನ್ನುತ್ತಾರೆ. ಈ ದ್ವಂದ್ವ ಏಕೆ? ಏಕೆಂದರೆ ಪೇಜಾವರರು 'ದ್ವೈತ' ಮತಾವಲಂಬಿಗಳು. ದ್ವೈತ ಎಂದರೆ ಎರಡು ಎಂದರ್ಥ. ಅದಕ್ಕೆ ಸಹಜವಾಗಿಯೆ ಅವರು ಎಲ್ಲ ವಿಷಯದಲ್ಲೂ ದ್ವಂದ್ವ ನಿಲುವು ತಾಳುತ್ತಾರೆ. ಅದನ್ನು ತಮ್ಮ ಪ್ರತಿಯೊಂದು ಕ್ರಿಯೆಯಲ್ಲಿಯೂ ಪ್ರತಿಬಿಂಬಿಸುತ್ತಾರೆ. ಇವರದು ಬದ್ಧತೆಯಿರುವ ಹೃದಯವಂತ ನಡವಳಿಕೆಯೆ ಅಥವಾ ಕೇವಲ ಕಾರ್ಯಕಾರಣ ಜಾಣತನದ ಅವಕಾಶವಾದಿ ನಡವಳಿಕೆಯೆ ಎಂಬ ಅನುಮಾನ ಸಹಜವಾಗಿಯೆ ಮೂಡುತ್ತದೆ.

ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ದೇಶ ಸಂಚಾರ ಮಾಡುತ್ತಿದ್ದಾಗ ನಡೆದ ಒಂದು ಹೃದಯವಂತ ಘಟನೆ ಇದೆ. ಅದನ್ನು ಅವರ ಮಾತುಗಳಲ್ಲಿಯೇ ಕೇಳಿ:–

ಒಮ್ಮೆ ನಾನು ಆಗ್ರಾದಿಂದ ಮೂನಾಕ್ಕೆ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದೆ. ನನ್ನಲ್ಲಿ ಒಂದು ಬಿಡಿಗಾಸೂ ಇರಲಿಲ್ಲ. ಬೃಂದಾವನಕ್ಕೆ ಇನ್ನೂ ಒಂದೆರಡು ಮೈಲಿ ದೂರವಿತ್ತು. ಹಾದಿಯ ಪಕ್ಕದಲ್ಲಿ ಒಬ್ಬ ಮನುಷ್ಯ ಗುಡಿಗುಡಿ ಸೇದುತ್ತಾ ಕುಳಿತಿದ್ದ. ಆ ತಕ್ಷಣ ನನಗೂ ಸೇದಬೇಕೆಂಬ ಆಸೆಯಾಯಿತು. ನಾನು ಆ ಮನುಷ್ಯನಿಗೆ "ನಿನ್ನ ಚಿಲುಮೆಯಲ್ಲಿ ಒಮ್ಮೆ ಸೇದಲು ನನಗೆ ಅವಕಾಶ ಕೊಡುವೆಯಾ?" ಎಂದೆ. ಆ ಮನುಷ್ಯ ನನಗೆ ಅದನ್ನು ಕೊಡಲು ತುಂಬಾ ಹಿಂಜರಿಯುತ್ತಾ "ನಾನು ಜಲಗಾರ" ಎಂದ. ಇನ್ನೂ ನನ್ನಲ್ಲಿ ಹಿಂದೂ ಸಂಸ್ಕಾರದ ಪ್ರಭಾವವಿತ್ತು. ನಾನು ತಕ್ಷಣ ಹಿಂದೆ ಸರಿದು ಸೇದದೆ ಮುಂದಕ್ಕೆ ಹೊರಟೆ. ಕೊಂಚ ದೂರ ಹೋಗುವಷ್ಟರಲ್ಲಿಯೇ ನನಗೆ ನೆನಪಿಗೆ ಬಂತು.

ನಾನೊಬ್ಬ ಸನ್ಯಾಸಿ, ಜಾತಿ, ಮತ, ಸಂಸಾರ, ಗೌರವ ಎಲ್ಲವನ್ನೂ ತ್ಯಜಿಸಿದವನು. ಆದರೂ ಆ ಮನುಷ್ಯ ಗುಡಿಸುವ ಜಾಡಮಾಲಿ ಎಂದಕೂಡಲೇ ಹಿಂದಕ್ಕೆ ಸರಿದೆ. ಅವನು ಮುಟ್ಟಿದ ಗುಡಿಗುಡಿಯನ್ನು ಸೇದದೆ ಹೊರಟು ಬಂದೆ ಎಂಬುದು ನೆನಪಿಗೆ ಬಂದಿತು. ಈ ಯೋಚನೆ ನನ್ನ ಮನಸ್ಸನ್ನು ಕುಬ್ಜಗೊಳಿಸಿತು. ನನಾಗಲೇ ಅರ್ಧಮೈಲಿ ದೂರ ಬಂದಿದ್ದೆ. ಪುನಃ ನಾನು ಹಿಂತಿರುಗಿ ಆ ಜಲಗಾರನಿದ್ದಲ್ಲಿಗೆ ಬಂದೆ. ಅವನಿನ್ನೂ ಅಲ್ಲಿಯೇ ಕುಳಿತಿದ್ದ. ನಾನು ತಕ್ಷಣ ಅವನಿಗೆ "ನನ್ನ ಪ್ರಿಯ ಗೆಳೆಯ, ದಯವಿಟ್ಟು ನನಗೊಂದು ಗುಡಿಗುಡಿಯನ್ನು ಸಿದ್ಧಪಡಿಸು" ಎಂದೆ. ಅವನು ಏನೇನೂ ಅಡ್ಡಿಗಳನ್ನು ಹೇಳಿದರೂ ಕೇಳದೆ ಅದನ್ನು ಕೊಟ್ಟೇ ತೀರಬೇಕೆಂದು ಹಠ ಹಿಡಿದೆ. ಆತ ನನಗೆ ಚಿಲುಮೆಯನ್ನು ಸಿದ್ಧಪಡಿಸಲೇಬೇಕಾಗಿ ಬಂತು. ನಂತರ ನಾನು ಸಂತೋಷದಿಂದ ಆ ಚೀಲುಮೆಯನ್ನು ಸೇದಿ ಬೃಂದಾವನಕ್ಕೆ ಹೊರಟೆ (10-343-44)

ವಿವೇಕಾನಂದರ ಈ ಹೃದಯವಂತಿಕೆ ಎಲ್ಲಿ; ದ್ವಂದ್ವಾಚಾರ್ಯರಾದ, ಅಂತರಂಗ ಬಹಿರಂಗಗಳು ಒಂದಾಗದೆ ಭಗ್ನಗೊಂಡಿರುವ ಪೇಜಾವರರ ಈ ಕಪಟ ನಡವಳಿಕೆ ಎಲ್ಲಿ! ಭೂಮಿ ಆಕಾಶಗಳ ಅಂತರ.

ಹಿಂದೊಮ್ಮೆ ಅಂದರೆ 80ರ ದಶಕದಲ್ಲಿ ಹಾಸನ ಜಿಲ್ಲೆಯ ಬಾಳ್ಳು ಪೇಟೆಯಲ್ಲಿ ದಲಿತರು ಮತ್ತು ಲಿಂಗಾಯಿತರ ನಡುವೆ ಒಂದು ಸಂಘರ್ಷವುಂಟಾಗಿತ್ತು. ಅದರ ಸಂಧಾನ ಸಭೆಗೆ ಎಂದಿನಂತೆ ಸುಮ್ಮನೆ ಕೂರಲಾಗದ ವಿಶ್ವೇಶತೀರ್ಥರು ಈಗ ಅಂಕನಹಳ್ಳಿಗೆ ಬಂದಂತೆ ಅಲ್ಲಿಗೂ ಬಂದರು. ಅಲ್ಲಿಯ ಹೃದಯವಂತ ಮುಖಂಡರು ದಲಿತರು ಎಲ್ಲರಿಗಾಗಿ ತಯಾರಿಸಿರುವ ತಿಂಡಿಯನ್ನು ಪ್ರಸಾದವೆಂದು ಒಟ್ಟಿಗೆ ಕುಳಿತು ಸೇವಿಸಿ ಸಂಧಾನಕ್ಕೆ ಕುಳಿತುಕೊಳ್ಳೋಣ ಎಂಬ ಸಲಹೆ ಇತ್ತರು. ಅತ್ತ ದಲಿತರು ಇತ್ತ ಲಿಂಗಾಯಿತರು ಪೇಜಾವರರಿಗೆ ಇಕ್ಕಳಕ್ಕೆ ಸಿಕ್ಕಿಕೊಂಡ ಅನುಭವ. ಹೇಳದೆ ಕೇಳದೆ ಆ ತಕ್ಷಣವೆ ಅವಸರ ಬಂದವರಂತೆ ಅಲ್ಲಿಂದ ಕಾಲ್ಕಿತ್ತು ಜಾಗ ಖಾಲಿ ಮಾಡಿದ ಕೀರ್ತಿ ಪೇಜಾವರರದು. "ನಾನು ಹೊಲೆಯನಾಗಿದ್ದರೆ ಇನ್ನೂ ಹೆಚ್ಚು ಸಂತೋಷ ಪಡುತ್ತಿದ್ದೆ" (5-100) ಎನ್ನುವ ವಿವೇಕಾನಂದರೆಲ್ಲಿ ಕನಿಷ್ಠ ವ್ಯಕ್ತಿತ್ವದ ಈ ಪೇಜಾವರರೆಲ್ಲಿ?

ಮಾನವೀಯ ಹೃದಯ ಹೊಂದಿರುವ ಎಲ್ಲರೂ ಮುಖ್ಯವಾಗಿ ಗಮನಿಸಬೇಕಾದ ಅಂಶ ಯಾವುದೆಂದರೆ ಹೊಲೆಮಾದಿಗರೆಂದು ಯಾವ ಸಮಾಜ ಅವರನ್ನು ಶತಶತಮಾನಗಳಿಂದ ನಿಕೃಷ್ಟವಾಗಿ ಕಂಡು ಕೀಳಾಗಿ ನಡೆಸಿಕೊಂಡು ಬಂದಿದೆಯೋ ಆ ದಲಿತರ ಜೊತೆಯಲ್ಲಿ ಸಹಪಂಕ್ತಿ ಭೋಜನ ಮಾಡಿ ಸ್ವಾಮಿ ವಿವೇಕಾನಂದರಂತೆ ಪವಿತ್ರರಾಗಬೇಕಾದವರು ಪೇಜಾವರ ಶ್ರೀಗಳಂಥ ಕಲುಷಿತ ಮನಸ್ಸಿನವರೆ ಹೊರತು ಅನ್ನ ಸೇವೆಗಾಗಿಯೆ ತಲೆತಲೆಮಾರುಗಳಿಂದ ಸೇವೆ ಮಾಡಿರುವ ತ್ಯಾಗ ಹೃದಯದ ದಲಿತರಲ್ಲ ಎಂಬ ಸತ್ಯ. ಈ ಸತ್ಯ ಹೃದಯವಂತರಿಗೆ ಮಾತ್ರ ಗೋಚರಿಸುವಂಥದ್ದೆ ಹೊರತು ದ್ವಂದ್ವ–ವ್ಯಕ್ತಿತ್ವದವರಿಗಲ್ಲ. ವಾಸ್ತವ ಸತ್ಯ ಎಂದರೆ ಬಾಳ್ಳುಪೇಟೆಗೆ ಬಂದಂದಿನಿಂದ ಇಂದಿನವರೆಗೂ ಹೊಳೆಯಲ್ಲಿ ಎಷ್ಟೊಂದು ನೀರು ಹರಿದಿದೆಯಾದರೂ ಪೇಜಾವರರ ನಡವಳಿಕೆಯಲ್ಲಿ ಕಿಂಚಿತ್ತು ಬದಲಾವಣೆಯಾಗಿಲ್ಲ, ಮನಸ್ಸು ಬೆಳೆದಿಲ್ಲ, ಹೃದಯ ವಿಕಾಸವಾಗಿಲ್ಲ. ಅಂತರಂಗದಲ್ಲಿ ಬ್ರಾಹ್ಮಣವನ್ನು ಬಲವಾಗಿ ಅಪ್ಪಿ ಬಹಿರಂಗದಲ್ಲಿ ಕನಿಷ್ಠ ನಾಚಿಕೆಯೂ ಇಲ್ಲದೆ ತೋರಿಕೆಯ ನಾಟಕವಾಡುತ್ತಿದ್ದಾರೆ.

ತ್ರಿಮತಸ್ಥರಲ್ಲಿ ಮತ್ತೊಬ್ಬರಾದ ಆದಿಶಂಕರರದೂ ಅದೇ ಕಥೆಯೇ. ತಮಗೆ ಎದುರಾದ ಶ್ವಪಚನಿಗೆ ಉತ್ತರಿಸಲಾಗದ ಅವರು ಈಶ್ವರನೆ ಆ ವೇಷದಲ್ಲಿ ಬಂದು 'ಬ್ರಹ್ಮಜ್ಞಾನ' ಬೋಧಿಸಿದ ಎಂಬ ಕಥೆ ಕಟ್ಟಿ ಬ್ರಹ್ಮಜ್ಞಾನ ಪಡೆದ ನಂತರವೂ (ಅದು ದಕ್ಕಿರುವುದು ಅನುಮಾನ) 'ವೇದ ಕೇಳಿದ ಶೂದ್ರನ ಕಿವಿಗೆ ಕಾದ ಸೀಸ ಸುರಿಯಬೇಕು, ಉಚ್ಚರಿಸಿದರೆ ನಾಲಿಗೆ ಕತ್ತರಿಸಬೇಕು' ಮುಂತಾಗಿ ಬ್ರಹ್ಮಸೂತ್ರಕ್ಕೆ ಭಾಷ್ಯ ಬರೆದ ಹೃದಯ ಅವರದು. (ಬ್ರಹ್ಮಸೂತ್ರ ಬಾಷ್ಯ: ಅಧ್ಯಾಯ ೧, ಪಾದ ೨, ಅಧಿಕಾರಣ ೬. ಸೂತ್ರ ೩೮: ಪುಟ ೧೫೫–೫೬) ಶೂದ್ರರಿಗೇ ಈ ಗತಿಯಾಗಿರಬೇಕಾದರೆ ಇನ್ನು ಪಂಚಮರ ಸ್ಥಿತಿ ಅದೆಷ್ಟು ಚಿಂತಾಜನಕವಾದುದೆಂದು ಕೊಂಚ ಮನತೆರೆದು ಯೋಚಿಸಿ! ಇಂಥ ಆತ್ಮ ವಂಚಕ ಮತಾಚಾರ್ಯರನ್ನು ಕುರಿತು ಸ್ವಾಮಿ ವಿವೇಕಾನಂದರು "ಭಾಷ್ಯವನ್ನು ಬರೆದ ದೊಡ್ಡ ಅಚಾರ್ಯರೆಲ್ಲಾ ಕೆಲವು ವೇಳೆ ತಮ್ಮ ಸಿದ್ಧಾಂತಕ್ಕೆ ಸರಿಯಾದ ಅರ್ಥವನ್ನು ಸೂತ್ರದಲ್ಲಿ ಬರುವಂತೆ ಮಾಡುವಾಗ ತಿಳಿದೇ ಸುಳ್ಳನ್ನು ಹೇಳುತ್ತಿದ್ದರು" (8-50) ಎಂದಿದ್ದಾರೆ.

ಒಟ್ಟಿನಲ್ಲಿ ಅಂತರಂಗ ಬಹಿರಂಗಗಳು ಬೆಸೆಯಲಾರದಷ್ಟು ಭಗ್ನಗೊಂಡಿರುವ ಮತಾಚಾರ್ಯರ, ಅವರ ಅನುಯಾಯಿಗಳ ನಡೆನುಡಿಗಳನ್ನು ಬ್ರಾಹ್ಮಣೇತರರು–ಹೃದಯವಂತ ಬಡ ಬ್ರಾಹ್ಮಣರೂ ಸೇರಿದಂತೆ–ಎಚ್ಚೆತ್ತು ಅರಿತುಕೊಳ್ಳದಿದ್ದರೆ ಶತಶತಮಾನಗಳಿಂದ ಅವರು ಮಾಡಿಕೊಂಡು ಬರುತ್ತಿರುವ ಹುನ್ನಾರಗಳಿಗೆ ಭಾರತದ ಭವ್ಯ ಸಂಸ್ಕೃತಿ ಬಲಿಯಾಗುವುದು ನಿಶ್ಚಯ. ವೈದಿಕ ಮತಸ್ಥರು ಆಚರಿಸುತ್ತಿರುವ ಅಸ್ಪೃಶ್ಯತೆಯನ್ನು ಮೊದಲು ಉಡುಪಿಯ ಮಧ್ವಮಠಗಳಲ್ಲಿ ತೊಡೆಯಲಾಗದಿದ್ದರೆ ವಿಶ್ವೇಶತೀರ್ಥರು ಮಠ ತೊರೆದು ಹೊರಬಂದು ದಲಿತರೊಂದಿಗೆ ಒಂದಾಗುವ ಹೃದಯವಂತಿಕೆ ತೋರಲಿ. ಆಗ ಮಾತ್ರ ಅವರು ಅಸ್ಪೃಶ್ಯತೆಯ ಆಗರವಾಗಿರುವ ವೈದಿಕ ಧರ್ಮಕ್ಕಿಂತ ಶ್ರೇಷ್ಠವಾದ, ವೈಶಾಲ್ಯದಿಂದ ಕೂಡಿರುವ ಸರ್ವ ಸಮನ್ವಯದ ಹಿಂದೂ ಧರ್ಮವನ್ನು ಪ್ರತಿಪಾದಿಸಬಹುದು. ಹಾಗಲ್ಲದಿದ್ದರೆ ಅವರು ಕೇವಲ ವಂಚಕರ ಸಂಸ್ಕೃತಿಯ, ವೈದಿಕ ಧರ್ಮದ ವಕ್ತಾರರಾಗಬಹುದುಸ ಅಷ್ಟೆ. ಹೆಚ್ಚೋನೂ ಇಲ್ಲ. □

ಪೇಜಾವರ ಶ್ರೀಗಳ ನಡವಳಿಕೆ ಬದ್ಧತೆಯಿಂದ ಕೂಡಿದುದೆ?

ಜಾತಿ ವಿನಾಶವೋ ಪ್ರೀತಿ ವಿನಾಶವೋ?

ಸಂಪಾದಕರೊಡನೆ ಸಂವಾದ

ಮಲ್ಲಿಕಾರ್ಜುನ ಗುಮ್ಮಗೋಳ.

ಮಾನ್ಯ ಸಂಪಾದಕರೇ,

ಗಂಡು ಹೆಣ್ಣಿನ ನಡುವೆ ಉಂಟಾಗುವ ಪ್ರೀತಿ ಮತ್ತು ವಿವಾಹ ತೀರ ವೈಯಕ್ತಿಕ ನಿರ್ಧಾರ ಮತ್ತು ಆಯ್ಕೆಯಾಗಿರುತ್ತದೆ. ಇಂತಹ ವಿವಾಹಗಳು ಅಂತರ್ಜಾತಿ ಅಥವಾ ಅಂತರ್ಧರ್ಮಗಳಲ್ಲಿ ಘಟಿಸಿದರೆ ಅದು ಸಮಾಜದಲ್ಲಿ ಒಂದು ಪ್ರತಿಷ್ಠೆಯ ವಿಷಯವಾಗಿ ಪರಿಣಮಿಸುತ್ತಿದೆ. ಇದು ಒಂದರ್ಥದಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಮೇಲೆ ಸಮೂದಾಯದ ಅನಪೇಕ್ಷಿತ ಒತ್ತಡವನ್ನು ಸೃಷ್ಠಿಸುತ್ತಿದೆ.

ಮೂಲದಲ್ಲಿ ಒಂದೇ ನಾಗರಿಕತೆಗೆ ಸೇರಿದವರು ವಿಭಿನ್ನ ಕಾಲಘಟ್ಟದಲ್ಲಿ ಬೇರೆ-ಬೇರೆ ಮತಧರ್ಮಗಳ ಆಚರಣೆಗೆ ಒಳಗಾಗಿ, ಏಕ ನಾಗರೀಕತೆಯ ಅಂತರ್ಯದಲ್ಲಿಯೇ ಪ್ರತಿಗಾಮಿ ಸಂಘರ್ಷಗಳಿಗೆ ಮುಖಾಮುಖಿಯಾಗುತ್ತಿದ್ದೇವೆ. ಅಂತರ್ಜಾತಿ ಅಥವಾ ಅಂತರ್ಧರ್ಮಗಳಲ್ಲಿ ನಡೆಯುವ ವಿವಾಹಗಳಿಂದ ಮತ್ತೆ ನಾವು ಕಳ್ಳುಬಳ್ಳಿಯವರಾಗುತ್ತಿದ್ದೇವೆ. ಆದರೆ, ಇಂತಹ ವೈವಾಹಿಕ ಸಂಬಂಧಗಳು ಜಾತಿ ಧರ್ಮಗಳ ಪ್ರಜ್ಞೆಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತಿರುವದು ದುರದೃಷ್ಟಕರ ಸಂಗತಿ.

ವೈಚಾರಿಕತೆಯು ಹೆಚ್ಚಾದಂತೆ ಹಾಗೂ ಆಧುನೀಕರಣ ಮತ್ತು ಸಾಂಸ್ಕೃತಿಕ ಸಂವಹನದ ಪರಿಣಾಮವಾಗಿ ಜಾತಿ ಎಂಬುದು ಗೌಣವಾಗಿ ಬದುಕು ಬಹುಮುಖ್ಯವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಒಂದೇ ವೃತ್ತಿಯಲ್ಲಿ, ಒಂದೇ ಪ್ರದೇಶದಲ್ಲಿ ಇರುವವರ ನಡುವೆ ಉಂಟಾಗುವ ಸ್ನೇಹ ಮತ್ತು ಪ್ರೀತಿ ಮದುವೆಯೆಂಬ ಶಾಶ್ವತ ಸಂಬಂಧಕ್ಕೆ ದಾರಿ ಮಾಡಿಕೊಡುತ್ತಿದೆ. ಈ ಬೆಳವಣಿಗೆಯಿಂದ ವರದಕ್ಷಿಣೆಯಂತಹ ಪಿಡುಗು ನಾಶವಾಗುತ್ತದಲ್ಲದೆ, ಜಾತಿ-ಧರ್ಮಗಳ ನಡುವಿನ ತಾರತಮ್ಯಗಳನ್ನು ಅಳಿಸಿಹಾಕಲು ಸಾಧ್ಯವಾಗುತ್ತದೆ. ಈ ಕಾರಣದಿಂದಲಾದರೂ ಅಂತರ್ಜಾತಿ-ಅಂತರ್ಧರ್ಮಿಯ ವಿವಾಹಗಳನ್ನು ಸ್ವಾಗತಿಸಬೇಕಾಗುತ್ತದೆ.

ಉನ್ನತ ಮೇಲ್ವರ್ಗದಲ್ಲಿ ಅಂತರ್ಜಾತಿಯ ವಿವಾಹ ಒಂದು ಸಮಸ್ಯೆಯೇ ಅಲ್ಲ. ಅವರಿಗೆ ಜಾತಿಗಿಂತ ಅಂತಸ್ತು ಬಹಳ ಮುಖ್ಯವಾಗಿರುತ್ತದೆ. ಹೀಗಾಗಿ, ದೇಶ-ಪ್ರದೇಶಗಳ ಗಡಿಗಳಾಚೆಗಾದರೂ ಹೋಗಿ ತಮ್ಮ ಅಂತಸ್ತಿಗೆ ತಕ್ಕಂತಹ ಕುಟುಂಬದೊಂದಿಗೆ ವೈವಾಹಿಕ ಸಂಬಂಧವನ್ನು ಏರ್ಪಡಿಸಿಕೊಂಡ ಉದಾಹರಣೆಗಳನ್ನು ನಾವು ಕಾಣುತ್ತೇವೆ. ಸ್ವಾತಂತ್ರ್ಯ ಪೂರ್ವದಲ್ಲಿಯೇ ನಮ್ಮ ದೇಶದ ರಾಜ-ಮಹಾರಾಜರು ಇಂತಹ ಸಂಬಂಧಗಳನ್ನು ಬೆಳೆಸಿದ್ದರು. ಇಂದಿನ ರಾಜಕಾರಣಿಗಳು, ಕೈಗಾರಿಕೋದ್ಯಮಿಗಳು, ಸಿನಿಮಾ ಮತ್ತು ಸುದ್ದಿ ಮಾಧ್ಯಮದವರು, ಬುದ್ಧಿಜೀವಿಗಳು ಹಾಗೂ ಐ.ಟಿ.,ಬಿ.ಟಿ. ಉದ್ಯೋಗಿಗಳು ಜಾತಿ ಎಂಬ ಸಾಂಸ್ಕೃತಿಕ ಸಂಕುಚಿತತೆಗೆ ಕಟ್ಟು ಬೀಳದೆ ವರ್ಗ ಮನೋಧರ್ಮಕ್ಕೆ ಒಳಗಾಗಿ ಅಂತರ್ಜಾತಿಯ ವಿವಾಹಗಳಿಗೆ ತಮ್ಮನ್ನು ತೆರೆದುಕೊಳ್ಳುತ್ತಿದ್ದಾರೆ.

ಮತ್ತೊಂದಡೆ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಹೆಚ್ಚಿನ ಪ್ರಾತಿನಿಧ್ಯದಿಂದಾಗಿ ಸ್ತ್ರೀಯರಿಗೆ ಆರ್ಥಿಕ ಸ್ವಾವಲಂಬನೆ ಲಭಿಸಿತು. ತಮ್ಮ ಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳುವ ಮುಕ್ತ ಸ್ವಾತಂತ್ರ್ಯವನ್ನು ತಮ್ಮಷ್ಟಕ್ಕೆ ತಾವೇ ಕಂಡುಕೊಂಡರು. ಆದರೆ, ಸಾಮಾಜಿಕ ಸಮಾನತೆಗಾಗಿ ಅಂತರ್ಜಾತಿಯ ವಿವಾಹ ಪ್ರೋತ್ಸಾಹಿಸಿದ ಬಸವಣ್ಣ, ರಾಜರಾಮ ಮೋಹನ್‌ರಾಯ್ ಹಾಗೂ ಅಂಬೇಡ್ಕರರಂತಹ ಕ್ರಾಂತಿಕಾರಿಗಳು ಅಂದು ವಿಫಲರಾಗಿದ್ದರು. ಆದರೆ, 1990ರ ದಶಕದ ಉದಾರೀಕರಣವು ಇಂದು ಅದನ್ನು ಸಫಲಮಾಡಿದೆ.

ಆದರೆ, ಕೃಷಿಕ, ಕೂಲಿಕಾರ್ಮಿಕ, ಕಿರುಕುಳ ವ್ಯಾಪಾರಿ ಹಾಗೂ ಇತರೆ ಕೆಳಮಧ್ಯಮ ವರ್ಗಗಳಲ್ಲಿ ಇಂತಹ ವಿವಾಹಗಳು ನಡೆದಾಗ ಜಾತಿ ಧರ್ಮದ ಲೇಪವನ್ನು ಪಡೆದುಕೊಂಡು ಮತಾಂತರಕ್ಕೆ ಪ್ರಚೋದನೆಯಾಗುತ್ತಿದೆಯೆಂಬ ಕಾರಣವನ್ನು ನೀಡಿ ಜಾತಿ-ಕೋಮು ವೈಷಮ್ಯಕ್ಕೆ ದಾರಿ ಮಾಡಿಕೊಡುತ್ತಿವೆ. ತಲೆಗೆ ಟೋಪಿ ಹಾಕಿಕೊಂಡು ಗಡ್ಡ ಬಿಟ್ಟುಕೊಂಡು ಮಾತಿಗೊಮ್ಮೆ 'ಅಲ್ಲಾಹ್' ಎನ್ನುವರನ್ನು ಸಂಶಯದಿಂದ ನೋಡುವವರು, ಮೈ ತುಂಬ ಕಾವಿತೊಟ್ಟು ಕಾಲಿಗೆ ಬೀಳುವ ಭಕ್ತರನ್ನು ಬಸಿರು ಮಾಡುವವರ ಬಗ್ಗೆ ಸಂಶಯ ಪಡುವದಿಲ್ಲ. ಇಲ್ಲಿ ಇಬ್ಬರೂ ಒಂದೇ. ಒಬ್ಬರು ಧರ್ಮದ ಹೆಸರಿನಲ್ಲಿ ದೇಶದ್ರೋಹ ಮಾಡಿದರೆ, ಇನ್ನೊಬ್ಬರು ಧರ್ಮದ ಹೆಸರಿನಲ್ಲಿ ಸಂಸ್ಕೃತಿದ್ರೋಹ ಮಾಡುತ್ತಾರೆ. ದೇಶ ಮತ್ತು ಸಂಸ್ಕೃತಿ ಎರಡು ಒಂದೇ ಎಂದು ಭಾವಿಸುವವರು ಇಬ್ಬರನ್ನು ಬಹಿಸ್ಕರಿಸಬೇಕು.

> **ವೈಚಾರಿಕತೆಯು ಹೆಚ್ಚಾದಂತೆ ಹಾಗೂ ಆಧುನೀಕರಣ ಮತ್ತು ಸಾಂಸ್ಕೃತಿಕ ಸಂವಹನದ ಪರಿಣಾಮವಾಗಿ ಜಾತಿ ಎಂಬುದು ಗೌಣವಾಗಿ ಬದುಕು ಬಹುಮುಖ್ಯವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಒಂದೇ ವೃತ್ತಿಯಲ್ಲಿ, ಒಂದೇ ಪ್ರದೇಶದಲ್ಲಿ ಇರುವವರ ನಡುವೆ ಉಂಟಾಗುವ ಸ್ನೇಹ ಮತ್ತು ಪ್ರೀತಿ ಮದುವೆಯೆಂಬ ಶಾಶ್ವತ ಸಂಬಂಧಕ್ಕೆ ದಾರಿ ಮಾಡಿಕೊಡುತ್ತಿದೆ. ಈ ಬೆಳವಣಿಗೆಯಿಂದ ವರದಕ್ಷಿಣೆ ಯಂತಹ ಪಿಡುಗು ನಾಶವಾಗುತ್ತದಲ್ಲದೆ, ಜಾತಿ-ಧರ್ಮಗಳ ನಡುವಿನ ತಾರತಮ್ಯಗಳನ್ನು ಅಳಿಸಿಹಾಕಲು ಸಾಧ್ಯವಾಗುತ್ತದೆ.**

ಪ್ರೀತಿ ವಿವಾಹಗಳನ್ನು ಲವ್ ಜಿಹಾದ್ ಎಂದು ಪರಿಗಣಿಸುವವರು ಎರಡು ಮುಖದ ಧೋರಣೆಯನ್ನು ಹೊಂದಿದ್ದಾರೆ. ಇತ್ತೀಚೆಗೆ ಗದಗನಲ್ಲಿ ಶರೀಫ ದೊಡ್ಡಮನಿ ಎಂಬ ಮುಸ್ಲಿಂ ಯುವಕ ಪ್ರೇರಣಾ ಖೋಡೆ ಎಂಬ ಹಿಂದೂ ಹುಡುಗಿಯನ್ನು ಪ್ರೀತಿಸಿ ಧರ್ಮಸ್ಥಳದಲ್ಲಿ ಜೂನ್ 18, 2010 ರಂದು ಮದುವೆ ಮಾಡಿಕೊಂಡಿದ್ದ. ಆದರೆ, ಶ್ರೀರಾಮಸೇನೆಯ ಮುತಾಲಿಕ ದೇಸಾಯಿಯವರು "ಇದು ನೋ ಡೌಟ್ ಲವ್ ಜಿಹಾದ್. ಪ್ರೇರಣಾ ಎಂಬ ಹುಡುಗಿಗೆ ಪ್ರೀತಿ, ಪ್ರೇಮದ ಅಮಿಷವೊಡ್ಡಿ ಮೋಸ ಮಾಡುವ ಸಂಚು ನಡೆದಿದೆ. ಪ್ರೇರಣಾಗೆ ಬೆದರಿಕೆ ಹಾಕಿ ಒಂದೇ ಹಠ ಹಿಡಿಯುವಂತೆ ಪಿತೂರಿ ಮಾಡಲಾಗಿದೆ. ಆಕೆ ಮನೆಯಿಂದ ತಂದಿರುವ ಹಣ, ಬಂಗಾರದ ಆಭರಣ ದೋಚಿಕೊಳ್ಳುವ ಷಡ್ಯಂತ್ರ ನಡೆದಿದೆ" ಎಂದು ಆರೋಪಿಸಿದ್ದಾರೆ. ಈ ಘಟನೆಯಿಂದ ಗದಗನಲ್ಲಿ ಎರಡೂ ಕೋಮಿನ ಜನರು ಪೊಲೀಸ್ ಠಾಣೆಯ ಮುಂದೆ ಪರ-ವಿರೋಧಿ ಪ್ರತಿಭಟನೆ ಮಾಡಿದರು. ಆದರೆ ಪೊಲೀಸರ ಸಮಯ ಪ್ರಜ್ಞೆಯಿಂದ ಸಂಘರ್ಷವೊಂದು ತಪ್ಪಿತು.

ಇದಕ್ಕಿಂತ ಮುಂಚೆ ಬಾಗಲಕೋಟೆಯಲ್ಲಿ ಮಹೇಶ ಶಹಾಪೂರ ಎಂಬ ಹಿಂದೂ ಯುವಕ ಆಫ್ರೀನ್ ನೂರ ಅಹ್ಮದ ಆರಿ ಎಂಬ ಮುಸ್ಲಿಂ ಹುಡಗಿಯನ್ನು ಪ್ರೀತಿಸಿ ಹುಬ್ಬಳ್ಳಿಯ ದೇವಸ್ಥಾನವೊಂದರಲ್ಲಿ ಮದುವೆಯಾಗಿ, ನೋಂದಣಿ ಕೂಡ ಮಾಡಿಸಿದ್ದರು. ಮಹೇಶನನ್ನು ಮದುವೆಯಾದ ಆಫ್ರೀನ್ ಹಿಂದೂ ಧರ್ಮಕ್ಕೆ ಮತಾಂತರಗೊಂಡು ಸುಪ್ರಿಯಾ ಎಂದು ಹೆಸರು ಬದಲಾಯಿಸಿಕೊಂಡಿದ್ದಳು. (ಪ್ರಜಾವಾಣಿ ದಿ:24-06-2010ರ ವರದಿ ನೋಡಿ) ಈ ಮದುವೆಗೆ ಸಂಘ ಪರಿವಾರದ ಮುಖಂಡರು ಸಾರಥ್ಯ ವಹಿಸಿದ್ದರು ಎಂಬುದು ಇಲ್ಲಿ ಗಮನಿಸಬೇಕಾದ ವಿಷಯ.

ಒಂದೆಡೆ ಹಿಂದೂ ಹುಡುಗಿ ಮುಸ್ಲಿಂ ಹುಡುಗನನ್ನು ಮದುವೆಯಾದರೆ ಲವ್ ಜಿಹಾದ್ ಎನ್ನುವವರು, ಹಿಂದೂ ಹುಡುಗ ಮದುವೆಯಾಗುವ ಮುಸ್ಲಿಂ ಹುಡುಗಿಯನ್ನು ಹಿಂದೂ ಧರ್ಮಕ್ಕೆ ಮತಾಂತರಗೊಳಿಸುತ್ತಿರುವದೇಕೆ? ಎರಡು ಜೀವಗಳ ಹಾಗೂ ಎರಡು ಕುಟುಂಬಗಳ ನಡುವೆ ಏರ್ಪಡುವಂತಹ ಸಂಬಂಧವನ್ನು ಮತಧರ್ಮಗಳ ಹೆಸರಿನಲ್ಲಿ ಹಾಳುಗೆಡವ ಕೆಲಸವನ್ನು ಎರಡೂ ಕೋಮಿನವರು ಮಾಡುತ್ತಿರುವದೇಕೆ? ಕಾನೂನು ಎಂಬುದು ಎಲ್ಲರಿಗೂ ಒಂದೇ. ಅವರವರ ಪಾಲಿಗೆ ಅವರವರ ಧರ್ಮ ಶ್ರೇಷ್ಠವಾದದ್ದೇ. ಹೀಗಾಗಿ ಮೊದಲ ನೋಟದಲ್ಲಿ ಹುಟ್ಟುವ ಪ್ರೀತಿ ಬಾಹ್ಯ ಆಕರ್ಷಣೆಯ ನಂತರ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವ, ಒಬ್ಬರಿಗಾಗಿ ಒಬ್ಬರು ಒಳ್ಳೆಯತನವನ್ನು ಮತ್ತು ತ್ಯಾಗವನ್ನು ಮಾಡುವ ಮೂಲಕ ಮದುವೆಯಲ್ಲಿ ಘಟ್ಟಿಗೊಳ್ಳುವ ಸಂಬಂಧವನ್ನು ಒಡೆದು ಹಾಕುವದನ್ನು ಯಾವ ಕಾನೂನೇಆಗಲಿ ಯಾವಧರ್ಮವೇ ಆಗಲಿ ಹೇಳುವದಿಲ್ಲ.

(37ನೇ ಪುಟಕ್ಕೆ)

ಅಯೋಧ್ಯೆ ತೀರ್ಪು: ಮಸೀದಿ ಕೆಡವಿ ಮಂದಿರ ಕಟ್ಟಿದ ನ್ಯಾಯಾಲಯ!

ಶಿವಸುಂದರ್

ಸುಪ್ರಿಂ ಕೋರ್ಟಿನ ಆದೇಶದ ಮೇರೆಗೆ ಒಂದು ವಾರದ ಕಾಲ ಮುಂದೂಡಲಾಗಿದ್ದ ಬಾಬ್ರಿ ಮಸೀದಿ-ರಾಮಜನ್ಮಭೂಮಿ ವಿವಾದದ ತೀರ್ಪನ್ನು ಕೊನೆಗೂ ಸೆಪ್ಟೆಂಬರ್ 30ರಂದು ಅಲಹಾಬಾದ್ ಹೈಕೋರ್ಟಿನ ಲಖನೌ ವಿಭಾಗದ ತ್ರಿಸದಸ್ಯ ಪೀಠ ನೀಡಿದೆ. ತೀರ್ಪು ಯಾರ ಪರವಾಗಿದ್ದರೂ ಪರವಾಗಿಲ್ಲ, ನ್ಯಾಯದ ಪರವಾಗಿದ್ದರೆ ಸಾಕು ಎನ್ನುವರು ಕೆಲವರಿದ್ದರೂ ನಡುವೆ ತೀರ್ಪು ಹೇಗೇ ಬಂದರೂ ದೇಶದ ಶಾಂತಿ ಕದಡಿ ಮತ್ತೆ ರಕ್ತಪಾತ ಆಗದಿದ್ದರೆ ಸಾಕು ಎಂಬ ಆತಂಕವೇ ದೇಶದ ಪ್ರಧಾನವಾದ ಮೂಡ್ ಆಗಿತ್ತು. ಅದಕ್ಕೆ ತಕ್ಕಂತೆ ತೀರ್ಪು ಬರುವ ಕೆಲದಿನಗಳ ಮುಂಚೆಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಹಲವಾರು ಕ್ರಮಗಳಿಂದ ಹುಟ್ಟಿಸಿದ ಭೀತಿಯೂ ಸಹ ಸೆಪ್ಟೆಂಬರ್ 30ರಂದು ಏನಾಗಬಹುದು ಎಂಬ ಆತಂಕವನ್ನು ಹೆಚ್ಚಿಸಿತ್ತು. 30ರ ಮಧ್ಯಾಹ್ನದ 3.30ರ ವೇಳೆಗೆ ಇಡೀ ದೇಶವೇ ಕರ್ಫ್ಯೂ ವಿಧಿಸಿದಂತೆ ಸ್ಥಬ್ಧಗೊಂಡಿತು.

ತೀರ್ಪು ಏನೇ ಬಂದರೂ ವಿಜಯೋತ್ಸವವಾಗಲೀ, ಪ್ರತಿಭಟನೆಯಾಗಲೀ ಮಾಡಬಾರದೆಂದು ಪೊಲೀಸ್ ಇಲಾಖೆ ಆದೇಶ ಹೊರಡಿಸಿದ್ದರೂ ಮೊದಲೇ ಯೋಜನೆ ಮಾಡಲಾಗಿತ್ತೋ ಎಂಬಂತೆ ತೀರ್ಪುಬಂದ ಒಂದೇ ಗಂಟೆಯೊಳಗೇ ದೇಶದ ಹಲವು ಕಡೆ ಸಂಘ ಪರಿವಾರದ ಸಂಸ್ಥೆಗಳು ವಿಜಯೋತ್ಸವ ನಡೆಸಿದರು. ಕರ್ನಾಟಕದಲ್ಲೂ ಮಂಗಳೂರು, ಕೊಡಗು ಇನ್ನಿತರ ಕಡೆಗಳಲ್ಲಿ ಸಂಘ ಪರಿವಾರ ಬಹಿರಂಗವಾಗಿ ಗುಂಪುಗೂಡಿ ಪಟಾಕಿ ಸಿಡಿಸಿ ವಿಜಯ ಆಚರಿಸಿದರು. ಮುಖ್ಯಮಂತ್ರಿಗಳ ಜಿಲ್ಲೆಯಾದ ಶಿವಮೊಗ್ಗ ದಲ್ಲಂತೂ ಸಂಘ ಪರಿವಾರ ನಿಷೇಧಾಜ್ಞೆಯನ್ನೂ ಉಲ್ಲಂಘಿಸಿ ವಿಜ ಯೋತ್ಸವದ ಮೆರವಣಿಗೆ ನಡೆಸಿದರು! ಹೀಗೆ ಪೊಲೀಸರ ನಿಷೇ ದಾಜ್ಞೆಯೂ ಸಹ ತೀರ್ಪಿನಂತೆ ಪಕ್ಷಪಾತಿಯಾಗಿತ್ತು. ಸಾರಾಂಶ ದಲ್ಲಿ ಅದು ಮುಸ್ಲಿಮರ ಕಣ್ಣೀರನ್ನೂ ಸಹ ನಿಷೇಧಗೊಳಿಸಿತು.

ಈ ದೇಶದ ಜನರಿಗೆ ಬಾಬ್ರಿ ಮಸೀದಿ-ರಾಮಜನ್ಮ ಭೂಮಿ ಎಂದರೆ ಜ್ಞಾಪಕಕ್ಕೆ ಬರುವುದು ರಾಮನೂ ಅಲ್ಲ. ಅಲ್ಲಾಹೂನೂ ಅಲ್ಲ. ಬದಲಿಗೆ ಜ್ಞಾಪಕಕ್ಕೆ ಬರುವುದು ಆ ರಕ್ತಸಿಕ್ತ ೯೦ ರ ದಶಕಗಳು. ಸಂಘ ಪರಿವಾರ ದೇಶಾದ್ಯಂತ ಹುಟ್ಟುಹಾಕಿದ ಕೋಮುಗಲಭೆಗಳ ಬೀಭತ್ಸಗಳು. ಹೀಗಾಗಿ ಹೇಗೋ ತೀರ್ಪು ಅಂಥಾ ಒಂದು ಬಂದು ಈ ವಿವಾದ ಕೊನೆಗೊಂಡರೆ ಸಾಕು. ಮತ್ತೆ ಗಲಭೆಗಳಾಗಿ ರಕ್ತಪಾತವಾಗದಿದ್ದರೆ ಸಾಕು ಎಂಬುದೇ ಈ ದೇಶದ ಜನಸಾಮಾನ್ಯರೆಲ್ಲರ ಆಶಯವಾಗಿತ್ತು. ಆದರೆ ಶಾಂತಿಯುತ ಸಹಬಾಳ್ವೆಯ ದೃಷ್ಟಿಯಿಂದ ಜನಸಾಮಾನ್ಯರು ಮಾಡಿಕೊಳ್ಳುವ ಹತಾಷ ಮತ್ತು ನಿಸ್ಸಹಾಯಕ ತರ್ಕಗಳೇ ನ್ಯಾಯಾಲಯದ ಮತ್ತು ಕಾನೂನು ಪಂಡಿತರ ದೃಷ್ಟಿಯೂ ಆಗಿಬಿಡುವುದು ಒಂದು ದುರಂತ!

ಈಗ ತೀರ್ಪು ಬಂದುವಾರ ಕಳೆದಿದೆ. ತೀರ್ಪಿನ ಎಲ್ಲಾ ವಿವರಗಳೂ ಈಗ ಲಭ್ಯವಾಗಿವೆ.? ನ್ಯಾಯಮೂರ್ತಿಗಳಾದ ಅಗರ್‌ವಾಲ್, ಶರ್ಮಾ - ಎಸ್.ಯು. ಖಾನ್‌ಗಳನ್ನೊಳಗೊಂಡ ತ್ರಿಸದಸ್ಯ ಪೀಠ ನೀಡಿದ ತೀರ್ಪಿನ ಒಟ್ಟಾರೆ ಗಾತ್ರ ಹೆಚ್ಚೂ ಕಡಿಮೆ 10,000 ಪುಟಗಳಷ್ಟಿದೆ. ಇದರ ಅಷ್ಟು ವಿವರಗಳು ಈಗ ಇಂಟರ್ ನೆಟ್‌ನಲ್ಲಿ ಲಭ್ಯವಿದೆ. ಅದಕ್ಕೆ ಪೂರಕವಾಗಿ ಅವರು ಪರಾಂಬರಿಸಿರುವ ಸಾಕ್ಷಿಗಳು ಮತ್ತು ಪುರಾವೆಗಳು ಒಟ್ಟು ರಾಶಿ ಒಂದು ಲಕ್ಷ ಪುಟಗಳಷ್ಟಿವೆ. ಹೀಗಾಗಿ ತೀರ್ಪಿನ ಬಗ್ಗೆ ಯಾವುದೇ ವ್ಯಕ್ತಿ ನಿಷ್ಟ ಅಭಿಪ್ರಾಯಗಳಿಗೆ ಬರಲು ಅವಕಾಶವೇ ಇಲ್ಲದಂತೆ ತೀರ್ಪಿನ ತಾತ್ಪರ್ಯ ಮತ್ತು ಆ ಬಗೆಯ ತೀರ್ಪು ನೀಡಲು ಕೋರ್ಟು ಪರಿಗಣಿಸಿದ ಅಂಶಗಳು ಈಗ ಬಹಿರಂಗವಾಗಿ ಲಭ್ಯವಾಗಿದೆ.

ಮೇಲ್ನೋಟಕ್ಕೆ ಈ ತೀರ್ಪಿನ ಬಗ್ಗೆ ಕೆಲವು ಅಂಶಗಳು ಸ್ಪಷ್ಟ ಗೊಳ್ಳುತ್ತವೆ. ಮೊದಲನೆಯದಾಗಿ ಈ ತೀರ್ಪು ಮಸೀದಿಯ ಮೇಲೆ ಮುಸ್ಲಿಮರಿಗಿದ್ದ ಎಲ್ಲಾ ಹಕ್ಕುಗಳನ್ನೂ ನಿರಾಕರಿಸುತ್ತದೆ. ಎರಡನೆಯದಾಗಿ ಯಾವುದೇ ಸಾಕ್ಷಿ ಪುರಾವೆಗಳಿಲ್ಲದಿದ್ದರೂ ಕೇವಲ ಹಿಂದೂಗಳ ನಂಬಿಕೆ ಮತ್ತು ಶ್ರದ್ಧೆಯನ್ನು ಮಾತ್ರ ಪರಿಗಣಿಸಿ ಜಾಗದ ಒಡೆತನ ಹಾಗೂ ಇತರ ಎಲ್ಲಾ ವಾದಗಳ ಬಗ್ಗೆ ಹಿಂದೂಗಳ ವಾದವನ್ನು ಪುರಸ್ಕರಿಸಿದೆ. ಆದರೂ ಕೊನೆಗೆ ಔದಾರ್ಯದಿಂದ ಮೂರನೇ ಒಂದು ಭಾಗದಷ್ಟು ಜಾಗವನ್ನು ಮಾತ್ರ ಮುಸ್ಲಿಮರಿಗೆ

ಕೊಟ್ಟು ರಾಜಿ–ಕಬೂಲಿಗೆ ಯತ್ನಿಸಿದೆ. ಅಂದರೆ ನ್ಯಾಯಾಲಯವು ಕಾನೂನು – ನ್ಯಾಯಸೂತ್ರಗಳಿಗಿಂತ ಹೆಚ್ಚಾಗಿ ನಂಬಿಕೆ – ಶ್ರದ್ಧೆಯ ವಿಷಯವನ್ನೇ ಪರಿಗಣಿಸಿ ವಸ್ತುನಿಷ್ಟ ನ್ಯಾಯ ಪ್ರಕ್ರಿಯೆ ಜೊತೆ ರಾಜಿ ಮಾಡಿಕೊಂಡಿದೆ.

ಈ ದೇಶದ ಸಾಮಾನ್ಯ ಜನ ತೀರ್ಪಿನ ಬಗ್ಗೆ ನಿರಾಳದ ನಿಟ್ಟುಸಿರನ್ನು ಎಳೆದಿರುವುದರಲ್ಲಿ ಆಶ್ಚರ್ಯ ವಿಲ್ಲ. ಈ ದೇಶದ ಜನರಿಗೆ ಬಾಬ್ರಿ ಮಸೀದಿ–ರಾಮಜನ್ಮಭೂಮಿ ಎಂದರೆ ಜ್ಞಾಪಕಕ್ಕೆ ಬರುವುದು ರಾಮನೂ ಅಲ್ಲ. ಅಲ್ಲಾಹೂನೂ ಅಲ್ಲ. ಬದಲಿಗೆ ಜ್ಞಾಪಕಕ್ಕೆ ಬರುವುದು ಆ ರಕ್ತಸಿಕ್ತ 90ರ ದಶಕಗಳು. ಸಂಘ ಪರಿವಾರ ದೇಶಾದ್ಯಂತ ಹುಟ್ಟುಹಾಕಿದ ಕೋಮುಗಲಭೆಗಳ ಬೀಭತ್ಸಗಳು. ಹೀಗಾಗಿ ಹೇಗೋ ತೀರ್ಪು ಅಂಥಾ ಒಂದು ಬಂದು ಈವಿವಾದ ಕೊನೆಗೊಂಡರೆ ಸಾಕು. ಮತ್ತೆ ಗಲಭೆಗಳಾಗಿ ರಕ್ತಪಾತವಾಗದಿದ್ದರೆ ಸಾಕು ಎಂಬುದೇ ಈ ದೇಶದ ಜನಸಾಮಾನ್ಯರೆಲ್ಲರ ಆಶಯವಾಗಿತ್ತು. ಆದರೆ ಶಾಂತಿಯುತ ಸಹಬಾಳ್ವೆಯ ದೃಷ್ಟಿಯಿಂದ ಜನಸಾಮಾನ್ಯರು ಮಾಡಿಕೊಳ್ಳುವ ಹತಾಷ ಮತ್ತು ನಿಸ್ಸಹಾಯಕ ತರ್ಕಗಳೇ ನ್ಯಾಯಾಲಯದ ಮತ್ತು ಕಾನೂನು ಪಂಡಿತರ ದೃಷ್ಟಿಯೂ ಆಗಿಬಿಡುವುದು ಒಂದು ದುರಂತ!

ಈ ತೀರ್ಪು ಹೊರಬಂದ ನಂತರ ಈ ದೇಶದ ಖ್ಯಾತ ನ್ಯಾಯಾಂಗ ತಜ್ಞರಾದ ರಾಜೀವ್ ಧವನ್, ನ್ಯಾಯಮೂರ್ತಿ ರಾಜೇಂದ್ರ ಸಚ್ಚಾರ್, ಕೃಷ್ಣ ಅಯ್ಯರ್ ರಂಥ ಈ ದೇಶದ ಘನತೆವೆತ್ತ ನ್ಯಾಯಾಧೀಶರುಗಳು ತೀರ್ಪನ್ನೂ ಮತ್ತು ನ್ಯಾಯಾಲಯ ಅನುಸರಿಸಿರುವ ನ್ಯಾಯಿಕ ಮಾನದಂಡಗಳನ್ನು ಸಾರಾಸಗಟು ಟೀಕೆ ಮಾಡಿದ್ದಾರೆ. ಅತ್ಯಂತ ದುರಾದೃಷ್ಟಕರವೆಂದು ಬಣ್ಣಿಸಿದ್ದಾರೆ. ಆದರೂ ಕೆಲವು ಮಧ್ಯಸ್ಥ ಉದಾರವಾದಿಗಳು ಹಾಗೂ ಕೆಲವು ಪ್ರಮುಖ ಎಡ ಮತ್ತು ನಡುಪಂಥೀಯರು ಈ ತೀರ್ಪನ್ನು ಐತಿಹಾಸಿಕ–ಅತ್ಯಂತ ಸ್ವಾಗತಾರ್ಹವೆಂದೆಲ್ಲಾ ಹಾಡಿಹೊಗಳಿದ್ದಾರೆ. ಇದಕ್ಕೂ ಕಾರಣ ಕೋಮುವಾದಿಗಳು ತಮ್ಮ ಸತತ ಆಕ್ರಮಣಗಳಿಂದ ಪ್ರಗತಿಪರರಲ್ಲಿ ಸೃಷ್ಟಿಸಿರುವ ದಣಿವು ಮತ್ತು ಹತಾಷೆ. ನ್ಯಾಯವೋ ಅನ್ಯಾಯವೋ ಒಟ್ಟಿನಲ್ಲಿ ಶಾಂತಿ ಸ್ಥಾಪನೆಯಾದರೆ ಸಾಕೆಂಬ ಸಿನಿಕತನದ ತರ್ಕಗಳು. ಅಂಥವರೇ ಈಗ ಅಲ್ಲಿ ರಾಮ ಮಂದಿರ–ಮಸೀದಿ ಎರಡು ತಲೆ ಎತ್ತಲಿ. ಶಾಂತಿ ಮುಖ್ಯ.. ಇತ್ಯಾದಿ ಎಂದೆಲ್ಲಾ ಬಡಬಡಿಸಿದ್ದಾರೆ. ಆದರೆ ಅಂಥಾ ಸಾಧ್ಯತೆಗೆ ಬೇಕಾದ ಕಾನೂನು ಬುನಾದಿಯನ್ನೇ ಈ ತೀರ್ಪು ಹೊಡೆದುಹಾಕಿದೆ. ಎಲ್ಲ ಸೆಕ್ಯುಲಾರ್ ಜನರ ಉದ್ದೇಶ ಶಾಂತಿಯೇ ಆದರೂ ಅದು ನ್ಯಾಯವನ್ನು ಕೊಂದು ಪಡೆಯುವ ಶಾಂತಿಯಾಗಿದ್ದರೆ ಸದ್ಯಕ್ಕೂ – ಶಾಶ್ವತಕ್ಕೂ ಅಶಾಂತಿಯ ಮತ್ತು ಕೋಮುಗಲಭೆಗಳನ್ನೇ ಹೆರುತ್ತದೆ ಎಂಬುದನ್ನು ಈ ತೀರ್ಪು ಸಾಬೀತು ಮಾಡುತ್ತದೆ. ಆದ್ದರಿಂದ ಬೋಳೆ ಬೋಳೆಯಾದ ವಿಶ್ಲೇಷಣೆ – ಮೇಲ್ಸ್ಥರದ ತರ್ಕಗಳಿಂದ ಯಾವ ಇಹಕ್ಕಾಗಲೀ, ಪರಕ್ಕಾಗಲೀ ಏನೂ ಪ್ರಯೋಜನವಿಲ್ಲ. ಬದಲಿಗೆ ನ್ಯಾಯ, ಸಂವಿಧಾನ, ಸಾಕ್ಷಿ, ಪುರಾವೆ, ಸೆಕ್ಯುಲಾರಿಸಂನ ಮಾನದಂಡಗಳನ್ನು

ಎಲ್ಲ ಸೆಕ್ಯುಲಾರ್ ಜನರ ಉದ್ದೇಶ ಶಾಂತಿಯೇ ಆದರೂ ಅದು ನ್ಯಾಯವನ್ನು ಕೊಂದು ಪಡೆಯುವ ಶಾಂತಿಯಾಗಿದ್ದರೆ ಸದ್ಯಕ್ಕೂ – ಶಾಶ್ವತಕ್ಕೂ ಅಶಾಂತಿಯ ಮತ್ತು ಕೋಮುಗಲಭೆಗಳನ್ನೇ ಹೆರುತ್ತದೆ ಆದ್ದರಿಂದ ಬೋಳೆ ಬೋಳೆಯಾದ ವಿಶ್ಲೇಷಣೆ ಮತ್ತು ಮೇಲ್ಸ್ಥರದ ತರ್ಕಗಳಿಂದ ಯಾವ ಇಹಕ್ಕಾಗಲೀ, ಪರಕ್ಕಾಗಲೀ ಏನೂ ಪ್ರಯೋಜನವಿಲ್ಲ. ಬದಲಿಗೆ ನ್ಯಾಯ, ಸಂವಿಧಾನ, ಸಾಕ್ಷಿ, ಪುರಾವೆ, ಸೆಕ್ಯುಲಾರಿಸಂನ ಮಾನ ದಂಡಗಳನ್ನು ಅನುಸರಿಸಿ ಸರಿಯಾದ ನಿಲುವಿಗೆ ಬರುವ ಅಗತ್ಯವಿದೆ.

ಅನುಸರಿಸಿ ಈ ತೀರ್ಪಿನ ಸರಿಯಾದ ವಿಶ್ಲೇಷಣೆ ಮಾಡಿ ಸರ್ಕಾರ, ಸಮಾಜ ಮತ್ತು ನ್ಯಾಯಾಲಯಗಳು ಸರಿಯಾದ ನಿಲುವಿಗೆ ಬರುವ ಅಗತ್ಯವಿದೆ.

ಸದರಿ ಲಖನೌ ಕೋರ್ಟಿನ ತೀರ್ಪಿನ ವಿಶ್ಲೇಷಣೆ ಮಾಡುವ ಮುನ್ನ ಈ ವಿವಾದದ ಇತಿಹಾಸದ ಬಗ್ಗೆ ಮತ್ತು ಕೋರ್ಟಿನ ಮುಂದಿದ್ದ ದಾವೆಗಳ ಸ್ವರೂಪದ ಬಗ್ಗೆ ಒಂದು ಸಣ್ಣ ಪರಿಚಯ.

ಬಾಬ್ರಿ ಮಸೀದಿ ರಾಮಜನ್ಮಭೂಮಿಯಾದದ್ದು!

ಕ್ರಿ.ಶ. 1528ರಲ್ಲಿ ಬಾಬರ್ ಅಥವಾ ಬಾಬರ್‌ನ ಸಲಹೆಯ ಮೇರೆಗೆ ಅವನ ದಂಡನಾಯಕ ಮೀರ್ ಬಾಕಿ ಅಯೋಧ್ಯೆಯಲ್ಲಿ ಬಾಬರ್‌ನ ಹೆಸರಲ್ಲಿ ಒಂದು ಮಸೀದಿಯನ್ನು ನಿರ್ಮಿಸಿದ. 1528ರ ನಂತರದ ಅವಧಿಯಲ್ಲಿ ಯಾವುದೋ ಒಂದು ಹಂತದಲ್ಲಿ ಅಲ್ಲಿ ಹಿಂದೂಗಳೂ ಸಹ ಅದೇ ಆವರಣದಲ್ಲಿ ರಾಮನಿಗೆ ಪ್ರಾರ್ಥನೆ ಸಲ್ಲಿಸಲು ಪ್ರಾರಂಭಿಸಿದರು. 1855ರಲ್ಲಿ ನಡೆದ ಕೋಮು ಗಲಭೆಯೊಂದರಲ್ಲಿ ಬಾಬ್ರಿ ಮಸೀದಿಯ ಮೇಲೂ ದಾಳಿಯಾಗುತ್ತದೆ. 1857ರಲ್ಲಿ ಹಿಂದೂ ಮತ್ತು ಮುಸ್ಲಿಮರಿಬ್ಬರೂ ಒಟ್ಟಾಗಿ ಬ್ರಿಟಿಷರನ್ನು ಎದುರಿಸುತ್ತಾರೆ. 1858ರಲ್ಲಿ ಬಾಬ್ರಿ ಮಸೀದಿಯ ಒಳ ಆವರಣದ ಸುತ್ತಾ ಬೇಲಿಯನ್ನು ಕಟ್ಟಿ ಒಳ ಆವರಣದಲ್ಲಿ ಮುಸ್ಲಿಮರ ಪ್ರಾರ್ಥನೆಗೂ, ಹೊರ ಆವರಣದಲ್ಲಿ ಹಿಂದೂಗಳ ಪೂಜೆಗೂ ಅವಕಾಶ ಕಲ್ಪಿಸಿಕೊಡಲಾಗುತ್ತದೆ. 1860ರಲ್ಲಿ ಫೈಜಾಬಾದಿನ ಬ್ರಿಟಿಷ್ ತಹಶೀಲ್ದಾರ ಪ್ರಪ್ರಥಮ ಬಾರಿಗೆ ಬಾಬ್ರಿ ಮಸೀದಿ ಕಟ್ಟಿದ ಜಾಗದಲ್ಲಿ ರಾಮಮಂದಿರವಿತ್ತೆಂಬ ಪ್ರಸ್ತಾಪ ಮಾಡುತ್ತಾನೆ.

1870ರಲ್ಲಿ ಕಾರ್ನೆಜಿಯೆಂಬ ಮತ್ತೊಬ್ಬ ಬ್ರಿಟಿಷ್ ಲೇಖಕಿ ಬಾಬ್ರಿ ಮಸೀದಿಯ ಕೆಳಗೆ ರಾಮಮಂದಿರವಿರಬಹುದೆಂಬ “ಚರಿತ್ರೆ” ಬರೆಯುತ್ತಾಳೆ. 1885ರಲ್ಲಿ ಪ್ರಥಮ ಬಾರಿಗೆ ಹಿಂದೂ ಸಂತರು ಬಾಬ್ರಿ ಮಸೀದಿಯ ಹೊರ ಆವರಣದಲ್ಲಿ (ಚಬೂತರ್) ರಾಮಮಂದಿರ ನಿರ್ಮಾಣ ಮಾಡಿಕೊಳ್ಳಲು ಫೈಜಾಬಾದ್ ಸಬ್ ಜಡ್ಜ್ ಎದುರು ಮತ್ತು ನಂತರದಲ್ಲಿ ಜಿಲ್ಲಾ ನ್ಯಾಯಾಲಯದ ಎದಿರು ದಾವೆ ಹೂಡುತ್ತಾರೆ. ಆದರೆ ಅಲ್ಲಿ ರಾಮಮಂದಿರವಿತ್ತೆಂಬುದು ನಿಜವೇ ಆದರೂ ಈಗ 350 ವರ್ಷಗಳ ಕೆಳಗೆ ನಡೆದು ಹೋದ “ಅನ್ಯಾಯ”ವನ್ನು ಸರಿಪಡಿಸಲು ಈಗ ಇರುವ ಪರಿಸ್ಥಿತಿಯನ್ನು ಬದಲು ಮಾಡಲು ಬರುವುದಿಲ್ಲವೆಂದು ಕೋರ್ಟು ನಿರಾಕರಿಸುತ್ತದೆ. (ಅಂದರೆ ದಾವೆಯನ್ನು ರದ್ದುಪಡಿಸಿದರೂ ಬಾಬ್ರಿ ಮಸೀದಿಯ ಕೆಳಗೆ ಮಂದಿರವಿರಬಹುದೆಂಬ ಊಹಾಪೋಹಕ್ಕೆ ಬ್ರಿಟಿಷ್ ಕೋರ್ಟು ಪರೋಕ್ಷ ಮಾನ್ಯತೆಯನ್ನು ನೀಡುತ್ತದೆ). ನಂತರ 1934ರಲ್ಲಿ ಸಂಭವಿಸಿದ ಕೋಮುಗಲಭೆಯಲ್ಲಿ ಕೆಲವು ಹಿಂದೂ ಮತೋನ್ಮಾದಿ ಶಕ್ತಿಗಳು ಬಾಬ್ರಿ ಮಸೀದಿಯ ಗೋಡೆಗಳನ್ನು ಕೆಡವಿ ಮಸೀದಿಗೆ ಹಾನಿ ಮಾಡುತ್ತಾರೆ. ಆಗ ಬ್ರಿಟಿಷ್ ಸರ್ಕಾರ ಅದನ್ನು ರಿಪೇರಿ ಮಾಡಿಸಿಕೊಟ್ಟು ಯಥಾಸ್ಥಿತಿ ಕಾಯುತ್ತದೆ.

1949ರ ಡಿಸೆಂಬರ್ 22ರ ಮಧ್ಯರಾತ್ರಿ ಹಿಂದೂಗಳ ಗುಂಪೊಂದು ಬಾಬ್ರಿ ಮಸೀದಿಯ ಒಳಾವರಣಕ್ಕೆ ಗುಟ್ಟಾಗಿ ಪ್ರವೇಶಿಸಿ ಅಲ್ಲಿ ಬಾಲರಾಮನ ಮೂರ್ತಿಯನ್ನು ಪ್ರತಿಸ್ಥಾಪಿಸುತ್ತವೆ. ಆಗ ನೆಹ್ರೂ, ಸರ್ದಾರ್ ಪಟೇಲ್ ಸರ್ಕಾರ ಮೂರ್ತಿಗಳನ್ನು ಕೂಡಲೇ ತೆಗಿಸಿ ಯಥಾಸ್ಥಿತಿ ಕಾಯ್ದುಕೊಂಡು ಬರಬೇಕೆಂದು ಅಂದಿನ ಮುಖ್ಯಮಂತ್ರಿ ಗೋಪಿವಲ್ಲಭ ಪಂತ್‌ಗೆ ಆದೇಶ ನೀಡುತ್ತಾರೆ. ಆದರೆ ಆಗಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೆ.ಕೆ. ನಯ್ಯರ್, ಮೂರ್ತಿ

ಗಳನ್ನು ತೆಗೆದುಹಾಕಿದರೆ ಕೋಮು ಗಲಭೆಗಳಾಗುವ ಸಾಧ್ಯತೆಯ ನೆಪವೊಡ್ಡಿ ಮೂರ್ತಿಗಳನ್ನು ತೆಗೆಯುವುದಿಲ್ಲ. ಬದಲಿಗೆ ಬಾಬ್ರಿ ಮಸೀದಿಯ ಪ್ರವೇಶವನ್ನು ಮುಸ್ಲಿಮ್ ಮತ್ತು ಹಿಂದೂಗಳಿಬ್ಬರಿಗೂ ನಿರ್ಬಂದಿಸುತ್ತಾರೆ.

(ನಂತರ ಈತ ಭಾರತೀಯ ಜನತಾ ಪಕ್ಷದ ಅಂದಿನ ರೂಪವಾಗಿದ್ದ ಭಾರತೀಯ ಜನಸಂಘದ ಹೆಸರಲ್ಲಿ ಚುನಾವಣೆಗೆ ಸ್ಪರ್ಧಿಸುತ್ತಾರೆ!). ನಂತರ 1950ರ ಜನವರಿಯಲ್ಲಿ "ಅಸ್ಥಾನ್ ಜನ್ಮಸ್ಥಾನ" ಸಮಿತಿಯ ಗೋಪಾಲ್ ವಿಶಾರದ್ ಎಂಬುವರು ಪ್ರತಿಮೆಗಳ ಪೂಜೆಗೆ ಅವಕಾಶ ಕೊಡ ಬೇಕೆಂದು ದಾವೆ ಹೂಡುತ್ತಾರೆ. 1950ರ ಡಿಸೆಂಬರ್‌ನಲ್ಲಿ ಮತ್ತೊಬ್ಬ ಹಿಂದೂ ಮಹಂತರೂ ಬಾಬ್ರಿ ಮಸೀದಿಯ ಒಳಾವರಣದಲ್ಲಿ ಪೂಜೆಗೆ ಅವಕಾಶ ಕೊಡಬೇಕೆಂದೂ ದಾವೆಹೂಡುತ್ತಾರೆ. 1955ರಲ್ಲಿ ಫೈಜಾಬಾದ್ ಹೈಕೋರ್ಟು ಪ್ರತಿಮೆಯನ್ನು ತೆಗೆಯುವ ಅಗತ್ಯವಿಲ್ಲವೆಂದು ಆದೇಶ ನೀಡುತ್ತದೆ. ನಂತರ ಅದನ್ನು ಉತ್ತರ ಪ್ರದೇಶ ಹೈಕೋರ್ಟು ಸಹ ಎತ್ತಿ ಹಿಡಿಯುತ್ತದೆ.

ಈ ಮಧ್ಯೆ ಬಾಬ್ರಿ ಮಸೀದಿಯ ಹೊರಾವರಣದಲ್ಲಿ ಚಬೂತರ್ ಮತ್ತು ಸೀತಾ ರಸೋಯಿ ಎಂಬಲ್ಲಿ ಹಿಂದೂಗಳು ಪ್ರಾರ್ಥನೆ ಸಲ್ಲಿಸುವುದು ಮುಂದುವರೆದಿರುತ್ತದೆ. ಆದರೆ ಒಳಾವರಣದಲ್ಲಿ ಹಿಂದೂ ಸಂಘಟನೆಗಳು ರಾಮ ಪ್ರತಿಮೆಗಳನ್ನು ಸ್ಥಾಪಿಸಿದ್ದರಿಂದ ಹಾಗೂ ಒಳಾವರಣಕ್ಕೆ ಬೀಗ ಹಾಕಿದ್ದರಿಂದ ಮುಸ್ಲಿಮರು ಬಾಬ್ರಿ ಮಸೀದಿಯಲ್ಲಿ ನಮಾಜ್ ಮಾಡುವುದು ನಿಲ್ಲುತ್ತದೆ. 1959ರಲ್ಲಿ ನಿರ್ಮೋಹಿ ಅಖಾಡಾ ಎಂಬ ವೈಷ್ಣವ ಪಂಥಕ್ಕೆ ಸೇರಿದ ಸಂಘಟನೆಯೊಂದು ಬಾಬ್ರಿ ಮಸೀದಿಯ ಹೊರಾವರಣದಲ್ಲಿರುವ ಸೀತಾ ರಸೋಯಿ ಮತ್ತು ಚಬೂತರ್ ಪ್ರದೇಶದ ಒಡೆತನ ತಮಗೇ ಸೇರಿದ್ದೆಂದೂ ಅದನ್ನು ತಮ್ಮ ವಶಕ್ಕೆ ಕೊಡಬೇಕೆಂದೂ ಒಡೆತನ ದಾವೆ (ಟೈಟಲ್ ಸೂಟ್) ಸಲ್ಲಿಸುತ್ತಾರೆ. 1961ರ ಡಿಸೆಂಬರ್ 18ರಂದು ಸುನ್ನಿ ವಕ್ಫ್ ಬೋರ್ಡ್ ಸಮಿತಿಯವರು ಬಾಬ್ರಿ ಮಸೀದಿ ಪ್ರದೇಶದ ಇಡೀ ಒಡೆತನ ತಮಗೆ ಸೇರಬೇಕೆಂದು ಒಡೆತನದ ದಾವೆ ಸಲ್ಲಿಸುತ್ತಾರೆ.

1984ರಲ್ಲಿ ಹಿಂದೂಪರ ಸಂಘಟನೆಯೊಂದು ರಾಮ ವಿಗ್ರಹಗಳಿರುವ ಸ್ಥಳಕ್ಕೆ ಹಾಕಿರುವ ಬೀಗವನ್ನು ತೆಗೆದು ಹಿಂದೂಗಳು ಪೂಜೆ ಸಲ್ಲಿಸಲು ಅವಕಾಶ ಕೊಡಬೇಕೆಂದು ದಾವೆ ಸಲ್ಲಿಸುತ್ತಾರೆ. ಅದನ್ನು ಪುರಸ್ಕರಿಸಿದ ಫೈಜಾಬಾದ್ ಜಿಲ್ಲಾ ಕೋರ್ಟು ಬೀಗವನ್ನು ತೆಗೆಯಬೇಕೆಂದು ಆದೇಶಿಸುತ್ತದೆ. ಅದನ್ನು ಉನ್ನತ ಕೋರ್ಟಿನಲ್ಲಿ ಪ್ರಶ್ನಿಸಿದ ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷ ಬೀಗವನ್ನು ತೆಗೆದು ಹಿಂದೂಗಳ ಪೂಜೆಗೆ ಏಕಪಕ್ಷೀಯವಾಗಿ ಅವಕಾಶ ಮಾಡಿಕೊಡುತ್ತದೆ. ಆದರೆ ಇದರಿಂದ ಉತ್ತೇಜಿತಗೊಂಡ ಸಂಘ ಪರಿವಾರ ಮತ್ತು ಬಿಜೆಪಿ ಪಕ್ಷ ದೇಶಾದ್ಯಂತ ರಾಮಜನ್ಮಭೂಮಿ ವಿಮೋಚನಾ "ಚಳವಳಿ"ಯನ್ನು ಪ್ರಾರಂಭಿಸುತ್ತವೆ. ಹಿಂದೂಗಳು ಬಾಬ್ರಿ ಮಸೀದಿ ಇರುವ ಜಾಗದಲ್ಲಿ ರಾಮ ಜನ್ಮ ತಾಳಿದ್ದಾನೆಂದು ನಂಬುತ್ತಾರಾದ್ದರಿಂದ ಮುಸ್ಲಿಮರು ಅದನ್ನು ಬಿಟ್ಟುಕೊಡಬೇಕೆಂದೂ ಆ ಮೂಲಕ ಬಾಬರ್ ಮಂದಿರ ಕೆಡವಿ ಮಸೀದಿ ಕಟ್ಟಿದ್ದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದೂ ಅಸತ್ಯ-ಅರ್ಧಸತ್ಯಗಳ ಪ್ರಚಾರ ಪ್ರಾರಂಭಿಸಿ ಇಡೀ ದೇಶದಲ್ಲಿ ಕೋಮುಗಲಭೆಗಳ ದಾವಾನಲವನ್ನು ಹಬ್ಬಿಸುತ್ತಾರೆ. ಮುಸ್ಲಿಮರ ಸಾಲುಸಾಲು ಕಗ್ಗೊಲೆಗಳನ್ನು ನಡೆಸುತ್ತಾರೆ.

ಸರ್ವಶಕ್ತ ಭಗವಂತನಿಗೆ ಮಾನವನೇ ಗಾರ್ಡಿಯನ್

ರಾಮ ಶಿಲಾನ್ಯಾಸ್ ಸಮಿತಿಯು ಸಾಕ್ಷಾತ್ ಭಗವಾನ್ ಶ್ರೀರಾಮಚಂದ್ರನ ಹೆಸರಲ್ಲಿ ಮತ್ತೊಂದು ಅರ್ಜಿಯನ್ನು ಕೋರ್ಟಿನಲ್ಲಿ ದಾಖಲಿಸುತ್ತದೆ.. ಈ ಕೇಸಿನಲ್ಲಿ ಅರ್ಜಿದಾರರು ಯಾರು ಗೊತ್ತೆ? ಅರ್ಜಿದಾರ ನಂಬರ್ 1,ಸಾಕ್ಷಾತ್ ಭಗವಾನ್ ಶ್ರೀರಾಮಚಂದ್ರ ವಿರಾಜ್‌ಮಾನ್. ಅರ್ಜಿದಾರ ನಂಬರ್ 2. ರಾಮಜನ್ಮಭೂಮಿ ಎಂಬ ಜಾಗ! ಬಾಲರಾಮ ದೇವರಾಗಿದ್ದು, ಎಷ್ಟೇ ವರ್ಷಗಳಾದರೂ ಅವನು ಬಾಲಕನೇ ಆಗಿರುವುದರಿಂದ ಆತನ ಆತ್ಮ ಸಖನಾದ 63 ವರ್ಷದ ತ್ರಿಪಾಠಿ ಎಂಬುವರು ತಾನು ಬಾಲರಾಮನ ಗಾರ್ಡಿಯನ್ ಎಂದೂ ಬಾಲ ರಾಮನ ಪರವಾಗಿ ವಾದಿಸುವುದಾಗಿಯೂ ಅರ್ಜಿಸಲ್ಲಿಸಿದರು. ಭಗವಂತನಿಗೆ ಮಾನವ ಗಾರ್ಡಿಯನ್!

ಇದೇ ಸಮಯದಲ್ಲಿ 1989ರಲ್ಲಿ ಸಂಘ ಪರಿವಾರದ ರಾಮ ಶಿಲಾನ್ಯಾಸ್ ಸಮಿತಿಯು ಸಾಕ್ಷಾತ್ ಭಗವಾನ್ ಶ್ರೀರಾಮಚಂದ್ರನ ಹೆಸರಲ್ಲಿ ಮತ್ತೊಂದು ಅರ್ಜಿಯನ್ನು ಕೋರ್ಟಿನಲ್ಲಿ ದಾಖಲಿಸುತ್ತದೆ.. ಈ ಕೇಸಿನಲ್ಲಿ ಅರ್ಜಿದಾರರು ಯಾರು ಗೊತ್ತೆ? ಅರ್ಜಿದಾರ ನಂಬರ್ 1,ಸಾಕ್ಷಾತ್ ಭಗವಾನ್ ಶ್ರೀರಾಮಚಂದ್ರ ವಿರಾಜ್‌ಮಾನ್. ಅರ್ಜಿದಾರ ನಂಬರ್ 2. ರಾಮಜನ್ಮಭೂಮಿ ಎಂಬ ಜಾಗ! ಬಾಲ ರಾಮ ದೇವರಾಗಿದ್ದು, ಎಷ್ಟೇ ವರ್ಷಗಳಾದರೂ ಅವನು ಬಾಲಕನೇ ಆಗಿರುವುದರಿಂದ ಆತನ ಆತ್ಮ ಸಖನಾದ 63 ವರ್ಷದ ತ್ರಿಪಾಠಿ ಎಂಬುವರು ತಾನು ಬಾಲರಾಮನ ಗಾರ್ಡಿಯನ್ ಎಂದೂ ಬಾಲರಾಮನ ಪರವಾಗಿ ವಾದಿಸುವುದಾಗಿಯೂ ಅರ್ಜಿಸಲ್ಲಿಸಿದರು. ಭಗವಂತನಿಗೆ ಮಾನವ ಗಾರ್ಡಿಯನ್! ಈ ಅರ್ಜಿಯಲ್ಲಿ ಭಗವಾನ್ ಬಾಲರಾಮರು ಇಡೀ ಪ್ರದೇಶ ತನಗೆ ಸೇರಬೇಕಾದ್ದರಿಂದ ನಿರ್ಮೋಹಿ ಅಖಾಡಾ ಮತ್ತು ಸುನ್ನಿ ವಕ್ಫ್ ಬೋರ್ಡ್‌ಗಳಿಬ್ಬರನ್ನೂ ಪ್ರತಿದಾವೆಗಳನ್ನಾಗಿಸಿ ಇಡೀ ಪ್ರದೇಶವನ್ನು ಕೇವಲ ತನಗೇ ಬಿಟ್ಟುಕೊಡಬೇಕೆಂದು ವಾದಿಸಿದ್ದಾರೆ! ಇಂಥಾ ಹಾಸ್ಯಾಸ್ಪದ ಅರ್ಜಿಯನ್ನೂ ಕೋರ್ಟು ಪರಿಗಣಿಸಿದ್ದು ಮಾತ್ರವಲ್ಲ. ಸೆಪ್ಟೆಂಬರ್ 30ರ ತೀರ್ಪಿನಲ್ಲಿ ಬಾಲ ರಾಮನ ಹಕ್ಕನ್ನು ಸಂಪೂರ್ಣವಾಗಿ ಎತ್ತಿಹಿಡಿದಿದೆ!!

ನಾಲ್ಕು ಕೇಸುಗಳು ಇಪ್ಪತ್ತು ವರ್ಷಗಳು

1989ರಲ್ಲಿ ಸರ್ಕಾರದ ವಿಶೇಷ ಮನವಿಯ ಪ್ರಕಾರ ಅಯೋಧ್ಯೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಫೈಜಾಬಾದ್ ಕೋರ್ಟಿನಲ್ಲಿ ಇದ್ದ ಎಲ್ಲಾ ಪ್ರಕರಣಗಳನ್ನು ಅಲಹಾಬಾದ್ ಹೈಕೋರ್ಟಿಗೆ ವರ್ಗಾಯಿಸಲಾಯಿತು. ಹೀಗಾಗಿ 1950ರಲ್ಲಿ ಬಾಬ್ರಿ ಮಸೀದಿಯ ಒಳಾವರಣದಲ್ಲಿರುವ ಪ್ರತಿಮೆಗಳ ಪೂಜೆಗೆ ಸರ್ಕಾರ ಅಂದು ವಿಧಿಸಿದ್ದ ನಿರ್ಬಂಧವನ್ನು ಪ್ರಶ್ನಿಸಿ ವಿಶಾರದ್ ಎಂಬುವರು ಹಾಕಿದ್ದ ದಾವೆಯು ಅಲಹಾಬಾದ್ ಹೈಕೋರ್ಟಿನಲ್ಲಿ- ಮೂಲದಾವೆ (Original Suit- OS-1) 1 ಎಂದು ದಾಖಲಾಯಿತು. ಸಂತಮಹಂತರು ಇದೇ ವಿಷಯದಲ್ಲಿ 1951ರಲ್ಲಿ ಹಾಕಿದ್ದ ದಾವೆ ಮೂಲದಾವೆ 2, OS-2, ಎಂದು ದಾಖಲಾಯಿತು.

1959ರಲ್ಲಿ ಬಾಬ್ರಿ ಮಸೀದಿಯ ಹೊರಾವರಣದಲ್ಲಿರುವ ಸೀತಾ ರಸೋಯಿ ಮತ್ತು ಚಬೂತರ್ ಪ್ರದೇಶದ ಒಡೆತನವನ್ನು ತಮಗೇ ನೀಡಬೇಕೆಂದು ನಿರ್ಮೋಹಿ ಅಖಾಡಾದವರು ಸಲ್ಲಿಸಿದ್ದ ದಾವೆಯನ್ನು ಮೂಲದಾವೆ OS-3 ಎಂದೂ ದಾಖಲಿಸಿಕೊಳ್ಳಲಾಯಿತು. 1961ರಲ್ಲಿ ಸುನ್ನಿವಕ್ಫ್ ಬೋರ್ಡಿನವರು ಇಡೀ ಬಾಬ್ರಿ ಮಸೀದಿ ಪ್ರದೇಶದ ಒಡೆತನವನ್ನು ಕೇಳಿ ಸಲ್ಲಿಸಿದ್ದ ದಾವೆಯನ್ನು OS-4 ಎಂದೂ ಪರಿಗಣಿಸಿ, 1909ರಲ್ಲಿ ಇಡೀ ಪ್ರದೇಶ ತನ್ನದು ಎಂದು ಭಗವಾನ್ ರಾಮ ಹಾಕಿದ್ದ ಅರ್ಜಿಯನ್ನು OS-5 ಎಂದೂ ಪರಿಗಣಿಸಲಾಯಿತು. 1990ರಲ್ಲಿ OS-2ರ ಅರ್ಜಿದಾರ ಭಗವಂತನ ಹೆಸರಲ್ಲಿ ಬಿಜೆಪಿ ನಡೆಸುತ್ತಿದ್ದ ರಾಜಕಾರಣವನ್ನು ಕಂಡು ಬೇಸತ್ತು ತಮ್ಮ ಅರ್ಜಿಯನ್ನು ಹಿಂತೆಗೆದುಕೊಂಡರು. ಹೀಗಾಗಿ ಅಲಹಾಬಾದ್ ಹೈಕೋರ್ಟಿನ ಮುಂದೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲಕ್ಕು ದಾವೆಗಳು ಉಳಿದುಕೊಂಡವು.

ಈ ಮಧ್ಯೆ ರಾಮಜನ್ಮಭೂಮಿ ವಿವಾದವನ್ನು ರಾಷ್ಟ್ರಮಟ್ಟದ ಕೋಮುವಾದಿ ರಾಜಕಾರಣಕ್ಕೆ ಬಳಸಿಕೊಂಡ ಸಂಘ ಪರಿವಾರ ಮತ್ತು ಬಿಜೆಪಿ ರಾಷ್ಟ್ರಾದ್ಯಂತ ರಾಮನ ಹೆಸರಲ್ಲಿ ಉನ್ಮಾದ ಸೃಷ್ಟಿಸಿ ಕೋಮು ಕಗ್ಗೊಲೆಗಳನ್ನು ನಡೆಸಿದ್ದಲ್ಲದೆ 1992ರ ಡಿಸೆಂಬರ್ 6ರಂದು ಬಾಬ್ರಿ ಮಸೀದಿಯನ್ನು ಕೆಡವಿಹಾಕಿತು. ಅಂದೇ ಅಲ್ಲಿ ಒಂದು ತಾತ್ಕಾಲಿಕ ರಾಮಮಂದಿರವನ್ನು ಕಟ್ಟಿಬಿಟ್ಟಿತು. 1993ರಲ್ಲಿ ಕೇಂದ್ರ ಸರ್ಕಾರ ಬಾಬ್ರಿ ಮಸೀದಿಯಿದ್ದ ಇಡೀ 2.7 ಎಕರೆಯನ್ನು ಒಳಗೊಂಡಂತೆ 64 ಎಕರೆ ಪ್ರದೇಶವನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿತು. ವಿವಾದಿತ ಸ್ಥಳದಲ್ಲಿ ರಾಮ ಮಂದಿರವಿತ್ತೋ ಇಲ್ಲವೋ ಎಂಬ ವಿಷಯದ ಬಗ್ಗೆ ಕೇಂದ್ರ ಸರ್ಕಾರದ ಸಲಹೆಯ ಮೇರೆಗೆ ರಾಷ್ಟ್ರಪತಿಗಳು ಸುಪ್ರಿಂ ಕೋರ್ಟಿನ ಅಭಿಪ್ರಾಯ ಕೇಳಿದರು. ಆದರೆ ಸುಪ್ರಿಂ ಕೋರ್ಟಿನ ಐದು ನ್ಯಾಯಾಧೀಶರ ಪೀಠ ಇಂಥಾ ಇತಿಹಾಸ, ನಂಬಿಕೆ ಮತ್ತು ಶ್ರದ್ಧೆಗಳ ವಿಷಯದ ಬಗ್ಗೆ ಕೋರ್ಟುಗಳು ತಮ್ಮ ಅಭಿಪ್ರಾಯ ಕೊಡಲು ಅಶಕ್ತ ಮತ್ತು ಸಲ್ಲದು ಎಂದು ತಿಳಿಸಿತು. 1994ರ ಇಸ್ಮಾಯಿಲ್ ಫರೂಖಿ ಪ್ರಕರಣದಲ್ಲಿ ಸುಪ್ರಿಂ ಕೋರ್ಟು ಇಡೀ ಪ್ರಕರಣವನ್ನು ಅಲಹಾಬಾದ್ ಹೈಕೋರ್ಟು ಒಂದೇ ಪ್ರಕರಣವೆಂದು ಭಾವಿಸಿ ತೀರ್ಪು ನೀಡಲು ಆದೇಶಿಸಿತು.

ಅಲಹಾಬಾದ್‌ನ ಲಖನೌ ವಿಭಾಗದ ತ್ರಿಸದಸ್ಯ ಪೀಠ ಈ ಪ್ರಕರಣದ ವಿಚಾರಣೆಯನ್ನು ಕೈಗೆತ್ತಿಕೊಂಡಿತು. 2000ರಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಅಧಿಕಾರದಲ್ಲಿದ್ದಾಗ ಕೇಂದ್ರ ಸರ್ಕಾರದ ಸುಪರ್ದಿಯಲ್ಲಿದ್ದ ಬಾಬ್ರಿ ಮಸೀದಿಯಿದ್ದ 2.7 ಎಕರೆ ಜಾಗದಲ್ಲಿ ಬಾಬ್ರಿ ಮಸೀದಿ ನಿರ್ಮಾಣಕ್ಕೂ ಮುಂಚೆ ಮಂದಿರವಿತ್ತೇ ಎಂದು ಅಧ್ಯಯನ ಮಾಡಲು ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾಗೆ ಆದೇಶಿಸಲಾಯಿತು. 2002ರಲ್ಲಿ ಅವರು ಆ ಜಾಗದಲ್ಲಿ ಉತ್ಖನನ ಪ್ರಾರಂಭಿಸಿ 2003ರಲ್ಲಿ ವರದಿ ಕೊಟ್ಟರು. ಆದರೆ ಉತ್ಖನನಕ್ಕೆ ಮತ್ತು ಅಧ್ಯಯನಕ್ಕೆ ಅವರು ಅನುಸರಿಸಿದ ಪದ್ಧತಿ ಮತ್ತು ತಲುಪಿದ ತೀರ್ಮಾನಗಳ ಬಗ್ಗೆ ದೇಶದ ಎಲ್ಲಾ ಪ್ರಮುಖ ಇತಿಹಾಸಕಾರರು ಮತ್ತು ಪರಿಣಿತರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಆದರೂ

ರಾಮಜನ್ಮಭೂಮಿ ವಿವಾದವನ್ನು ರಾಷ್ಟ್ರ ಮಟ್ಟದ ಕೋಮುವಾದಿ ರಾಜಕಾರಣಕ್ಕೆ ಬಳಸಿಕೊಂಡ ಸಂಘ ಪರಿವಾರ ಮತ್ತು ಬಿಜೆಪಿ ರಾಷ್ಟ್ರಾದ್ಯಂತ ರಾಮನ ಹೆಸರಲ್ಲಿ ಉನ್ಮಾದ ಸೃಷ್ಟಿಸಿ ಕೋಮು ಕಗ್ಗೊಲೆಗಳನ್ನು ನಡೆಸಿದ್ದಲ್ಲದೆ 1992ರ ಡಿಸೆಂಬರ್ 6ರಂದು ಬಾಬ್ರಿ ಮಸೀದಿಯನ್ನು ಕೆಡವಿ ಹಾಕಿತು. ಅಂದೇ ಅಲ್ಲಿ ಒಂದು ತಾತ್ಕಾಲಿಕ ರಾಮಮಂಗಿರವನ್ನು ಕಟ್ಟಿಬಿಟ್ಟಿತು. 1993ರಲ್ಲಿ ಕೇಂದ್ರ ಸರ್ಕಾರ ಬಾಬ್ರಿ ಮಸೀದಿಯಿದ್ದ ಇಡೀ 2.7 ಎಕರೆಯನ್ನು ಒಳಗೊಂಡಂತೆ 64 ಎಕರೆ ಪ್ರದೇಶವನ್ನು ತನ್ನ ಸುಫರ್ದಿಗೆ ತೆಗೆದುಕೊಂಡಿತು. ವಿವಾದಿತ ಸ್ಥಳದಲ್ಲಿ ರಾಮಮಂದಿರ ವಿತ್ತೋ ಇಲ್ಲವೋ ಎಂಬ ವಿಷಯದ ಬಗ್ಗೆ ಕೇಂದ್ರ ಸರ್ಕಾರದ ಸಲಹೆಯ ಮೇರೆಗೆ ರಾಷ್ಟ್ರಪತಿಗಳು ಸುಪ್ರಿಂ ಕೋರ್ಟಿನ ಅಭಿಪ್ರಾಯ ಕೇಳಿದರು. ಆದರೆ ಸುಪ್ರಿಂ ಕೋರ್ಟಿನ ಐದು ನ್ಯಾಯಾಧೀಶರ ಪೀಠ ಇಂಥಾ ಇತಿಹಾಸ, ನಂಬಿಕೆ ಮತ್ತು ಶ್ರದ್ಧೆಗಳ ವಿಷಯದ ಬಗ್ಗೆ ಕೋರ್ಟುಗಳು ತಮ್ಮ ಅಭಿಪ್ರಾಯ ಕೊಡಲು ಅಶಕ್ತ ಮತ್ತು ಸಲ್ಲದು ಎಂದು ತಿಳಿಸಿತು.

ಕೋರ್ಟು ಆ ವರದಿಯನ್ನು ತನ್ನ ಪ್ರಮುಖ ಸಾಕ್ಷ್ಯವೆಂದು ಪರಿಗಣಿಸಿತು.

ಇದು ಇಲ್ಲಿಯವರೆಗಿನ ಅಯೋಧ್ಯಾ ಪ್ರಕರಣದ ಇತಿಹಾಸ. ಈ ಪ್ರಕರಣವನ್ನು ವಿಚಾರಣೆಗೆ ಕೈಗೆತ್ತಿಕೊಂಡ ತ್ರಿಸದಸ್ಯ ಪೀಠದ ನ್ಯಾಯಾಧೀಶರೆಂದರೆ ನ್ಯಾಯಮೂರ್ತಿ ಶರ್ಮಾ, ನ್ಯಾಯಮೂರ್ತಿ ಅಗರ್‌ವಾಲ್ ಮತ್ತು ನ್ಯಾಯಮೂರ್ತಿ ಎಸ್.ಯು. ಖಾನ್. ಈ ನ್ಯಾಯ ಪೀಠವು ಮೊದಲು ಪ್ರತಿ ಪ್ರಕರಣದಲ್ಲಿ ಯಾವ್ಯಾವ ವಿಷಯಗಳ ಬಗ್ಗೆ ತೀರ್ಮಾನ ಕೊಡಬೇಕಿದೆ ಎಂಬುದನ್ನು ಪಟ್ಟಿ ಮಾಡಿತು. ಅದರಂತೆ ವಿಶಾರದರ OS–1ಪ್ರಕರಣದಲ್ಲಿ 17 ವಿಷಯಗಳನ್ನೂ, ನಿರ್ಮೋಹಿ ಅಖಾಡಾದ OS–3 ವಿಷಯದಲ್ಲಿ 17 ವಿಷಯಗಳನ್ನೂ, ಸುನ್ನಿ ವಕ್ಫ್ ಬೋರ್ಡಿನ OS–4 ಪ್ರಕರಣದಲ್ಲಿ 28 ಹಾಗೂ ಕೆಲವು ಉಪ ವಿಷಯಗಳನ್ನೂ, ಮತ್ತು ಭಗವಾನ್ ಶ್ರೀರಾಮ ವಿರಾಜಮಾನ್‌ರ OS–5 ಪ್ರಕರಣದಲ್ಲಿ 30 ವಿಷಯಗಳನ್ನು ಇತ್ಯರ್ಥ ಮಾಡಬೇಕಾಗಿದೆಯೆಂದೂ ನ್ಯಾಯಾಲಯ ಪಟ್ಟಿ ಮಾಡಿತು.

ಪಂಚ ಪಶ್ನೆಗಳು ಮತ್ತು ಪ್ರಶ್ನಾರ್ಹ ತೀರ್ಪುಗಳು

ಆದರೂ ಈ ಎಲ್ಲಾ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಐದಾರು ವಿಷಯಗಳು ಮಾತ್ರ ಪ್ರಮುಖವಾದದ್ದು. ಆದ್ದರಿಂದಲೇ ಕೋರ್ಟೂ ಸಹ ತನ್ನ ಬೃಹತ್ ತೀರ್ಪನ್ನು ಮಾಧ್ಯಮಗಳಿಗೆ ಹೇಳುವಾಗ ಈ ಐದಾರು ಪ್ರಮುಖ ವಿಷಯಗಳ ಬಗೆಗೇ ಒತ್ತುಕೊಟ್ಟಿದೆ. ಮಿಕ್ಕ ಎಲ್ಲಾ ತೀರ್ಮಾನಗಳನ್ನು ಈ ನೆಲೆಯಿಂದಲೇ ಮಾಡಲಾಗಿದೆ. ಹೀಗಾಗಿ ನ್ಯಾಯಾಲಯ ಇತ್ಯರ್ಥ ಮಾಡಿದ ಆ ಪ್ರಮುಖ ವಿಷಯಗಳು ಮತ್ತು ಆ ತೀರ್ಮಾನಕ್ಕೆ ಬರಲು ಅದು ಅನುಸರಿಸಿದ ನ್ಯಾಯಿಕ ಮಾನದಂಡಗಳನ್ನು ಗಮನಿಸುವುದು ಅತ್ಯಂತ ಮುಖ್ಯ. ಬೇರೆ ಬೇರೆ ವಿಷಯಗಳಿಗೆ ಸಂಬಂಧಪಟ್ಟಂತೆ ಮೂರೂ ಜನ ಬೇರೇಬೇರೇ ತೀರ್ಪು ಕೊಟ್ಟಿದ್ದರೂ ಸಾರಾಂಶದಲ್ಲಿ ಅವರು ನಡುವೆ ಸಾಮ್ಯತೆಗಳೂ ಇವೆ.

1.ವಿವಾದಿತ ಪ್ರದೇಶದ ಒಡೆತನ ಯಾರಿಗೆ ಸೇರಬೇಕು?

ತೀರ್ಪು: ಯಾವುದೇ ಸ್ಥಳದ ಒಡೆತನವು ವಿವಾದದಲ್ಲಿದ್ದು ಅಲ್ಲಿ ಮತ್ತೊಬ್ಬರು ಹಕ್ಕು ಸ್ಥಾಪಿಸಲು ಬಯಸಿದಲ್ಲಿ ಪ್ರಕರಣ ಬಯಲುಗೊಂಡ 12 ವರ್ಷಗಳ ಒಳಗೆ ದಾವೆಯನ್ನು ಹೂಡಬೇಕು. ಇಲ್ಲಿ ನಿರ್ಮೋಹಿ ಅಖಾಡಾ ಹತ್ತಾರು ವರ್ಷದ ಕೆಳಗೇ ಪ್ರಾರಂಭವಾದರೂ ಪ್ರಕರಣ ದಾಖಲಿಸಿದ್ದು 1959ರಲ್ಲಿ. ಅದೇ ರೀತಿ ಪ್ರತಿಮೆಗಳನ್ನು 1949ರಲ್ಲೇ ಸ್ಥಾಪಿಸಿ ಮುಸ್ಲಿಮರ ನಮಾಜಿಗೆ ಪ್ರತಿಭಂಧ ಹೂಡಿದ್ದರೂ ಅವರು ಒಡತನ ದಾವೆ ಸಲ್ಲಿಸಿದ್ದು 1961ರಲ್ಲಿ. ಹೀಗಾಗಿ ಇಬ್ಬರ ದಾವೆಗಳು ಸಮಯ ಬಾಹಿರವಾದ್ದರಿಂದ ನಿರ್ಮೋಹಿ ಅಖಾಡಾ ಮತ್ತು ಸುನ್ನಿ ವಕ್ಫ್ ಬೋರ್ಡಿನ ದಾವೆಯನ್ನು ವಜಾ ಮಾಡಲಾಗಿದೆಯೆಂದು ಮೂರೂ ಜನ ನ್ಯಾಯಾಧೀಶರೂ ಆದೇಶ ನೀಡಿದ್ದಾರೆ.

ಆದರೆ ಸುನ್ನಿ ವಕ್ಫ್ ಬೋರ್ಡ್ ತನ್ನ ದಾವೆ ಸಲ್ಲಿಸಿದ್ದು 1961ರ ಡಿಸೆಂಬರ್ 18ರಂದು. ಪ್ರತಿಮೆಗಳು ಸ್ಥಾಪನೆಯಾಗಿದ್ದು 1949ರ ಡಿಸೆಂಬರ್ 22ರಂದು. ಹೀಗೆ ಕೇವಲ ದಿನಗಳ ಲೆಕ್ಕಾಚಾರ ತೆಗೆದುಕೊಂಡರೂ ಸುನ್ನಿ ವಕ್ಫ್ ಬೋರ್ಡ್ ದಾವೆ ಕಾಲಬಾಹಿರವಾಗುವುದಿಲ್ಲ!!

ಆದರೂ ನ್ಯಾಯಾಧೀಶರಾದ ಖಾನ್ ಮತ್ತು ಅಗರ್‌ವಾಲ್‌ರವರು ವಿವಾದಿತ ಜಾಗವನ್ನು ಮೂರು ಭಾಗ ಮಾಡಿ ರಾಮಲಲ್ಲಾ, ನಿರ್ಮೋಹಿ ಅಖಾಡಾ ಮತ್ತು ಸುನ್ನಿ ಬೋರ್ಡಿಗೆ ತಲಾ ಮೂರನೇ ಒಂದು ಭಾಗವನ್ನು ಹಂಚಬೇಕೆಂದು ಆದೇಶಿಸಿದ್ದಾರೆ. ಆದರೆ ನ್ಯಾ.ಶರ್ಮ ಇಡೀ ಪ್ರದೇಶ ರಾಮಲಲ್ಲಾನಿಗೆ ಸೇರಬೇಕಿದ್ದರಿಂದ ಉಳಿದೆರಡು ಫಿರ್ಯಾದುದಾರರಿಗೆ ಜಾಗವನ್ನು ಹಂಚಲು ನಿರಾಕರಿಸುತ್ತಾರೆ.

ಆದರೆ ಮೂರು ಸದಸ್ಯರ ಪೀಠದಲ್ಲಿ ಇಬ್ಬರ ಅಭಿಪ್ರಾಯವೇ ಬಹುಮತದ ಅಭಿಪ್ರಾಯವಾಗುತ್ತದಾದ್ದರಿಂದ ಆನುಷ್ಠಾನಕ್ಕೆ ತರಬೇಕಿರುವುದು ಬಹುಮತದ ತೀರ್ಮಾನವನ್ನೇ. ಆದರೆ ಈ ಬಹುಮತದ ತೀರ್ಪು ನಿಜವಾದ ಹಕ್ಕುದಾವೆ ಹೂಡಿದ್ದ ಇಬ್ಬರೂ ಫಿರ್ಯಾದಿಗಳಿಗೂ ಯಾವುದೇ ಸರಿಯಾದ ತರ್ಕವಿಲ್ಲದೆ ಒಡೆತನದ ಹಕ್ಕು ನಿರಾಕರಿಸುತ್ತದೆ, ಹಾಗೂ ಯಾವ ಸಾಕ್ಷ್ಯ ಪುರಾವೆಗಳಿಲ್ಲದಿದ್ದರೂ ಮೂರನೇ ವಾದಿಯಾದ ಭಗವಾನ್ ರಾಮಲಲ್ಲಾನಿಗೆ ಒಂದು ಪಾಲು ಒಡೆತನವನ್ನು ನೀಡುತ್ತದೆ. ಆದರೆ ಹಕ್ಕನ್ನು ನಿರಾಕರಿಸಿದ ನ್ಯಾಯಾಲಯವೇ ಅಂತಿಮವಾಗಿ ಔದಾರ್ಯ ತೋರಿಸಿ ಎರಡೂ ಫಿರ್ಯಾದಿಗಳಿಗೆ ಒಂದೊಂದು ಪಾಲು ನೀಡುತ್ತದೆ. ಇದು ಈಗಾಗಲೇ ಸತತವಾಗಿ ಹಕ್ಕುಗಳ ವಂಚನೆಗೆ ಗುರಿಯಾಗುತ್ತಿರುವ ಮುಸ್ಲಿಂ ಸಮುದಾಯದ ಗಾಯಕ್ಕೆ ಔದಾರ್ಯದ ಬರೆಯನ್ನೇ ಎಳೆದಂತಾಗಿದೆ.

2."ವಿವಾದಿತ ಜಾಗ"ದಲ್ಲಿ 1528ರಲ್ಲಿ ಮಸೀದಿ ಕಟ್ಟುವ ಮುನ್ನ ರಾಮಮಂದಿರವಿತ್ತೇ?

ತೀರ್ಪು: ಈ ವಿಷಯದ ಬಗ್ಗೆ ಮೇಲ್ನೋಟಕ್ಕೆ ಒಬ್ಬೊಬ್ಬ ನ್ಯಾಯಾಧೀಶರು ಒಂದೊಂದು ಬಗೆಯ ತೀರ್ಮಾನ ಕೊಟ್ಟಿದ್ದಾರೆ ಎಂದು ಅನಿಸಿದರೂ ಸಾರಾಂಶ ಒಂದೇ ರೀತಿ ಇದೆ.

ನ್ಯಾ. ಖ್‌ನ್‌ರವರು ಇಲ್ಲಿ ಮಸೀದಿ ಕಟ್ಟುವ ಮುನ್ನ ರಾಮಮಂದರವಿತ್ತು ಎಂದು ಹೇಳಲಾಗುವುದಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ. ಆದರೆ ಆರ್ಕಿಯಾಲಾಜಿಕಲ್ ಸರ್ವೇ ಆಫ್ ಇಂಡಿಯಾ (ASI) ಕೊಟ್ಟ ವಿವಾದಾತ್ಮಕ ವರದಿ ಮತ್ತು ತೀರ್ಮಾನಗಳನ್ನು ಪ್ರಶ್ನಿಸದೇ ಒಪ್ಪಿಕೊಳ್ಳುವ ನ್ಯಾ. ಖಾನ್‌ರವರು ಮಸೀದಿಯ ಕೆಳಗೆ ಒಂದು ಬ್ರಹತ್ ಹಿಂದೂ ಧಾರ್ಮಿಕ ಸ್ವರೂಪದ ಕಟ್ಟಡವಿತ್ತೆಂದು ಸರಿ

ವಕ್ಫ್ ಮಂಡಲಿ   ರಾಮ ಜನ್ಮ ಭೂಮಿ   ನಿರ್ಮೋಹಿ ಅಖಾಡ

ಯಾದ ಪುರಾವೆಯಿಲ್ಲದೇ ಒಪ್ಪಿಕೊಳ್ಳುತ್ತಾರೆ. ಆದರೆ ಅದೇ ಸಮಯದಲ್ಲಿ ಅದು ರಾಮಮಂದಿರವೇ ಆಗಿತ್ತೆಂದೋ ಅಥವಾ ಅದನ್ನು ಕೆಡವಿಯೇ ಕಟ್ಟಲಾಗಿದೆಯೆಂದೂ ತೀರ್ಮಾನಕ್ಕೆ ಬರಲು ಆಗುವುದಿಲ್ಲವೆಂದು ಹೇಳುತ್ತಾರಾದರೂ ಅದು ಅಂತಿಮವಾಗಿ ಅವರ ತೀರ್ಪಿನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

ನ್ಯಾ. ಅಗರ್‌ವಾಲ್‌ರವರೂ ಸಹ ASI ವರದಿಯನ್ನು ಯಥಾವತ್ ಒಪ್ಪಿಕೊಳ್ಳುತ್ತಾರೆ. ಹಾಗೂ ಮಸೀದಿಯನ್ನು ಅಸ್ತಿತ್ವದಲ್ಲಿದ್ದ ಬೃಹತ್ ಹಿಂದೂ ಧಾರ್ಮಿಕ ರಚನೆಯ ಮೇಲೆಯೇ ಕಟ್ಟಲಾಗಿದೆಯೆಂದು ಅಭಿಪ್ರಾಯಪಡುತ್ತಾರೆ.

ನ್ಯಾ. ಶರ್ಮಾರಂತೂ ಬಿಡಿ! ವಿಶ್ವಹಿಂದೂ ಪರಿಷತ್ತಿನ ಲಾಯರ್ ಹಾಗೂ ಬಿಜೆಪಿ ಮುಖಂಡ ರವಿ ಶಂಕರ್ ಪ್ರಸಾದ್ ಮುಂದಿಟ್ಟ ವಾದವನ್ನು ಯಾವುದೇ ತಿದ್ದುಪಡಿಯಿಲ್ಲದೆ ಒಪ್ಪಿಕೊಳ್ಳುತ್ತಾರೆ. ಅವರ ಪ್ರಕಾರ ಅಲ್ಲಿ ಮಸೀದಿ ಕಟ್ಟುವ ಮುಂಚೆ ಸಾಕ್ಷಾತ್ ಶ್ರೀರಾಮ ಮಂದಿರವೇ ಅಸ್ತಿತ್ವದಲ್ಲಿತ್ತು. ಮತ್ತು ಅದನ್ನು ಕೆಡವಿಯೇ ಬಾಬ್ರಿ ಮಸೀದಿಯನ್ನು ಕಟ್ಟಲಾಗಿದೆ.

ಹೀಗೆ ನ್ಯಾ. ಶರ್ಮಾರ ಅತಿರೇಕದ ಅಭಿಪ್ರಾಯಗಳನ್ನು ಹೊರತುಪಡಿಸಿದರೂ ಉಳಿದಿಬ್ಬರ ತೀರ್ಮಾನವೂ ಸಹ ಯಾವುದೇ ಸರಿಯಾದ ಪುರಾವೆಗಳ ಮೇಲೆ ನಿಂತಿಲ್ಲ.

ಮೊದಲನೆಯದಾಗಿ 1994ರಲ್ಲಿ ರಾಷ್ಟ್ರಪತಿಯವರು ಮಸೀದಿಯ ಕೆಳಗೆ ರಾಮಮಂದಿರವಿತ್ತೇ ಎಂದು ಅಭಿಪ್ರಾಯ ತಿಳಿಸಲು ಕೋರಿದಾಗ ಸುಪ್ರಿಂ ಕೋರ್ಟಿನ ಐದು ಜನರ ಪೀಠ ಕೋರ್ಟುಗಳು ಇಂಥಾ ವಿಷಯಗಳಲ್ಲಿ ಮಧ್ಯಪ್ರವೇಶ ಮಾಡಬಾರದೆಂದು ಅಷ್ಟು ಸಖಚಿತವಾಗಿ ಹೇಳಿದ್ದರೂ ನ್ಯಾಯಾಂಗದ ಶ್ರೇಣೀಕರಣದಲ್ಲಿ ಸುಪ್ರಿಂ ಕೋರ್ಟಿಗಿಂತ ಕೆಳಗಿರುವ ಮೂರುಸದಸ್ಯರ ಹೈಕೋರ್ಟು ಇದನ್ನು ಪರಿಗಣನೆಗೆ ತೆಗೆದುಕೊಂಡಿದ್ದೇ ತಪ್ಪು. ಅದರ ಬಗ್ಗೆ ತಮಗೆ ಯಾವುದೇ ಪರಿಣಿತಿ ಇಲ್ಲದಿದ್ದರೂ ಅದರ ಬಗ್ಗೆ ವ್ಯಾಖ್ಯಾನ ನೀಡಿ ತೀರ್ಪು ನೀಡಿದ್ದು ಎರಡನೇ ಮಹಾಪರಾಧ!

ದೇಶದ ಪ್ರಖ್ಯಾತ ಇತಿಹಾಸ ತಜ್ಞರ ಪ್ರಕಾರ ಅಯೋಧ್ಯೆ ಪ್ರಸಿದ್ಧ ಬೌದ್ಧ ಮತ್ತು ಜೈನ ಯಾತ್ರಾಸ್ಥಳವೂ ಆಗಿತ್ತು. ವಾಸ್ತವವಾಗಿ 17ನೇ ಶತಮಾನದ ತನಕ ರಾಮನು ಉತ್ತರ ಭಾರತದಲ್ಲಿ ಅಂಥಾ ಜನಪ್ರಿಯ ದೇವರೇ ಆಗಿರಲಿಲ್ಲ. ಹೀಗಾಗಿ ಉತ್ಖನನದಲ್ಲಿ 15ನೇ ಶತಮಾನಕ್ಕೂ ಹಿಂದೆ ರಾಮಮಂದಿರದ ಅವಶೇಷಗಳು ಕಂಡುಬಂದಿರಲು ಸಾಧ್ಯವೇ ಇಲ್ಲ. ಮಧ್ಯಕಾಲೀನ ಭಾರತದ ಬಗ್ಗೆ ಅಧಿಕೃತ ಆಕರವೆಂದೇ ಪ್ರಸಿದ್ಧರಾಗಿರುವ ಖ್ಯಾತ ಇತಿಹಾಸ ತಜ್ಞ ಇರ್ಫಾನ್ ಹಬೀಬರ ಪ್ರಕಾರವಂತೂ ಬಾಬ್ರಿ ಮಸೀದಿಯನ್ನು ಈಗಾಗಲೇ ಪತನಗೊಂಡಿದ್ದ ದರ್ಗಾ ಮಸೀದಿಯ ಅವಶೇಷಗಳ ಮೇಲೆ ಕಟ್ಟಲಾಗಿದೆ. ಹೀಗೆ ಮಸೀದಿಯ ಕೆಳಗೆ ಸಿಕ್ಕಿರುವ ಅವಶೇಷಗಳು ಮಂದಿರದ್ದೋ, ಮಸೀದಿಯದ್ದೋ, ದರ್ಗಾದ್ದೋ, ಜೈನ ಬಸದಿಯದ್ದೋ, ಅಥವಾ ಬೌದ್ಧ ವಿಹಾರದ್ದೋ ಎಂಬ ತೀರ್ಮಾನವನ್ನು ASI ವರದಿಯನ್ನು ಆಧರಿಸಿ ಖಚಿತವಾಗಿ ಮಾಡಲು ಸಾಧ್ಯವೇ ಇಲ್ಲ.

ಮೂರನೆಯದಾಗಿ ಕೋರ್ಟು ಬಲವಾಗಿ ಆಧರಿಸಿದ್ದ ASI ನೀಡಿದ ವರದಿ ಮತ್ತು ಉತ್ಖನನ ಮತ್ತು ಸಂಶೋಧನೆಗೆ ಅದು ಅನುಸರಿಸಿದ ಮಾರ್ಗ! ಇದರ ಬಗ್ಗೆ ಇತಿಹಾಸಕಾರರು ಮತ್ತು ಸಂಶೋಧಕರು ಹಲವಾರು ಆಕ್ಷೇಪಣೆಗಳನ್ನು ಸಲ್ಲಿಸಿದ್ದರು. ಅದರಲ್ಲೂ ಆ ತಂಡ ಉತ್ಖನನ ಮಾಡುವಾಗ ಹೊರ ಆವರಣದಲ್ಲಿ ಪಾಳು ಬಿದ್ದಿದ್ದ ಇಟ್ಟಿಗೆಗಳನ್ನೆಲ್ಲಾ ಒಟ್ಟು ಸೇರಿಸಿ ಪಿಲ್ಲರ್ ಸ್ವರೂಪದ ರಚನೆ ಇತ್ತೆಂದು ಸಾಬೀತು ಮಾಡಲು ನಡೆಸಿದ ಪ್ರಯತ್ನ ಮತ್ತು ಅದರ ಹಿಂದಿನ ಉದ್ದೇಶಗಳ ಬಗ್ಗೆ ಕೆಲವು ಇತಿಹಾಸಕಾರರು ಸುಪ್ರಿಂ ಕೋರ್ಟಿಗೂ ದೂರು ಸಲ್ಲಿಸಿದ್ದರು. ಅಲ್ಲದೆ ಉತ್ಖನನದಲ್ಲಿ ಕಂಡ ಅವಶೇಷಗಳ ಕಾಲಾವಧಿಯನ್ನು ನಿರ್ಧಾರ ಮಾಡಲು ASI ಅನುಸರಿಸಿದ ಮಾದರಿ ಅತ್ಯಂತ ಕಳಪೆಯಾಗಿದೆಯೆಂದು ನ್ಯಾಯಾಲಯಗಳ ಗಮನಕ್ಕೂ ತರಲಾಗಿತ್ತು. ಈ ಉತ್ಖನನವನ್ನು ಆಧರಿಸಿ ಅವರು ನೀಡಿದ ವರದಿ ಇನ್ನೂ ಹಾಸ್ಯಾಸ್ಪದವಾಗಿತ್ತು.

ವಾಸ್ತವವಾಗಿ ಇದನ್ನು ಕಂಡು ರೋಸಿಹೋಗಿದ್ದ ಈ ದೇಶದ ಗಣ್ಯಾತಿಗಣ್ಯ ಇತಿಹಾಸಕಾರರಾದ ಸೂರಜ್ ಭಾನ್, ಡಿ.ಎನ್ .ಝಾ, ಆರ್.ಎಸ್. ಶರ್ಮಾ ಮತ್ತು ಅಲಿಯವರು ಆ ಉತ್ಖನನದ ವರದಿಯ ಬಗ್ಗೆ ತಮ್ಮ ಅಭಿಪ್ರಾಯವನ್ನೂ ನೀಡಲೂ ಸಹ ಅವಕಾಶ ಕೊಡಬೇಕೆಂದು ಕೋರಿದ್ದರು. ಅದಕ್ಕೆ ಪ್ರತಿವಾದಿಗಳಾಗಿದ್ದ ಮುಸ್ಲಿಂ ಸಂಘಟನೆಗಳೂ ಒಪ್ಪಿಕೊಂಡಿದ್ದವು. ಆದರೆ ಸರ್ಕಾರ ಅದರ ಬಗ್ಗೆ ದಿವ್ಯ ನಿರ್ಲಕ್ಷ್ಯವನ್ನು ತೋರಿತು. ಆದರೂ ಈ ಇತಿಹಾಸಕಾರರು ದೇಶದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು "ದೇಶಕ್ಕೊಂದು ಇತಿಹಾಸಕಾರರ ವರದಿ"ಯನ್ನು ನೀಡಿದರು. ಅದರಲ್ಲಿ ಅವರು ಆ ಆವರಣದಲ್ಲಿ ದೊರೆತ ಅವಶೇಷಗಳಲ್ಲಿ ಬಳಸಿರುವ ಸುರ್ಕಿ ಹಾಗೂ ಸುಣ್ಣದ ಬಳಕೆಗಳು ಅವಶೇಷವಾಗಿರುವ ಕಟ್ಟಡ ಒಂದು ಇಸ್ಲಾಮಿಕ್ ಕಟ್ಟಡವೇ ವಿನಃ ಹಿಂದೂ ಧಾರ್ಮಿಕ ಕಟ್ಟಡವಲ್ಲ ಎಂಬ ಅಭಿಪ್ರಾಯ ಪಟ್ಟಿದ್ದರು.

ಮುಸ್ಲಿಂ, ಪಿಲ್ಲರ್ ತರಹ ಕಾಣುವ ರಚನೆಗಳು ವಾಸ್ತವವಾಗಿ ಭಾರವನ್ನು ಹೊರುವ ಪಿಲ್ಲರ್‌ಗಳಲ್ಲ ಬದಲಿಗೆ ಅದು ಅಲಂಕಾರಿಕ ರಚನೆ ಎಂಬುದನ್ನೂ ಸಾಬೀತು ಪಡಿಸಿದ್ದರು. ಇದಲ್ಲದೆ ಇನ್ನೂ ಹಲವಾರು ಪುರಾವೆಗಳನ್ನು ತೋರಿಸಿ ಅದು ಇಸ್ಲಾಮಿಕ್ ಕಟ್ಟಡವೇ ವಿನಃ ಮಂದಿರವಾಗಿರಲಾರದು ಎಂದು ಸಾಬೀತು ಪಡಿಸುತ್ತಾರೆ. ಮತ್ತು ಅದನ್ನು ಕೋರ್ಟಿಗೂ ಸಲ್ಲಿಸುತ್ತಾರೆ.

ದೇಶದ ಪ್ರಖ್ಯಾತ ಇತಿಹಾಸ ತಜ್ಞರ ಪ್ರಕಾರ ಅಯೋಧ್ಯೆ ಪ್ರಸಿದ್ಧ ಬೌದ್ಧ ಮತ್ತು ಜೈನ ಯಾತ್ರಾಸ್ಥಳವೂ ಆಗಿತ್ತು. ವಾಸ್ತವವಾಗಿ 17ನೇ ಶತಮಾನದ ತನಕ ರಾಮನು ಉತ್ತರ ಭಾರತದಲ್ಲಿ ಅಂಥಾ ಜನಪ್ರಿಯ ದೇವರೇ ಆಗಿರಲಿಲ್ಲ. ಹೀಗಾಗಿ ಉತ್ಖನನದಲ್ಲಿ 15ನೇ ಶತಮಾನಕ್ಕೂ ಹಿಂದೆ ರಾಮಮಂದಿರದ ಅವಶೇಷಗಳು ಕಂಡುಬಂದಿರಲು ಸಾಧ್ಯವೇ ಇಲ್ಲ.

ಮಧ್ಯಕಾಲೀನ ಭಾರತದ ಬಗ್ಗೆ ಅಧಿಕೃತ ಆಕರವೆಂದೇ ಪ್ರಸಿದ್ಧರಾಗಿರುವ ಖ್ಯಾತ ಇತಿಹಾಸ ತಜ್ಞ ಇರ್ಫಾನ್ ಹಬೀಬರ ಪ್ರಕಾರವಂತೂ ಬಾಬ್ರಿ ಮಸೀದಿಯನ್ನು ಈಗಾಗಲೇ ಪತನಗೊಂಡಿದ್ದ ದರ್ಗಾ ಅಥವಾ ಮಸೀದಿಯ ಅವಶೇಷಗಳ ಮೇಲೆ ಕಟ್ಟಲಾಗಿದೆ.

ಹೀಗೆ ಮಸೀದಿಯ ಕೆಳಗೆ ಸಿಕ್ಕಿರುವ ಅವಶೇಷಗಳು ಮಂದಿರದ್ದೋ, ಮಸೀದಿಯದ್ದೋ, ದರ್ಗಾದ್ದೋ, ಜೈನ

ಬಸದಿಯದ್ದೋ, ಅಥವಾ ಬೌದ್ಧ ವಿಹಾರದ್ದೋ ಎಂಬ ತೀರ್ಮಾನವನ್ನು ASI ವರದಿಯನ್ನು ಆಧರಿಸಿ ಖಚಿತವಾಗಿ ಮಾಡಲು ಸಾಧ್ಯವೇ ಇಲ್ಲ. ಅಥವಾ ಮಂದಿರ ವಾದಿಗಳು ಈ ವರದಿಯನ್ನು ಆಧರಿಸಿ ಅಲ್ಲಿ ಇದ್ದದ್ದು ಇವ್ಯಾವುದೂ ಅಲ್ಲವೆಂದೂ, ಕೇವಲ ರಾಮಮಂದಿರ ಮಾತ್ರವೆಂದೂ ಖಚಿತವಾಗಿ ಸಾಬೀತು ಸಹ ಮಾಡಿಲ್ಲ. ಅಬ್ಬಬ್ಬಾ ಎಂದರೆ ASI ವರದಿ ಹೇಳುವುದು ಅಲ್ಲಿ ಧಾರ್ಮಿಕ ಅವಶೇಷ ಇದೆ ಎಂದು ಮಾತ್ರ.

ಹೀಗಿರುವಾಗ ಕೋರ್ಟು ವಿವಾದಾಸ್ಪದವಾದ ASI ವರದಿಯನ್ನು ಹೇಗೆ ಯಥಾವತ್ ಒಪ್ಪಿಕೊಂಡಿತು? ಅದರ ಆಧಾರದಲ್ಲಿ ಹೇಗೆ ಮಸೀದಿಯ ಕೆಳಗೆ ಹಿಂದೂ ಧಾರ್ಮಿಕ ರಚನೆಯೋ ಅಥವಾ ನ್ಯಾ.ಶರ್ಮಾ ಹೇಳುವಂತೆ ರಾಮಮಂದಿರವೋ ಇತ್ತು ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಾಯಿತು? ಮೊದಲಿಂದಲೂ ಈ ನ್ಯಾಯಾಧೀಶರುಗಳು ಹಿಂದೂ ಜನರ ನಂಬಿಕೆ ಮತ್ತು ಶ್ರದ್ಧೆಗಳಿಗೆ ಸಾಕ್ಷಿ ಪುರಾವೆಗಳಿಗಿಂತ ಹೆಚ್ಚಿನ ಮಹತ್ವವನ್ನು ಕೊಡುತ್ತಾ ಬಂದಿದ್ದೇ ನ್ಯಾಯಕ್ಕೆ ಈ ರೀತಿ ಘೋರ ಅಪಚಾರವಾಗಲು ಕಾರಣವಾಯಿತು.

3. "ವಿವಾದಿತ ಸ್ಥಳದಲ್ಲಿ" ಮುಸ್ಲಿಮರು ಬಹಳ ಹಿಂದಿನಿಂದಲೂ ಪ್ರಾರ್ಥನೆ ಸಲ್ಲಿಸುತ್ತಾ ಬಂದಿದ್ದಾರೆಯೆ? ಅಲ್ಲಿದ್ದ ಕಟ್ಟಡವನ್ನು ಮಸೀದಿಯೆಂದು ಪರಿಗಣಿಸಬಹುದೇ?

ತೀರ್ಪು: ಇದರ ಬಗ್ಗೆ ನ್ಯಾ. ಶರ್ಮಾರಂತೂ ಒಂದೇ ಉಸಿರಿನಲ್ಲಿ ಬಿಲ್‌ಕುಲ್ ಅದು ಮಸೀದಿಯಾಗಿರಲಿಲ್ಲವೆಂದೂ ತೀರ್ಪಿತ್ತಿದ್ದಾರೆ. ಅವರ ಪ್ರಕಾರ ಮಂದಿರವನ್ನು ಕೆಡವಿ ಮಸೀದಿಯನ್ನು ಕಟ್ಟಲಾಗಿದೆಯಾದ್ದರಿಂದ ಅದು ಇಸ್ಲಾಮಿಕ್ ಪದ್ಧತಿಯ ಪ್ರಕಾರ ಮಸೀದಿ ಎನಿಸಿಕೊಳ್ಳುವುದಿಲ್ಲ. ಆದರೆ ನ್ಯಾ. ಖಾನ್ ಮತ್ತು ನ್ಯಾ. ಅಗರ್‌ವಾಲ್ ಅವರು ಅದು ಮಸೀದಿಯೇ ಎಂದೂ, ಅಲ್ಲಿ 1949ರ ತನಕ ಮುಸ್ಲಿಮರು ನಮಾಜು ಮಾಡುತ್ತಿದ್ದರೆಂದು ಒಪ್ಪಿಕೊಳ್ಳುತ್ತಾರೆ. ಆದರೆ 1949ರಿಂದ ಮುಸ್ಲಿಮರನ್ನು ನಮಾಜು ಮಾಡದಂತೆ ತಡೆದದ್ದು ಸರ್ಕಾರ ಮತ್ತು ನ್ಯಾಯಾಲಯವೇ ಎನ್ನುವುದನ್ನು ನ್ಯಾಯಾಲಯ ಪರಿಗಣನೆಗೇ ತೆಗೆದುಕೊಂಡಿಲ್ಲ. ಹೀಗಾಗಿ ಹೇಗಿದ್ದರೂ ಈಗ ಅಲ್ಲಿ ಮುಸ್ಲಿಮರು ಹಲವು ದಶಕಗಳಿಂದ ನಮಾಜು ಸಲ್ಲಿಸುತ್ತಿಲ್ಲವಾದ್ದರಿಂದ ಅದನ್ನು ಈಗ ಮಸೀದಿಯೆಂದು ಪರಿಗಣಿಸದಿದ್ದರೂ ಮುಸ್ಲಿಮರು ಕಳೆದುಕೊಳ್ಳುವುದು ಏನೂ ಇಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

4. 1949ರ ಡಿಸೆಂಬರ್ 22–23ರ ಮಧ್ಯರಾತ್ರಿ ರಾಮ ಪ್ರತಿಮೆಗಳನ್ನು ವಿವಾದಿತ ಸ್ಥಳದಲ್ಲಿ ಸ್ಥಾಪಿಸಲಾಯಿತೋ? ಅಥವಾ ಅದು ಅನೂಚಾನ ಕಾಲದಿಂದಲೂ ಅದು ಅಲ್ಲೇ ಇದೆಯೋ?

ತೀರ್ಪು: ಈ ಪ್ರಶ್ನೆಗೆ ಮಾತ್ರ ಮೂರೂ ಜನ ನ್ಯಾಯಾಧೀಶರು ಡಿಸೆಂಬರ್ 22 ರಾತ್ರಿಯೇ ಅಲ್ಲಿ ಪ್ರತಿಮೆಯನ್ನು ಸ್ಥಾಪಿಸಲಾಗಿದೆಯೆಂದೂ ಒಪ್ಪಿಕೊಳ್ಳುತ್ತಾರೆ. ಹಾಗಿದ್ದರೆ ಅಲ್ಲಿ ಪ್ರತಿಮೆಗಳನ್ನು ತಂದಿಟ್ಟವರು ಯಾರು? ಅವರ ಮೇಲೆ ಕ್ರಮಗಳೇನು? ಪ್ರತಿಮೆ ತಂದಿಟ್ಟದ್ದ ಕಾರಣಕ್ಕಾಗಿ ಅಲ್ಲಿ ನಮಾಜು ಮಾಡುವ ಹಕ್ಕನ್ನು ಕಳೆದುಕೊಂಡ ಮುಸ್ಲಿಮರಿಗೆ ಪರಿಹಾರವೇನು? ಈಗಲಾದರೂ ಆ ಮೂರ್ತಿಯನ್ನು ಅಲ್ಲಿಯೇ ಇರಗೊಡಬೇಕೇ? ತೆಗೆಯಬೇಕೇ? ಈ ಯಾವ ಪ್ರಶ್ನೆಗಳಿಗೂ ನ್ಯಾಯಾಲಯ ನ್ಯಾಯಬದ್ಧ ತೀರ್ಮಾನ ನೀಡುವುದಿಲ್ಲ. ಬದಲಿಗೆ ಈ ಪ್ರಕರಣವನ್ನು ಸಹ ಈ ಜಾಗವು ರಾಮಜನ್ಮಸ್ಥಾನವೇ ಎಂಬ ವಾದವನ್ನು ಒಪ್ಪಿಕೊಳ್ಳಲು ಕಾರಣವೆಂಬಂತೆ ಬಳಸಿಕೊಳ್ಳುತ್ತವೆ.

> **ಹಿಂದೂ ಧಾರ್ಮಿಕ ಪದ್ಧತಿಯ ಪ್ರಕಾರ ಒಂದು ಜಾಗದಲ್ಲಿ ರಾಮನಿದ್ದಾನೋ ಇಲ್ಲವೋ ಎಂಬ ನಿರ್ಣಯಕ್ಕೆ ಬರಲು ಪ್ರಧಾನವಾಗಿ ಪರಿಗಣಿಸಬೇಕಾದ್ದು ಅವರ ನಂಬಿಕೆಯನ್ನಂತೆ. ಆ ನಂಬಿಕೆಯೇ ಅವರ ಧರ್ಮದ ಅಂತರ್ಗತ ಭಾಗವೂ ಆಗಿಬಿಡುತ್ತದಂತೆ. ಆಗ ಅದು ಸಂವಿಧಾನದ ಆರ್ಟಿಕಲ್ 25 ಕೊಡುವ ಧಾರ್ಮಿಕ ಆಚರಣೆಯ ಹಕ್ಕಿನ ಪ್ರಶ್ನೆಯೂ ಆಗಿಬಿಡುತ್ತದಂತೆ. ಅಂದರೆ ರಾಮನು ಬಾಬ್ರಿ ಮಸೀದಿಯಲ್ಲಿ ಇರುವ ಜಾಗದಲ್ಲಿ ಜನ್ಮ ತಳೆದಿದ್ದ ಎಂಬ ನಂಬಿಕೆ ಹಿಂದೂ ಧರ್ಮದ ಅಂತರ್ಭಾಗವಾಗಿ ಬಿಡುತ್ತದೆ. ಆಗ ಬಾಬ್ರಿ ಮಸೀದಿಯಲ್ಲಿ ರಾಮ ಪೂಜೆ ಮಾಡುವುದು ಹಿಂದೂಗಳ ಧಾರ್ಮಿಕ ಹಕ್ಕಿನ ಭಾಗವೇ ಆಗಿಬಿಡುತ್ತದೆ ಎಂಬುದು ಅಗರ್‌ವಾಲ್‌ರವರ ವಾದ.**

5. ಈ ಪ್ರದೇಶವು ರಾಮನ ಜನ್ಮಸ್ಥಾನವೇ? ಈ ಜಾಗವನ್ನು ಹಿಂದೂಗಳು ರಾಮ ಜನ್ಮ ಭೂಮಿ ಎಂದು ಪರಿಭಾವಿಸಿ ಅನೂಚಾನ ಕಾಲದಿಂದಲೂ ಪ್ರಾರ್ಥನೆ ಮಾಡುತ್ತಾ ಬಂದಿದ್ದಾರೆಯೇ?

ತೀರ್ಪು: ಪ್ರಾಯಶಃ ಈ ಪ್ರಶ್ನೆಗೆ ಕೋರ್ಟು ನೀಡಿರುವ ತೀರ್ಪು ಮತ್ತು ಆ ತೀರ್ಮಾನಕ್ಕೆ ಬರಲು ಅದು ಅನುಸರಿಸಿರುವ ಮಾನದಂಡಗಳು ಈ ದೇಶದ ಜನತೆ ನ್ಯಾಯಾಂಗದ ಬಗ್ಗೆ ಇಟ್ಟಿರುವ ವಿಶ್ವಾಸವನ್ನೇ ಕಳೆದುಕೊಳ್ಳುವಂತೆ ಮಾಡಿದೆ. ಪ್ರಪ್ರಥಮ ಬಾರಿಗೆ ಒಂದು ನಿರ್ದಿಷ್ಟ ಜಾಗದ ಧಾರ್ಮಿಕತೆಯನ್ನು ನಿರ್ಧರಿಸಲು ನ್ಯಾಯಾಲಯ ಸಾಕ್ಷಿ ಪುರಾವೆಗಳನ್ನು ಬಿಟ್ಟು ಪುರಾಣಗಳನ್ನು ಸಾಕ್ಷ್ಯವಾಗಿಯೇ ಪರಿಗಣಿಸಿದೆ.

ನ್ಯಾ. ಶರ್ಮಾರವರ ಪ್ರಕಾರ ಅಲ್ಲಿ ರಾಮ ಜನ್ಮ ತಾಳಿದ್ದು ನೂರಕ್ಕೆ ನೂರು ನಿಜ. ಏಕೆಂದರೆ ಹಲವಾರು ಪುರಾಣಗಳಲ್ಲಿ ಅಯೋಧ್ಯೆಯಲ್ಲಿ ರಾಮ ಜನ್ಮ ತಳೆದ ಎಂಬ ಉಲ್ಲೇಖವಿದೆ. ಅಷ್ಟು ಮಾತ್ರವಲ್ಲ, ನ್ಯಾ. ಶರ್ಮಾರವರ ಪ್ರಕಾರ ಹಿಂದೂ ಧರ್ಮದ ಪ್ರಕಾರ ದೇವನು ಒಂದು ಸ್ಥಳದಲ್ಲಿದಾನೆ ಎಂದು ಭಾವಿಸಿದರೆ ಸಾಕು ದೇವರು ಅಲ್ಲಿರುತ್ತಾನೆ. ಹೀಗಾಗಿ ರಾಮನು ಬಾಬ್ರಿ ಮಸೀದಿಯಿದ್ದ ಜಾಗದಲ್ಲೇ ಜನ್ಮ ತಳೆದದ್ದು ಎಂಬ ತೀರ್ಮಾನಕ್ಕೆ ಬರಲು ಯಾವ ಪುರಾವೆಯೂ ಬೇಕಿಲ್ಲ. ಆದರೆ 1949ರ ಡಿಸೆಂಬರ್ ಮಧ್ಯರಾತ್ರಿಯವರೆಗೆ ಅಲ್ಲಿ ರಾಮನ ಪ್ರತಿಮೆ ಇರಲಿಲ್ಲ ಎಂಬುದು ಸಾಬೀತಾಗಿರುವಾಗ ಅದು ಹಿಂದಿನಿಂದಲೂ ರಾಮಮಂದಿರವಾಗಿತ್ತು ಎಂಬ ತೀರ್ಮಾನಕ್ಕೆ ಹೇಗೆ ಬರಲು ಸಾಧ್ಯ ಎಂಬ ಪ್ರಶ್ನೆಗೆ ನ್ಯಾ. ಶರ್ಮಾರವರು ಹಿಂದೂ ಧರ್ಮದ ಪ್ರಕಾರ ದೇವನನ್ನು ಹೇಗೆ ಬೇಕಾದರೂ ಉಪಾಸನೆ ಮಾಡಬಹುದು. ಪ್ರತಿಮೆಯ ಅಗತ್ಯವೇ ಇಲ್ಲ ಎಂಬ ಉತ್ತರ ಕೊಡುತ್ತಾರೆ. ಮಿಕ್ಕಂತೆ ಒಂದು ವಿತಂಡ ವಾದದಂತೆ ಕಾಣುವ ಈ ತೀರ್ಪನ್ನು ನೀಡಿರುವುದು ನಿವೃತ್ತಿಯ ಅಂಚಿನಲ್ಲಿದ್ದ ಹೈಕೋರ್ಟೊಂದರ ಹಿರಿಯ ನ್ಯಾಯಾಧೀಶರೇ!

ನ್ಯಾ. ಖಾನ್ ಅವರಿಗೆ ಅಲ್ಲಿ ರಾಮಮಂದಿರವಿತ್ತೇ ಎಂಬ ಬಗ್ಗೆ ಅನುಮಾನವಿದ್ದರೂ ಹಿಂದೂ ಜನರ ನಂಬಿಕೆಯ ಪ್ರಕಾರ ಅದು ರಾಮಜನ್ಮಭೂಮಿಯೆಂದು ಒಪ್ಪಿಕೊಳ್ಳಬೇಕಾಗುತ್ತದೆ ಎಂಬ ನಿಲುವಿಗೆ ಬರುತ್ತಾರೆ.

ನ್ಯಾ. ಅಗರವಾಲ್ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತಾರೆ. ಇಲ್ಲಿ ರಾಮ ಹುಟ್ಟಿದ್ದನೋ ಇಲ್ಲವೋ, ಹಿಂದೂಗಳು ಅಯೋಧ್ಯೆಯನ್ನು ರಾಮ ಜನ್ಮಭೂಮಿ ಎಂದು ಭಾವಿಸುತ್ತಾರೋ ಇಲ್ಲವೂ ಎಂಬ ಬಗ್ಗೆ ಅವರು 700ಕ್ಕೂ ಹೆಚ್ಚು ವೇದ ಗ್ರಂಥಗಳನ್ನು ಅಧ್ಯಯನ ಮಾಡಿದ್ದಾರಂತೆ. ಅದಕ್ಕಾಗಿ–ತಮ್ಮ ತೀರ್ಪಿನಲ್ಲಿ 5000ಕ್ಕೂ ಹೆಚ್ಚು ಪುಟಗಳನ್ನೂ ಖರ್ಚು ಮಾಡಿದ್ದಾರೆ. ಇಷ್ಟೆಲ್ಲಾ ಮಾಡಿ ಅವರು ಬಂದು ತಲುಪುವ ತೀರ್ಮಾನವೇನು?

ಹಿಂದೂ ಧಾರ್ಮಿಕ ಪದ್ಧತಿಯ ಪ್ರಕಾರ ಒಂದು ಜಾಗದಲ್ಲಿ ರಾಮನಿದ್ದಾನೋ ಇಲ್ಲವೋ ಎಂಬ ನಿರ್ಣಯಕ್ಕೆ ಬರಲು ಪ್ರಧಾನವಾಗಿ ಪರಿಗಣಿಸಬೇಕಾದ್ದು ಅವರ ನಂಬಿಕೆಯನ್ನಂತೆ. ಆ ನಂಬಿಕೆಯೇ ಅವರ ಧರ್ಮದ ಅಂತರ್ಗತ ಭಾಗವೂ ಆಗಿಬಿಡುತ್ತದಂತೆ. ಆಗ ಅದು ಸಂವಿಧಾನದ ಆರ್ಟಿಕಲ್ 25 ಕೊಡುವ ಧಾರ್ಮಿಕ ಆಚರಣೆಯ ಹಕ್ಕಿನ ಪ್ರಶ್ನೆಯೂ ಆಗಿಬಿಡುತ್ತದಂತೆ. ಅಂದರೆ ರಾಮನು ಬಾಬ್ರಿ ಮಸೀದಿಯಲ್ಲಿ ಇರುವ ಜಾಗದಲ್ಲಿ ಜನ್ಮ ತಳೆದಿದ್ದ ಎಂಬ ನಂಬಿಕೆ ಹಿಂದೂ ಧರ್ಮದ ಅಂತರ್ಭಾಗವಾಗಿ ಬಿಡುತ್ತದೆ. ಆಗ ಬಾಬ್ರಿ ಮಸೀದಿಯಲ್ಲಿ ರಾಮ ಪೂಜೆ ಮಾಡುವುದು ಹಿಂದೂಗಳ ಧಾರ್ಮಿಕ ಹಕ್ಕಿನ ಭಾಗವೇ ಆಗಿಬಿಡುತ್ತದೆ ಎಂಬುದು ಅಗರ್‌ವಾಲ್‌ರವರ ವಾದ. ಹಾಗೂ ಇಂಥಾ ನಂಬಿಕೆಯನ್ನು ಪ್ರಶ್ನಿಸಲಾಗುವುದಿಲ್ಲ. ಅಂಥಾ ಪ್ರಶ್ನೆ ಕೇಳುವುದರ ಬಗ್ಗೆಯೇ ನ್ಯಾ. ಅಗರ್‌ವಾಲರು ಕಿಡಿಕಾರುತ್ತಾರೆ. ಅದೇ ಪ್ರಶ್ನೆಯನ್ನು ಪೈಗಂಬರರ ಬಗ್ಗೆ, ಮತ್ತು ಕ್ರಿಸ್ತನ ಬಗ್ಗೆ ಏಕೆ ಕೇಳುವುದಿಲ್ಲ ಎಂದು ವಕೀಲರಂತೆ ಪಾಟಿ ಸವಾಲು ಹಾಕಿ ಪ್ರಶ್ನಿಸುತ್ತಾರೆ.

ಹೀಗಾಗಿ ವಿವಾದಾಸ್ಪದವಾದ ಜಾಗವೊಂದು ಹಿಂದೂಗಳಿಗೆ ಸೇರಬೇಕೋ ಅಥವಾ ಮುಸ್ಲಿಮರಿಗೆ ಸೇರಬೇಕೋ ಎಂಬ ಬಗ್ಗೆ ನ್ಯಾಯಾಲಯ ಈ ತರ್ಕದ ಪ್ರಕಾರ ಸಾಕ್ಷಿ ಪುರಾವೆಗಳಿಗಿಂತ ಪ್ರಮುಖವಾಗುವುದು ಬಹುಸಂಖ್ಯಾತರ ಶ್ರದ್ಧೆ ಮತ್ತು ನಂಬಿಕೆ. ಇದರ ಪರಿಣಾಮವೇನೆಂದು ನಂತರ ಚರ್ಚಿಸೋಣ. ಈಗ ಈ ತರ್ಕವಾದರೂ ಸರಿಯಿದೆಯೇ ಎಂದು ಪರಿಶೀಲಿಸೋಣ.

ನ್ಯಾ. ಅಗರ್‌ವಾಲರು ಉದ್ಧರಿಸಿರುವ ಗ್ರಂಥಗಳೆಲ್ಲಾ ಹಿಂದೂ ಜನರ ನಂಬಿಕೆಯನ್ನು ಪ್ರತಿಪಾದಿಸುವ ಹೇಳಿಕೆಗಳೇ ಹೊರತು ಅವು ಐತಿಹಾಸಿಕ ಸಾಕ್ಷ್ಯಾಧಾರಗಳಲ್ಲ. ಅವು ಒಂದು ರೂಲ್ ಆಫ್ ಲಾ– ಎಲ್ಲರಿಗೂ ಒಂದೇ ಕಾನೂನು– ಎಂಬ ನಿಯಮಾನುಸಾರ ನಡೆಯುವ ಆಧುನಿಕ ಪ್ರಜಾಪ್ರಭುತ್ವದಲ್ಲಿ ಸಾಕ್ಷ್ಯಗಳಾಗುವುದಿಲ್ಲ. ಎರಡನೆಯದಾಗಿ ರಾಮನು ಹಿಂದೂ ಧರ್ಮದ ಅಂತರ್ಗತ ಭಾಗವೆಂಬುದಕ್ಕೆ ಯಾವ ಧಾರ್ಮಿಕ ಪುರಾವೆಗಳನ್ನು

(32ನೇ ಪುಟಕ್ಕೆ)

ನೀನ್ಯಾರಿಗಾದೆಯೊ ಎಲೆ ಮಾನವ...

ಡಾ. ಹಿ. ಶಿ. ರಾಮಚಂದ್ರೇಗೌಡ

೧ ಗೋಹತ್ಯೆ : ತಾತ್ವಿಕತೆ

ಗೋಹತ್ಯೆ ನಿಷೇಧ ಕಾನೂನನ್ನು ತರಲು ಬಿ.ಜೆ.ಪಿ. ಸರ್ಕಾರ ತುದಿಗಾಲ ಮೇಲೆ ನಿಂತಿದೆ. ಇದು ತಮ್ಮ ಪ್ರತಿಷ್ಠೆಯ ಪ್ರಶ್ನೆ ಎಂದು ಅದು ತಿಳಿದಿದೆ. ಈ ಸರ್ಕಾರದ ಸಾಧನೆಗಳಲ್ಲಿ ಈ ಕಾನೂನು ಜಾರಿ ಕೂಡ ಒಂದು ಮುಖ್ಯ ದಾಖಲೆ ಎಂದು ಅದು ಹೇಳಿಕೊಳ್ಳುತ್ತಿದೆ. ಗೋಹತ್ಯೆ ನಿಷೇಧ ಕಾನೂನು ಜಾರಿ ಬಗ್ಗೆ ಬಿ.ಜೆ.ಪಿ ಸರ್ಕಾರಕ್ಕೆ ಇರುವ ಈ ತುರ್ತು ಯಾಕೆ ಎಂದು ಕೇಳಬೇಕಿಲ್ಲ. ಅದು ಬೀದಿ ಬೆಳಕಿನಷ್ಟು ಸತ್ಯ.

ಗೋಹತ್ಯೆ ನಿಷೇಧವೆ ಯಾಕೆ ಎಂದು ಕೇಳಿದರೆ ಅದು ಸಿದ್ಧ ಉತ್ತರವನ್ನು ಇಟ್ಟುಕೊಂಡಿದೆ. ಅದು ಪ್ರೈಮರಿ ಶಾಲೆಯ ಮಕ್ಕಳು ಕಾಗುಣಿತವನ್ನು ಬಾಯಿಪಾಠ ಮಾಡಿಕೊಂಡ ಹಾಗೆ. ಗೋವು ಬಿಜೆಪಿ. ಮೂಲ ನಿವಾಸಿಗಳ ಆಶ್ರಯತಾಣ. ಅವರ ಮುನ್ನೂರು ಮೂವತ್ತು ಕೋಟಿ ದೇವತೆಗಳ ವಾಸಸ್ಥಾನ. ಹಸು ಅವರ ಭೂಮಿ, ಬಂಡವಾಳ-ಬ್ರಹ್ಮಾಂಡ. ಅದು ಹತ್ಯೆ ಯಾಗುವುದರಿಂದ ಅವರು ಹತ್ಯೆಯಾದ ಹಾಗೆ. ಅಂದರೆ, ಅವರ ಸತ್ವ, ಸತ್ಯ ಮತ್ತು ಅಸ್ತಿತ್ವ ನಾಶವಾದ ಹಾಗೆ. ಗೋಹತ್ಯೆ ಮೂಲಕ ಅವರು ಕೊಲೆಯಾಗುತ್ತಾರೆ. ಅಂಥ ಕೊಲೆಯನ್ನು ತಪ್ಪಿಸಿಕೊಳ್ಳಲು ಅವರು ಗೋಹತ್ಯಾ ನಿಷೇಧ ಕಾನೂನನ್ನು ಜಾರಿಗೆ ತರಬೇಕಾಗಿದೆ.

ಗೋವು ವೈದಿಕರ ಪವಿತ್ರ ಪ್ರಾಣಿ. ಅದರ ಎಲ್ಲ ವಿಸರ್ಜನೆಗಳೂ ಕೂಡ ಅಮೃತ ಸಮಾನ. ಆದ್ದರಿಂದಲೆ ಹಾಲು ಅಮೃತ. ಹಸು ಮತ್ತು ಹಾಲನ್ನು ಉಳಿಸಿಕೊಳ್ಳುವ ಕಥಾನಕವಾಗಿಯೆ ಅವರ ಪುರಾಣ ಪುಣ್ಯಕತೆಗಳು ಹುಟ್ಟಿಕೊಂಡಿವೆ. ಅವು ಅವರ ಅಸ್ತಿತ್ವದ ಪ್ರತಿಪಾದನೆಗಳು ಮಾತ್ರವಾಗಿರದೆ ಭಾರತದ ಅಸ್ತಿತ್ವದ ಆಕರಗಳಾಗಿಯೂ ವರ್ಣಿಸಲ್ಪಟ್ಟಿವೆ. ಅವರ ಅಸ್ತಿತ್ವವೆಂದರೆ ಭಾರತದ ಅಸ್ತಿತ್ವ ಎಂದಂತಾಯಿತು.

ಜಗತ್ತಿನ ಎಲ್ಲ ಪುರಾತನ ಸಮುದಾಯಗಳಲ್ಲಿ ತಮ್ಮದೇ ಆದ ಪವಿತ್ರ ಪ್ರಾಣಿಗಳು ಇವೆ. ಅವು ಭಾವನಾತ್ಮಕವಾಗಿ ಆಯಾ ಸಮುದಾಯಗಳ ಜೀವಿತದ ಪ್ರಶ್ನೆಗಳಾಗಿವೆ. ಈ ಪ್ರಾಣಿಗಳನ್ನು ಕೊಲ್ಲುವುದು ಎಂದರೆ ಆ ಸಮುದಾಯದ ಜೀವನ ಸತ್ಯವನ್ನು ನಾಶ ಮಾಡಿದಂತೆ ಎಂದು ನಂಬಲಾಗಿದೆ. ಆದರೆ ಜಗತ್ತಿನ ಎಲ್ಲ ಸಮುದಾಯಗಳಿಗೂ ಇಂಥ ಪವಿತ್ರ ಪ್ರಾಣಿ ಇಲ್ಲ. ಯಾವ ಸಮುದಾಯಗಳು ತಮ್ಮನ್ನು ತಮ್ಮ ಪೂರ್ವಿಕ ಹಾಗೂ ಪೂರ್ವ ಪುರಾಣಗಳಿಂದ ಗುರುತಿಸಿಕೊಳ್ಳುತ್ತಾರೊ ಅವರಲ್ಲಿ ಮಾತ್ರ ಇವೆ. ಈ ನಂಬಿಕೆ ಬುಡಕಟ್ಟು ಸಮುದಾಯಗಳ ಕುಲ (Clan) ಪರಿಕಲ್ಪನೆಯಿಂದ ಬಂದುದು. ಇದೆಲ್ಲಕ್ಕಿಂತ ಮುಖ್ಯ ಸಂಗತಿ ಎಂದರೆ ಒಂದು ಸಮುದಾಯದ ಪವಿತ್ರ್ಯ ಪ್ರಾಣಿ ಬೇರೋಂದು ಸಮುದಾಯಕ್ಕೆ ಪವಿತ್ರ ಅಲ್ಲ. ಆ ಪ್ರಾಣಿಯನ್ನು ಬೇರೆ ಸಮುದಾಯದವರು ಚಪ್ಪರಿಸಿಕೊಂಡು ತಿನ್ನುತ್ತಾರೆ. ಪಾವಿತ್ರ್ಯದ ಪ್ರಶ್ನೆ ಇರಲಿ, ಇನ್ನೊಂದು ಸಮುದಾಯದ ಪಾವಿತ್ರ್ಯ ಪ್ರಾಣಿಯನ್ನು ಕಂಡರೆ ಸಹನೆ ಇಲ್ಲದವರೂ ಇದ್ದಾರೆ. ಹಾಗಾಗಿ ಪಾವಿತ್ರ್ಯದ ಪ್ರಶ್ನೆ ನಂಬಿರುವ ಆಯಾ ಸಮುದಾಯದ ನಡವಳಿಕೆಯೇ ಹೊರತು ಸಾರ್ವತ್ರಿಕ ಅಲ್ಲ.

ಭಾರತದಲ್ಲಿ ಗೋವು ಎನ್ನುವುದು 'ಹಿಂದೂ' ಎಂಬ ಜನರ ಪವಿತ್ರ ಪ್ರಾಣಿ ಎಂದು ಹೇಳಲಾಗುತ್ತಿದೆ. ಇದು ನಿಜ ಅಲ್ಲ. ಪಂಚಮರು, ತಳ-ಕೆಳವರ್ಗದ ಜನರಲ್ಲಿ ಗೋಮಾಂಸ ಭಕ್ಷಣೇ ಸರ್ವೇ ಸಾಮಾನ್ಯವಾಗಿದೆ. ಅದು ಅವರ ಪೌಷ್ಟಿಕ ಆಹಾರವಾಗಿದೆ. ಕ್ರಿಶ್ಚಿಯನ್ ಮತ್ತು ಮುಸ್ಲಿಮರ ವಿಷಯ ಬಿಡಿ: ಅವರಿಗೆ ಗೋಮಾಂಸದ ಬಿರ್ಯಾನಿ ಇಲ್ಲದಿದ್ದರೆ ಜೀವವನ್ನೆ ಕಳೆದುಕೊಂಡಾರು. ದಲಿತರ ವಿಷಯದಲ್ಲೂ ಈ ಮಾತನ್ನು ಹೇಳಬಹುದು. ಅವರಲ್ಲೂ ಒಂದು ವರ್ಗದ ಜನರಿಗೆ ಗೋಮಾಂಸ ಒಂದು ಅನ್ವೇಷಣೆ.

ಗೋವು ಒಂದು ಸಮುದಾಯಕ್ಕೆ ಪವಿತ್ರವೆಂದರೆ ಅದನ್ನು ಸಂರಕ್ಷಿಸಿಕೊಳ್ಳುವುದು ಅವರ ಹಕ್ಕು ಮತ್ತು ಕರ್ತವ್ಯವಾಗಿದೆ. ಒಂದು ಪ್ರಾಣಿ ಒಂದು ಸಮುದಾಯದ ಪೌಷ್ಟಿಕ ಆಹಾರವಾಗಿದ್ದಲ್ಲಿ ಅದನ್ನು ಸಾಕುವುದು ಮತ್ತು ಅಭಿವೃದ್ಧಿ ಪಡಿಸುವುದು ಅವರ ಹಕ್ಕಾಗಿದೆ. ಒಂದು ಪ್ರಾಣಿ ಒಳ್ಳೆಯ ಆಹಾರ ಮತ್ತು ಔಷಧ ಎನ್ನುವುದಾದಲ್ಲಿ ಸಕಲೆಂಟು ಸಮುದಾಯಗಳೂ ಅದನ್ನು ಉಳಿಸಿ - ಬೆಳಸುವ ಕೆಲಸವನ್ನು ಮಾಡಲೇಬೇಕಾಗುತ್ತದೆ. ಮನುಷ್ಯನ - ಆರೋಗ್ಯದ ವಿಷಯಕ್ಕೆ ಮೇಲಿನ ಮೂರೂ ಕಾರಣಗಳಲ್ಲಿ ಯಾವುದಾದರೊಂದನ್ನು ನಿರಾಕರಿಸುವುದು ಸಾಧ್ಯವಾಗದು. ಇವೆಲ್ಲಕ್ಕಿಂತ ಆರ್ಥಿಕ ದೃಷ್ಟಿಯಿಂದ ಕೆಲವು ಪ್ರಾಣಿಗಳು ತುಂಬಾ

ಜಗತ್ತಿನ ಎಲ್ಲ ಪುರಾತನ ಸಮುದಾಯಗಳಲ್ಲಿ ತಮ್ಮದೇ ಆದ ಪವಿತ್ರ ಪ್ರಾಣಿಗಳು ಇವೆ. ಅವು ಭಾವನಾತ್ಮಕವಾಗಿ ಆಯಾ ಸಮುದಾಯಗಳ ಜೀವಿತದ ಪ್ರಶ್ನೆಗಳಾಗಿವೆ. ಈ ಪ್ರಾಣಿಗಳನ್ನು ಕೊಲ್ಲುವುದು ಎಂದರೆ ಆ ಸಮುದಾಯದ ಜೀವನ ಸತ್ಯವನ್ನು ನಾಶ ಮಾಡಿದಂತೆ ಎಂದು ನಂಬಲಾಗಿದೆ. ಆದರೆ ಜಗತ್ತಿನ ಎಲ್ಲ ಸಮುದಾಯಗಳೂ ಇಂಥ ಪವಿತ್ರ ಪ್ರಾಣಿ ಇಲ್ಲ. ಯಾವ ಸಮುದಾಯಗಳು ತಮ್ಮನ್ನು ತಮ್ಮ ಪೂರ್ವಿಕ ಹಾಗೂ ಪೂರ್ವ ಪುರಾಣಗಳಿಂದ ಗುರುತಿಸಿಕೊಳ್ಳುತ್ತಾರೊ ಅವರಲ್ಲಿ ಮಾತ್ರ ಇವೆ. ಈ ನಂಬಿಕೆ ಬುಡಕಟ್ಟು ಸಮುದಾಯಗಳ ಕುಲ(Clan) ಪರಿಕಲ್ಪನೆಯಿಂದ ಬಂದುದು. ಇದೆಲ್ಲಕ್ಕಿಂತ ಮುಖ್ಯ ಸಂಗತಿ ಎಂದರೆ ಒಂದು ಸಮುದಾಯದ ಪವಿತ್ರ ಪ್ರಾಣಿ ಬೇರೋಂದು ಸಮುದಾಯಕ್ಕೆ ಪವಿತ್ರ ಅಲ್ಲ. ಆ ಪ್ರಾಣಿಯನ್ನು ಬೇರೆ ಸಮುದಾಯ ದವರು ಚಪ್ಪರಿಸಿಕೊಂಡು ತಿನ್ನುತ್ತಾರೆ. ಪಾವಿತ್ರ್ಯದ ಪ್ರಶ್ನೆ ಇರಲಿ, ಇನ್ನೊಂದು ಸಮುದಾಯದ ಪಾವಿತ್ರ್ಯ ಪ್ರಾಣಿಯನ್ನು ಕಂಡರೆ ಸಹನೆ ಇಲ್ಲದವರೂ ಇದ್ದಾರೆ. ಹಾಗಾಗಿ ಪಾವಿತ್ರ್ಯದ ಪ್ರಶ್ನೆ ನಂಬಿರುವ ಆಯಾ ಸಮುದಾಯದ ನಡವಳಿಕೆಯೆ ಹೊರತು ಸಾರ್ವತ್ರಿಕ ಅಲ್ಲ.

ಅಗತ್ಯವಾಗಿವೆ ಮತ್ತು ಅವುಗಳನ್ನು ಸಂರಕ್ಷಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ ಅಂಥ ಪ್ರಾಣಿಗಳಲ್ಲಿ ಗೋವು ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಜಗತ್ತಿನ ಮೊದಲ ಅಭಿವೃದ್ಧಿ ಕ್ರಾಂತಿ ಕೃಷಿ. ಅದರ ಕೇಂದ್ರಶಕ್ತಿ ಗೋವು. ಎರಡು ಮಹಾಕ್ರಾಂತಿಗಳಲ್ಲಿ ಮುಖ್ಯ ಧಾತುವಾಗಿದೆ. ಒಂದು, ಸಾಕುಪ್ರಾಣಿಗಳಲ್ಲಿ ಹಾಲಿನಂಥ ಪ್ರಮುಖ ಪೌಷ್ಟಿಕ ಆಹಾರವನ್ನು ಒದಗಿಸಿ ಮನುಕುಲದ ಶಿಶುಗಳನ್ನು ಪೋಷಿಸಿದೆ. ಎರಡು, ಮನುಷ್ಯ ಅಲೆಮಾರಿತನದಿಂದ ಕೇಂದ್ರ ಜೀವನಕ್ಕೆ ಬಂದು ನೆಲೆ ನಿಲ್ಲಲು ಕಾರಣವಾದ ಕೃಷಿ ಪದ್ಧತಿಯ ಅಸ್ತಿತ್ವಕ್ಕೆ ಮೂಲ ಕಾರಣವಾಗಿದೆ. ಗೋವಿನ ಈ ಕೊಡುಗೆ ಹಿಂದೂ ಎಂಬ ಜನರಿಗೆ ಮಾತ್ರವಲ್ಲ. ಇಡೀ ಮಾನವ ಜನಾಂಗ ಯಜಮಾನನಾಗಲು ಕೊಟ್ಟ ಕೊಡುಗೆಯಾಗಿದೆ. ಆಹಾರದಲ್ಲಿ ಉಳಿತಾಯ ಬಂದಿದೆ. ಅದು ರಾಜ, ರಾಜ್ಯ ಮತ್ತು ಪ್ರಭುತ್ವ ವ್ಯವಸ್ಥೆಯನ್ನು ಕಟ್ಟಲು ಅನುವಾಗಿದೆ. ಇನ್ನೊಂದು ಅರ್ಥದಲ್ಲಿ ಭೂಮಾಲೀಕತ್ವ ಹುಟ್ಟಿ ಬೆಳೆಯಲು ಗೋವುಗಳೇ ಕಾರಣವಾಗಿವೆ. ಅವು ಹೊಲದಲ್ಲಿ ಗೇಯುವುದು ಮಾತ್ರವಲ್ಲ. ಮನೆಯ ಮೌಲ್ಯವೂ, ರಾಜರುಗಳ ಸಂಪತ್ತಿನ ಕಣಜವೂ ಆಗಿ ಕೆಲಸ ನಿರ್ವಹಿಸಿವೆ.

ನಾನು ರೈತ ಸಮುದಾಯದಿಂದ ಬಂದವನು. ನಮ್ಮಲ್ಲಿ ಬಳಸುವುದು ಇದೆ. ಬಿಸಾಡುವುದು ಇಲ್ಲ; ಅದನ್ನು ಪುನರು ಉತ್ಪಾದನೆ ಮಾಡಲಾಗುತ್ತದೆ. ನಮ್ಮಲ್ಲಿ ಸಹಜೀವಿಗಳು ಇವೆ. ಅವುಗಳ ಜೊತೆಗೆ ಸಹಕಾರ ಮತ್ತು ದೂರ ಇಡುವ ತತ್ವ ಇದೆ. ನಮ್ಮ ಬೆಳೆ ಶ್ರಮದ ಫಲ ಎನ್ನುವ ಕಾರಣಕ್ಕೆ ಅದನ್ನು ನಾಶ ಮಾಡುವ ಪ್ರಾಣಿಗಳನ್ನು ದೂರ ಇಡಲು ನಾನಾ ಕ್ರಮಗಳನ್ನು ಬಳಸಲಾಗುತ್ತದೆ. ಅದರಲ್ಲಿ ಕೊಲ್ಲುವುದೂ ಒಂದು ಕ್ರಮ. ಎರೆ ಹುಳು, ಗುಬ್ಬಚ್ಚಿ, ಇರುವೆ ಇಂಥ ಸಹಾಯಕ ಪ್ರಾಣಿಗಳಿವೆ. ಅವುಗಳ ಜೊತೆಗೆ ಸ್ನೇಹ ಸಂಬಂಧವಿದೆ. ಸಸ್ಯಗಳ ಜೊತೆಗೆ ನಮಗೆ ಮಿತ್ರ ಮತ್ತು ಶತ್ರುವಿನ ಸಂಬಂಧವಿದೆ. ಕಳೆ ನಮ್ಮ ಶತ್ರು. ಆದರೆ ಬೆಳೆ ಸೇರಿದಂತೆ, ಹಣ್ಣು, ಔಷಧ, ರಕ್ಷಣೆ ಕೊಡುವ ಸಸ್ಯಗಳಿವೆ. ಅವು ನಮ್ಮ ಬದುಕಿನ ಭಾಗವೇ ಆಗುತ್ತವೆ. ಹೀಗೆ ಬಳಸುವುದು ಮತ್ತು ಬದಿಕಿಸುವುದು ಈ ಎರಡೂ ಗುಣಗಳು ರೈತನ ಗುಣ ಗೌರವಗಳು.

ಈ ಹಿನ್ನಲೆಯಲ್ಲಿಯೆ ನಮ್ಮಲ್ಲಿ ಹೆಣ್ಣನ್ನೂ ಗೋವನ್ನೂ–ಕೊಲ್ಲಬಾರದು ಎಂಬ ನಂಬಿಕೆಯಿದೆ. ಈ ಎರಡರ ಜೊತೆಗೆ ಬ್ರಾಹ್ಮಣನನ್ನು ಸೇರಿಸಲಾಗಿದೆ. ಇದು ಮನು ಧರ್ಮಶಾಸ್ತ್ರಕಾರನ ಕಿತಾಪತಿ ಇರಬಹುದು! ಸಂರಕ್ಷಕ ವಸ್ತುಗಳ ಜೊತೆಗೆ ಸೇರಿಕೊಂಡರೆ ಯಾಹೊತ್ತೂ ಕ್ಷೇಮ!! ಇಲ್ಲಿಯೆ ಗೋವು ಮತ್ತು ಬ್ರಾಹ್ಮಣ ಒಟ್ಟಿಗೆ ಸೇರುವುದು. ಹೆಣ್ಣಿಗೆ ಮಾತ್ರ ಈ ಸುವರ್ಣಾವಕಾಶ ಸಿಗಲಿಲ್ಲ!!! ಇದರಿಂದ ಗಂಡು ಏನಾದ? ಸುಲಿಗೆ ಕೋರ, ಪ್ರಭು, ಬಂಡವಾಳಿಗ, ಬಳಕೆದಾರ...

ರೈತರಿಗೆ, ಅರ್ಥಾತ್ ದುಡಿಯುವ ಮಂದಿಗೆ ಸೃಜನ ಮೂಲಗಳಾದ ಭೂಮಿ, ಹೆಣ್ಣು–ಗೋವುಗಳಂಥ ಜೀವಿಗಳು ಪ್ರಾಣವಾಯುವಿನಷ್ಟೆ ಮುಖ್ಯ. ಪಾವಿತ್ರ್ಯ? Nonsense. ಅದೊಂದು ಸಂರಕ್ಷಣ (Protection) ಸಿದ್ಧಾಂತ. ಮಕ್ಕಳಿಗೆ, ಮುದುಕರಿಗೆ, ದುರ್ಬಲ ಪ್ರಾಣಿಗಳಿಗೆ ಸಂರಕ್ಷಣೆ ಬೇಕು. ದಾಂಢಿಗರಿಗೆ, ಶೋಷಕರಿಗೆ, ಕದೀಮರಿಗೆ ರಕ್ಷಣೆ ಯಾಕೆ ಬೇಕು? ಯಾಹೊತ್ತೂ ಆರ್ಥಿಕ ಮತ್ತು ಸಾಂಸ್ಕೃತಿಕ ದರೋಡೆ ಕೋರರಿಗೆ ಸಂರಕ್ಷಣೆ ಬೇಕು. ಅಂಥವರು ಪಾವಿತ್ರ್ಯ, ಶ್ರೇಷ್ಠತೆ, ನೈಪುಣ್ಯತೆಳೆಂಬ ಸಾಧನಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ. ಇವೆಲ್ಲ ಇರುವುದಾದರೆ ವ್ಯಕ್ತಿಯ ಶೀಲ ಮತ್ತು ಸಾಧನೆಯೊಳಗೆ ಅಡಕವಾಗಿರುತ್ತವೆ.

ನಮ್ಮಲ್ಲಿ ಹೆಣ್ಣನ್ನೂ ಗೋವನ್ನೂ–ಕೊಲ್ಲಬಾರದು ಎಂಬ ನಂಬಿಕೆಯಿದೆ. ಈ ಎರಡರ ಜೊತೆಗೆ ಬ್ರಾಹ್ಮಣನನ್ನು ಸೇರಿಸಲಾಗಿದೆ. ಇದು ಮನು ಧರ್ಮಶಾಸ್ತ್ರಕಾರನ ಕಿತಾಪತಿ ಇರಬಹುದು! ಸಂರಕ್ಷಕ ವಸ್ತುಗಳ ಜೊತೆಗೆ ಸೇರಿಕೊಂಡರೆ ಯಾಹೊತ್ತೂ ಕ್ಷೇಮ!! ಇಲ್ಲಿಯೆ ಗೋವು ಮತ್ತು ಬ್ರಾಹ್ಮಣ ಒಟ್ಟಿಗೆ ಸೇರುವುದು. ಹೆಣ್ಣಿಗೆ ಮಾತ್ರ ಈ ಸುವರ್ಣಾವಕಾಶ ಸಿಗಲಿಲ್ಲ!!! ಅದೊಂದು ಸಂರಕ್ಷಣ (Protection) ಸಿದ್ಧಾಂತ. ಮಕ್ಕಳಿಗೆ, ಮುದುಕರಿಗೆ, ದುರ್ಬಲ ಪ್ರಾಣಿಗಳಿಗೆ ಸಂರಕ್ಷಣೆ ಬೇಕು. ದಾಂಢಿಗರಿಗೆ, ಶೋಷಕರಿಗೆ, ಕದೀಮರಿಗೆ ರಕ್ಷಣೆ ಯಾಕೆ ಬೇಕು?

ನಾವು ರೈತರು. ಸೃಜನ ಮೂಲಗಳನ್ನು ಗೌರವಿಸುವುದು ಮತ್ತು ಅವುಗಳ ಅಸ್ತಿತ್ವವನ್ನು ಪ್ರತಿಪಾದಿಸುವುದು ಅವುಗಳು ಕೊಡುತ್ತಿರುವ ಉತ್ಪಾದನಾ ಮಹತ್ವದಿಂದ. ಅಂಥ ಉತ್ಪಾದನಾ ನೈಪುಣ್ಯವೇ ಅವುಗಳ ಶೀಲ ಪಾವಿತ್ರ್ಯ. ಈ ಕಾರಣದ ಮೇಲೆ ಹೆಣ್ಣು ನಮಗೆ: ಅವಳು ಮಕ್ಕಳನ್ನು ಕೊಡುತ್ತಾಳೆ, ಆಹಾರವನ್ನು ತಯಾರಿಸುತ್ತಾಳೆ (ಮೊದಲು ಅವಳ ಕಂದನಿಗಾಗಿ), ಮನೆಯನ್ನು ಶುಚಿಯಾಗಿ ಇಡುತ್ತಾಳೆ, ಸಾಕು ಪ್ರಾಣಿಗಳನ್ನು ನೋಡಿಕೊಳ್ಳುತ್ತಾಳೆ. ಬೀಜವನ್ನು ಬಿತ್ತುತ್ತಾಳೆ, ಬೆಳೆಯನ್ನು ಕೊಯ್ಯುತ್ತಾಳೆ, ಕಾಳು ಕಡ್ಡಿಯನ್ನು ಅಚ್ಚುಕಟ್ಟು ಮಾಡುತ್ತಾಳೆ, ಮನೆಯಲ್ಲಿಟ್ಟು ಸಂರಕ್ಷಣೆ ಮಾಡುತ್ತಾಳೆ, ಮಕ್ಕಳನ್ನು ಸಮಾಜ ಮುಖಿಯಾಗಿ ಬೆಳೆಸುತ್ತಾಳೆ, ಗಂಡ ರಾಕ್ಷಸನಾಗದಂತೆ ನೋಡಿಕೊಳ್ಳುತ್ತಾಳೆ. ಹೀಗೆ ಅವಳು ಅತ್ಯಂತ ಅಮೂಲ್ಯ. ಅವಳನ್ನು ಹತ್ಯೆ ಮಾಡಲಾಗದು, ಮಹಾಪಾಪ. ಯಾಕೆಂದರೆ ಅಮೋಘ ಉತ್ಪಾದನಾ ಮೂಲವೊಂದನ್ನು ನಾಶಮಾಡಿದಂತೆ. ಆ ಮೂಲಕ ಜನಜೀವನವನ್ನು ಕಷ್ಟಕ್ಕೆ ತಳ್ಳಿದಂತೆ. ಅತ್ಯಾಧುನಿಕ ಶೋಧನೆಯಿಂದಲೂ ಇಂಥ ನೆಲ ಮೂಲ ಸೃಜನ ಮೂಲವನ್ನು ಕಂಡುಕೊಳ್ಳಲು ಆಗದು.

ಗೋವು: ರೈತನ ಮಿತ್ರ, ಸಹಾಯಕ, ಸೇವಕ, ಆಹಾರ, ಅಮೃತ, ಪೋಷಕ, ಪವಿತ್ರ ಮತ್ತು ಇತ್ಯಾದಿ. ರೈತ ಗೋವುಗಳನ್ನು ಹತ್ಯೆ ಮಾಡಿದುದಿಲ್ಲ, ನಿರ್ಲಕ್ಷಿಸಿದ್ದೂ ಇಲ್ಲ. ಅದು ಅವನ ವಿವಿದೋದ್ದೇಶದ ಅಣೆಕಟ್ಟೆಯಂತೆ ಇತ್ತು. ಚೈತನ್ಯವಿದ್ದಾಗ ಕೃಷಿ ಮಾಡುತ್ತಿತ್ತು. ಚೈತನ್ಯ ಕುಂದಿದಾಗ ಗೊಬ್ಬರ ಕೊಡುತ್ತಿತ್ತು. ಈಗ ಉಳುಮೆ ಮತ್ತು ಗೊಬ್ಬರ ಉತ್ಪಾದನೆಯನ್ನು ರೈತನಿಂದ ಕಸಿದುಕೊಂಡು ಟ್ರಾಕ್ಟರ್ ಮತ್ತು ರಸಗೊಬ್ಬರ ತಯಾರಿಕೆಯ ಉದ್ಯಮಿಗೆ ಕೊಡಲಾಗಿದೆ. ಆದ್ದರಿಂದ ರೈತ ಈಗ ನೇಗಿಲು ಮತ್ತು ಗೋವು ನಿರುತ್ಪಾದಕ ಎಂದು ತಿಳಿದಿದ್ದಾನೆ. ಅವನದು ಈಗ ಸಹಜ ಬದುಕಾಗಿಲ್ಲ, ಮಾರಿಕೊಂಡವನು. ಹಸುಗಳನ್ನು ಮೇಸಲು ಗೋಮಾಳ ಇಲ್ಲ ಭತ್ತ –ರಾಗಿ–ಗೋಧಿ ಹುಲ್ಲನ್ನು ತಿನ್ನಿಸೋಣವೆಂದರೆ ಆಧುನಿಕ ತಳಿ ಶಾಸ್ತ್ರಜ್ಞರು ಕಡಿಮೆ ಎತ್ತರದ ಹುಲ್ಲು ಹಾಗೂ ಹೆಚ್ಚು ಬೀಜ ಕೊಡುವ ತಳಿಗಳನ್ನು ಕೃಷಿಗೆ ಬಿಟ್ಟಿದ್ದಾರೆ. ರೈತನ ಅಪರಾದ ಎಂದರೆ ಪೋಷಿಸಲು ಆಗದ್ದಕ್ಕಿಂತ ಹೆಚ್ಚಿಗೆ ಸಂತಾನ ಸೃಷ್ಟಿ ಮಾಡುತ್ತಿರುವುದು ಮತ್ತು ಆದಾಯಕ್ಕಿಂತ ವೆಚ್ಚವನ್ನು ಹೆಚ್ಚು ಮಾಡಿರುವುದು. ಸಾಕಲು ಅನುಕೂಲ ಇಲ್ಲದ ಕಾರಣ ವಯಸ್ಸಾದ ದನ–ಕರುಗಳನ್ನು ಮಾರುತ್ತಿದ್ದಾನೆ.

ಅದರಲ್ಲೂ ಲಾಭದ ಕಾರಣಕ್ಕೆ ಹಾಲು ಕೊಡುವ ಹಸು ಮತ್ತು ಕರುಗಳನ್ನು ಆತ ಸಲೀಸಾಗಿ ಮಾರುತ್ತಿದ್ದಾನೆ. ಮಿತ್ರನಾಗಿ ದುಡಿದ, ಸಾಂಸ್ಕೃತಿಕ ಸ್ನೇಹಿತನಾಗಿದ್ದ ಸ್ಥಳೀಯ ಹಸು – ಕರುಗಳನ್ನು ಮಾರಲು ಹಿಂಜರಿಯುತ್ತಾನೆ. ಸಂಸ್ಕೃತಿಯನ್ನು ಮಾರಿ ಹೊಟ್ಟೆ ಹೊರೆಯುವ ದುಸ್ಥಿತಿಗೆ ರೈತ ಇನ್ನೂ ಬಂದಿಲ್ಲ. ಬರಬಹುದು! ಆದರೆ ಕರ್ನಾಟಕ ಸರ್ಕಾರದ ಗೋಹತ್ಯೆ ನಿಷೇಧ ಕಾನೂನಿನಿಂದ ರೈತರಿಗೆ ಏನೂ ಉಪಯೋಗವಿಲ್ಲ. ಹಾಗೇನಾದರೂ ಇದ್ದರೆ ಅದು ರೈತರ ಹೆಸರಿನಲ್ಲಿ ಸರ್ಕಾರ ಬೇನಾಮಿ ವ್ಯವಹಾರ ನಡೆಸುತ್ತಿದೆ ಎಂದು ತಿಳಿಯಬೇಕು.

ನಾನು ದುಡಿಯುವ ವರ್ಗದಿಂದ ಬಂದವನು. ತನ್ನ ತಾಯಿ ಕೃಷಿಯಲ್ಲಿ ದುಡಿಯುತ್ತಿದ್ದಳು. ಅವಳ ಬಾಲ–ಬಾಲಕ ನಾನು. ಆ ಕಾರಣಕ್ಕೆ ಹೆಣ್ಣು, ಗೋವು, ಕೃಷಿ ಕೂಲಿ ಮತ್ತು ರೈತರ ನಿರಾಕರಣೆ, ಸಾವು ಅಥವಾ ಹತ್ಯೆಯನ್ನು ಸಹಿಸುವುದಿಲ್ಲ. ರೈತರ ಆತ್ಮಹತ್ಯೆಯನ್ನು ಗಂಭೀರವಾಗಿ ತೆಗೆದುಕೊಳ್ಳದ ಸಾರ್ವಜನಿಕರು ಮೊದಲ ಹಂತಕರು. ಪ್ರಜೆಗಳನ್ನು ಪ್ರತಿನಿಧಿಸುವ ಸರ್ಕಾರ ಎರಡನೆಯ ಸ್ಥಾನದಲ್ಲಿ ನಿಲ್ಲುತ್ತದೆ. ರೈತರ ನೆಲೆ ಬಿಡಿಸುವ ಚಿಂತನೆ ಹೊಂದಿರುವ ಮತ್ತು ಪರದೇಶದ ಯೋಜನೆಗಳಿಗೆ ತಮ್ಮನ್ನು ಮಾರಿಕೊಂಡಿರುವ ವಿಜ್ಞಾನಿಗಳು ಅಜ್ಞಾನಿಗಳು. ತಮ್ಮ ಸಂಪತ್ತು ಸಂಗ್ರಹಕ್ಕಾಗಿ ಯಾರನ್ನೂ ಬಲಿಕೊಡಲು ಸಿದ್ಧವಿರುವ ಉದ್ಯಮಪತಿಗಳು ಆಧುನಿಕ ರಾಕ್ಷಸರು. ಯಾವುದೇ ಸಮುದಾಯದ ಅವಕಾಶಗಳನ್ನು ಕಿತ್ತುಕೊಳ್ಳುವುದು, ನಿರಾಕರಿಸುವುದು ಜೀವನವನ್ನು ಕುಂಟಿತಗೊಳಿಸುವುದು ಮತ್ತು ಹತ್ಯೆ ಮಾಡುವುದು ಅಪರಾಧ.

ದುಡಿದು ಸೋತಿವೆ ಎನ್ನುವ ಕಾರಣಕ್ಕೆ ಗೋವುಗಳನ್ನು ಮಾರುವುದು, ಹತ್ಯೆ ಮಾಡುವುದು ಸರಿಯಲ್ಲ. ಹೆತ್ತು, ಸಾಕಿ, ದುಡಿದು ಹಣ್ಣಾದ ತಾಯಿ–ತಂದೆಯರನ್ನು ವೃದ್ಧಾಶ್ರಮಕ್ಕೆ ತಳ್ಳುತ್ತಿರುವುದು ತರವಲ್ಲ. ಇದು ಯಂತ್ರ ಸಂಸ್ಕೃತಿಯ ತಾತ್ವಿಕತೆ. ಚಲಿಸುವಾಗ ಯಂತ್ರಬೇಕು, ಅದು ದುಡಿಮೆ ನಿಲ್ಲಿಸಿದರೆ ಗುಜರಿಗೆ ಎಂಬ ಮೆಟೀರಿಯಲಿಸ್ಟಿಕ್ ತತ್ವವನ್ನು ಮಾನವ ಜೀವನಕ್ಕೆ ನೇರವಾಗಿ ಅನ್ವಯಿಸಿದರೆ ಹೇಗೆ? ಹೆಣ್ಣನ್ನು ಹತ್ಯಾಚಾರ ಮಾಡಿದ ನಂತರ ಕೊಲ್ಲುವ ಮನಸ್ಸು ಕೂಡ ಇದೆ ಬಗೆಯದು. ಏನಾನ್ನಾದರೂ ನಿರಾಕರಿಸುವ ಮನಸ್ಸು ಇದೆಯಲ್ಲ ಅದು ಪೂರ್ವ ಪ್ರಾಕೃತವಾದುದು ಇಲ್ಲವೆ ಆಧುನಿಕ ಯಂತ್ರ ಸಂಸ್ಕೃತಿಯಿಂದ ದತ್ತವಾದುದು. ವ್ಯಕ್ತಿ, ಅಥವಾ ಸಮೂಹದ ಆಹಾರವೊಂದನ್ನು ನಿರಾಕರಿಸುವುದರಲ್ಲಿ ಮಾನವ ದ್ವೇಷವಿದೆ. ಕೊನೆಗೆ ಈ ಮನಸ್ಸು ದ್ವೇಷಿಸುವವನನ್ನೇ ದಹಿಸುತ್ತದೆ.

೨ ಗೋಹತ್ಯೆ : ಆಹಾರ

“ಗೋಹತ್ಯೆ' ಹಾಗಂದರೆ ಏನು? ಎಲ್ಲಿ ಗೋಹತ್ಯೆ ನಡೆಯುತ್ತಿದೆ. ಗೋವುಗಳನ್ನು ತಿನ್ನುವವರು ಅವರ ಸಂಪ್ರದಾಯಕ್ಕೆ ಅನುಗುಣವಾಗಿ ಕುಯ್ದು ತಿನ್ನುತ್ತಿದ್ದಾರೆ. ಕುರಿ, ಕೋಳಿ ಮುಂತಾದುವನ್ನು ತಿನ್ನುವವರು ಸಹ ತಮ್ಮ ನಡ

ವಳಿಕೆಗೆ ಅನುಗುಣವಾಗಿ ಕೊಯ್ದು ತಿನ್ನುತ್ತಿದ್ದಾರೆ. ಈ ಎರಡೂ ಕ್ರಿಯೆಗಳು ಬೇರೆ ಬೇರೆ ಅಲ್ಲ. ತಿನ್ನುವುದಕ್ಕಾಗಿ, ತಿನ್ನಬಹುದಾದ ಪ್ರಾಣಿಗಳನ್ನು ಅವರವರ ಸಂಸ್ಕೃತಿಗೆ ಅನುಗುಣವಾಗಿ ಒಪ್ಪ–ಓರಣ ಮಾಡಿಕೊಂಡು ಊಟ ಮಾಡುತ್ತಿದ್ದಾರೆ. ಹೀಗೆ ಊಟಕ್ಕಾಗಿ ಪ್ರಾಣಿಗಳನ್ನು ಬಳಸುವುದನ್ನೂ ಹತ್ಯೆ ಎನ್ನಬಹುದೆ? ಹತ್ಯೆ ಎನ್ನುವುದು ಅಪರಾಧ, ಸಂಸ್ಕಾರ ಎನ್ನುವುದು ಸಹಜ. ಹುಲಿ ಕಡವೆಯನ್ನು ಬೇಟೆಯಾಡುತ್ತದೆ, ಚಿರತೆ ಜಿಂಕೆಯನ್ನು ಬೇಟೆಯಾಡುತ್ತದೆ. ಇದು ಆಹಾರ ಕ್ರಮ, ನೈಸರ್ಗಿಕ ನಿಯಮ. ಜಗತ್ತಿನ ಬಹುತೇಕ ಮನುಷ್ಯರು ಮಾಂಸವನ್ನು ಆಹಾರವಾಗಿ ಬಳಸುತ್ತಾರೆ. ಅದು ಆರೋಗ್ಯಕ್ಕೂ ಇರಬಹುದು, ರುಚಿಗೂ ಇರಬಹುದು. ಇವೆಲ್ಲ ಜೀವನ ಸಂಸ್ಕೃತಿ. ಹಾಗಿದ್ದು ಗೋವುಗಳನ್ನು ಕೊಯ್ದು ಸಂಸ್ಕರಿಸಿ ತಿನ್ನುವುದನ್ನು ಹತ್ಯೆ ಎಂದು ಕರೆಯಲು ಹೇಗಾಗುತ್ತದೆ? ಹಾಗೆ ಕರೆದರೆ ಗೋವುಗಳನ್ನು ತಿನ್ನುವವರನ್ನು ಉದ್ದೇಶಪೂರ್ವಕವಾಗಿಯೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದಂತಾಗುತ್ತದೆ.. ಇಂಥ ಮನಸ್ಸು ಮನುಷ್ಯನ ಮನಸ್ಸು ಆಗುವುದಿಲ್ಲ.

ಧಾರ್ಮಿಕನೊಬ್ಬನಿಗೆ ತನ್ನ ಧಾರ್ಮಿಕ ಪ್ರಾಣಿಯನ್ನು ಕೊಲ್ಲುವುದು ಅಪರಾಧವೇ ಸರಿ. ಬೇರೆಯವನಿಗೆ ಆಪ್ರಾಣಿ ಸಾಮಾನ್ಯ ಪ್ರಾಣಿಗಳಲ್ಲಿ ಒಂದಾಗಿರುತ್ತದೆ. ಅವನು ಆ ಪ್ರಾಣಿಯನ್ನು ಕೊಂದು ತಿಂದರೆ ಹತ್ಯೆ ಅನಿಸುವುದಿಲ್ಲ. ಆಹಾರವಾಗುತ್ತದೆ. ಅವನದೂ ಒಂದು ಪವಿತ್ರ ಪ್ರಾಣಿ ಇರಬಹುದು. ಅದನ್ನು ಬೇರೆ ಸಮುದಾಯದವರು ಆಹಾರವಾಗಿ ಬಳಸುತ್ತಿರಬಹುದು. ಹಾಗಾದರೆ ಪ್ರತಿಯೊಂದು ಸಮುದಾಯದ ಧಾರ್ಮಿಕ ನಂಬಿಕೆಗಳು ಬೇರೆ ಬೇರೆಯಾಗಿರುತ್ತವೆ. ಅವುಗಳನ್ನು ಗೌರವಿಸಬೇಕು. ಒಂದು ಸಮುದಾಯದ ಕಡೆಯಿಂದ ಅಗೌರವ ಶುರುವಾದರೆ ಅದು ಪರಸ್ಪರರಲ್ಲಿ ಅಗೌರವ ಭಾವನೆಯೆ ಹುಟ್ಟುತ್ತದೆ. ಇದು ಒಟ್ಟು ಸಮಾಜವನ್ನು ಅಸ್ವಸ್ಥಗೊಳಿಸುತ್ತದೆ. ಅಂಥ ಕಡೆ ಯಾವ ಧರ್ಮವೂ ಅಸ್ತಿತ್ವದಲ್ಲಿ ಇರುವುದಿಲ್ಲ. ಕೇವಲ ಅಸಹನೆ, ಅಸೂಯೆ, ದ್ವೇಷಗಳು ನೆಲೆಯೂರುತ್ತವೆ. ಒಂದೊಮ್ಮೆ ಯಾವುದೇ ಸಮುದಾಯದಲ್ಲಿ ಇಡೀ ಮಾನವಕುಲಕ್ಕೆ ಕಂಟಕಪ್ರಾಯವಾದ ನಂಬಿಕೆಯೊ, ಆಹಾರವೋ, ನಡವಳಿಯೊ ಇದ್ದಲ್ಲಿ ಅದನ್ನು ಸಾರ್ವತ್ರಿಕವಾಗಿಯೆ ವಿರೋಧಿಸಿ ನಿವಾರಿಸಿಕೊಳ್ಳಬಹುದು. ಅಂಥ ಕೆಲಸಗಳು ಆಗಿವೆ – ಆಗುತ್ತಿವೆ. ಸತಿಸಹಗಮನ ಪದ್ಧತಿಯ ನಿವಾರಣೆಯೆ ಇದಕ್ಕೆ ಸಾಕ್ಷಿ. ಆದರೆ ಗೋಹತ್ಯೆ ನಿಷೇಧ ಕಾನೂನು ತರುವ ಪರಾಕ್ರಮಿಗಳಲ್ಲಿ ಕೆಲವರಿಗೆ ಇದು ಸಹ್ಯವಾಗಿಲ್ಲ.

ಬಡವರಿಗೆ ಆಹಾರದ ಕೊರತೆ ಇದೆ. ಪೌಷ್ಠಿಕ ಆಹಾರದ ಮಾತು ಬಹಳ ದೂರದ್ದು. ಮಾಂಸಾಹಾರ ಕೂಡ ಕಷ್ಟ ಲಭ್ಯವಾಗಿದೆ. ಭಾರತದಲ್ಲಿ ಕಡಿಮೆ ಬೆಲೆಗೆ ಸಿಗುತ್ತಿರುವುದು ಗೋಮಾಂಸವೊಂದೆ. ಈಗ ಸರ್ಕಾರವು ಪಡಿತರ ವ್ಯವಸ್ಥೆಯಲ್ಲಿ ಕಡಿಮೆ ಬೆಲೆಗೆ ಅಕ್ಕಿ, ಗೋಧಿ, ಸೀಮೆಎಣ್ಣೆ, ಸಕ್ಕರೆ... ಹಂಚುತ್ತಿರುವಂತೆ ಗೋಮಾಂಸವನ್ನು ಹೊರತು ಪಡಿಸಿ ಇತರೆ ಮಾಂಸವನ್ನು ಕಡಿಮೆ ಬೆಲೆಗೆ ಕೊಡುವುದಾದಲ್ಲಿ ಬಹಳಷ್ಟು ಜನ ಗೋಮಾಂಸದ ಕಡೆಗೆ ತಿರುಗಿಯೂ ನೋಡುವುದಿಲ್ಲ. ಅದು ಸಾಧ್ಯವಾಗುವುದೆ? ಒಂದನ್ನು ನಿಷೇಧಿಸುವವರಿಗೆ ಅದಕ್ಕೆ ಪರ್ಯಾಯವನ್ನು ಹುಡುಕುವ ಜವಾಬ್ದಾರಿಯೂ ಬೇಕು. ಅಂಥ ತಲೆ ಇರುವ ರಾಜಕಾರಣಿಗಳು ನಮ್ಮಲ್ಲಿ ಎಲ್ಲಿದ್ದಾರೆ? ಬೀದಿಯಲ್ಲಿ ಲಫಂಗ ಕೆಲಸ ಮಾಡಿಕೊಂಡಿದ್ದ ಪ್ರಾಣಿಗಳು, ಮತ, ಧರ್ಮ ಎಂಬ ದೆವ್ವದ ಮನೆಗಳಿಂದ ಬಂದ ಮೃತ ಜೀವಿಗಳೇ ತುಂಬಿರುವ ರಾಜಕಾರಣ ಸಮಾಜದ ದೊಡ್ಡ ಪಿಡುಗಾಗಿದೆ.

ಈ ಭೂಮಿ ಮನುಷ್ಯನದು ಮಾತ್ರವಲ್ಲ. ಸಕಲೆಂಟು ಜೀವಿಗಳಿಗೂ ಇಲ್ಲಿ ಬದುಕಲು ಅವಕಾಶವಿದೆ. ನಿಸರ್ಗವೇ ಅದನ್ನು ಒದಗಿಸಿಕೊಟ್ಟಿದೆ. ನಿಮಗೆ ಉಪದ್ರವಕೊಡುವ ಜೀವಿಗಳನ್ನು ನಿವಾರಿಸಿಕೊಳ್ಳಿ, ಇತರೇ ಪ್ರಾಣಿಗಳಿಗೆ ಬದುಕಲು ಅವಕಾಶ ಮಾಡಿಕೊಡಿ. ದಯೆ ಎಂದು ತಿಳಿದುಕೊಂಡು ಸಹಕರಿಸಿ ಎಂದು ಮನುಷ್ಯನನ್ನು ಕೇಳಿಕೊಳ್ಳಬಹುದು. ಅಂಥ ಒಂದು ಜೀವಪರ ಹೋರಾಟವನ್ನೇ ಶುರು ಮಾಡಬಹುದು. ಆದರೆ! ಆದರೆ!! ಆದರೆ!!! ಬಳಸಿ, ಬಳಸಿ, ಹೆಚ್ಚು ಬಳಸಿ. ಮಸ್ತ್ ಮಜಾಮಾಡಿ ಎಂದು ಜಾಹೀರಾತು ಮಾಡುತ್ತಿರುವ ಅಭಿವೃದ್ಧಿ ಸಿದ್ಧಾಂತದ ಈ ಸಂದರ್ಭದಲ್ಲಿ ಪ್ರಾಣಿದಯೆ, ಜೀವದಯೆ, ಬಡವರ ಬಗ್ಗೆ ದಯೆ, ಲೈಂಗಿಕ, ದೌರ್ಜನ್ಯಕ್ಕೆ ಒಳಗಾಗುತ್ತಿರುವ ಮಹಿಳೆಯರ ಬಗ್ಗೆ ದಯೆ, ಮಕ್ಕಳನ್ನು ಮಾರಾಟ ಮಾಡಿಬೇಡಿ ಎಂಬ ಕೋರಿಕೆಯನ್ನು ಮನ್ನಿಸುವವರು ಯಾರಿದ್ದಾರೆ. ಮೃಗಗಳ ಹಿಂಡಿನಲ್ಲಿ ಮನುಷ್ಯನನ್ನು ಹುಡುಕಬಹುದೆ! ಹೀಗಿರುವಾಗ ಬಡವರ ಪೌಷ್ಠಿಕ ಆಹಾರವಾಗಿರುವ ಮಾಂಸವನ್ನು ವರ್ಜಿಸಿ ಎಂದು ಹೇಳುವುದು, ಕಾನೂನು ಮಾಡುವುದು, ಜೈಲಿಗೆ ಕಳಿಸುತ್ತೇವೆ ಎನ್ನುವುದು ಎಷ್ಟು ಸರಿ? ನನ್ನನ್ನು ನಾನೇ ಕೇಳಿಕೊಳ್ಳುತ್ತೇನೆ: ಈ ದೇಶದ ಅನ್ನ, ಆಹಾರ ಮತ್ತು ಆಸ್ತಿ ನಮ್ಮಪ್ಪನ ಚಪ್ಪೋಡೆ? ಅಥವ ಬೇರೆ ಯಾವುದಾದರೂ ಜನರ ಖಾಸಗಿ ಆಸ್ತಿಯೆ? ತಪ್ಪು ಯಜಮಾನನದಲ್ಲ, ಹಾಕಿದ್ದು ತಿಂದುಕೊಂಡು ಬದುಕುವ ನಾಯಿಗಳದು. ಅವು ಯಾವು?

ನನಗೆ ಆಗದಿರುವ ಆಹಾರವೂ ಮತ್ತೊಂದೂ ಇದೆ. ನನಗೆ ಆಗದಿರುವುದು ಬೇರೆಯವರಿಗೂ ಕೂಡದು ಎಂದರೆ ಹೇಗೆ, ಏನರ್ಥ? ನನಗೆ ಬುರ್ಕಾ ಪದ್ಧತಿ ಕಂಡರೆ ಸುತರಾಂ ಇಷ್ಟವಿಲ್ಲ. ಅದಕ್ಕೆ ಯಾವ ವೈಜ್ಞಾನಿಕ ಸಮರ್ಥನೆಯೂ ಇಲ್ಲ. ನಿಸರ್ಗ ಕೊಟ್ಟ ಸೌಂದರ್ಯವನ್ನು ಅವಳೂ ಅನುಭವಿಸುವಂತಿಲ್ಲ. ಅನ್ಯರೂ ಆನಂದಿಸುವಂತಿಲ್ಲ. ಅದು ಹೆಣ್ಣು ಮಕ್ಕಳ ಮೇಲೆ ಹಾಕಿದ ಶಾಪ. ಅಂದ ಮಾತ್ರಕ್ಕೆ ನಾನು ಆ ಹೆಣ್ಣು ಮಕ್ಕಳನ್ನು ಆಗದವರು ಎನ್ನಲೆ? ಆ ಪದ್ಧತಿಯ ವಿರುದ್ಧ ಧ್ವನಿ ಎತ್ತುವುದು ಇದ್ದೇ ಇದೆ. ಮೂರು ನಾಮ ಹಾಕಿಕೊಂಡವರು ನನ್ನ ಎದುರಿಗೆ ಬಂದರೆ ಭಯವಾಗುತ್ತದೆ. ನಮ್ಮ ತಾಯಿ ಹಾಗೆ ಎದುರು ಕಂಡುದರಿಂದ ಅಪಾಯವಾಗಿದೆ ಎನ್ನುತ್ತಿದ್ದರು. ಈ ನಂಬಿಕೆಗೂ ಏನೂ ವೈಜ್ಞಾನಿಕ ಕಾರಣ ಇಲ್ಲ. ಅದು ಅವರ ಅವತಾರ. ಅಷ್ಟಕ್ಕೆ ಆ ಜನರನ್ನು ದೂರ ಇಡಲು ಆದೀತೆ?

ಬಡವರಿಗೆ ಆಹಾರದ ಕೊರತೆ ಇದೆ. ಪೌಷ್ಠಿಕ ಆಹಾರದ ಮಾತು ಬಹಳ ದೂರದ್ದು. ಮಾಂಸಾಹಾರ ಕೂಡ ಕಷ್ಟ ಲಭ್ಯವಾಗಿದೆ. ಭಾರತದಲ್ಲಿ ಕಡಿಮೆ ಬೆಲೆಗೆ ಸಿಗುತ್ತಿರುವುದು ಗೋಮಾಂಸವೊಂದೆ. ಈಗ ಸರ್ಕಾರವು ಪಡಿತರ ವ್ಯವಸ್ಥೆಯಲ್ಲಿ ಕಡಿಮೆ ಬೆಲೆಗೆ ಅಕ್ಕಿ, ಗೋಧಿ, ಸೀಮೆ ಎಣ್ಣೆ, ಸಕ್ಕರೆ... ಹಂಚುತ್ತಿರುವಂತೆ ಗೋಮಾಂಸವನ್ನು ಹೊರತು ಪಡಿಸಿ ಇತರೆ ಮಾಂಸವನ್ನು ಕಡಿಮೆ ಬೆಲೆಗೆ ಕೊಡುವುದಾದಲ್ಲಿ ಬಹಳಷ್ಟು ಜನ ಗೋಮಾಂಸದ ಕಡೆಗೆ ತಿರುಗಿಯೂ ನೋಡುವುದಿಲ್ಲ.

ಬುಡಕಟ್ಟು ಜೀವನದಿಂದಲೂ ಪ್ರತಿಯೊಂದು ಸಮುದಾಯದಲ್ಲಿ ಸ್ವೀಕಾರ ಆಹಾರ ಮತ್ತು ನಿಷೇಧ ಆಹಾರ ಎಂಬ ಪದ್ಧತಿಗಳಿವೆ. ನಮ್ಮ ತಾಯಿ ಹಂದಿ ತಿನ್ನಬೇಡ, ಅದು ನಮ್ಮ ಮಂಜನಾಥಸ್ವಾಮಿಗೆ ಆಗುವುದಿಲ್ಲ ಎಂದು ಹೇಳಿದಳು. ನಾನು ಆ ದೇವರ ಬಂಟ ಅಣ್ಣಪ್ಪಸ್ವಾಮಿಗೆ ಹಂದಿ ಇಷ್ಟವಂತೆ ಎಂದೆ. ಅದು ಬಂಟರು ತಿನ್ನುವುದು ನಾವಲ್ಲ ಎಂದಳು. ನಾನು ತಿಂದೆ, ಈಗಲೂ ಖುಷಿಯಿಂದ ತಿನ್ನುತ್ತೇನೆ. ಮಂಜುನಾಥಸ್ವಾಮಿ ನನ್ನ ತಂಟೆಗೆ ಬಂದಿಲ್ಲ. ಒಕ್ಕಲಿಗ ಜನ ದನ ತಿನ್ನಬಾರದು, ಸರ್ವನಾಶವಾಗಿ ಹೋಗುತ್ತಾರೆ ಎಂದು ಹೇಳಿದಳು ಅವ್ವ. ಒಕ್ಕಲಿಗರ ಪರಮ ವಿರೋಧಿಗಳಿಗೆ ಈ ವಿಷಯ ಗೊತ್ತಾದರೆ ಗತಿ ಏನು ಎಂದೆ. ಬಾಯಿ ಮುಚ್ಗೆಂಡು ಕೂರ್ಲ ಅಂದಳು. ನಾನು ಕೇರಳ ರಾಜ್ಯಕ್ಕೆ ಅಧ್ಯಯನಕೆಂದು ಎರಡು ವರ್ಷ ಹೋಗಿದ್ದೆ. ಅಲ್ಲಿ ದನ, ಎಮ್ಮೆ ಮಾಂಸವೆ ಸ್ವಾದಿಷ್ಟ. ನಾನು ಸಮಾನತೆ ಬಗ್ಗೆ ಮಾತನಾಡುತ್ತಿದ್ದ ಹುಡುಗ ಬೇರೆ. ನಮ್ಮ ಕಡೆ ದಲಿತರನ್ನು ನಿಂದಿಸಲು 'ದನ ತಿನ್ನುವವನಿಗೆ ಗೊಬ್ಬರದ ಆಣೆ ಬೇರೆ' ಎಂದು ಅವರ ಪ್ರಾಮಾಣಿಕತೆಯನ್ನು ಅವಹೇಳನ ಮಾಡಲಾಗುತ್ತದೆ. ನಾನೇ ದನ ತಿಂದರೆ ಬೇರೆ ಯಾರನ್ನೂ ಹೀಯಾಳಿಸುವುದು ತಪ್ಪುತ್ತದೆ ಎಂಬ ತತ್ವ ಚಿಂತನೆಯಲ್ಲಿದ್ದ ನಾನು ಚನ್ನಾಗಿಯೆ ಆ ಮಾಂಸದ ಅಡುಗೆಯನ್ನು ಚಪ್ಪರಿಸಿದೆ. ನಾನು ಮೈಸೂರಿಗೆ ಹಿಂದಿರುಗಿದೆ. ನನ್ನ ಈ ರುಚಿಯ ಬಗ್ಗೆ ಹಿರಿಯರಾದ ಒಕ್ಕಲಿಗರೊಬ್ಬರಲ್ಲಿ ಹೇಳಿದೆ. 'ಅಯ್ಯೊ, ಬೇರೆಲ್ಲೂ ಹೊರಗೆ ಹೇಳಬೇಡಪ್ಪ' 'ಈ ಮಾತು ಕೇಳಿದರೆ ಒಕ್ಕಲಿಗರು ನಿನಗೆ ಹೆಣ್ಣು ಕೊಡುವುದಿಲ್ಲ' ಅಂದರು. 'ಏನ್ ಸಾರ್ ಒಕ್ಕಲಿಗರ ಹೆಣ್ಣಿನಲ್ಲಿ ಸುರಿಯುತ್ತಾ' ಅಂದೆ.

ನನಗೆ ಜ್ಞಾಪಕದಲ್ಲಿದೆ. ನಾನು ಹುಡುಗನಾಗಿದ್ದಾಗ ಕೋಲು ಕಲಿಯಲು ಹೋಗುತ್ತಿದ್ದೆ. ಆಗ ಶಕ್ತಿ ಸಾಲದ ಹುಡುಗರಿಗೆ ಕಲಿಕೆ ಮತ್ತು ತಮಾಷೆಗಾಗಿ:

ಕೊಮ್ಮೆ ಸೊಪ್ಪು ಕೋಣನ ಬಾಡು
ಹುಯ್ಲ ಹುಡ್ಗ ಜಟ್ಟಿಯ
ಜಟ್ಟ್ಯರಪ್ಪ ಪಟ್ಟುಕೋದ
ಹೊಡಿಲ ಹುಡ್ಗ ಜಟ್ಟಿಯ

ಎಂದು ಹೇಳಿಕೊಡುತ್ತಿದ್ದರು. 'ಜಟ್ಟಿ ಹುಯ್ಯಿ, ಜಟ್ಟಿ ಹೊಡಿ, ಎಂದರೆ ಕುಸ್ತಿ ಮಾಡು ಅಂತ. ಆ ಕೆಲಸಕ್ಕೆ ಶಕ್ತಿ ಬರಲು ಕೊಮ್ಮೆ ಸೊಪ್ಪು ಮತ್ತು ಕೋಣನ ಬಾಡು ತಿನ್ನು ಎಂದು ಅರ್ಥ. ನನಗೆ ಈ ಎರಡೂ ಆಹಾರಗಳ ಸಾಮರ್ಥ್ಯ ಗೊತ್ತಾದುದು ನಾನು ಮಾನಸಗಂಗೋತ್ರಿಯಲ್ಲಿ ಮೇಸ್ಟ್ರಾಗಿ ಸೇರಿದಾಗ. ಕೊಮ್ಮೆ ಸೊಪ್ಪು ಎಷ್ಟು ಪುಷ್ಟಿದಾಯಕ ಎಂಬುದನ್ನು ಆಯುರ್ವೇದ ವೈದರನ್ನು ಕೇಳಿದರೆ ಗೊತ್ತಾಗುತ್ತದೆ. ನಾನು ಕೋಣನ ಬಾಡಿನ ಬಗ್ಗೆ ಔಷಧಿ ವೈದ್ಯರಲ್ಲಿ ಕೇಳಿದೆ. ಅವರು ಅದರಲ್ಲಿ ಪೆನ್ಸಿಲಿನ್ ಔಷಧ ಗುಣವಿದೆ ಎಂದು ಹೇಳಿದರು. ನನಗೆ ಆಶ್ಚರ್ಯ ಮತ್ತು ಸಂತೋಷ ಎರಡೂ ಆಯಿತು. ಮೈಸೂರು ಜಿಲ್ಲೆಯ ಕೆಲವೆಡೆ ಬಹಳಕಾಲದಿಂದ ದಲಿತರಿಗೆ ಕೋಣನ ಬಾಡೇ ಗತಿಯಾಗಿತ್ತಂತೆ! ಪಾಪ, ಇತರರು ಹತ್ತಿರಕ್ಕೆ ಸೇರಿಸದಿದ್ದ ಈ ಜನರ ಆರೋಗ್ಯವನ್ನು ಕೋಣನ ಮಾಂಸ, ರಕ್ಷಿಸಿಕೊಂಡು ಬಂದಿತಲ್ಲ; 'ಅನಾದ್ರಿಗೆ ಆಕಾಶವೆ ಕವಲು' ಅಂತ ಒಂದು ಗಾದೆ ಹೇಳುತ್ತದೆ.

(ಮುಂದುವರೆಯುವುದು) □

ಕನ್ನಡಕ್ಕೆ
"ಶಾಸ್ತ್ರೀಯ ಭಾಷೆ"
ಸ್ಥಾನಮಾನ

ಇದಕ್ಕಾಗಿ ಹೋರಾಡಿದ
ಸಮಸ್ತ ಕನ್ನಡಿಗರಿಗೆ
ವಂದನೆ, ಅಭಿನಂದನೆ

ಕರ್ನಾಟಕ–ಸುಂದರ ನದಿವನಗಳ ನಾಡು. ಕಲೆ ಸಂಸ್ಕೃತಿಗಳ ಬೀಡು. ಕವಿಗಳು, ವಚನಕಾರರು, ದಾಸಶ್ರೇಷ್ಠರುಗಳ ನೆಲೆವೀಡು. ವೀರ ವನಿತೆಯರ ಪುಣ್ಯಭೂಮಿ. ಮಾದರಿ ಆಡಳಿತದ ಮಾರ್ಗದರ್ಶಿ ರಾಜ್ಯ. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದ ತವರೂರು. ಕರ್ನಾಟಕದ ರಾಜಧಾನಿ ಬೆಂಗಳೂರು ವಿಶ್ವವಿಖ್ಯಾತಿಯ ನಗರ. ಇಂತಹ ಭವ್ಯ ಪರಂಪರೆ, ಹಿನ್ನಲೆಯ ಭದ್ರ ಬುನಾದಿಯ ಮೇಲೆ

ಸಮೃದ್ಧ ಕರ್ನಾಟಕವನ್ನು ಕಟ್ಟುವ ಸಂಕಲ್ಪ ನಮ್ಮದು

<u>ನಾಡು ನುಡಿಗೆ ವಿಶೇಷ ಕಾರ್ಯಕ್ರಮಗಳು</u>

* ಬೆಂಗಳೂರಿನಲ್ಲಿ ವರನಟ ಡಾ : ರಾಜ್‌ಕುಮಾರ್ ಸ್ಮಾರಕ ನಿರ್ಮಾಣಕ್ಕೆ ೮ ಕೋಟಿ ರೂ.
* ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನಕ್ಕಾಗಿ ೨೫ ಕೋಟಿ ರೂ.
* ರಾಜ್ಯದ ಗಡಿಜಿಲ್ಲೆಗಳಲ್ಲಿ ೪ ಸುವರ್ಣ ಕರ್ನಾಟಕ ಭವನಗಳ ನಿರ್ಮಾಣಕ್ಕೆ ೫ ಕೋಟಿ ರೂ.
* ರಾಜ್ಯ ಮಟ್ಟದಲ್ಲಿ ಪ್ರಪ್ರಥಮ ಬಾರಿಗೆ ಸಂತಕವಿ ಕನಕದಾಸರ ಜಯಂತಿ ಆಚರಣೆ. ಕನಕ ಜಯಂತಿಗೆ ಸಾರ್ವತ್ರಿಕ ರಜೆ. ಕನಕದಾಸರ ಜನ್ಮಸ್ಥಳ "ಬಾಡ" ಅಭಿವೃದ್ಧಿಗೆ ೧ ಕೋಟಿ ರೂ.
* ಕನ್ನಡದ ಮೇರು ಕೃತಿಗಳು ಮತ್ತು ಡಾ: ಬಿ.ಆರ್. ಅಂಬೇಡ್ಕರ್ ಕೃತಿಗಳ ಪುನರ್ ಮುದ್ರಣ.
* ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಸಂಶೋಧನಾ ಕೇಂದ್ರ, ಶಿವಯೋಗಿ ಶಿಶುನಾಳ ಷರೀಫರ ಸಮಾಧಿ ಮತ್ತು ಸಂಗೊಳ್ಳಿ ರಾಯಣ್ಣ ಜನ್ಮಸ್ಥಳ ಅಭಿವೃದ್ಧಿಗೆ ತಲಾ ೧ ಕೋಟಿ ರೂ.
* ಅಲ್ಲಮಪ್ರಭು ಸಾಹಿತ್ಯ ಸಂಶೋಧನಾ ಕೇಂದ್ರ ಸ್ಥಾಪನೆ.
* ಮೈಸೂರಿನಲ್ಲಿ ಸ್ವಾಮಿ ವಿವೇಕಾನಂದರ ಭೇಟಿ ನೆನಪಿಗೆ ಸಾಂಸ್ಕೃತಿಕ ಯುವ ಕೇಂದ್ರ ಸ್ಥಾಪನೆಗೆ ೫ ಕೋಟಿ ರೂ.
* ಹಂಪಿ ಉತ್ಸವ, ಕಿತ್ತೂರು ಉತ್ಸವ, ಕದಂಬ ಉತ್ಸವ, ಕರಾವಳಿ ಉತ್ಸವ ಇತ್ಯಾದಿ ಸಾಂಸ್ಕೃತಿಕ ಉತ್ಸವಗಳ ಮೂಲಕ ನಾಡಿನಾದ್ಯಂತ ಕಲೆ ಸಂಸ್ಕೃತಿಗಳ ಪುನರುಜ್ಜೀವನಕ್ಕೆ ಪ್ರೋತ್ಸಾಹ
* ರಾಜ್ಯೋತ್ಸವ ಪ್ರಶಸ್ತಿ ವಿಜೇತರಿಗೆ ಪ್ರಪ್ರಥಮಬಾರಿಗೆ ೧ ಲಕ್ಷ ರೂ. ನಗದು ಬಹುಮಾನ
* ಅನಿವಾಸಿ ಕನ್ನಡಿಗರಿಗಾಗಿ "ಅನಿವಾಸಿ ಕನ್ನಡಿಗರ ಕೋಶ" ಸ್ಥಾಪನೆ

"ಅಭಿವೃದ್ಧಿಯೇ ಆಡಳಿತ ಮಂತ್ರ"

ಕಟ್ಟುವೆವು ನಾವು ಹೊಸ ನಾಡೊಂದನು

ಕರ್ನಾಟಕ ವಾರ್ತೆ
Karnataka Information

ಸಮಾಜವಾದಿಯೊಬ್ಬನ ಚದುರಿದ ಚಿಂತನೆಗಳು...

ಅರವತ್ತು ವರ್ಷಗಳ ಸಂವಿಧಾನ ತಳ ವರ್ಗಗಳಿಗೆ ಏನು ಮಾಡಿದೆ?

ಡಿ.ಎಸ್ ನಾಗಭೂಷಣ

ಸಂವಿಧಾನ ಮೂಡಿದ್ದು ಮುಖ್ಯವಾಗಿ ನಮ್ಮ ರಾಷ್ಟ್ರೀಯ ಚಳುವಳಿಯ (ಸ್ವಾತಂತ್ರ್ಯ ಹೋರಾಟದ) ಮೂಸೆಯಲ್ಲಿ ಹುಟ್ಟಿದ ಅಥವಾ ಗರಿಗಟ್ಟಿಕೊಂಡ ಆಶಯಗಳಿಗನುಗುಣವಾಗಿ. ಅದು ಭಾರತದ ಶತ ಶತಮಾನಗಳ ಜಡತ್ವವನ್ನು ಕಲಕಿದ, ಹೊಸ ಆದರ್ಶಗಳನ್ನು ಎತ್ತಿಹಿಡಿದ ಕಾಲ. ಹಾಗಾಗಿ ಆ ಆದರ್ಶಗಳೆಲ್ಲವೂ ನಮ್ಮ ಸಂವಿಧಾನದ ಪೀಠಿಕೆ, ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ವಗಳಲ್ಲಿ ಅಂತರ್ಗತವಾದವು. ಮುಖ್ಯವಾಗಿ ಸ್ವಾತಂತ್ರ್ಯ, ಸಮಾನತೆ-ಸಾಮಾಜಿಕ ನ್ಯಾಯ. ಇವು ಅನೇಕ ಐತಿಹಾಸಿಕ ಕಾರಣಗಳಿಂದಾಗಿ ಅಸಮಾನ ಸಮಾಜವಾಗಿ ಬೆಳೆದು ನಿಂತಿದ್ದ ಭಾರತೀಯ ಸಮಾಜಕ್ಕೆ ಅತ್ಯಗತ್ಯವಾಗಿದ್ದ ಚಿಕಿತ್ಸಾತ್ಮಕ ಮೌಲ್ಯಗಳೇ ಆಗಿದ್ದವು. ವಿಶೇಷವಾಗಿ ತಳ ವರ್ಗಗಳ ಹಿತ ರಕ್ಷಣೆಯ ದೃಷ್ಟಿಯಿಂದ, ಪರಮಾಧಿಕಾರವುಳ್ಳ ಪ್ರಜಾಪ್ರಭುತ್ವೀಯ ಗಣರಾಜ್ಯ ವ್ಯವಸ್ಥೆ ಈ ಮೌಲ್ಯಗಳಿಗೊಂದು ರಕ್ಷಣಾತ್ಮಕ ಚೌಕಟ್ಟನ್ನು ಒದಗಿಸಿತು.

ನಾನು ಸಂವಿಧಾನ ತಜ್ಞನೂ ಅಲ್ಲ, ತಳ ವರ್ಗಗಳ ಸ್ಥಿತಿ ಗತಿಗಳನ್ನು ಕುರಿತು ಕ್ಷೇತ್ರಾಧ್ಯಯನ ಮಾಡಿದ ಸಂಶೋಧಕನೂ ಅಲ್ಲ. ಆದರೆ ಕಳೆದ ಮುವ್ವತ್ತು-ಮುವ್ವತ್ತೈದು ವರ್ಷಗಳಿಂದ ಸಮಾಜವಾದಿ ತತ್ವ ಮತ್ತು ಆದರ್ಶಗಳಲ್ಲಿ ನಂಬಿಕೆಯಿಟ್ಟು ಕೆಲವು ಜನಪರ ಆಂದೋಲನಗಳೊಂದಿಗೆ ಸಂಪರ್ಕವಿಟ್ಟುಕೊಂಡು ಬಂದವನು. ಅವುಗಳ ಏಳು-ಬೀಳುಗಳನ್ನು ಹತ್ತಿರದಿಂದ ನೋಡಿದವನು ಮತ್ತು ಆ ಬಗ್ಗೆ ಚಿಂತಿಸಿದವನು. ಇವಿಷ್ಟೇ ಅರ್ಹತೆಗಳ ಆಧಾರದ ಮೇಲೆ ಈ ಕೆಲವು ಟಿಪ್ಪಣಿಗಳನ್ನು ನಾನಿಲ್ಲಿ ದಾಖಲಿಸುತ್ತಿದ್ದೇನೆ:

1. ಸಂವಿಧಾನ ಮೂಡಿದ್ದು ಮುಖ್ಯವಾಗಿ ನಮ್ಮ ರಾಷ್ಟ್ರೀಯ ಚಳುವಳಿಯ(ಸ್ವಾತಂತ್ರ್ಯ ಹೋರಾಟದ) ಮೂಸೆಯಲ್ಲಿ ಹುಟ್ಟಿದ ಅಥವಾ ಗರಿಗಟ್ಟಿಕೊಂಡ ಆಶಯಗಳಿಗನುಗುಣವಾಗಿ. ಅದು ಭಾರತದ ಶತ ಶತಮಾನಗಳ ಜಡತ್ವವನ್ನು ಕಲಕಿದ, ಹೊಸ ಆದರ್ಶಗಳನ್ನು ಎತ್ತಿಹಿಡಿದ ಕಾಲ. ಹಾಗಾಗಿ ಆ ಆದರ್ಶಗಳೆಲ್ಲವೂ ನಮ್ಮ ಸಂವಿಧಾನದ ಪೀಠಿಕೆ, ಮೂಲಭೂತ ಹಕ್ಕುಗಳು – ರಾಜ್ಯ ನಿರ್ದೇಶಕ ತತ್ವಗಳಲ್ಲಿ ಅಂತರ್ಗತವಾದವು. ಮುಖ್ಯವಾಗಿ ಸ್ವಾತಂತ್ರ್ಯ, ಸಮಾನತೆ-ಸಾಮಾಜಿಕ ನ್ಯಾಯ. ಇವು ಅನೇಕ ಐತಿಹಾಸಿಕ ಕಾರಣಗಳಿಂದಾಗಿ ಅಸಮಾನ ಸಮಾಜವಾಗಿ ಬೆಳೆದು ನಿಂತಿದ್ದ ಭಾರತೀಯ ಸಮಾಜಕ್ಕೆ ಅತ್ಯಗತ್ಯವಾಗಿದ್ದ ಚಿಕಿತ್ಸಾತ್ಮಕ ಮೌಲ್ಯಗಳೇ ಆಗಿದ್ದವು. ವಿಶೇಷವಾಗಿ ತಳವರ್ಗಗಳ ಹಿತ ರಕ್ಷಣೆಯ ದೃಷ್ಟಿಯಿಂದ, ಪರಮಾಧಿಕಾರವುಳ್ಳ ಪ್ರಜಾಪ್ರಭುತ್ವೀಯ ಗಣರಾಜ್ಯ ವ್ಯವಸ್ಥೆ ಈ ಮೌಲ್ಯಗಳಿಗೊಂದು ರಕ್ಷಣಾತ್ಮಕ ಚೌಕಟ್ಟನ ಒದಗಿಸಿತು.

ಸಂವಿಧಾನದ ಪ್ರಕಾರ ತಳವರ್ಗಗಳು ಎಂದರೆ, ವಂಚಿತ ವರ್ಗಗಳು-ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದು,

ಈ ರಾಜ್ಯವ್ಯವಸ್ಥೆಯ ನಿರ್ವಹಣೆಯಲ್ಲಿ ಸಮಾನ ಪಾಲುದಾರರಾಗಿ ಭಾಗವಹಿಸಲಾಗದ; ಹಾಗಾಗಿ ವಿಶೇಷ ಪ್ರೋತ್ಸಾಹಕ ಕ್ರಮಗಳ ಅಗತ್ಯವಿರುವ ವರ್ಗಗಳು. ಸ್ಥೂಲವಾಗಿ ಹೇಳುವುದಾದರೆ, ಅಸ್ಪೃಶ್ಯ ಮತ್ತು ಇತರೆ ದಲಿತ ಜಾತಿಗಳು, ಆದಿವಾಸಿಗಳು ಮತ್ತು ಭಾರತ ಪಾರಂಪರಿಕವಾಗಿ ಪಾಲಿಸುತ್ತಾ ಬಂದಿದ್ದ ವರ್ಣ ವ್ಯವಸ್ಥೆಯಲ್ಲಿ ಅನ್ಯಾಯಕ್ಕೆ ಒಳಗಾದ ವರ್ಣಗಳ ವ್ಯಾಪ್ತಿಗೆ ಬರುವ ಜಾತಿಗಳು. ಈಗ ಈ ವರ್ಗಕ್ಕೆ ಶಾಸ್ತ್ರೀಯ ಅಧ್ಯಯನಗಳ ನೆಲೆಯಲ್ಲಿ ಮಹಿಳೆಯರು-ಧಾರ್ಮಿಕ ಅಲ್ಪಸಂಖ್ಯಾತರನ್ನೂ ಸೇರಿಸಲಾಗುತ್ತಿದೆಯಾದರೂ, ಅದರ ಸಮರ್ಥನೆಗೆ ಇನ್ನೂ ಸರ್ವಸಮ್ಮತವಾದ ಶಾಸ್ತ್ರೀಯ ಪರಿಕರಗಳೂ, ಸಾಂವಿಧಾನಿಕ ಮಾನ್ಯತೆಯೂ ದೊರಕಬೇಕಿದೆ.

ಅದೇನೇ ಇರಲಿ, ಆ ಹೊತ್ತಿಗೆ ಅತ್ಯಂತ ಶ್ರೇಷ್ಠ ಕಾನೂನು ತಜ್ಞರಾಗಿ, ಅದಕ್ಕಿಂತ ಹೆಚ್ಚಾಗಿ ತಳವರ್ಗಗಳ ಅಥೆಂಟಿಕ್ ಧ್ವನಿಯಾಗಿ ಮೂಡಿ ನಿಂತಿದ್ದ ಬಾಬಾ ಸಾಹೇಬ್ ಅಂಬೇಡ್ಕರ್, ಸಂವಿಧಾನ ಕರಡು ಸಿದ್ಧಪಡಿಸುವಲ್ಲಿ ಮುಂದಾಳತ್ವ ವಹಿಸಿದ್ದ ಕಾರಣದಿಂದಾಗಿ(ಇದು ಸಾಧ್ಯವಾದದ್ದೂ, ಮೇಲೆ ಹೇಳಿದ ರಾಷ್ಟ್ರೀಯ ಆಂದೋಲನದ ಆದರ್ಶಗಳ ವಾತಾವರಣ ದಿಂದಾಗಿಯೇ), ಆವರೆಗೆ ಸಾಮಾಜಿಕ ಭಾರತ ಯಾರ ಸುಪರ್ದಿಯಲ್ಲಿತ್ತೋ, ಅದನ್ನು ಆ ಪ್ರತಿಷ್ಠಿತ ವರ್ಗಗಳ ಕೈ ತಪ್ಪಿಸಿ ತಳವರ್ಗಗಳನ್ನು ರಾಜ್ಯಾಧಿಕಾರದ ಅವಿಭಾಜ್ಯ ಅಂಗವಾಗಿಸಿಕೊಂಡ ಸಂವಿಧಾನ ರೂಪಿತವಾಯಿತು.

ಇದರ ಪರಿಣಾಮವಾಗಿ ತಳ ವರ್ಗಗಳಿಗೆ ಕಾನೂನುಗಳಡಿ ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕ ನೆಲೆಗಳಲ್ಲಿ ವಿಶೇಷ ರಕ್ಷಣೆ ಮತ್ತು ಪ್ರೋತ್ಸಾಹ ದೊರಕಿತು. ಆದರೆ ಇದೇನೂ ಆಳದ ಸಾಮಾಜಿಕ ಸಮ್ಮತಿಯೊಂದಿಗೆ ಅನುಮೋದಿತವಾಯಿತೆಂದು ಹೇಳುವಹಾಗಿಲ್ಲ. ಏಕೆಂದರೆ, ರಾಷ್ಟ್ರ ಅತ್ಯಂತ ಪ್ರಗತಿಶೀಲ ಸಂವಿಧಾನವನ್ನು ಒಪ್ಪಿ ಕೊಂಡಿದ್ದರ ಉತ್ಸಾಹ ಮತ್ತು ಸಂಭ್ರಮಗಳಿಗೆ ತಣ್ಣೀರೆರಚುವಂತೆ, ಅಂಬೇಡ್ಕರರ ಅಪೇಕ್ಷೆಯಂತೆ-ಬಹು ಪಾಲು ರಾಷ್ಟ್ರ ಜೀವನವನ್ನು ಮಧ್ಯಯುಗೀನ ನಂಬಿಕೆ ಮತ್ತು ಕಟ್ಟುಪಾಡುಗಳಿಂದ ಮುಕ್ತಗೊಳಿಸಬಲ್ಲದಾಗಿದ್ದ-ಹಿಂದೂ ಕೋಡ್ ಬಿಲ್ ಪೂರ್ಣ ರೂಪದಲ್ಲಿ ಸಂಸತ್ತಿನಿಂದ ಅನುಮೋದನೆ ಪಡೆಯಲಾಗಲಿಲ್ಲ. ವಾಸ್ತವವೆಂದರೆ, ಮಸೂದೆಯ ಎರಡನೆಯ ಭಾಗವನ್ನು ಸಂಸತ್ತಿನ ಮುಂದೆ ಮಂಡಿಸಲೂ ಅವಕಾಶ ನೀಡಲಾಗಲಿಲ್ಲ.

ಇದಕ್ಕೆ ರಾಷ್ಟ್ರೀಯ ಆಂದೋಲನದ ಪ್ರಗತಿ ಶೀಲತೆ ಮತ್ತು ಉದಾರವಾದಗಳ ಪ್ರತೀಕವೆಂದೇ ಬಿಂಬಿತವಾಗಿದ್ದ ಜವಹರಲಾಲ್ ನೆಹ್ರೂ ಅವರಿಂದಲೂ ಪೂರ್ಣ ಬೆಂಬಲ ಸಿಗದೆ, ಅಂಬೇಡ್ಕರರು ತಮ್ಮ ಕಾನೂನು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ಇದು ಭಾರತ ಒಂದು ಪ್ರಜಾಪ್ರಭುತ್ವವಾದಿ ಗಣರಾಜ್ಯವಾಗಿ ಅಷ್ಟೇನೂ ಭದ್ರವಾದ ಅಸ್ತಿವಾರ ಹಾಕಿಕೊಳ್ಳುವುದಕ್ಕೆ ಆಗಿನ್ನೂ ತಯಾರಾಗಿರಲಿಲ್ಲವೆಂಬುದನ್ನು ಸೂಚಿಸುತ್ತದಷ್ಟೆ.

ಈ ಮಾತನ್ನು ಹೇಳುವ ಸಂದರ್ಭದಲ್ಲೇ ತೀರ್ಥಹಳ್ಳಿಯ ಸಮಾಜವಾದಿ ನಾಯಕ ದಿ॥ ಜಿ. ಸದಾಶಿವ ರಾಯರು ಕಳೆದ ಶತಮಾನದ ಐವತ್ತರ ದಶಕದಲ್ಲಿ ತಳ ವರ್ಗಗಳ ಗೇಣಿದಾರರ ನಾಗರಿಕ ಹಕ್ಕುಗಳನ್ನು ಎತ್ತಿ ಹಿಡಿಯಲು ನಡೆದ ಕಾಗೋಡು ಸತ್ಯಾಗ್ರಹದ ಸಂಬಂಧವಾಗಿ ಆಡಿದ ಒಂದು ಅರ್ಥಪೂರ್ಣ ಮಾತನ್ನು ಉಲ್ಲೇಖಿ

ಸಬೇಕು. ನಮ್ಮ ಸ್ವಾತಂತ್ರ್ಯ ಹೋರಾಟ ಸರಿಯಾಗಿ ನಡೆದಿದ್ದರೆ, ಕಾಗೋಡು ಸತ್ಯಾಗ್ರಹದಂತಹ ಚಳುವಳಿಗಳ ಅಗತ್ಯ ಬೀಳುತ್ತಿರಲಿಲ್ಲ ಎಂಬುದು ಅವರ ಮಾತು. ಇದರ ಧ್ವನಿತಾರ್ಥ: 'ಹಿಂದ್ ಸ್ವರಾಜ್'ನಲ್ಲಿ ವ್ಯಕ್ತ ವಾಗುವ ಸಮಗ್ರ ಕ್ರಾಂತಿಕಾರಿ ಆಶಯದ ಹೊರತಾಗಿಯೂ, ಗಾಂಧೀಜಿ ನೇತೃತ್ವದ ಸ್ವಾತಂತ್ರ್ಯ ಹೋರಾಟ ಆತ್ಯಂತಿಕವಾಗಿ ಬಾಹ್ಯ ವಸಾಹತುಶಾಹಿ ವಿರುದ್ಧ ಹೋರಾಟವಾಯಿತೇ ಹೊರತು ಆಂತರಿಕ ವಸಾಹತುಶಾಹಿ ವಿರೋಧಿ ಹೋರಾಟವಾಗಿ ರೂಪಿತವಾಗಲಿಲ್ಲ. ಗಾಂಧೀಜಿಯ ಕೊಲೆ ರಾಷ್ಟ್ರೀಯ ಹೋರಾಟದ ಈ ಅಪೂರ್ಣತೆಯ ಹಿಂದಿದ್ದ ಕಾರಣಗಳೇನು ಎಂಬುದನ್ನು ವಿವರಿಸುತ್ತದಷ್ಟೆ.

ಈ ಅಪೂರ್ಣತೆಯನ್ನು ನೆಹರೂ ತಮ್ಮ ಜನಪ್ರಿಯತೆಯನ್ನು ಬಳಸಿಕೊಂಡು ಪೂರ್ಣಗೊಳಿಸಬಹುದಿತ್ತು. ಆದರೆ ಅವರು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಈ ಎಲ್ಲ ನೆಲೆಗಳಲ್ಲಿ ಸಮನ್ವಯದ ಸುಲಭ ಮಾರ್ಗ ಆರಿಸಿಕೊಂಡರು. ಅವರು ಭಾರತವನ್ನು ವೈವಿಧ್ಯತೆಯಲ್ಲಿನ ಏಕತೆಯ ಸುಂದರ ಪ್ರತೀಕ ಎಂದು ಬಣ್ಣಿಸಿದ್ದು, ಕೇವಲ ಸಾಂಸ್ಕೃತಿಕ ನೆಲೆಯಲ್ಲಿ ಎಂದು ಸರಳವಾಗಿ ತಿಳಿದವರಿಗೆ, ಭಾರತದಲ್ಲಿ ಸಂಸ್ಕೃತಿ ಎಂಬುದರ ಅರ್ಥ ಎಷ್ಟು ಆಳದವರೆಗೆ ಹಬ್ಬಿರುತ್ತದೆ ಎಂಬುದು ಗೊತ್ತಿಲ್ಲ ಎಂದು ಹೇಳಬೇಕಾಗುತ್ತದೆ. ಹಾಗಾಗಿಯೇ ನೆಹ್ರೂ ತಮ್ಮನ್ನು ಸಮಾಜವಾದಿ ಎಂದು ಬಣ್ಣಿಸಿಕೊಂಡರೂ, ಭಾರತವನ್ನು ಅದರ ತಳವರ್ಗಗಳ ಕಣ್ಣಲ್ಲಿ ಕಾಣುವ ಪ್ರಯತ್ನ ಮಾಡದೆ, ಪ್ರತಿಷ್ಠಿತ ವರ್ಗಗಳು ತಮ್ಮ ಉನ್ನತೀಕರಣಕ್ಕಾಗಿ ನಂಬಿದ್ದ 'ಅಭಿವೃದ್ಧಿ' ಕಲ್ಪನೆಗೆ ಜೋತುಬಿದ್ದರು. ಅದು ಸಾಧಿತವಾದರೆ ತಾನೇ ತಾನಾಗಿ ತಳ ವರ್ಗಗಳೂ ಉದ್ಧಾರವಾಗುವುವು ಎಂಬ ಆಧುನಿಕ 'ಅಭಿವೃದ್ಧಿ' ರಾಜಕಾರಣದ ಸ್ವಯಂಚಾಲಿತ ತರ್ಕಕ್ಕೆ ಅವರು ಮರುಳಾದರು. ಭಾರತದ ವರ್ಣ ವ್ಯವಸ್ಥೆ ಉಂಟು ಮಾಡಿದ್ದ ಆಳವಾದ ಸಾಮಾಜಿಕ ಒಡಕಿನ ಆಳ ನೆಹ್ರೂ ಅವರಂತಹ ಆಧುನಿಕರ ಮನಸ್ಸನ್ನೂ ಮಂಕುಗೊಳಿಸಿತ್ತು! ಅಥವಾ ಇದು ಅವರು ನಂಬಿದ ಆಧುನಿಕತೆಯೇ ಸೃಷ್ಟಿಸಿದ ಮಾಯೆಯೋ ಹೇಳಲಾಗದು!

ಅವರು ತಳ ವರ್ಗಗಳ ಕಣ್ಣಿಂದ ಭಾರತವನ್ನು ನೋಡಿದ್ದರೆ, ಭಾರತ ವೈವಿಧ್ಯತೆಯಲ್ಲಿ ಒಂದಾಗಿಲ್ಲ, ಬದಲಿಗೆ ಒಡೆದು ಹೋಗಿದೆ ಎಂಬುದು ಕಾಣುತ್ತಿತ್ತು. ಈ ಒಡಕನ್ನು ಮುಚ್ಚುವುದೇ ನಿಜವಾಗಿ ರಾಷ್ಟ್ರ ಕಟ್ಟುವ ಕೆಲಸವಾಗಿದೆ ಮತ್ತು ಇದಕ್ಕಾಗಿ ಒಂದು ಹೊಸ (ಗಾಂಧೀಜಿ ಅಪೂರ್ಣವಾಗಿ ಉಳಿಸಿ ಹೋದ)ರಾಷ್ಟ್ರೀಯ ಆಂದೋಲನವನ್ನು ಆರಂಭಿಸಬೇಕಾಗಿದೆ ಎಂಬುದರ ಅರಿವಾಗುತ್ತಿತ್ತು. ಬಹುಶಃ, ಮೇಲೆ ಹೇಳಿದಂತೆ ಸಾರಾ ಸಗಟಾದ ಆಧುನಿಕತೆಯ ಪ್ರಭಾವದಿಂದಾಗಿ ಈ ಅರಿವು ಅವರಲ್ಲಿ ಮೂಡಲಿಲ್ಲ. ಈ ಕಾರಣದಿಂದಾಗಿಯೇ ಅವರು ಸಂವಿಧಾನದ ಆಶಯ ಮತ್ತು ನಿರ್ದೇಶಕ ತತ್ವಗಳನ್ನು ಬಳಸಿಕೊಂಡು, ಸ್ಥಾಪಿತ ಹಿತಾಸಕ್ತಿಗಳಾಗಿದ್ದ ಗುತ್ತೇದಾರಿ ಉದ್ಯಮಗಳ, ಜಮೀನ್ದಾರಿ ಪದ್ಧತಿಯ, ಜಾತಿ ವ್ಯವಸ್ಥೆಯ ಮತ್ತು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳ ಅಡಿಗಲ್ಲುಗಳನ್ನು ಅಲ್ಲಾಡಿಸುವ ಕೆಲಸಕ್ಕೆ ಕೈಹಾಕಲಿಲ್ಲ. ತಳ ವರ್ಗಗಳ ಉತ್ಪಾದನಾ ತಂತ್ರ ಮತ್ತು ದಕ್ಷತೆಗಳನ್ನು ಹೆಚ್ಚಿಸುವ ಕಾರ್ಯಕ್ರಮಗಳ ಬಗ್ಗೆ ಯೋಚಿಸಲಾಗಲಿಲ್ಲ. ಅವರು ಭಾರತವನ್ನು ಅದಿದ್ದಂತೆ ಅಭಿವೃದ್ಧಿಗೊಳಿಸಲು ಯತ್ನಿಸಿದರಷ್ಟೆ, ತಳವರ್ಗಗಳೂ ಈ ಪ್ರಕ್ರಿಯೆಯ ಸಹಜ ಫಲಾನುಭವಿಗಳಾಗುತ್ತಾರೆ ಎಂದವರು

ದಲಿತ ಮತ್ತು ಶೂದ್ರ ಶಕ್ತಿಗಳು ನೆಹ್ರೂ ಪ್ರಣೀತ ರಾಜಕೀಯ ಚೌಕಟ್ಟನ್ನು ಬೇಧಿಸಿ ತಮ್ಮದೇ ವಿಶಿಷ್ಟ ರೂಪಗಳಲ್ಲಿ ಮತ್ತು ವೇದಿಕೆಗಳಲ್ಲಿ ತಮ್ಮದೇ ಪ್ರಣಾಳಿಕೆಗಳೊಂದಿಗೆ ಸಂಘಟನೆಗೊಳ್ಳಲಾರಂಭಿಸಿದ್ದು ಆಗಲೇ. ಇದರ ಫಲವಾಗಿ ಅಂಬೇಡ್ಕರ್, ಲೋಹಿಯಾ ಮತ್ತು ಮಾರ್ಕ್ಸ್‌ರ ಸಿದ್ಧ ತಾತ್ವಿಕ ಎರಕಗಳು ಕರಗಿ; ಅವುಗಳ ಪರಸ್ಪರ ಅನುಸಂಧಾನದಲ್ಲಿ, ಗಾಂಧಿ ಹೊಸ ರೂಪ ಮತ್ತು ಶಕ್ತಿಗಳೊಂದಿಗೆ ಹೊಮ್ಮಿದಂತೆ ಕಂಡ ಹೊಸ ಸಂಘಟನಾ ಮಾದರಿಗಳು ಸೃಷ್ಟಿಯಾದವು.

ಪ್ರಾಮಾಣಿಕವಾಗಿ ನಂಬಿದಂತೆ ತೋರುತ್ತದೆ.

ಅಭಿವೃದ್ಧಿ ಎಂಬ ಹೊಸ ಕಲ್ಪನೆಗೆ ಮರುಳಾಗಿದ್ದ ಜನಸ್ತೋಮವೂ, ಇಂತಹ 'ಅಭಿವೃದ್ಧಿ'ಯ ವಿರುದ್ಧ ದನಿ ಎತ್ತಿದ ಲೋಹಿಯಾ ಮತ್ತು ಅವರ ಸಮಾಜವಾದಿ ಗೆಳೆಯರ ಮಾತನ್ನು ಆಲಿಸುವ ಮನಃಸ್ಥಿತಿಯಲ್ಲಿರಲಿಲ್ಲ. ಅಥವಾ ಅವರು ಆಲಿಸುವ ರೀತಿಯಲ್ಲಿ–ಅಗತ್ಯ ವ್ಯವಧಾನದಲ್ಲಿ–ಇವರು ಹೇಳಲಿಲ್ಲ. ಹೀಗಾಗಿ ವ್ಯವಸ್ಥೆಯಿಂದ ಎಂದೂ ಫಲಗಳನ್ನೇ ನಿರೀಕ್ಷಿಸದಿದ್ದ ತಳವರ್ಗಗಳಂತೂ, ಈ 'ಅಭಿವೃದ್ಧಿ ರಾಜಕಾರಣ'ದ ಮಂಕಿಗೆ ಒಳಗಾದವರಂತೆ ಈ ಅಭಿವೃದ್ಧಿಯ ಅಲ್ಪಸ್ವಲ್ಪವಾದ ಪರೋಕ್ಷ ಫಲಗಳಿಂದಲೇ ತೃಪ್ತರಾದರು. ಅಂಬೇಡ್ಕರ್ ಸುಸ್ತಾದವರಂತೆ ಬೌದ್ಧ ಧರ್ಮ ಸೇರಿ ಅಸ್ತಂಗತರಾದ ಮೇಲೆ ಸಂವಿಧಾನವು ತಳವರ್ಗಗಳ ಜಾಗೃತಿಯ ಕೈಪಿಡಿಯಾಗುವ ಪ್ರಕ್ರಿಯೆ ನಿಂತೇ ಹೋದಂತಾಗಿ, ಕೇವಲ ಒಂದು ಮೂಕ ದಾಖಲೆಯಾಯಿತು.

2. ಈ ನೆಹರೂ ಅಭಿವೃದ್ಧಿ ರಾಜಕಾರಣ ನೆಹರೂ ನಂತರವೂ ಮುಂದುವರೆಯಿತು. ಒಂದು ವ್ಯತ್ಯಾಸವೆಂದರೆ, ನೆಹ್ರೂ ನಂತರ ರಾಷ್ಟ್ರೀಯ ಆಂದೋಲನದ ಆದರ್ಶಗಳನ್ನು ಕುರಿತ ಗೌರವದ ಔಪಚಾರಿಕತೆಯೂ ಮಾಯವಾಯಿತು. ಇದರ ಪರಿಣಾಮವಾಗಿ, ಅಭಿವೃದ್ಧಿ ಎಂಬುದು ಅಧಿಕಾರವನ್ನು ಓಲೈಸುವವರಿಗೆ ರೊಟ್ಟಿ ಹಂಚುವ ಕೆಲಸವಾಗಿ, 'ಕೊಡುವವರು' ಮತ್ತು 'ಪಡೆಯುವವರು' ಎಂಬೆರಡು ವರ್ಗಗಳನ್ನು ಸೃಷ್ಟಿಸಿ ರಾಜ್ಯವ್ಯವಸ್ಥೆಯನ್ನು ಒಡೆದು ಹಾಕಿತು. ನೆಹರೂ ಅವರ ಸಾಕಷ್ಟು ದೀರ್ಘ ಕಾಲದ ಅಭಿವೃದ್ಧಿ ರಾಜಕಾರಣವು ವಿರುದ್ಧ ಪರಿಣಾಮ ಬೀರಿ, ಎದ್ದು ಕಾಣುವಂತೆ ಸೃಷ್ಟಿಸಿದ್ದ ಉಳ್ಳವರು ಮತ್ತು ಇಲ್ಲದವರು ಎಂಬ ಸಾಮಾಜಿಕ ಒಡಕನ್ನು ಭಾವನಾತ್ಮಕವಾಗಿ ಬಳಸಿಕೊಳ್ಳುವ ಮೂಲಕ ಇದು ಸಾಧ್ಯವಾಗಿತ್ತು. ಆದರೆ ಈ ರಾಜಕಾರಣ ಆ ಹೊತ್ತಿಗೆ ರಾಜ್ಯ ವ್ಯವಸ್ಥೆಯ ಬಂಡವಾಳವನ್ನೇ ದಿವಾಳಿ ಎಬ್ಬಿಸಿ, 'ಪಡೆಯಲು' ಕಾತುರರಾಗಿದ್ದವರಿಗೆ 'ಕೊಡಲು' ಏನೂ ಉಳಿಯದಂತಹ ಸ್ಥಿತಿಗೆ ಅದನ್ನು ತಲುಪಿಸಿತ್ತು. ಇದರಿಂದಾಗಿ, ರಾಜ್ಯ ವ್ಯವಸ್ಥೆಯೇ ಬಿರುಕು ಬಿಡತೊಡಗಿ, ಆಳದ ಸಾಂವಿಧಾನಿಕ ಬಿಕ್ಕಟ್ಟು ಸೃಷ್ಟಿಯಾಯಿತು. ಅದೇ, ಐತಿಹಾಸಿಕ ತುರ್ತು ಪರಿಸ್ಥಿತಿಗೆ ನಿಜವಾದ ಕಾರಣವೂ ಆಗಿ, ಸಂವಿಧಾನ ಮೊದಲ ಬಾರಿಗೆ ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಸಂಕಥನದ ಕೇಂದ್ರಕ್ಕೆ ಬರುವಂತಾಯಿತು. ಸಂವಿಧಾನದ ದುರ್ಬಳಕೆ ಮತ್ತು ಸದ್ಬಳಕೆಗಳನ್ನು ಕುರಿತ ಆಳವಾದ ಚರ್ಚೆಗಳು ಆರಂಭವಾದವು.

ಅವರೆಗೆ ಸಂವಿಧಾನವು, ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದ ಹಲವು ಮೊಕದ್ದಮೆಗಳ ಮೂಲಕ ಉಳ್ಳವರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವ ಸಾಧನದಂತಷ್ಟೇ ಪ್ರತಿಬಿಂಬಿತವಾಗಿತ್ತು. ಆದರೆ ಈಗ ಜೆಪಿ ಚಳುವಳಿಯ–ಈ ಸಂದರ್ಭದಲ್ಲಿ ಸಂವಿಧಾನ ಕುರಿತ ನಡೆದ ವ್ಯಾಪಕ ಚರ್ಚೆಯ ಪರಿಣಾಮವಾಗಿ, ಅದಕ್ಕೆ ಜನಸಾಮಾನ್ಯರ, ವಿಶೇಷವಾಗಿ ತಳ ವರ್ಗಗಳ ಹಕ್ಕು ಬಾಧ್ಯತೆಗಳ ಪರವಾದ ಇನ್ನೊಂದು ಮುಖವಿದೆ ಎಂಬುದೂ ಸಾರ್ವಜನಿಕರ ಗಮನಕ್ಕೆ ಬಂತು. ನಿಜ, ಈ ಸಂದರ್ಭದಲ್ಲೂ ತಳ ವರ್ಗಗಳು, ಸಂವಿಧಾನವೇ ನಿರೂಪಿಸಿದ್ದಂತಹ ವಿಶಿಷ್ಟ ವರ್ಗಗಳ ರೂಪದಲ್ಲಿ ತಮ್ಮ ಹಕ್ಕುಬಾಧ್ಯತೆಗಳಿಗಾಗಿ ವಿಶೇಷ ಹೋರಾಟಗಳಿಗೆ ಮುಂದಾಗಲಿಲ್ಲ. ಹೆಚ್ಚೆಂದರೆ ಅವುಗಳಿಂದ, ಮನವಿ, ವಶೀಲಿಬಾಜಿ ರಾಜಕಾರಣವಷ್ಟೇ ನಡೆದಿತ್ತು.

ಆದರೆ ಜೆಪಿ ಚಳುವಳಿ, ತಾನು ನಂಬಿದ್ದ ತುಕ್ಕು ಹಿಡಿದ ಗಾಂಧೀವಾದವನ್ನು ನವೀಕರಿಸಿ ಕ್ರಾಂತಿಕಾರಿ ಸಾಧನವನ್ನಾಗಿ ಮಾಡುವ ಕ್ರಿಯಾಶೀಲತೆ ಇಲ್ಲದ್ದರಿಂದಾಗಿ ಮತ್ತು ತನ್ನ ಆಂತರಿಕ ವಿರೋಧಾಭಾಸಗಳಿಂದಾಗಿ ಎಲ್ಲರ ನಿರೀಕ್ಷೆಗಳನ್ನು ಹುಸಿಗೊಳಿಸಿ ವಿಫಲವಾಯಿತು. ಆಗ ಮೊದಲ ಬಾರಿಗೆ ಈ ತಳವರ್ಗಗಳಲ್ಲಿ ತಾವು ಸಾರ್ವತ್ರಿಕ ಹೋರಾಟಗಳ ಸಂದರ್ಭದಲ್ಲಿ ಅವರೆಗೆ ವರ್ಗೀಕೃತವಾಗಿದ್ದ ಸಾರಾ ಸಗಟಾದ ದುಡಿಯುವ ವರ್ಗ ಎಂಬ ಸಾಮಾನ್ಯ ವರ್ಗಕ್ಕೆ ಸೇರಿದವರಲ್ಲ; ತಮಗೊಂದು ವಿಶಿಷ್ಟ ಐತಿಹಾಸಿಕ ಅನನ್ಯತೆ ಇದೆ, ಹಾಗಾಗಿ ವಿಶಿಷ್ಟ ಹೋರಾಟದ ಅಗತ್ಯವೂ ಇದೆ ಎಂಬ ನಿರ್ಣಾಯಕ ಅರಿವು ಮೂಡಿತು. ದಲಿತ ಮತ್ತು ಶೂದ್ರ ಶಕ್ತಿಗಳು ನೆಹ್ರೂ ಪ್ರಣೀತ ರಾಜಕೀಯ ಚೌಕಟ್ಟನ್ನು ಬೇಧಿಸಿ ತಮ್ಮದೇ ವಿಶಿಷ್ಟ ರೂಪಗಳಲ್ಲಿ ಮತ್ತು ವೇದಿಕೆಗಳಲ್ಲಿ ತಮ್ಮದೇ ಪ್ರಣಾಳಿಕೆಗಳೊಂದಿಗೆ ಸಂಘಟನೆಗೊಳ್ಳಲಾರಂಭಿಸಿದ್ದು ಆಗಲೇ.

ಇದರ ಫಲವಾಗಿ ಅಂಬೇಡ್ಕರ್, ಲೋಹಿಯಾ ಮತ್ತು ಮಾರ್ಕ್ಸ್‌ರ ಸಿದ್ಧ ತಾತ್ವಿಕ ಎರಕಗಳು ಕರಗಿ; ಅವುಗಳ ಪರಸ್ಪರ ಅನುಸಂಧಾನದಲ್ಲಿ, ಗಾಂಧಿ ಹೊಸ ರೂಪ ಮತ್ತು ಶಕ್ತಿಗಳೊಂದಿಗೆ ಹೊಮ್ಮಿದಂತೆ ಕಂಡ ಹೊಸ ಸಂಘಟನಾ ಮಾದರಿಗಳು ಸೃಷ್ಟಿಯಾದವು. ರಾಷ್ಟ್ರಾದ್ಯಂತ ಈ ಹಿಂದಿನಂತೆ ಬರೀ ಭಾವನಾತ್ಮಕ ನೆಲೆಯಲ್ಲಲ್ಲದೆ, ಸಂವಿಧಾನದ ಆಶಯ ಮತ್ತು ತತ್ವಗಳ ವ್ಯವಹಾರಿಕ ಅರಿವಿನೊಂದಿಗೆ ದಲಿತರ, ಆದಿವಾಸಿಗಳ, ಭೂರಹಿತ ಕೃಷಿ ಕೂಲಿ ಕಾರ್ಮಿಕರ, ವಿದ್ಯಾರ್ಥಿಗಳ, ಪರಿಸರವಾದಿಗಳ, ಮಾನವ ಹಕ್ಕುಗಳ ಸಂಘಟನೆಗಳು ಹಬ್ಬಿದ ಕಾಲವದು. ಉದಾಹರಣೆಗೆ ಕರ್ನಾಟಕದಲ್ಲಿ ಜಾತಿ ವಿರೋಧಿ, ದಲಿತ, ರೈತ, ಕನ್ನಡಪರ, ಸ್ತ್ರೀಪರ – ಪರಿಸರಪರ ಸಂಘಟನೆಗಳು ಹುಟ್ಟಿದ್ದವು. ದೇವರಾಜ ಅರಸರ ಉಜ್ವಲವೆನಿಸುವ ಜನಪರ ಆಡಳಿತದ ಸಮಯದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ, ಭೂಸುಧಾರಣೆ, ಜೀತ ಪದ್ಧತಿ ಬಹಿಷ್ಕಾರ ಇತ್ಯಾದಿ–ಸಂವಿಧಾನದ ಬಲದ ಅರಿವಿನಿಂದ ಜಾರಿಯಾದ ತಳ ವರ್ಗಗಳ ಪರವಾದ–ಕಾರ್ಯಕ್ರಮಗಳು, ಇಂತಹ

ಕಾಟಕ್ಕೆ ಪೂರ್ವಪೀಠಿಕೆ ಬರೆದುವೆಂದೇ ಹೇಳಬೇಕು.

ಈ ಎಲ್ಲ ಸಂಘಟನೆಗಳಲ್ಲಿ ಸಂವಿಧಾನದ ಬಗ್ಗೆ ವಿಶೇಷ ತಿಳುವಳಿಕೆ ಇದ್ದ ವಕೀಲರೋ, ಕಾನೂನು ಅಧ್ಯಾಪಕರೋ-ಕೆಲವೊಮ್ಮೆ ಅವುಗಳ ನೇತೃತ್ವ ವಹಿಸಿ-ಇರಲಾರಂಭಿಸಿದರು ಎಂಬುದು ಇಲ್ಲಿ ಗಮನಾರ್ಹ. ಹಾಗಾಗಿಯೇ ಈ ಸಂಘಟನೆಗಳು ತಮ್ಮ ಹೋರಾಟಗಳನ್ನು ಹಲವು ಬಾರಿ ಬೀದಿ ಮಾತ್ರಗಳಲ್ಲಲ್ಲದೆ, ನ್ಯಾಯಾಲಯಗಳವರೆಗೂ ತೆಗೆದುಕೊಂಡು ಹೋಗಬೇಕಾಯಿತು. ಒಟ್ಟಿನಲ್ಲಿ ಇದು ಎಲ್ಲ ಸಂಘಟನೆಗಳು ಮತ್ತು ಅವುಗಳ ಹೋರಾಟಗಳು ಸಂವಿಧಾನದಲ್ಲಿ ತಮ್ಮ ಪರವಾದ ಬಲಕಂಡುಕೊಂಡ ಕಾಲ ಎಂದು ಹೇಳಬಹುದು. ಸಂವಿಧಾನದ ಪರಿಭಾಷೆಯಲ್ಲಿ ಹೇಳುವುದಾದರೆ, ಇದು ತಳ ವರ್ಗಗಳ ಪಾಲಿಗೆ ಎಲ್ಲ ಕಾಲಕ್ಕೂ ರಕ್ಷಣೆ ಒದಗಿಸಬಲ್ಲ ಪ್ರಜಾಪ್ರಭುತ್ವದ ಜೊತೆಗೆ ಇರಬೇಕಾದ ಗಣರಾಜ್ಯತ್ವದ ಮಹತ್ವವನ್ನು ಕಂಡುಕೊಂಡ, ಅದರ ಅರ್ಥವನ್ನು ಅನ್ವೇಷಿಸಿಕೊಂಡ; ಹಾಗೇ ಅದನ್ನು ಬಲಪಡಿಸಲು ಪರೋಕ್ಷವಾಗಿ ನಡೆದ ಹೋರಾಟಗಳ ಕಾಲವೂ ಹೌದು.

3. ಆದರೆ ಈ ಎಲ್ಲ ಹೋರಾಟಗಳೂ ಬಿಡಿ ಬಿಡಿಯಾದ ಬೇಡಿಕೆಗಳನ್ನು ಆಧರಿಸಿದ ಹೋರಾಟಗಳಾಗಿದ್ದುದರಿಂದ

ಅನತಿ ಕಾಲದಲ್ಲೇ ತಮ್ಮ ದೃಷ್ಟಿಕೇಂದ್ರವನ್ನೇ ಕಳೆದುಕೊಂಡು ಬಿಡಾಡಿಯಾದವು. ಹಾಗಾಗಿ ಆ ಹೋರಾಟಗಳು ರಾಷ್ಟ್ರವನ್ನು, ಸಮಾಜವನ್ನು ಇಡಿಯಾಗಿ ನೋಡಿ, ಅಭಿವೃದ್ಧಿಯ ಸ್ವರೂಪ, ಗತಿ ಮತ್ತು ಆದ್ಯತೆಗಳನ್ನು ಬದಲಿಸುವಂತೆ ರಾಜ್ಯವ್ಯವಸ್ಥೆಯ ಮೇಲೆ ಒತ್ತಡ ಹೇರುವಂತಹ ಸುಸ್ಥಿರ ಮತ್ತು ಸಂಘಟಿತ ಪರಿಣಾಮವನ್ನು ಸೃಷ್ಟಿಸಲಾಗಲಿಲ್ಲ. ಆದರೆ ಇದರಿಂದಾಗಿ ದಿವಾಳಿಯ ಅಂಚಿನಲ್ಲಿದ್ದ ರಾಜ್ಯ ವ್ಯವಸ್ಥೆ, ನಿಲ್ಲದ ಈ ಬಿಡಾಡಿ ಹೋರಾಟಗಳ ಕೋಲಾಹಲವನ್ನು ಹತ್ತಿಕ್ಕಲಾಗದ ಮತ್ತು ಅವುಗಳ ಬೇಡಿಕೆಗಳನ್ನು ಪೂರೈಸಲಾಗದ ಒತ್ತಡಕ್ಕೆ ಸಿಕ್ಕಿದ್ದಂತೂ ನಿಜ. ಆಗ ಅದು, ತಾನು(ಅಂದರೆ ಅದರ ಹಿಂದಿದ್ದ ಸ್ಥಾಪಿತ ಹಿತಾಸಕ್ತಿಗಳು) ಉಳಿದುಕೊಳ್ಳಲು ಸಮಯ ನೋಡಿ, ತನ್ನ ನೆಹ್ರೂ ಮಾದರಿಯ ಸಮಾಜವಾದಿ ರಾಜಕಾರಣವನ್ನು ಸಂಪೂರ್ಣವಾಗಿ ತೊರೆಯಿತು.

ಬಹು ಜಾಣತನದಿಂದ ಮಾರುಕಟ್ಟೆ ಆಧಾರಿತ ಮುಕ್ತ ಬಂಡವಾಳಶಾಹಿ ರಾಜಕಾರಣದ ಮಾರ್ಗ ಹಿಡಿಯಿತು. ಇದರ ಹಿಂದೆ ಕೆಲಸ ಮಾಡಿದ ಜಾಗತಿಕ ರಾಜಕಾರಣವನ್ನು ನಾನಿಲ್ಲಿ ಚರ್ಚಿಸಲು ಹೋಗುವುದಿಲ್ಲ. ಇದು ಅದಕ್ಕೆ ಸೂಕ್ತ ವೇದಿಕೆಯೂ ಅಲ್ಲ. ಆದರೆ ಜನಾದೇಶವಿಲ್ಲದ ಈ ಬದಲಾವಣೆ ನಮ್ಮ ಸಂವಿಧಾನದ ಆಶಯ ಮತ್ತು ತತ್ವಗಳಿಗೆ ದ್ರೋಹ ಬಗೆದಿಲ್ಲವೇ ಎಂಬ ಪ್ರಶ್ನೆಯನ್ನು ಯಾರೂ-ನ್ಯಾಯಾಂಗವೂ ಸೇರಿದಂತೆ-ಕೇಳಲಾಗದಷ್ಟು 'ಪ್ರಯೋಜನ'ಗಳನ್ನು ಕೇಳಬಲ್ಲವರಿಗೆ ತಕ್ಷಣವೇ ಒದಗಿಸಿಕೊಟ್ಟದ್ದಂತೂ ನಿಜ. ಅಷ್ಟೇ ನಿಜ, ಇದರಲ್ಲಿ ತಳ ವರ್ಗಗಳ ರಾಜಕೀಯ – ಬೌದ್ಧಿಕ ನಾಯಕ ತ್ವವೂ ಒಂದು ಮಟ್ಟಕ್ಕಾದರೂ ಶಾಮೀಲಾಗಿದೆ ಎಂಬುದು. ಇದು ಪ್ರಸಕ್ತ ಚರ್ಚೆಯಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ.

ಮುಕ್ತ ಮಾರುಕಟ್ಟೆ ಆರ್ಥಿಕತೆ ಜಾರಿಗೆ ತಂದಿರುವ ಜಾಗತೀಕರಣ, ತಳ ವರ್ಗಗಳೇ ಹೆಚ್ಚಿರುವ ಬಡವರ ಸಂಖ್ಯೆಯನ್ನು ಹೆಚ್ಚಿಸಿದೆ. ಅಷ್ಟೇ ಅಲ್ಲ, ತಳ ವರ್ಗಗಳ ಮೇಲಿನ ದೌರ್ಜನ್ಯಗಳ ಸಂಖ್ಯೆಯ ಜೊತೆಗೆ; ವೈವಿಧ್ಯವನ್ನೂ ಹೆಚ್ಚಿಸಿದೆ. ಸರ್ಕಾರ ನಡೆಸಿದ ಸಮೀಕ್ಷೆಗಳೇ, ಮಾಧ್ಯಮಗಳ ಪ್ರತಿನಿತ್ಯದ ವರದಿಗಳೇ ಇದನ್ನು ಸಾರುತ್ತಿವೆ. ಆದರೂ ಇದರ ವಿರುದ್ಧ ತಳ ವರ್ಗಗಳು ಸಂಘಟಿತವಾಗುತ್ತಿಲ್ಲ. ಬದಲಿಗೆ ಜಾಗತೀಕರಣವೆಂಬುದು ಒಂದು ಅನಿವಾರ್ಯ ವಿದ್ಯಮಾನವೆಂದು ನಂಬಿ ಅದರೊಂದಿಗೆ 'ಹೊಂದಾಣಿಕೆ' ಮಾಡಿಕೊಳ್ಳುವ ಸುಲಭಮಾರ್ಗ ಹಿಡಿದಿವೆ.

ಇದಕ್ಕೆ ಮುಖ್ಯ ಕಾರಣ, ನೆಹ್ರೂ ಸಮಾಜವಾದಿ ರಾಜಕಾರಣ ತಮ್ಮಲ್ಲಿ ಹುಟ್ಟಿಸಿದ ಭಾರಿ ನಿರೀಕ್ಷೆಗಳು ಜಾಗತೀಕರಣದ ಮೂಲಕವಾದರೂ ಈಡೇರಿ ತಮಗೆ ಬಿಡುಗಡೆ ಸಿಗಬಹುದೆಂಬ ಆಸೆಯನ್ನು, ಅದು ಸೃಷ್ಟಿಸಿರುವ ಕಣ್ಣು ಕೋರೈಸುವಂತಹ ಸಮೃದ್ಧಿಯ ದ್ವೀಪಗಳು ಅವುಗಳಲ್ಲಿ ಹುಟ್ಟು ಹಾಕಿರುವುದು! ಆದರೆ ಇವು ದ್ವೀಪಗಳು, ಜಾಗತೀಕರಣ ಇಂತಹ ದ್ವೀಪಗಳನ್ನು ಮಾತ್ರ ಸೃಷ್ಟಿಸಬಲ್ಲದು ಮತ್ತು ಇಂತಹ ದ್ವೀಪಗಳೆಡೆಯ ಪಯಣದ ಆಕಾಂಕ್ಷೆಯೇ, ತಮ್ಮ ಪಾಲಿಗೆ ರಕ್ಷಣೆ ಒದಗಿಸಿರುವ ಸಂವಿಧಾನದ ಪ್ರಜಾಪ್ರಭುತ್ವವಾದಿ 'ಗಣರಾಜ್ಯ'ದ ಆಶಯಗಳನ್ನೆಲ್ಲ ಅಪ್ರಸ್ತುತಗೊಳಿಸಬಲ್ಲುದು; ಆ ಮೂಲಕ ಅದು ತಮ್ಮ ಪಾಲಿಗೆ ಒಂದು ಶಾಶ್ವತ ದುರಂತವೇ ಆಗಬಲ್ಲುದು ಎಂಬುದು ತಳ ವರ್ಗಗಳಿಗೆ ಇನ್ನೂ ಅರಿವಾದಂತೆ ಕಾಣುವುದಿಲ್ಲ. ಅರಿವಾದಾಗ ಅವು ತಮ್ಮ ಆಲೋಚನೆಯ ದಿಕ್ಕನ್ನು ಬದಲಿಸುತ್ತವೆ ಹಾಗೂ ಹೊಸ ನಾಯಕತ್ವದ ಹುಡುಕಾಟ ನಡೆಸುತ್ತವೆ.

4. ಆದಿವಾಸಿಗಳ(ರಾಜ್ಯದಲ್ಲಿ ಮೀಸಲಾತಿ ಸೌಲಭ್ಯ ಅನುಭವಿಸುತ್ತಿರುವ ನಮ್ಮ ಕೆಲವು ಹುಸಿ 'ಬುಡಕಟ್ಟು' ಗಳಲ್ಲ) ಹೊರತಾಗಿ, ನಮ್ಮ

ತಳ ವರ್ಗಗಳು ಪುರಾತನ ಜಾತಿ ಪದ್ಧತಿಯ ಅವಿಭಾಜ್ಯ ಅಂಗಗಳೇ ಆಗಿವೆ. ಏಕೆಂದರೆ, ಈ ಪದ್ಧತಿಯಿಂದ ಅತಿಯಾದ ಅನ್ಯಾಯಗಳಿಗೂ, ಅವಮಾನಗಳಿಗೂ ಒಳಗಾದ ಅಸ್ಪೃಶ್ಯ ಜಾತಿಯವರೂ ಸೇರಿದಂತೆ, ಈ ಎಲ್ಲ ಜಾತಿಗಳು ಎಂದೂ ಈ ಜಾತಿ ಪದ್ಧತಿಯಿಂದ ಹೊರಬರುವ ದೃಢ ನಿಶ್ಚಯಕ್ಕೆ ಬಂದಂತಿಲ್ಲ. ಇದೇ ಈ ಎಲ್ಲ ತಳ ವರ್ಗಗಳು ಸಂವಿಧಾನದ ಆಶಯ ಮತ್ತು ಅವಕಾಶಗಳನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳದಿರುವುದಕ್ಕೆ ಮತ್ತು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳದಿರುವುದಕ್ಕೆ ಮುಖ್ಯ ಕಾರಣ ಎಂದು ನನಗನ್ನಿಸುತ್ತದೆ. ಇದಕ್ಕೆ ತಳ ವರ್ಗಗಳ ಚಳುವಳಿ ನಡೆಸಿರುವ ನಾಯಕರ ಬೌದ್ಧಿಕ ಮಿತಿಗಳೂ ಕಾರಣವಾಗಿದೆ.

ಜಾತಿ ಪದ್ಧತಿಯ ಹಿಂದಿನ ತಾತ್ವಿಕತೆಯನ್ನು ಪ್ರತಿ ಜಾತಿಯೂ ತನ್ನ ಶೋಷಣೆಯ, ತನಗಾದ ಅನ್ಯಾಯದ ಸಂಕಥನ ವನ್ನು ಕಟ್ಟಿಕೊಳ್ಳಲು ತನ್ನದೇ ರೀತಿಯಲ್ಲಿ ಬಳಸಿಕೊಂಡಿತು. ಪರಂತು, ಜಾತಿ ಪದ್ಧತಿ ಎಂಬುದೇ ಹೇಗೆ ಒಂದು ಸಮಾಜ ವಿರೋಧಿ ಆಚರಣೆಯಾಗಿದ್ದು, ಅದು ಸಮಾಜದ ಇಡಿತನವನ್ನೇ ನಾಶಮಾಡಿ, ಅದರ ಚೈತನ್ಯವನ್ನೇ ಉಡುಗಿಸಿದೆ ಎಂಬ ಅರಿವಿಗೆ ತೆರೆದುಕೊಳ್ಳಲಿಲ್ಲ. ಹಾಗೇ, ಈ ಪದ್ಧತಿಯನ್ನು ನಿರಾಕರಿಸದ ಹೊರತು, ನಿರ್ಮೂಲನ ಮಾಡದ ಹೊರತು ಯಾರ ಸಮಸ್ಯೆಯೂ ಬಗೆ ಹರಿಯಲಾರದು.

ನಮ್ಮ ಈವರೆಗಿನ ಎಲ್ಲ ಜಾತಿ ವಿರೋಧಿ ಅಥವಾ ವಿನಾಶ ಕಾರ್ಯಕ್ರಮಗಳೂ ಬಹುಪಾಲು ವಿರುದ್ಧ ಪರಿಣಾಮ ಉಂಟು ಮಾಡಿದ್ದರೆ, ಅದಕ್ಕೆ ಮುಖ್ಯ ಕಾರಣಗಳು ಎರಡು. ಒಂದು: ಸಂವಿಧಾನವು ಜಾತಿ ಪದ್ಧತಿಯ ಒಳಿತು ಕೆಡಕುಗಳ ಬಗ್ಗೆ ಮಗುಮ್ಮಾಗಿದ್ದು, ಅದರ ಬಗ್ಗೆ ಒಂದು ಸ್ಪಷ್ಟ ನಿಲುವನ್ನು ನಿರ್ದೇಶಿಸದೇ ಇರುವುದು, ಅದರ ನಿವಾರಣೆಯನ್ನು ತನ್ನ ಉದ್ದೇಶಗಳಲ್ಲಿ ಒಂದೆಂದು ಘೋಷಿಸಿಕೊಳ್ಳದಿರುವುದು. ಜಾತಿ ವಿನಾಶ ನೀತಿಯನ್ನು ಪ್ರತಿಪಾದಿಸಿದ ಅಂಬೇಡ್ಕರರೇ ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿದ್ದರು. ಅದರೂ ಈ ಉದ್ದೇಶ ಸಂವಿಧಾನದಲ್ಲಿ ಸ್ಪಷ್ಟಗೊಳ್ಳಲಿಲ್ಲವೆಂದರೆ, ರಾಷ್ಟ್ರದ ಅತ್ಯುನ್ನತ ಮನಸ್ಸುಗಳ ಸಮಾವೇಶವೆನಿಸಿದ ನಮ್ಮ ಸಂವಿಧಾನ ಸಭೆ ಎಷ್ಟು ಜಾತಿ ಮಲೀನವಾಗಿದ್ದಿರಬೇಕು ಎಂದು ಆಶ್ಚರ್ಯವಾಗುತ್ತದೆ. (ಇಂತಹ ಸಂದರ್ಭಗಳಲ್ಲಿಯೇ ಸಮಾಜವಾದಿಗಳು ಸಂವಿಧಾನ ಸಭೆಯನ್ನು ಬಹಿಷ್ಕರಿಸಿ ದೊಡ್ಡ ತಪ್ಪು ಮಾಡಿದರು ಎನ್ನಿಸುವುದು.) ಇದು ಕೇವಲ ಮೇಲ್ಜಾತಿ ಮಾನಸಿಕತೆಯ ಪ್ರಭಾವವಲ್ಲ ಎಂಬುದನ್ನೂ ನಾವು ಮುಖ್ಯವಾಗಿ ಗಮನಿಸಬೇಕು.

ಇದರಿಂದಾಗಿ, ಜಾತಿ ಪದ್ಧತಿಯ ಹಿಂದಿನ ತಾತ್ವಿಕತೆಯನ್ನು ಪ್ರತಿ ಜಾತಿಯೂ ತನ್ನ ಶೋಷಣೆಯ, ತನಗಾದ ಅನ್ಯಾಯದ ಸಂಕಥನವನ್ನು ಕಟ್ಟಿಕೊಳ್ಳಲು ತನ್ನದೇ ರೀತಿಯಲ್ಲಿ ಬಳಸಿಕೊಂಡಿತು. ಪರಂತು, ಜಾತಿ ಪದ್ಧತಿ ಎಂಬುದೇ ಹೇಗೆ ಒಂದು ಸಮಾಜ ವಿರೋಧಿ ಆಚರಣೆಯಾಗಿದ್ದು, ಅದು ಸಮಾಜದ ಇಡಿತನವನ್ನೇ ನಾಶ ಮಾಡಿ, ಅದರ ಚೈತನ್ಯವನ್ನೇ ಉಡುಗಿಸಿದೆ ಎಂಬ ಅರಿವಿಗೆ ತೆರೆದುಕೊಳ್ಳಲಿಲ್ಲ. ಹಾಗೇ, ಈ ಪದ್ಧತಿಯನ್ನು ನಿರಾಕರಿಸದ ಹೊರತು, ನಿರ್ಮೂಲನ ಮಾಡದ ಹೊರತು ಯಾರ ಸಮಸ್ಯೆಯೂ ಬಗೆಹರಿಯಲಾರದು ಎಂಬ ಒಟ್ಟಾರೆಯಾದ ರಾಷ್ಟ್ರೀಯ ಬೇಡ, ಒಂದು ಸಾಮಾಜಿಕ ದೃಷ್ಟಿಕೋನವನ್ನು ತನ್ನ ತಾತ್ವಿಕ ನಂಬುಗೆಯಾಗಿ ತಳ ವರ್ಗಗಳ ಹೋರಾಟ ರೂಢಿಸಿಕೊಳ್ಳಲಾಗಲಿಲ್ಲ ಎಂಬುದು ಎರಡನೇ ಮುಖ್ಯ ಕಾರಣ.

ಸಮಾಜವಾದಿ ಆಂದೋಲನದ ಆರಂಭಿಕ ಹಂತ ಮತ್ತು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಚಟುವಟಿಕೆಗಳ ಏರು ದಿನಗಳ ಕಾಲಮಾನ ಇದಕ್ಕೆ ಸ್ವಲ್ಪ ಮಟ್ಟಿಗೆ ಅಪವಾದಗಳೆಂದು ಹೇಳಬಹುದಷ್ಟೆ. ಹಾಗಾಗಿ, ಇಂದು ಸಾಮಾಜಿಕ ನ್ಯಾಯದ ಹೆಸರಲ್ಲಿ ವಿತರಿಸಲಾಗುತ್ತಿರುವ ವಿಶೇಷ ಸವಲತ್ತುಗಳು ಮೂಲತಃ ಸಾಮಾಜಿಕ ನ್ಯಾಯಯವಲ್ಲ; ಬದಲಿಗೆ ಜಾತಿ ನ್ಯಾಯ ಮಾತ್ರವಾಗಿದೆ ಎಂದೇ ಹೇಳಬಹುದು. ಇದು ಯಾರಿಗಾದರೂ ಜಾತಿ ಪದ್ಧತಿಯನ್ನು ನಾಶ ಮಾಡಲಲ್ಲ, ಬದಲಾಗಿ ಅದನ್ನು ಮುಂದುವರೆಸಿಕೊಂಡು ಹೋಗಲು ರೂಪಿಸಲಾಗಿರುವ ತಂತ್ರವಾಗಿ ಕಂಡರೆ ಆಶ್ಚರ್ಯವಿಲ್ಲ!

ಇದರ ಹಿಂದೆ ಜಾತಿ ಪದ್ಧತಿ ಕುರಿತಂತೆ ನವ ಭಾರತ ನಿರ್ಮಾಣಕ್ಕಾಗಿ ಕಟ್ಟಿಕೊಂಡ ಸಂಕಥನದ ದೊಡ್ಡ

ದೋಷವಿದೆ. ಜಾತಿ ಪದ್ಧತಿ ಎಂದು ನಾವು ನಂಬಿರುವುದು, ಕ್ರಿಶ್ಚಿಯನ್ ಮಿಷನರಿಗಳು ಕಟ್ಟಿಕೊಟ್ಟ ಜಾತಿ ಸಂಕಥನವಾಗಿದೆ ಎಂಬ ಬೆಲ್ಜಿಯಂನ ಬಾಲಗಂಗಾಧರ ರಾವ್ ಮತ್ತು ಇಲ್ಲಿನ ಅವರ ಶಿಷ್ಯರ ವಾದದ ಬಗ್ಗೆ ನಮ್ಮ ಭಿನ್ನಾಭಿಪ್ರಾಯ ಏನೇ ಇರಲಿ, ಅವರು ಹೇಳುತ್ತಿರುವುದರಲ್ಲಿ ಅರ್ಧ ಸತ್ಯವಿದೆ(ಅದೇ ಅದರ ಅಪಾಯ ಕೂಡಾ!) ಎಂಬುದನ್ನು ನಾವು ಗಮನಿಸಬೇಕು. ನಾವು ಜಾತಿ ಪದ್ಧತಿಯನ್ನು ನಮ್ಮ ನಮ್ಮ ಜಾತಿ ನೆಲೆಗಳಲ್ಲೇ ನಿಂತು ನಮ್ಮ ನಮ್ಮ ಅನುಕೂಲಗಳಿಗೆ ತಕ್ಕಂತೆ ಶ್ರೇಣೀಕೃತ ಶೋಷಣೆಯ ಸಾಧನವನ್ನಾಗಿ ನೋಡಿದೆವೇ ಹೊರತು, ಒಮ್ಮೆಯಾದರೂ-ಪ್ರಾಯೋಗಿಕವಾಗಿಯಾದರೂ-ಅದರ ಹೊರಗೆ ನಿಂತು ಅದನ್ನು ಸಮಗ್ರವಾಗಿ ನೋಡಲಿಲ್ಲ. ಆ ಮೂಲಕ ದೊರೆಯಬಹುದಾದ; ಅದು ಸಮಾಜದ ಆತ್ಮಸಾಕ್ಷಿಯನ್ನೂ, ಸೃಷ್ಟಿಶೀಲತೆಯನ್ನೂ ನಾಶ ಮಾಡಿರುವ ನಮ್ಮ ದಿನ ನಿತ್ಯದ ಎಲ್ಲ ನಡವಳಿಕೆ-ಆಚರಣೆಗಳಲ್ಲಿ ಅಡಗಿರುವ ನಮ್ಮ ಮನಸ್ಸಿನ ಗೆದ್ದಲೇ ಆಗಿದೆ ಎಂಬ ಅರಿವಿಗೇ ನಮ್ಮನ್ನು ನಾವು ತೆರೆದುಕೊಳ್ಳಲಿಲ್ಲ. ಒಟ್ಟಿನಲ್ಲಿ ನಮ್ಮ ಸಾಮಾಜಿಕ ನ್ಯಾಯ ಪರಿಕಲ್ಪನೆಯ ಹಿಂದಿನ ಜಾತಿ ಪದ್ಧತಿ ಕುರಿತ ನಿಲುವು ವಸ್ತುನಿಷ್ಠವಾಗಿರದೆ, ಸ್ವಾರ್ಥಪೂರಿತವಾಗಿದೆ ಎಂದೇ ಹೇಳಬಹುದು.

ಇದಕ್ಕೆ, ಜಾತಿ ಪದ್ಧತಿ ಕುರಿತ ಈ ಸಂಕಥನವನ್ನು ಕಟ್ಟುವುದರ ಜೊತೆ ಜೊತೆಯಲ್ಲೇ-ಅದರ ತರ್ಕವನ್ನನುಸರಿಸಿಯೇ-ಆಧುನಿಕ ಅಭಿವೃದ್ಧಿ ಸಂಕಥನವನ್ನೂ ಇಲ್ಲಿ ಕಟ್ಟಲಾಯಿತು ಎಂಬುದೇ ಕಾರಣವಾಗಿದೆ. ಹಾಗಾಗಿ ಇಲ್ಲಿ ಜಾತಿ ಆಚರಣೆ ಮತ್ತು ಅಭಿವೃದ್ಧಿಯ ಕಲ್ಪನೆ ಒಟ್ಟೊಟ್ಟಿಗೇ ನಡೆದು, ತಳ ವರ್ಗಗಳನ್ನು ಶಾಶ್ವತ ಅತೃಪ್ತ ಮತ್ತು ಅಶಾಂತರನ್ನಾಗಿ ಮಾಡಿ ಕೂರಿಸಿವೆ. ಏಕೆಂದರೆ ಈ ಅಭಿವೃದ್ಧಿ ಎಂದರೆ ನಿಲ್ಲದ-ಬಡವ, ಶ್ರೀಮಂತರಿಬ್ಬರನ್ನೂ ಒಟ್ಟಿಗೇ ಬಾಧಿಸಬಲ್ಲ-ನಿರಂತರ ದಾಹವೇ ಆಗಿದೆ. ಅದೊಂದು ಮನುಷ್ಯನನ್ನು ಮನುಷ್ಯನನ್ನಾಗಿ ವಿಕಾಸಗೊಳಿಸಿರುವ, ಪ್ರಸ್ತುತಗೊಳಿಸಿರುವ ಪಾರಮಾರ್ಥಿಕತೆಯ ಸ್ಪರ್ಶವೇ ಇಲ್ಲದ ಸಂಪೂರ್ಣ ಭೌತಿಕ ವಿದ್ಯಮಾನವಾಗಿದೆ. ಈ ರೋಗಕ್ಕೆ ಒಳಗಾಗಿರುವವರು ನಡೆಸುವ ಧಾರ್ಮಿಕವೆಂದು ಹೇಳಲಾಗುವ ಆಚರಣೆಗಳ ಸ್ವರೂಪವೇ, ಇದು ಧರ್ಮದ ಕಲ್ಪನೆಯನ್ನೂ ಹೇಗೆ ವಿಕ್ಷಿಪ್ತಗೊಳಿಸಿದೆ ಎಂಬುದನ್ನು ಶ್ರುತಪಡಿಸುತ್ತದೆ.

ಉದಾಹರಣೆಗೆ, ನಮ್ಮ ಎರಡು ಹಿಂದುಳಿದ ವರ್ಗಗಳ ಆಯೋಗಗಳ ಅಧ್ಯಕ್ಷರುಗಳಾಗಿ 'ಕ್ರಾಂತಿಕಾರಿ' ವರದಿ ನೀಡಿದ ಹಾವನೂರ್ ಮತ್ತು ವೆಂಕಟಸ್ವಾಮಿಯವರು ನಿರ್ಯೋಜನೆಯಿಂದ ಸಕ್ರಿಯ ರಾಜಕಾರಣಕ್ಕೆ ಇಳಿದಿದ್ದಾದರೂ(ಅದರಲ್ಲಿ ಅವರು ಸಫಲರಾಗದಿದ್ದರೂ) ಎಂತಹ ರಾಜಕಾರಣದ ಮೂಲಕ? ಶ್ರೇಣೀಕೃತ ಜಾತಿ ಪದ್ಧತಿಯನ್ನು ನಮ್ಮ ಪರಂಪರೆಯ ಒಂದು ಭಾಗವಾಗಿ ತಾತ್ವಿಕವಾಗಿ ಒಪ್ಪಿಕೊಂಡಿರುವ ರಾಜಕೀಯ ಪಕ್ಷದ ಮೂಲಕ! ಇಂದು ನಮ್ಮ ವಿಧಾನ ಸಭೆಯಲ್ಲಾಗಲೀ, ಸಂಸತ್ತಿನಲ್ಲಾಗಲೀ ತಳ ವರ್ಗಗಳ ಅತ್ಯಂತ ಹೆಚ್ಚು ಜನ ಪ್ರತಿನಿಧಿಗಳು ಇರುವುದು ಯಾವ, ಎಂತಹ ಪಕ್ಷದಲ್ಲಿ? ಅಂಬೇಡ್ಕರ್ ಹೆಸರಲ್ಲಿ ಒಂದಾಗಿದ್ದ ಜನ ಈಗ ಅಂಬೇಡ್ಕರ್-ಜಗಜೀವನ ರಾಂ(ಆಹಾ, ಎಂತಹ ಆಯ್ಕೆ!) ಎಂದು ಎರಡಾಗಿರುವುದಾದರೂ ಏಕೆ? ಅಭಿವೃದ್ಧಿಯ ದಾಹ ಹುಟ್ಟಿಸಿದ ಮತ್ತು ತಂತಮ್ಮಲ್ಲೇ ಬಗೆಹರಿಸಿಕೊಳ್ಳಲಾಗದ ಅತೃಪ್ತಿ-ಅಶಾಂತಿಗಳ ಕಾರಣದಿಂದಾಗಿ! ಅಂಬೇಡ್ಕರರ ಯಶಸ್ವಿ

ತಳ ವರ್ಗಗಳು ಇಂದು-ಈ ಜಾಗತೀಕರಣದ ಸಂದರ್ಭದಲ್ಲಿ-ತಮ್ಮ ಪಾಲಿಗೆ ಅಪ್ರಸ್ತುತಗೊಂಡಿರುವ ಮತ್ತು ಹೆಚ್ಚೆಂದರೆ ತಮ್ಮೆಡೆಗೆ ದಿನವಹಿ ಆಧಾರದ ಮೇಲೆ ರೊಟ್ಟಿ ತುಂಡು ಎಸೆಯುವ 'ಸಾಮಾಜಿಕ' ಕಾರ್ಯಕ್ರಮಗಳಿಗಷ್ಟೇ ತೆರೆದುಕೊಂಡಿರುವ; ಸಂವಿಧಾನದಲ್ಲಿ ಅಂತರ್ಗತವಾಗಿರುವ 'ಸಾಮಾಜಿಕ ನ್ಯಾಯ'ದ ಪೂರ್ಣ ಸ್ವರೂಪವನ್ನೂ, ಅರ್ಥವನ್ನೂ, ಶಕ್ತಿಯನ್ನೂ ಅರಿತುಕೊಳ್ಳುವ ಪ್ರಯತ್ನ ಮಾಡಬೇಕು. ಈ ಸಾಮಾಜಿಕ ನ್ಯಾಯದ ಕಲ್ಪನೆ ತಳ ವರ್ಗಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ; ಅದರಲ್ಲಿ ಇಡೀ ಸಮಾಜದ ಐಕ್ಯತೆ ಮತ್ತು ಸಾಮರಸ್ಯದ ಗುಟ್ಟು ಅಡಗಿದೆ ಎಂಬರ್ಥದಲ್ಲಿ, ಅದು ಇಡೀ ಸಮಾಜಕ್ಕೆ ಸಂಬಂಧಿಸಿದ ವಿಷಯವಾಗಿದೆ ಎಂಬ ಅರಿವನ್ನು ಪಡೆಯಬೇಕು.

ರಾಜಕೀಯ ವಾರಸುದಾರಣಿ, ಕೋಟಿಗಟ್ಟಲೆ ಮೌಲ್ಯದ ನೋಟುಗಳ ಹಾರ ಹಾಕಿಸಿಕೊಂಡು ಸಂಭ್ರಮಿಸುವ ಮಾಯಾವತಿ ಎಂದರೆ, ಮುಂದೆ ಮಾತಾಡುವುದಾದರೂ ಏನು? ಆದರೆ ಜಾತಿಪದ್ಧತಿಗೆ ಸಿಗದ ಮತ್ತು ಆಧುನಿಕತೆಗೆ ಒಡ್ಡಿಕೊಳ್ಳದ ನಮ್ಮ ನಿಜ ಆದಿವಾಸಿಗಳು ಮಾತ್ರ ಆಲೋಚನೆಯ ಇಂತಹ ಯಾವುದೇ ವಿರೋಧಾಭಾಸಗಳಿಲ್ಲದೆ, ಈಗ ತಮ್ಮ ಬದುಕಿನ ಹೊಸ್ತಿಲಬಳಿಗೇ ಬಂದಿರುವ ಜಾಗತೀಕರಣದ ಭೂತವನ್ನು ತಮ್ಮ ಜೀವನ ಶೈಲಿ – ಮೌಲ್ಯಗಳಲ್ಲಿ ಅಚಲ ನಂಬಿಕೆಯನ್ನು ಪ್ರದರ್ಶಿಸುವ ಮೂಲಕವೇ ಒಂದು ದುಸ್ಸಾಹಸದ ರೂಪದಲ್ಲಿ ಮುಖಾ ಮುಖಿಯಾಗಿಸಿಕೊಳ್ಳುವ ಧೈರ್ಯ ತೋರಿವೆ ಎಂಬುದು ಇಲ್ಲಿ ಗಮನಾರ್ಹ.

ನಮ್ಮ ಹಿಂದುಳಿದ ಜಾತಿಗಳವರು ಮತ್ತು ದಲಿತರು ಆಲೋಚಿಸಬೇಕು. ಮುಖ್ಯವಾಗಿ, ಈ ಪ್ರಾತಿನಿಧಿಕ ಪ್ರಜಾಪ್ರಭುತ್ವದಲ್ಲಿ ತಮ್ಮ ಸಮುದಾಯಗಳ ನಾಯಕತ್ವದ ಪ್ರಾತಿನಿಧ್ಯ ಇದ್ದರೂ, ತಮ್ಮಲ್ಲಿನ ಬಹುಪಾಲು ಜನಕ್ಕೆ ಏಕೆ ನೆಮ್ಮದಿಯ ಬದುಕಿನ ಭರವಸೆ ಸಿಕ್ಕಿಲ್ಲ ಎಂದು. ಇದಕ್ಕೆ, ಎಂದೂ ಎಲ್ಲರಿಗೂ ದಕ್ಕದ ಮತ್ತು ಯಾರನ್ನೂ ಆತ್ಯಂತಿಕವಾಗಿ ತಣಿಸದ ಅಧುನಿಕ ಸುಖ-ಸವಲತ್ತುಗಳ ನಿರೀಕ್ಷೆ ಹುಟ್ಟಿಸುವ ನಮ್ಮ ಅಭಿವೃದ್ಧಿ ರಾಜಕಾರಣದ ಗುರಿ-ಉದ್ದೇಶಗಳು ಕಾರಣವೇ ಎಂಬುದು ಅವರು ಎದುರಿಸಬೇಕಾದ ಮುಖ್ಯ ಪ್ರಶ್ನೆ

5. ಹಾಗಾದರೆ ತಳ ವರ್ಗಗಳ ರಾಜಕಾರಣ ಬದಲಾಗಬೇಕಾದ ಬಗೆಗಳಾವುವು? ತಳವರ್ಗಗಳ ಈ ರಾಜಕಾರಣ ಒಟ್ಟಾರೆ

ರಾಜಕಾರಣದ ಜೊತೆ ರಚನಾತ್ಮಕ ಅನುಸಂಧಾನ ನಡೆಸಿಯೇ-ಸಾಧ್ಯವಾದರೆ ಅದರ ನಾಯಕತ್ವವನ್ನು ತಾನೇ ವಹಿಸಿ – ತನ್ನನ್ನು ಬದಲಾವಣೆಗೆ ಒಡ್ಡಿಕೊಳ್ಳಬೇಕಿದೆ. ಹಾಗಾಗಿ ಇದನ್ನು ತಳವರ್ಗಗಳ ಉನ್ನತೀಕರಣದ ರಾಜಕಾರಣವೆಂದಷ್ಟೇ ಬಗೆಯದೆ, ಸರ್ವ ಸಮಾನತೆಯ ಸಾರ್ವತ್ರಿಕ ರಾಜಕಾರಣದ ಅವಿಭಾಜ್ಯ ಅಂಗವಾಗಿಯೇ ರೂಪಿಸಬೇಕು. ಇದಕ್ಕೆ ತಳ ವರ್ಗಗಳ ನಾಯಕತ್ವದಲ್ಲಿ ಉನ್ನತಿಯ ಕಲ್ಪನೆ ಬದಲಾಗಬೇಕು ಮತ್ತು ಆ ಮೂಲಕ ಮೇಲ್ಜಾತಿ-ಮೇಲ್ವರ್ಗಗಳ ಮನಸ್ಸಿನ ಹೊಯ್ದಾಟಕ್ಕೆ ಕಾರಣವಾಗಬೇಕು. ತಳ ವರ್ಗಗಳಿಂದಲೇ ತನ್ನ ಬೆಡಗನ್ನು ಪಡೆದುಕೊಂಡ ನಮ್ಮ ಶರಣರ ಆಂದೋಲನವೂ ಸೇರಿದಂತೆ ಐತಿಹಾಸಿಕವಾದ ಭಕ್ತಿ ಆಂದೋಲನವು ಸಾಮಾಜಿಕ ಭಾವನೆಯ ನೆಲೆಯಲ್ಲಾದರೂ ಇದಕ್ಕೆ ಸ್ಫೂರ್ತಿಯಾಗಬೇಕು. ಶೋಷಣೆಯ ಸಾರಾ ಸಗಟು ಘೋಷಣೆಯ ಆಧಾರದ ಮೇಲೆ ಪರಿಹಾರ ಕೇಳುವ ಬೇಡಿಕೆಗಳ, ಸಿಕ್ಕವರಿಗೆ ಸೀರುಂಡೆ ರಾಜಕಾರಣವನ್ನು ತೊರೆದು ಒಂದು ಪರ್ಯಾಯ-ಸಮಗ್ರ ರಾಜಕೀಯದ ಸಂಕಲ್ಪತೊಡಬೇಕು.

ಮೊದಲು ತಳ ವರ್ಗಗಳು ಇಂದು-ಈ ಜಾಗತೀಕರಣದ ಸಂದರ್ಭದಲ್ಲಿ-ತಮ್ಮ ಪಾಲಿಗೆ ಅಪ್ರಸ್ತುತಗೊಂಡಿರುವ ಮತ್ತು ಹೆಚ್ಚೆಂದರೆ ತಮ್ಮೆಡೆಗೆ ದಿನವಹಿ ಆಧಾರದ ಮೇಲೆ ರೊಟ್ಟಿತುಂಡು ಎಸೆಯುವ 'ಸಾಮಾಜಿಕ' ಕಾರ್ಯಕ್ರಮಗಳಿಗಷ್ಟೇ ತೆರೆದುಕೊಂಡಿರುವ; ಸಂವಿಧಾನದಲ್ಲಿ ಅಂತರ್ಗತವಾಗಿರುವ 'ಸಾಮಾಜಿಕ ನ್ಯಾಯ'ದ ಪೂರ್ಣ ಸ್ವರೂಪವನ್ನೂ, ಅರ್ಥವನ್ನೂ, ಶಕ್ತಿಯನ್ನೂ ಅರಿತುಕೊಳ್ಳುವ ಪ್ರಯತ್ನ ಮಾಡಬೇಕು. ಈ ಸಾಮಾಜಿಕ ನ್ಯಾಯದ ಕಲ್ಪನೆ ತಳ ವರ್ಗಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ; ಅದರಲ್ಲಿ ಇಡೀ ಸಮಾಜದ ಐಕ್ಯತೆ ಮತ್ತು ಸಾಮರಸ್ಯದ ಗುಟ್ಟು ಅಡಗಿದೆ ಎಂಬರ್ಥದಲ್ಲಿ, ಅದು ಇಡೀ ಸಮಾಜಕ್ಕೆ ಸಂಬಂಧಿಸಿದ ವಿಷಯವಾಗಿದೆ ಎಂಬ ಅರಿವನ್ನು ಪಡೆಯಬೇಕು. ಈ ಅರಿವಿನೊಂದಿಗೆ ಅದನ್ನು, ಜಾಗತೀಕರಣದ ಮೂಲಕ ನಮ್ಮ ಸಂವಿಧಾನದ ಉದ್ದೇಶ -ಆಶಯಗಳ ಮೇಲೆ ನಡೆದಿರುವ ದಾಳಿಗೆ ಎದುರಾಗಿ, ಸಾರ್ವತ್ರಿಕ ಉನ್ನತಿಯ ಪರ್ಯಾಯ ಮತ್ತು ಸಮಗ್ರ ಕಾರ್ಯಕ್ರಮವಾಗಿ ಪುನಾರಚಿಸಬೇಕು.

ಮುಖ್ಯವಾಗಿ ಈ ಕಾರ್ಯಕ್ರಮ ತಮ್ಮ ಸಾಮೂಹಿಕ ವಲಸೆಗಳಿಗೆ ಕಾರಣವಾಗಿ ಗುರುತಿಲ್ಲದವರಂತೆ ಮಾಡದೆ, ತಮ್ಮ ಸಾಮಾಜಿಕ-ಸಾಂಸ್ಕೃತಿಕ ಬಂಡನಾಳವನ್ನು ಹೂಡಿಕೆಯನ್ನಾಗಿ ಮಾಡಿಕೊಂಡು, ಕ್ರಮೇಣವಾಗಿಯಾದರೂ ಖಚಿತವಾಗಿ ತಮ್ಮನ್ನು ಸಮಾಜದ ಮುಖ್ಯವಾಹಿನಿಯಲ್ಲಿ ಲೀನ ಮಾಡುವಂತಹ ತಾತ್ವಿಕತೆಯನ್ನು ಹೊಂದಿರುವಂತೆ ನೋಡಿಕೊಳ್ಳಬೇಕು. ಇದು ತಳ ವರ್ಗಗಳಿಗೆ ಬಹುಶಃ ಪರ್ಯಾಯ ಅಭಿವೃದ್ಧಿ ಮಾದರಿಯ ಪ್ರಶ್ನೆಗಿಂತ ಮುಖ್ಯವಾಗಿ – ದೊಡ್ಡದಾಗಿ, ಪರ್ಯಾಯ ನಾಯಕತ್ವದ ಪ್ರಶ್ನೆಯೇ ಆಗಿದೆ. ಈ ಪ್ರಶ್ನೆ ಎಷ್ಟು ಬೇಗ ತನ್ನ ಉತ್ತರವನ್ನು ಕಂಡುಕೊಳ್ಳುವುದೋ ಅಷ್ಟು ಬೇಗ ನಮ್ಮ ಸಂವಿಧಾನದ ಬಗ್ಗೆ ಹೊಸ ನೆಲೆಯ ಚರ್ಚೆಗಳನ್ನು ಹುಟ್ಟು ಹಾಕಬಲ್ಲುದಾಗಿದೆ. ಅಲ್ಲಿಂದ ತಳ ವರ್ಗಗಳ ನಿಜವಾದ ಬಿಡುಗಡೆಯ ದಾರಿ ಆರಂಭವಾದೀತು.

(ಇದು ಬೆಂಗಳೂರಿನ ರಾಷ್ಟ್ರೀಯ ಕಾನೂನು ಶಾಲೆಯ ಸಾಮಾಜಿಕ ಪ್ರತ್ಯೇಕತೆಯ ಅಧ್ಯಯನ ಕೇಂದ್ರವು 2010ರ ಮಾರ್ಚ್‌ನಲ್ಲಿ ಸಂಘಟಿಸಿದ್ದ 'ಭಾರತೀಯ ಸಂವಿಧಾನಕ್ಕೆ 60 ವರ್ಷ-ಕರ್ನಾಟಕದಲ್ಲಿ ಸಾಮಾಜಿಕ ನ್ಯಾಯ ನಡೆದು ಬಂದ ದಾರಿ: ನಿನ್ನೆ, ಇಂದು ಮತ್ತು ನಾಳೆ' ಎಂಬ ವಿಷಯದ ಮೇಲಿನ ವಿಚಾರ ಸಂಕಿರಣದಲ್ಲಿ ಮಂಡಿಸಿದ ವಿಚಾರಗಳನ್ನು ಆಧರಿಸಿದ ಲೇಖನ) □

ಜೈಲಿನ ಕಥೆ ಬಂಧಿಗಳ ವ್ಯಥೆ

ಭರತ್ ಚಂದ್ರ

ಒಂದೆರಡು ತಿಂಗಳ ಹಿಂದೆ ಕರ್ನಾಟಕದಾದ್ಯಂತ ಒಂದು ಸತ್ಯಾಗ್ರಹ ನಡೆಯಿತು. ಅದು ಸುಮಾರು ಹತ್ತು ದಿನಗಳವರೆಗೂ ಮುಂದುವರೆಯಿತು. ಹತ್ತಾರು ಜನರ ಆರೋಗ್ಯ ಕೆಟ್ಟು ಆಸ್ಪತ್ರೆ ಸೇರಿದರು. ಪುರುಷರು ಮಹಿಳೆಯರು ಆಹಾರ ತ್ಯಜಿಸಿ ಉಪವಾಸ ಸತ್ಯಾಗ್ರಹ ನಡೆಸಿದರು. ಅದು ರಾಜ್ಯದ ಬಂಧಿಗಳು ತಮ್ಮ ಕತ್ತಲ ಕೋಣೆಯ ಒಳಗಿಂದ ಕೂಗಿದ ದನಿಯಾಗಿತ್ತು. ಅದು ಪ್ರತಿಭಟನೆಯಾಗಿರಲಿಲ್ಲ, ಮುಷ್ಕರವಾಗಿರಲಿಲ್ಲ. ನಾಗರಿಕ ಸಮಾಜಕ್ಕೆ ಸರ್ಕಾರದ ಕಿವಿಗಳಿಗೆ ತಮ್ಮ ನೋವಿನ ಗೋಳನ್ನು, ಬದುಕುವ ಹಂಬಲದ ಕೋರಿಕೆಯನ್ನು ಕೇಳಿಸಲು ರಾಜ್ಯದ ಕಾರಾಗೃಹಗಳಲ್ಲಿ ಹತ್ತಾರು ವರ್ಷಗಳಿಂದ ಬಂಧಿಯಾಗಿರುವವರ ಆಕ್ರಂದನವಾಗಿತ್ತು ರೋದನವಾಗಿತ್ತು. ರಾಜ್ಯದ ಕೆಲವು ಪತ್ರಿಕೆಗಳು ಜೈಲು ಹಕ್ಕಿಗಳ ಸತ್ಯಾಗ್ರಹ ಎಂದು ಬರೆದವು. ಕೆಲವು ಪತ್ರಿಕೆಗಳು ಸನ್ನಡತೆಯ ಖೈದಿಗಳನ್ನು ಅಕಾಲಿಕವಾಗಿ ಬಿಡಿಗಡೆ ಮಾಡುವುದರ ಪರವಾಗಿ ಬರೆದವು. ಒಂದೆರಡು ಪತ್ರಿಕೆಗಳು ಅಕಾಲಿಕ ಬಿಡುಗಡೇಯ ವಿರೋಧವಾಗಿ ಬರೆದವು. ವಾರಪತ್ರಿಕೆಗಳು ಖೈದಿಗಳ ಈ ಕೂಗಿಗೆ ಸ್ಪಂದಿಸಲೇ ಇಲ್ಲ. ಒಂದೆರಡು ದೂರದರ್ಶನ ವಾಹಿನಿಗಳು ಈ ಕುರಿತು ಸಂವಾದ, ಚರ್ಚೆ ನಡೆಸಿದವು. ಒಂದೆರಡು ಸಂಘಟನೆಗಳು ಖೈದಿಗಳ ಕೂಗಿಗೆ ಸ್ಪಂದಿಸಿದವು. ಆದರೆ ಅವುಗಳು ಹಿಂದೂಪರ ಸಂಘಟನೆಗಳಾಗಿದ್ದವು. ಉಳಿದ ಸಂಘಟನೆಗಳು ಖೈದಿಗಳ ಕತ್ತಲೆ ವಾಸದ ನಡುವಿನ ಕೂಗನ್ನು ಗಂಭೀರವಾಗಿ ನೋಡಲೇ ಇಲ್ಲ. ಈ ಮಟ್ಟದಲ್ಲಿ ಕಾರಾಗೃಹವಾಸಿಗಳು ಹಿಂದೆಂದೂ ತಮ್ಮ ನೋವಿನ ಕೂಗನ್ನು ಮೊಳಗಿಸಿರಲಿಲ್ಲ.

ಇದೊಂತರ ರಾಜ್ಯ ಸರ್ಕಾರ ಹಾಗೂ ರಾಜ್ಯಪಾಲರ ನಡುವಿನ ಶೀತಲ ಸಮರಕ್ಕೆ ಬಳಕೆಯಾಯಿತು. ಪರೋಕ್ಷವಾಗಿ ಬಿ.ಜೆ.ಪಿ ಮತ್ತು ಕಾಂಗ್ರೆಸ್ ನಡುವಿನ ಗುದ್ದಾಟ ಕೂಡ ಹೌದೆನ್ನಬಹುದು. ಆದರೆ ಸಿಕ್ಕಿ ನಲುಗಿದವರು ಮಾತ್ರ ಪಾಪದ ಅಸಹಾಯಕದ ಬಂಧಿಗಳು. ಅವರೆಲ್ಲರೂ ತಮ್ಮ ಸನ್ನಡತೆಯ ಆಧಾರದ ಮೇಲೆ ಬಿಡುಗಡೆಯ ನಿರೀಕ್ಷೆಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ಕಾಲ ಕಳೆಯುತ್ತಿದ್ದಾರೆ. ಸಾಮಾನ್ಯವಾಗಿ ಸ್ವಾತಂತ್ರೋತ್ಸವ ದಿನಗಳಂತಹ ಸಂದರ್ಭಗಳಲ್ಲಿ ಸನ್ನಡತೆಯ ಬಂಧಿಗಳನ್ನು ಅಕಾಲಿಕವಾಗಿ ಬಿಡುಗಡೆಗೊಳಿಸುವುದು ಹಲವಾರು ರಾಜ್ಯಗಳಲ್ಲಿ ವಾಡಿಕೆಯಾಗಿ ನಡೆಯುತ್ತಾ ಬಂದಿದೆ.

ಮೇಲ್ನೋಟಕ್ಕೆ ನೋಡಿದಾಗ ರಾಜ್ಯದ ಕಾರಾಗೃಹಗಳಲ್ಲಿ ಬಂಧಿಯಾಗಿರುವವರಲ್ಲಿ ಬಹುತೇಕರು ಕೂಲಿ ಕಾರ್ಮಿಕರು, ಬಡ ರೈತರು, ದಲಿತರು, ಹಿಂದುಳಿದವರು, ಅನಕ್ಷರಸ್ಥರು ಆಗಿದ್ದಾರೆ. ಯಾವುದೋ ಆವೇಶದಲ್ಲಿ ಅಪರಾಧ ಕೃತ್ಯಗಳನ್ನು ಮಾಡಿದವರೇ ಹೆಚ್ಚಿನವರು. ಅವರ ಹಿನ್ನಲೆ ಕೂಡ ಅಪರಾದದ್ದಾಗಿರುವುದಿಲ್ಲ. ಇವಲ್ಲದೇ ಯಾವುದೇ ತಪ್ಪುಗಳನ್ನೂ ಮಾಡದೇ ಪಟ್ಟಭದ್ರ ಹಿತಾಸಕ್ತಿಗಳ ಕುತಂತ್ರಕ್ಕೆ ಬಲಿಯಾಗಿ ಜೈಲುಪಾಲಾಗಿರುವವರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಇದರಲ್ಲಿ ತಮ್ಮ ಸ್ಟಾರ್‌ಗಳನ್ನು ಹೆಚ್ಚಿಸಿಕೊಳ್ಳಲು ಪೋಲೀಸ್ ಅಧಿಕಾರಿಗಳು ಮಾಡದ ಅಪರಾಧಗಳಿಗೆ ಅವರನ್ನು ಜೋಡಿಸಿ ದೂರು ದಾಖಲಿಸಿ ಜೈಲಿಗೆ ತಳ್ಳಿರುವ ಪ್ರಕರಣಗಳು ಸಾಕಷ್ಟಿವೆ. ಒಂದೆರಡು ಅಪರಾಧ ಮಾಡಿದವರ ಮೇಲೆ ಇದ್ದಬದ್ದ ಎಲ್ಲಾ ಪ್ರಕರಣಗಳನ್ನು ಜೋಡಿಸಿ ಜೈಲಿಗೆ ತಳ್ಳಿರುವ ಪ್ರಕರಣಗಳಿಗೇನೂ ಕೊರತೆಯಿಲ್ಲ.

ಇವೆಲ್ಲದರಿಂದಾಗಿ ಜೈಲು ವಾಸಿಗಳ ಸಂಖ್ಯೆ ಜಾಗದ ಕೊರತೆಯಾಗುವಷ್ಟು ಹೆಚ್ಚಾಗಿದೆ. ಇನ್ನು ವೃತ್ತಿಪರ ಅಪರಾಧಿಗಳ ಬಗ್ಗೆ ಹೇಳುವುದಾದರೆ ಅವರಲ್ಲಿ ಬಹುತೇಕರು ಜೈಲಿನ ಹೊರಗೇ ಇದ್ದಾರೆ. ಜೈಲಿನ ಒಳಗಿರುವ ವೃತ್ತಿಪರ ಅಪರಾಧಿಗಳು ಬಹುತೇಕರು ಸುರಕ್ಷತಾ ದೃಷ್ಟಿಯಿಂದ ಇರುವವರೇ ಆಗಿದ್ದಾರೆ. ಅವರೆಲ್ಲಾ ಜೈಲಿನ ಒಳಗಿಂದಲೇ ತಮ್ಮ ಕತ್ತಲ ಸಾಮ್ರಾಜ್ಯದ ವ್ಯವಹಾರಗಳನ್ನು ನಡೆಸುತ್ತಾರೆ. ಈ ಬಗ್ಗೆ ಇವರುಗಳ ಜೈಲೊಳಗಿನ ವೈಭೋಗದ ಜೀವನದ ಬಗ್ಗೆ ಸಾಕಷ್ಟು ವರದಿಗಳಿವೆ.

ನಮ್ಮ ಸಾಮಾಜಿಕ ವ್ಯವಸ್ಥೆಯ ಪ್ರತಿಬಿಂಬವೋ, ಎಂಬಂತೆ ನಮ್ಮ ಜೈಲುಗಳು ಬಹುತೇಕವಾಗಿ ಕೆಳವರ್ಗ ಹಗೂ ಕೆಳಜಾತಿಯವರನ್ನೇ ಅಧಿಕವಾಗಿ ಬಂಧಿಗಳನ್ನಾಗಿ ಇಟ್ಟುಕೊಂಡಿವೆ. ವೃತ್ತಿಪರ ಪಾತಕಿಗಳು, ಸಾವಿರಾರು ಕೋಟಿ ಹಗರಣ ಮಾಡಿ ನೀರು ಕುಡಿದವರು, ಸಿಖ್ ವಿರೋಧಿ, ಮುಸ್ಲಿಂ ವಿರೋಧಿ ದಂಗೆಗಳನ್ನು ಸಂಘಟಿಸಿ ಹಲವಾರು ಸಾವಿರ ಜನ ಅಮಾಯಕರನ್ನು ಕಗ್ಗೊಲೆ ಮಾಡಿರುವವರು. ಇಂದಿಗೂ ಭೂಗತಲೋಕದ ದೊರೆಗಳಾಗಿ ಸಾಮಾಜಿಕ ಸೇವೆಯ ಮುಖವಾಡ ದರಿಸಿರುವವರು, ಭೂಗತಲೋಕದ ಹತ್ತು ಹಲವು ಅಪರಾಧಗಳಿಗೆ ಕಾರಣಕರ್ತರಾಗಿ ರಾಜಕೀಯ ಪುಢಾರಿಗಳ ವೇಷದಲ್ಲಿ ಇರುವವರು, ಇಂತಹವುಗಳನ್ನು ನೇರ ಹಾಗೂ ಹಿಂಬಾಗಿಲ ಮೂಲಕ ನಿಯಂತ್ರಿಸುತ್ತಿರುವ ಶಕ್ತಿಗಳು ನಾಗರಿಕ ಸಮಾಜದ ಮಧ್ಯೆಯಲ್ಲಿ ಸಭ್ಯ ಗಣ್ಯರಂತೆ ಪೋಜು ನೀಡುತ್ತಾ ಐಷಾರಾಮಿ ಜೀವನ ನಡೆಸುತ್ತಿದ್ದಾರೆ. ಅವರಲ್ಲಿ ಕೆಲವರ ಮೇಲೆ ತುಂಬಿತುಳುಕುವ ಭಾಗವಾಗಿ ಕೆಲವು ದೂರಗಳು ದಾಖಲಾಗಿದ್ದರೂ ಕನಿಷ್ಠ ಬಂಧನ ಕೂಡ ನಡೆಸದ, ನಡೆಸಿದರೂ

ಮೇಲ್ನೋಟಕ್ಕೆ ನೋಡಿದಾಗ ರಾಜ್ಯದ ಕಾರಾಗೃಹಗಳಲ್ಲಿ ಬಂಧಿಯಾಗಿರುವವರಲ್ಲಿ ಬಹುತೇಕರು ಕೂಲಿ ಕಾರ್ಮಿಕರು, ಬಡ ರೈತರು, ದಲಿತರು, ಹಿಂದುಳಿದವರು, ಅನಕ್ಷಸ್ಥರು ಆಗಿದ್ದಾರೆ. ಯಾವುದೋ ಆವೇಶದಲ್ಲಿ ಅಪರಾಧ ಕೃತ್ಯಗಳನ್ನು ಮಾಡಿದವರೇ ಹೆಚ್ಚಿನವರು. ಅವರ ಹಿನ್ನಲೆ ಕೂಡ ಅಪರಾದದ್ದಾಗಿರುವುದಿಲ್ಲ. ಇವಲ್ಲದೇ ಯಾವುದೇ ತಪ್ಪುಗಳನ್ನೂ ಮಾಡದೇ ಪಟ್ಟ ಭದ್ರಹಿತಾಸಕ್ತಿಗಳ ಕುತಂತ್ರಕ್ಕೆ ಬಲಿಯಾಗಿ ಜೈಲುಪಾಲಾಗಿರುವವರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಇದರಲ್ಲಿ ತಮ್ಮ ಸ್ಟಾರ್‌ಗಳನ್ನು ಹೆಚ್ಚಿಸಿಕೊಳ್ಳಲು ಪೋಲೀಸ್ ಅಧಿಕಾರಿಗಳು ಮಾಡದ ಅಪರಾಧಗಳಿಗೆ ಅವರನ್ನು ಜೋಡಿಸಿ ದೂರು ದಾಖಲಿಸಿ ಜೈಲಿಗೆ ತಳ್ಳಿರುವ ಪ್ರಕರಣಗಳು ಸಾಕಷ್ಟಿವೆ. ಒಂದೆರಡು ಅಪರಾಧ ಮಾಡಿದವರ ಮೇಲೆ ಇದ್ದ ಬದ್ದ ಎಲ್ಲಾ ಪ್ರಕರಣಗಳನ್ನು ಜೋಡಿಸಿ ಜೈಲಿಗೆ ತಳ್ಳಿರುವ ಪ್ರಕರಣಗಳಿಗೇನೂ ಕೊರತೆಯಿಲ್ಲ.

ಜೈಲಿನಲ್ಲಿ ಉಪವಾಸ ಮಾಡಿ ಅಸ್ವಸ್ಥರಾದ ಖೈದಿಗಳನ್ನು ಆಸ್ಪತ್ರೆಗೆ ಸಾಗಿಸುತ್ತಿರುವುದು

ಜಮೀನು ನೀಡಿ ಬಿಡುಗಡೆಗೊಳಿಸಿರುವ ಪ್ರಕರಣಗಳೇ ಹೆಚ್ಚಿನ ಪಾಲಾಗಿವೆ. ಇತ್ತೀಚಿನ ಜಾಮೀನು ನೀಡಿ ಬಿಡುಗಡೆಗೊಳಿಸಿರುವ ಸತ್ಯಂ ಕಂಪ್ಯೂಟರ್ಸ್‌ನ ರಾಮಲಿಂಗರಾಜು ಪ್ರಕರಣ, ಏಳೆಂಟು ಬಾರಿ ಜಾಮೀನುರಹಿತ ವಾರೆಂಟ್ ಹೊರಡಿಸಿದ್ದರೂ ಇನ್ನೂ ಬಂಧಿಸದೇ ಇರುವ ಜನಾರ್ದನರೆಡ್ಡಿ ಪ್ರಕರಣ ತಾಜಾ ಉದಾಹರಣೆಗಳಾಗಿವೆ.

ಸತ್ಯಂ ಪ್ರಕರಣವಂತೂ ಅತೀ ದೊಡ್ಡ ಕಾರ್ಪೋರೇಟ್ ಅಪರಾಧ ಎನಿಸಿಕೊಂಡಿದ್ದರೂ ರಾಮಲಿಂಗರಾಜು ಜೈಲುವಾಸವೆಲ್ಲಾ ಆಸ್ಪತ್ರೆಯಲ್ಲೇ ನಡೆಯಿತು. ಅಲ್ಲಿ ಎಲ್ಲಾ ಕಾರ್ಪೋರೇಟ್ ಐಷಾರಾಮಿ ವ್ಯವಸ್ಥೆ ಇತ್ತು. ಈತನ ಮೇಲಿರುವ ಆರೋಪವಾದರೂ ಎಂತಹುದು ನೋಡಿ, ಸರ್ಕಾರದ ಪ್ರಕಾರ 8000ಕೋಟಿ ರೂಪಾಯಿಗಳ ಅಕ್ರಮ ಆದರೆ ಬೇರೆ ಮೂಲಗಳ ಪ್ರಕಾರ ಸುಮಾರು 30,000 ಕೋಟಿ ರೂಪಾಯಿಗಳ ಹಗರಣ. ಅಲ್ಲದೆ ರಾಮಲಿಂಗರಾಜು ಸ್ವತಃ ತನ್ನ ಹಗರಣವನ್ನು ಒಪ್ಪಿಕೊಂಡಿದ್ದಾನೆ ಎಂದೂ ಹೇಳಲಾಗಿದೆ. ಹಿಗಿದ್ದೂ ಇಂತಹ ಜನದ್ರೋಹಿ ಅಪರಾಧಿಗಳಿಗೆ ಜಾಮೀನು ಸಿಗುತ್ತೆ ನೋಡಿ. ಅದೇ ಮತ್ತೊಂದು ಕಡೆ ನೋಡಿ ಪಿಕ್‌ಪಾಕೆಟ್, ಕೌಟುಂಬಿಕ ಕಲಹ, ಹೊಡೆದಾಟ, ಜಗಳಗಳಂತಹ ಸಣ್ಣಪುಟ್ಟ ಆರೋಪದ ಮೇಲೆ ಬಂಧನಗಳು, ಜೈಲಿನಲ್ಲಿ ಕೊಳೆಸುವುದು ನಡೆಯುತ್ತವೆ.

ವಾಸ್ತವದಲ್ಲಿ ಈ ರೀತಿಯ ಆರೋಪಗಳ ಮೇಲೆ ಜೈಲುವಾಸ ಅನುಭವಿಸುವವರು ದೊಡ್ಡ ಸಂಖ್ಯೆಯಲ್ಲಿ ಇರುವುದು ನಮ್ಮ ನ್ಯಾಯಾಂಗ ವ್ಯವಸ್ಥೆಯ ಅಣಕ ಎನ್ನಬಹುದೇನೋ. ಕಿರಾತಕ ಪಾತಕಿಗಳು, ಹಗಲು ದರೋಡೆಕೋರರು, ನೆಲಗಳ್ಳರು, ಗಣಿಕಳ್ಳರು, ಮಾಫಿಯಾ ನಾಯಕರು, ಮೊದಲಾದವರು ಹೆಚ್ಚಿರಬೇಕಾದ ಜೈಲುಗಳು ಸಣ್ಣಪುಟ್ಟ ಅಪರಾಧ ಮಾಡಿದವರನ್ನು ತುಂಬಿಸಿಕೊಂಡಿವೆ ಎಂದರೆ ನ್ಯಾಯಾಂಗದ ಅಣಕವಲ್ಲದೆ ಮತ್ತೇನು. ಖೈರ್ಲಾದೆ, ಕಂಬಾಲಪಲ್ಲಿ, ಭೂಪಾಲ್ ವಿಷಾನಿಲದುರಂತ, ಶೇರು ಹಗರಣ, ಮೇವು ಹಗರಣ....ಹೀಗಿನ ಪ್ರಕರಣದ ಅಪರಾಧಿಗಳಿಗೆ ಏನೂ ಆಗಿಲ್ಲವಲ್ಲ. ಮತ್ತೂ ನೋಡಿ ಯಾವುದಾದರೂ ಆರೋಪ ಹೊರಿಸಿ ಬಂಧಿಸಿ ವರ್ಷಗಳಗಟ್ಟಲೆ ಜೈಲಿನಲ್ಲಿ ಕೊಳೆಸಿ ಕೊನೆಗೆ ಆರೋಪ ಸಾಬೀತೂ ಮಾಡಲಾಗದೇ ಹೋಗುವ ಪ್ರಕರಣಗಳು ಎಷ್ಟಿಲ್ಲ ಹೇಳಿ.

ನಮ್ಮ ಆಡಳಿತಾಂಗ, ನ್ಯಾಯಾಂಗದ ವ್ಯವಸ್ಥೆಯಲ್ಲಿ ಇಷ್ಟೊಂದು ಲೋಪದೋಷಗಳಿರುವುದು ಒಂದು ಕಡೆಯಾದರೆ ಈಗಾಗಲೇ ನ್ಯಾಯಾಂಗ ನೀಡಿದ ಶಿಕ್ಷೆಯಡಿ ಜೀವಾವಧಿ ಬಂಧಿಗಳ ಕಥೆಯಂತೂ ಅತ್ಯಂತ ಶೋಚನೀಯ. ಇದರಲ್ಲಿ ಸಾಕಷ್ಟು ಮಹಿಳೆಯರೂ ಇದ್ದಾರೆ.

ಇದರಲ್ಲಿ ಬೇಕೆಂದೇ ಅಪರಾಧಿಗಳನ್ನು ರಕ್ಷಿಸಲು ನಡೆಸುವ ಕಸರತ್ತುಗಳೂ ಇರುತ್ತವೆ. ಆದರೆ ಯಾವುದೇ ಅಪರಾಧ ಮಾಡದೇ ಇರುವವರನ್ನು ವರ್ಷಾನುಗಟ್ಟಲ್ಲೆ ಜೈಲುಗಳಲ್ಲಿ ವಿಚಾರಣೆಯ ಹೆಸರಿನಲ್ಲಿ ಕೂಡಿಹಾಕಿ ಕೊಳೆಸುವುದಿದೆಯಲ್ಲ ಅದೆಂತಹ ನ್ಯಾಯವಾಗುತ್ತದೆ. ಇಂತಹ ಪ್ರಕರಣಗಳು ಬೇಕಾದಷ್ಟಿವೆ. ನ್ಯಾಯದಾನದ ಧ್ಯೇಯವಾಕ್ಯವಾದ ಯಾವುದೇ ಕಾರಣದಿಂದಲೂ ನಿರಪರಾಧಿಗಳಿಗೆ ಶಿಕ್ಷೆಯೂಗ ಕೊಡದು ಎಂಬುದು ವಾಸ್ತವದಲ್ಲಿ ಜಾರಿಯಲ್ಲಿದೆಯೆ? ಎಂಬ ಪ್ರಶ್ನೆಯನ್ನು ಎಲ್ಲರೂ ಹಾಕಿಕೊಂಡು ಪರಿಹಾರಕ್ಕೆ ಕಾರ್ಯಮಗ್ನರಾಗಬೇಕಿದೆ.

ನಮ್ಮ ಆಡಳಿತಾಂಗ, ನ್ಯಾಯಾಂಗದ ವ್ಯವಸ್ಥೆಯಲ್ಲಿ ಇಷ್ಟೊಂದು ಲೋಪದೋಷಗಳಿರುವುದು ಒಂದು ಕಡೆಯಾದರೆ ಈಗಾಗಲೇ ನ್ಯಾಯಾಂಗ ನೀಡಿದ ಶಿಕ್ಷೆಯಡಿ ಜೀವಾವಧಿ ಬಂಧಿಗಳ ಕಥೆಯಂತೂ ಅತ್ಯಂತ ಶೋಚನೀಯ. ಇದರಲ್ಲಿ ಸಾಕಷ್ಟು ಮಹಿಳೆಯರೂ ಇದ್ದಾರೆ. ಇವರಲ್ಲಿ ಸಾವಿರಾರು ಜನರು ಹತ್ತಾರು ವರ್ಷಗಳಿಂದ ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ಬಹುತೇಕ ಇಂತಹ ಬಂಧಿಗಳು ಯಾವುದೋ ಕ್ಷಣದ ಆವೇಶದಲ್ಲಿ, ವೈಯಕ್ತಿಕ ದ್ವೇಷದಲ್ಲಿ, ಸಿಟ್ಟಿನ ಕೈಗೆ ಬುದ್ಧಿ ಕೊಟ್ಟು ಅಪರಾಧ ಮಾಡಿದವರು ಹಲವಾರು ಜನ ನಿರಪರಾಧಿಗಳೂ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದಾರೆ. ಮತ್ತೊಂದು ಗಮನಾರ್ಹ ಸಂಗತಿಯೇನೆಂದರೆ ಸಾಕ್ಷಾಧಾರಗಳಿಲ್ಲದಿದ್ದರೂ ಸಾಂದರ್ಭಿಕ ಸಾಕ್ಷ್ಯ, ಅನುಮಾನಗಳ ಆಧಾರದ ಮೇಲೆ ಜೀವವಧಿ ಯಂತಹ ಕಠಿಣ ಶಿಕ್ಷೆಗೆ ಗುರಿಯಾಗಿ ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ಇಂತಹ ನ್ಯಾಯದಾನ ನಿರಪರಾಧಿಗಳನ್ನು ಇಲ್ಲವೆ ವೃತ್ತಿಪರರಲ್ಲದ ಅಪರಾಧಿಗಳನ್ನು ಮತ್ತಷ್ಟು ಅಪರಾಧ ಜಗತ್ತಿಗೆ ತಳ್ಳುವ ಅದಲ್ಲದಿದ್ದರೆ ಅವರನ್ನು ಮಾನಸಿಕವಾಗಿ – ದೈಹಿಕವಾಗಿ ನಿರ್ನಾಮ ಮಾಡುವ ರೀತಿಯೇ ಆಗಿಬಿಡುತ್ತದೆ. ಇಂತಹ ನ್ಯಾಯದಾನದ ಹಿಂದೆ ಅಪರಾಧಿಗಳನ್ನು ತಿದ್ದುಪಡಿಗೊಳಪಡಿಸಿ ನಾಗರಿಕ ಸಮಾಜಕ್ಕೆ ಸೇರಿಸುವ, ಅವರಿಗೆ ಬದುಕನ್ನು ರೂಪಿಸಿಕೊಳ್ಳಲು ಮರು ಅವಕಾಶ ಕಲ್ಪಿಸುವ ಉದ್ದೇಶ ಕಾಣುವುದಿಲ್ಲ. ಇಂತಹ ವಿನಾಶಕಾರಿ ಶಿಕ್ಷೆಗಳ ಬಗ್ಗೆ ನಾಗರಿಕ ಸಮಾಜ ಆಳವಾಗಿ ಚಿಂತಿಸಬೇಕಾಗಿದೆ.

ಇಂತಹ ಶಿಕ್ಷೆ ನೀಡಿದರೆ ಪರಿವರ್ತನೆ ಹೊಂದಿ ಸಮಾಜದ ಮುಖ್ಯವಾಹಿನಿಯಲ್ಲಿ ಸೇರಿಕೊಂಡು ಕೊಡುಗೆ ನೀಡಬಹುದಾದ ವ್ಯಕ್ತಿಗಳನ್ನು ಸಂಪೂರ್ಣವಾಗಿ ಕೊಲೆ ಮಾಡಿದಂತೆಯೇ ಆಗುತ್ತದೆ. ಅವರನ್ನು ಪರಿವರ್ತನೆಗೊಳಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ದೀರ್ಘಕಾಲದ ಇಲ್ಲವೇ ಜೀವಾವಧಿಯಂತಹ ಶಿಕ್ಷೆಯೆಂಬುದು ದಿನೇದಿನೇ ಮಾನಸಿಕವಾಗಿ ಹಾಗೂ ದೈಹಿಕವಾಗಿ ಸಾಯಿಸುವುದಲ್ಲದೇ ಬೇರೇನೂ ಆಗಿರಲು ಸಾಧ್ಯವಿಲ್ಲ ಎಂಬುದು ಬಹಿರಂಗ ಸತ್ಯ. ಕುಟುಂಬ, ಬಂಧುಗಳ ಪ್ರೀತಿ ವಿಶ್ವಾಸದ ವಾತಾವರಣದಿಂದ ವಂಚಿತರಾಗಿ ಜೈಲಿನ ಕರಾಳ ವ್ಯವಸ್ಥೆಯೊಳಗೆ ಸಿಲುಕಿಕೊಂಡವರ ಕಥೆ ಇನ್ನೇನಾಗಿರಲು ಸಾಧ್ಯ ಹೇಳಿ. ಈಗ ಜೈಲಿನಲ್ಲಿ ದೂರದರ್ಶನ ಗ್ರಂಥಾಲಯ ವ್ಯವಸ್ಥೆ ಕಲ್ಪಿಸಿದ್ದರೂ ಅವುಗಳು ಬಂಧಿಗಳ ಮನೋವಿಕಾಸಕ್ಕೆ ಯಾವ ಕೊಡುಗೆಯನ್ನು ನೀಡಲಾಗದಂತಿವೆ.

ನಮ್ಮ ಜೈಲುಗಳ ಬಂಧಿಗಳ ಸ್ಥಿತಿಗತಿಯ ಕುರಿತು ಸಮಾಜೋ ಆರ್ಥಿಕ ಹಾಗೂ ಮಾನಸಿಕ ಹಿನ್ನಲೆಯಲ್ಲಿ ಅಧ್ಯಯನ ನಡೆಸಿದರೆ ಬೆಚ್ಚಿಬೀಳುವ ಹಲವಾರು ಅಂಶಗಳು ಕಣ್ಣಿಗೆ ರಾಚುತ್ತವೆ. ಇನ್ನು ಜೈಲುಗಳಲ್ಲಿನ ಭ್ರಷ್ಟಾಚಾರ, ಬಂಧಿಗಳಿಗೆ ಮನೆಯವರಿಂದ ಅಪರೂಪಕ್ಕೆ ಬರುವ ತಿಂಡಿ ತಿನಿಸುಗಳನ್ನು ಹಣವನ್ನು ಜೈಲಿನ ವಾರ್ಡನ್ ಹಾಗೂ ಅಧಿಕಾರಿಗಳು ಕಸಿದು ತಿನ್ನುವುದು, ಪ್ರಶ್ನಿಸಿದವರನ್ನು ಗುರಿಮಾಡಿ ಗುಂಪುಹಲ್ಲೆ ನಡೆಸುವುದು ಭೇಟಿಗೆ ಅವಕಾಶ ನೀಡದೇ ಇರುವುದು, ಕಿರುಕುಳ ನೀಡುವುದು, ಬೆದರಿಸುವುದು, ಸರಿಯಾದ ಊಟ, ತಿಂಡಿ ನೀಡದೇ ಇರುವುದು, ಶುಚಿತ್ವ ಇಲ್ಲದೇ ಇರುವುದು ಹೀಗೆ ಒಂದೇ ಎರಡೇ ಕರ್ಮಕಾಂಡಗಳು.

ನಮ್ಮ ರಾಜ್ಯದ ಜೈಲುಗಳಲ್ಲಿನ ಬಧಿಗಳ ಕುರಿತು ಕೆಲವು ಪತ್ರಕ್ಷ ವರದಿಗಳನ್ನಾಧರಿಸಿದ ಒಂದೆರಡು ಪುಸ್ತಕಗಳು ಕನ್ನಡದಲ್ಲಿ ಬಂದಿವೆ. ಆದರೆ ಜೈಲು ಹಾಗೂ ಬಂಧಿಗಳ ಬಗ್ಗೆ ಅಧ್ಯಯನ ನಡೆಸುವ ಜವಾಬ್ದಾರಿಯನ್ನು ನಮ್ಮ ವಿಶ್ವವಿದ್ಯಾಲಯಗಳು ಇನ್ನೂ ತೆಗೆದುಕೊಂಡಿಲ್ಲ ಎಂದೇ ಹೇಳಬಹುದು.

ಇಂದು ಬಡಪಾಯಿ ಜೀವಾವಧಿ ಬಂಧಿಗಳು ಮಾನಸಿಕವಾಗಿ ಹಾಗೂ ದೈಹಿಕವಾಗಿ ದಿನದಿಂದ ದಿನಕ್ಕೆ ಕುಸಿದು ಹೋಗುತ್ತಿದ್ದಾರೆ. ಒಂದು ನಿರ್ದಿಷ್ಟ ಅವಧಿಯ ನಂತರ ಬಂಧಿಗಳು ಜೈಲಿನಲ್ಲೇ ಮುಂದುವರೆದರೆ ಅದೂ ವಿಮೋಚನೆಯ ಭರವಸೆ ಕೂಡ ಇಲ್ಲದೇ ಹೋದರೆ ಪಶ್ಚಾತ್ತಾಪ, ಚಿಂತೆ, ಹತಾಶೆಗಳಿಂದ ಮನೋದೈಹಿಕ ರೋಗಿಗಳಾಗಿ ಮಾರ್ಪಡುವವರ ಸಂಖ್ಯೆಯೇ ಹೆಚ್ಚು ಇಂತಹ ಒಂದು ಪರಿಸ್ಥಿತಿಗೆ ಯಾವುದೇ ವ್ಯಕ್ತಿಯನ್ನು ಯಾವುದೇ ಕಾರಣಕ್ಕಾದರೂ ದೂಡುವುದು ನಾಗರಿಕ ಸಮಾಜವೊಂದರ ಲಕ್ಷಣವಾಗುವುದಿಲ್ಲ. ಸಮಾಜದ ದೃಷ್ಟಿ

(41ನೇಪುಟಕ್ಕೆ)

ರಥಯಾತ್ರೆಯಿಂದ ಪಾದಯಾತ್ರೆಯವರೆಗೆ

ನಾ ದಿವಾಕರ

ಮೈಸೂರಿನಲ್ಲಿ ತಮ್ಮ ಚಾತುರ್ಮಾಸ್ಯ ವ್ರತ ಆಚರಿಸಿದ ಸಂದರ್ಭದಲ್ಲಿ ಪೇಜಾವರ ಸ್ವಾಮೀಜಿಗಳು ಪೌರಕಾರ್ಮಿಕರ ಕೇರಿಗೆ ಭೇಟಿ ನೀಡಿರುವುದು ಈಗಾಗಲೇ ಗಂಭೀರ ಚರ್ಚೆಗೊಳಗಾಗಿದ್ದು, ಕೆಲವು ವಿಚಾರ ಸಂಕಿರಣಗಳೂ ನಡೆದಿವೆ. ದಲಿತರನ್ನು, ಅಸ್ಪೃಶ್ಯರನ್ನು ಹಿಂದೂ ಧರ್ಮದಲ್ಲೇ ಉಳಿಸಿಕೊಂಡು, ಮತಾಂತರವನ್ನು ತಪ್ಪಿಸುವ ಸಂಘ ಪರಿವಾರದ ಕಾರ್ಯಸೂಚಿಯ ಅಂಗವಾಗಿ ದಲಿತ ಕೇರಿಗಳಿಗೆ ತೆರಳಿ ಅವರನ್ನು ಸಂತೈಸುವುದರ ಮೂಲಕ, ಹಿಂದೂ ಧರ್ಮ ತನ್ನ ಸನಾತನಿ ಪೊರೆಯನ್ನು ಕಳಚಿಕೊಂಡು ಆಧುನಿಕ ಸೆಕ್ಯುಲರ್ ಸ್ವರೂಪವನ್ನು ಪಡೆದುಕೊಂಡಿದೆ ಎಂದು ಸಾಬೀತು ಪಡಿಸುವ ನಿಟ್ಟಿನಲ್ಲು ಪೇಜಾವರರು, ಸಂಘ ಪರಿವಾರದ ವಕ್ತಾರರಾಗಿ ಕೈಗೊಂಡ ಈ ಕಾರ್ಯಕ್ರಮ ಗಂಭೀರ ಚರ್ಚೆಗೆ ಒಳಗಾದರೂ ಎಲ್ಲೋ ಒಂದು ಕಡೆ ಸಾರ್ವಜನಿಕ ಚರ್ಚೆಯಿಂದ ಹಿಂದೆ ಸರಿದಿದೆ. ಮಾಧ್ವ ಸಂಪ್ರದಾಯದ ಶ್ರೇಷ್ಠತೆಯನ್ನು ಎಲ್ಲಿಯೂ ಬಿಟ್ಟು ಕೊಡದೆ ತಮ್ಮ ಇಡೀ ಜೀವಮಾನವನ್ನೇ ಕಳೆದಿರುವ ಪೇಜಾವರರು ಹಠಾತ್ತನೆ ಸರ್ವಧರ್ಮ ಸಮಭಾವದತ್ತ ಹೊರಳಿರು ವುದು ಅಚ್ಚರಿ ಮೂಡಿಸಿರುವುದಷ್ಟೇ ಅಲ್ಲದೆ, ಹಲವಾರು ವಿರೋಧಾ ಭಾಸಗಳಿಗೂ ಕಾರಣವಾಗಿದೆ.

ಅಸ್ಪೃಶ್ಯತೆಯ ನಿವಾರಣೆಯ ನಿಟ್ಟಿನಲ್ಲಿ ವೈದಿಕ ಶಾಹಿಯ ಪ್ರತಿನಿಧಿಯೊಬ್ಬರು ದಲಿತ ಕೇರಿಗೆ ಭೇಟಿ ನೀಡುವುದು ಒಂದು ಮಹತ್ವದ ಮೆಟ್ಟಿಲು ಎಂದು ಭಾವಿಸುವವರು ತಮ್ಮ ಭ್ರಮಾಲೋಕದಿಂದ ಹೊರ ಬರದಿದ್ದಲ್ಲಿ, ಭಾರತೀಯ ಸಮಾಜ ಮತ್ತಷ್ಟು ಸಾಂಪ್ರದಾಯಿಕತೆಗೆ ಜಾರುವುದು ಖಚಿತ. ಭಾರತದ ಶ್ರೇಣೀಕೃತ ಸಮಾಜದ ಮೂಲ ತಳಹದಿಯೇ ಶ್ರೇಷ್ಠತೆಯ ಮನೋಭಾವ. ಈ ಮನೋಭಾವದಿಂದ ಹೊರತಾದ ಕೆಲವೇ ಮಹನೀಯರು ಮಾತ್ರ ಹಿಂದೂ ಎನ್ನಲಾಗುವ ವೈದಿಕ ಧರ್ಮವನ್ನು ಧಿಕ್ಕರಿಸಿ ಹೊರನಡೆದಿರುವುದು ಇತಿ ಹಾಸದಲ್ಲಿ ಕಾಣಬಹುದು. ಹಾಗೆಯೇ ಜನ್ಮ ಶ್ರೇಷ್ಠತೆಯ ಪ್ರತಿಪಾದನೆಯ ಮೂಲಕ ಜಾತಿ ಶ್ರೇಷ್ಠತೆಯನ್ನು ಪಡೆಯಲೆತ್ನಿಸುವ ವೈದಿಕಶಾಹಿ ಮನೋಭಾವವು ಶತಮಾನಗಳ ಕಾಲ ತನ್ನ ಬೌದ್ಧಿಕ ಕಸರತ್ತಿನ ಮೂಲಕವೇ ತನ್ನ ರಕ್ಷಣೆ ಮಾಡಿಕೊಳ್ಳುತ್ತಿರುವುದನ್ನೂ ಇತಿಹಾಸದಲ್ಲಿ ಕಾಣಬಹುದು. ವೈದಿಕ ಸಂಸ್ಕೃತಿಯ ಅಂಶಿಕ ಭಾಗವಾಗಿ ಕಂಡುಬರುವ ಒಂದು ವಿದ್ಯಮಾನವೆಂದರೆ ತನ್ನನ್ನು ತಾನೇ ಶ್ರೇಷ್ಠನೆಂದು ಭಾವಿಸುವ, ಹಾಗೆಯೇ ತನ್ನೊಡನೆ ಬಾರದಿದ್ದವ ರನ್ನು ಕನಿಷ್ಠ ಎಂದು ಪರಿಗಣಿಸುವ ಮನೋಭಾವ.

ಒಂದು ವಿಶಿಷ್ಟ ಪರಂಪರೆಯಾಗಿ ಬೆಳೆದು ಬಂದಿರುವ ಈ ಮನೋಭಾವವನ್ನು ಪೀಳಿಗೆಯಿಂದ ಪೀಳಿಗೆಗೆ ರಕ್ಷಿಸಿಕೊಂಡು ಬರುವ ಸಲುವಾಗಿಯೇ ವೈದಿಕಶಾಹಿಯು ತನ್ನದೇ ಆದ ಸಾಂಸ್ಥಿಕ ಸಂರಚನೆಗಳನ್ನು ಸ್ಥಾಪಿಸಿವೆ. ಈ ಸಂರಚನೆಗಳು ಕಾಲದಿಂದ ಕಾಲಕ್ಕೆ ತನ್ನ ಬಾಹ್ಯ ಸ್ವರೂಪವನ್ನು ಬದಲಾಯಿಸಿ ಕೊಂಡರೂ, ಆಂತರಿಕವಾಗಿ ಪುರಾತನ, ಪ್ರಾಚೀನ ಲಕ್ಷಣಗಳನ್ನು ಯಥಾವತ್ತಾಗಿ ಕಾಪಾಡಿಕೊಂಡು ಬಂದಿವೆ. ಒಂದು ಕಾಲದಲ್ಲಿ ಆತ್ಮ ಸಾಕ್ಷಾತ್ಕಾರ ಮತ್ತು ದೈವ ಸಾಕ್ಷಾತ್ಕಾರದ ಹೆಸರಿನಲ್ಲಿ ಧಾರ್ಮಿಕ ನಂಬಿಕೆಗಳಿಗೆ ದೈವೀಕ ಪರಿಕಲ್ಪನೆ ನೀಡಿದ ಈ ಸಾಂಸ್ಥಿಕ ಸಂರಚನೆಗಳು ಇಂದು ಧರ್ಮದ ವ್ಯಾಖ್ಯಾನವನ್ನೇ ಒಂದು ನಿರ್ದಿಷ್ಟ ಚೌಕಟ್ಟಿಗೆ ಸೀಮಿತಗೊಳಿಸಿ, ತನ್ಮೂಲಕ ಸಾಮುದಾಯಿಕ ಅಸ್ಮಿತೆಗಳನ್ನು ನಿರ್ಧರಿಸಲೆತ್ನಿಸುತ್ತಿವೆ. ಹಾಗಾಗಿ ಈ ಧರ್ಮ ಸಂಸ್ಥೆಗಳಿಗೆ ತಮ್ಮ ಬೇರುಗಳನ್ನು ಗಟ್ಟಿಗೊಳಿಸುವ ಅಗತ್ಯತೆ ಹಿಂದಿಗಿಂತಲೂ ಹೆಚ್ಚಾಗಿದ್ದು ಜನಸಮು ದಾಯಗಳ ಸಂಪರ್ಕ ಮತ್ತು ಸ್ಪಂದನೆ ಅನಿವಾರ್ಯವಾಗಿದೆ. ಈ ಅನಿವಾರ್ಯ

ಅಸ್ಪೃಶ್ಯತೆಯ ನಿವಾರಣೆಯ ನಿಟ್ಟಿನಲ್ಲಿ ವೈದಿಕ ಶಾಹಿಯ ಪ್ರತಿನಿಧಿಯೊಬ್ಬರು ದಲಿತ ಕೇರಿಗೆ ಭೇಟಿ ನೀಡುವುದು ಒಂದು ಮಹತ್ವದ ಮೆಟ್ಟಿಲು ಎಂದು ಭಾವಿಸುವವರು ತಮ್ಮ ಭ್ರಮಾಲೋಕದಿಂದ ಹೊರ ಬರದಿದ್ದಲ್ಲಿ, ಭಾರತೀಯ ಸಮಾಜ ಮತ್ತಷ್ಟು ಸಾಂಪ್ರದಾಯಿಕತೆಗೆ ಜಾರುವುದು ಖಚಿತ. ಭಾರತದ ಶ್ರೇಣೀಕೃತ ಸಮಾಜದ ಮೂಲ ತಳಹದಿಯೇ ಶ್ರೇಷ್ಠತೆಯ ಮನೋಭಾವ. ಈ ಮನೋಭಾವದಿಂದ ಹೊರತಾದ ಕೆಲವೇ ಮಹನೀಯರು ಮಾತ್ರ ಹಿಂದೂ ಎನ್ನಲಾಗುವ ವೈದಿಕ ಧರ್ಮವನ್ನು ಧಿಕ್ಕರಿಸಿ ಹೊರನಡೆದಿರುವುದು ಇತಿಹಾಸದಲ್ಲಿ ಕಾಣಬಹುದು. ಹಾಗೆಯೇ ಜನ್ಮ ಶ್ರೇಷ್ಠತೆಯ ಪ್ರತಿಪಾದನೆಯ ಮೂಲಕ ಜಾತಿ ಶ್ರೇಷ್ಠತೆಯನ್ನು ಪಡೆಯಲೆತ್ನಿಸುವ ವೈದಿಕಶಾಹಿ ಮನೋಭಾವವು ಶತಮಾನಗಳ ಕಾಲ ತನ್ನ ಬೌದ್ಧಿಕ ಕಸರತ್ತಿನ ಮೂಲಕವೇ ತನ್ನ ರಕ್ಷಣೆ ಮಾಡಿಕೊಳ್ಳುತ್ತಿರುವುದನ್ನೂ ಇತಿಹಾಸದಲ್ಲಿ ಕಾಣಬಹುದು.

ತೆಗಳೇ ಧರ್ಮರಕ್ಷಣೆಯ ಸಮರ ಸಾಧನಗಳಾಗಿ ಪರಿಣಮಿಸಿರುವುದು ಪಾದಯಾತ್ರೆಗಳ ಮೂಲಕ ಪ್ರಕಟಗೊಳ್ಳುತ್ತಿದೆ.

ಧರ್ಮ ಸಂಸ್ಕೃತಿ ಮತ್ತು ಆಧ್ಯಾತ್ಮ

ಪ್ರಸ್ತುತ ಸಂದರ್ಭದಲ್ಲಿ ಈ ವಿದ್ಯಮಾನ ಎರಡು ರೀತಿಯಲ್ಲಿ ಪ್ರಕಟಗೊಳ್ಳುತ್ತಿದೆ. ಮೊದಲನೆಯದಾಗಿ ಮಠ, ದೇವಾಲಯ ಮತ್ತು ಆಧ್ಯಾತ್ಮಿಕ ಕೇಂದ್ರಗಳನ್ನು ಜನಸಮುದಾಯಗಳ ತರಬೇತು ಸಂಸ್ಥೆಗಳನ್ನಾಗಿ ಮಾರ್ಪಡಿಸುವುದು. ದೈವತ್ವದ ಕಲ್ಪನೆ, ದೈವಾರಾಧನೆಯ ಫಲಾಫಲಗಳು, ಬಹುದೈವತ್ವದಿಂದ ಏಕದೇವತ್ವದೆಡೆಗೆ ಚಲನೆ, ಆಚರಣಾ ಪದ್ಧತಿಗಳ ತಾತ್ಕಾಲಿಕ ಬದಲಾವಣೆಗಳ ಮೂಲಕ ಆರಾಧನಾ ಪದ್ಧತಿಗಳ ಹೇರಿಕೆ ಇವೆಲ್ಲವೂ ಈ ಪ್ರಕ್ರಿಯೆಯ ಮೂಲ ಪರಿಕರಗಳಾಗಿರುತ್ತವೆ. ಈ ಪ್ರಕ್ರಿಯೆಯಲ್ಲೇ ಪ್ರಕಟಗೊಳ್ಳುವ ಮತ್ತೊಂದು ಪ್ರವೃತ್ತಿ ಎಂದರೆ ಜನಸಮುದಾಯಗಳ ಮೂಲಭೂತ ಅಸ್ಮಿತೆಗಳನ್ನೇ ನಿರಾಕರಿಸಿ ಒಂದು ನಿರ್ದಿಷ್ಟ ಸ್ಥಾಪಿತ ಧರ್ಮದಲ್ಲಿ ಸಮೀಕರಿಸುವುದು. ಈ ಮಹತ್ತರ (!) ಕಾರ್ಯವನ್ನು ನೆರವೇರಿಸಲೆಂದೇ ಹುಟ್ಟಿಕೊಂಡಿರುವ ಧಾರ್ಮಿಕ ಕೇಂದ್ರಗಳು ಜನಸಮುದಾಯಗಳನ್ನು ತಮ್ಮತ್ತ ಸೆಳೆಯಲು ಸರ್ವ ಪ್ರಯತ್ನಗಳನ್ನೂ ಮಾಡುತ್ತಿರುವುದು ಗುಟ್ಟಿನ ಮಾತೇನಲ್ಲ.

ಎರಡನೆಯದಾಗಿ ಆಧ್ಯಾತ್ಮ-ಸಂಸ್ಕೃತಿ ಮತ್ತು ಧರ್ಮಗಳ ಸಮೀಕರಣದ ಮೂಲಕ ಮಾನವ ಸಮಾಜದ ಮೂಲ ಅಸ್ತಿತ್ವವನ್ನೇ ನಿರಾಕರಿಸುವ ಧರ್ಮ ಮತ್ತು ರಾಜಕಾರಣದ ಸಮ್ಮಿಲನ ಪ್ರಕ್ರಿಯೆ. ಪ್ರಾಚೀನ ಭಾರತದಲ್ಲಿ ಅಸ್ತಿತ್ವದಲ್ಲೇ ಇಲ್ಲದಿದ್ದ ಧರ್ಮದ ಚೌಕಟ್ಟಿಗೆ ಸಾಂಸ್ಥಿಕ ಸ್ವರೂಪ ನೀಡಿ, ದೇಶದ ಪುರಾತನ ಜನಸಂಸ್ಕೃತಿಗಳ ಆಚಾರ ವಿಚಾರಗಳನ್ನು ಈ ಸಾಂಸ್ಥಿಕ ಚೌಕಟ್ಟಿನ ಪರಿಧಿಯಲ್ಲೇ ವಿಶ್ಲೇಷಿಸಿ, ಪ್ರಾಚೀನ ಭಾರತದ ಆಧ್ಯಾತ್ಮದ ನೆಲೆಗಳನ್ನು ಇದೇ ಸ್ಥಾಪಿತ ಧರ್ಮದ ಚೌಕಟ್ಟಿನಲ್ಲಿ ಬಂಧಿಸುವುದನ್ನು ಈ ವಿದ್ಯಮಾನದಲ್ಲಿ ಕಾಣಬಹುದು. ಜಾತಿಗೊಂದರಂತೆ ಸ್ಥಾಪಿತವಾಗುತ್ತಿರುವ ಮಠಮಾನ್ಯಗಳು, ಆಧ್ಯಾತ್ಮ ಕೇಂದ್ರಗಳು ಮತ್ತು ಧರ್ಮರಕ್ಷಣಾ ಸಂಸ್ಥೆಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿವೆ. ಈ ಸಂಸ್ಥೆಗಳ ಪ್ರಮುಖ ಧ್ಯೇಯವೆಂದರೆ ಧರ್ಮ-ದೈವತ್ವದ ಬಗ್ಗೆ ಜನತೆಯಲ್ಲಿ ಆಸಕ್ತಿ ಮೂಡಿಸುವುದೇ ಆಗಿರುತ್ತದೆ. ಜಾತಿ ತಾರತಮ್ಯಗಳನ್ನು ಮೀರಿ ಧರ್ಮ-ದೈವ ಸಾಕ್ಷಾತ್ಕಾರವನ್ನು ಸಾಧಿಸುವ ಮಾರ್ಗದಲ್ಲಿ ಆಧ್ಯಾತ್ಮವನ್ನು ಪ್ರಬಲ ಅಸ್ತ್ರವನ್ನಾಗಿ ಬಳಸಲಾಗುವ ಈ ಪ್ರಕ್ರಿಯೆಯಲ್ಲಿ, ರಾಜಕೀಯ ಅಧಿಕಾರ ಗ್ರಹಣವೂ ಒಂದು ಮುಖ್ಯ ಅಂಶವಾಗಿರುವುದು ಅಯೋಧ್ಯೆ ವಿವಾದದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಹಾಗಾಗಿಯೇ ಸೆಕ್ಯುಲಾರ್ ಸಂವಿಧಾನವನ್ನು ರಕ್ಷಿಸಬೇಕಾದ ನ್ಯಾಯಾಂಗವೂ ಚಾರಿತ್ರಿಕ ದಾಖಲೆಗಳನ್ನು ಕಡೆಗಣಿಸಿ, ಜನತೆಯ ನಂಬಿಕೆ, ವಿಶ್ವಾಸಗಳನ್ನು ಪುರಸ್ಕರಿಸುತ್ತದೆ.

ಈ ಸನ್ನಿವೇಶದಲ್ಲಿ ಗಮನಿಸಬೇಕಾದ ಅಂಶವೆಂದರೆ, ಸಮಕಾಲೀನ ಸಂದರ್ಭದಲ್ಲಾಗಲಿ, ಚಾರಿತ್ರಿಕವಾಗಿಯೇ ಆಗಲಿ ಭಾರತದಲ್ಲಿ ಸಂಸ್ಕೃತಿ ಎಂದ ಕೂಡಲೆ ಧರ್ಮ ಎತ್ತಲಿಂದಲೋ ಒಳ ನುಸುಳಿ ಕೇಂದ್ರ ಸ್ಥಾನ ಆಕ್ರಮಿಸಿಬಿಡುತ್ತದೆ. ಸಂಸ್ಕೃತಿಯನ್ನು ಮಾನವ ಸಮಾಜದ ಮೂಲ ನೆಲೆಯ ಹಿನ್ನೆಲೆಯಲ್ಲಿ ಗ್ರಹಿಸುವ ಪರಂಪರೆಗೆ ತಿಲಾಂಜಲಿ ನೀಡಿ, ಜನ ಸಂಸ್ಕೃತಿಗಳನ್ನೂ ಆಪೋಷನ ಮಾಡಿರುವ ವೈದಿಕಶಾಹಿ ಧರ್ಮಗಳು ಇದೇ ಜನ ಸಂಸ್ಕೃತಿಯ ಮೂಲ ಸೆಲೆಗಳನ್ನೂ ತನ್ನ ತೆಕ್ಕೆಯೊಳಗೆ ಸೇರಿಸಿಕೊಂಡಿರುವುದು ಸ್ಪಷ್ಟ. ಹಾಗಾಗಿಯೇ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವೆಂದೇ ಹೇಳಬಹುದಾದ ಮುನಿ ಸಂಸ್ಕೃತಿಯನ್ನೂ ವೈದಿಕಶಾಹಿಯ ಋಷಿ ಸಂಸ್ಕೃತಿಯ ಕಬಂಧ ಬಾಹುಗಳಲ್ಲಿ ಸಿಲುಕಿಸುವ ಪ್ರಯತ್ನಗಳು ನಡೆಯುತ್ತಲೇ ಇದ್ದು ಸಫಲತೆಯನ್ನೂ ಪಡೆದಿವೆ. ಭಾರತೀಯ ಮೂಲ ನಿವಾಸಿಗಳ ಜನಸಂಸ್ಕೃತಿಯ ಗರ್ಭದಲ್ಲಿ ಜನಿಸಿದ ಆಚರಣೆಗಳನ್ನು ತಮ್ಮ ವೈದಿಕ ಆಚಾರ ವಿಚಾರಗಳೊಡನೆ ಸಮೀಕರಿಸುವ ಮೂಲಕ ಮೂಲ ನೆಲೆಗಳನ್ನೇ ನಾಶಪಡಿಸುವಲ್ಲಿ ಸಫಲತೆಯನ್ನು ಪಡೆದಿವೆ. ಹಾಗಾಗಿಯೇ ಜನಸಂಸ್ಕೃತಿಗಳಿಗೆ ವ್ಯತಿರಿಕ್ತವಾದ ಶ್ರೇಷ್ಠತೆಯ ಪರಿಕಲ್ಪನೆಗಳೂ ಸಹ ಈ ಸಂಸ್ಕೃತಿಯನ್ನು ಪ್ರತಿನಿಧಿಸುವ ಜನಸಮುದಾಯಗಳಲ್ಲಿ ಹಾಸುಹೊಕ್ಕಾದಂತೆ ಕಾಣುತ್ತದೆ.

ಪೇಜಾವರರ ಪಾದಯಾತ್ರೆ ಪ್ರಹಸನದ ಹಿನ್ನೆಲೆಯಲ್ಲಿ ಹಲವು ಪ್ರಶ್ನೆಗಳು ಗಾಢವಾಗಿ ಕಾಡುತ್ತವೆ. ಪೇಜಾವರರಾಗಲೀ ಅವರ ಸಮರ್ಥಕರಾಗಲೀ ಪಾದಯಾತ್ರೆಯ ಮೂಲಕ ಸಾಧಿಸುತ್ತಿರುವುದಾದರೂ ಏನನ್ನು? ಅವರದೇ ಆದ ಮಾತುಗಳಲ್ಲಿ ಹೇಳುವುದಾದರೆ, ಹಿಂದೂ ಧರ್ಮ ನಶಿಸುತ್ತಿದೆ, ಮತಾಂತರದ ಪರಿಣಾಮವಾಗಿ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು ಗಟ್ಟಿಯಾಗುತ್ತಿವೆ, ಹಿಂದೂ ಧರ್ಮದ ಉಳಿವಿಗೆ ಸಮಸ್ತ ಹಿಂದೂಗಳು, ತಮ್ಮ ಜಾತಿ ತಾರತಮ್ಯಗಳನ್ನು ಮರೆತು ಒಂದಾಗುವ ಅವಶ್ಯಕತೆ ಇದೆ, ಈ ನಿಟ್ಟಿನಲ್ಲಿ ಅಸ್ಪೃಶ್ಯತೆಯಿಂದ ಬೇಸತ್ತು ಅನ್ಯಧರ್ಮಗಳನ್ನು ಸ್ವೀಕರಿಸುತ್ತಿರುವ ದಲಿತರನ್ನು ಹಿಂದೂ ಧರ್ಮದಲ್ಲೇ ಉಳಿಸಿಕೊಳ್ಳುವ ತುರ್ತು ಅಗತ್ಯತೆ ಇದೆ.

ನಂಬಿಕೆ ಮತ್ತು ವಿಶ್ವಾಸಗಳೇ ಪ್ರಧಾನ ಭೂಮಿಕೆ ವಹಿಸಿದಾಗ ಆಕ್ರಮಿತ ಪ್ರದೇಶಗಳನ್ನೂ ನ್ಯಾಯಯುತವಾಗಿ ದಕ್ಕಿಸಿಕೊಳ್ಳಬಹುದಾದ ಅವಕಾಶ ಇದೀಗ ನ್ಯಾಯಾಂಗದ ಮೂಲಕವೇ ಲಭಿಸಿರುವಂತೆ, ವೈದಿಕಶಾಹಿಯೂ ಶತಮಾನಗಳ ಇತಿಹಾಸದಲ್ಲಿ ಅನೇಕ ಆಕ್ರಮಿತ ನೆಲೆಗಳ ಮೇಲೆ ತನ್ನ ಅಧಿಪತ್ಯ ಸಾಧಿಸಿರುವುದನ್ನು ಕಾಣಬಹುದು. ಭಾರತದ ಇತಿಹಾಸದಲ್ಲಿ ವೈದಿಕಶಾಹಿಯ ಆಕ್ರಮಣದಿಂದ ಧ್ವಂಸವಾಗಿರುವ ಸಾಂಸ್ಕೃತಿಕ ನೆಲೆಗಳಿಗೆ ಲೆಕ್ಕವೇ ಇಲ್ಲ. ಆದರೆ ಈ ಧ್ವಂಸಗೊಂಡ ನೆಲೆಗಳಲ್ಲೆಲ್ಲಾ ತನ್ನ ಶಾಶ್ವತ ಮುದ್ರೆ ಒತ್ತುವುದರಲ್ಲಿ ವೈದಿಕಶಾಹಿ ಯಶಸ್ವಿಯಾಗಿದೆ. ಇತ್ತೀಚಿನ ಅಯೋಧ್ಯಾ ತೀರ್ಪಿನ ಹಿನ್ನೆಲೆಯಲ್ಲಿ ನೋಡಿದರೆ, ಭಾರತದ ಇತಿಹಾಸದಲ್ಲಿ ನಡೆದಿರುವ ಈ ರೀತಿಯ ಧ್ವಂಸ ಮತ್ತು ಆಕ್ರಮಣ ಕಾರ್ಯಾಚರಣೆಗಳು ಸುಲಭವಾಗಿ ಸಿಂಧುತ್ವ ಪಡೆಯಬಹುದು. ಹಾಗಾಗಿಯೇ ತನ್ನ ವಿರಾಟ್ ಬಾಹುಗಳಲ್ಲಿ ದೃಷ್ಟಿಗೆ ನಿಲುಕುವ ಎಲ್ಲ ನೆಲೆಗಳನ್ನು, ಮೂಲ ಸೆಲೆಗಳನ್ನೂ ಬಾಚಿಕೊಂಡಿರುವ ವೈದಿಕಶಾಹಿಯು ಇಂದಿಗೂ ತನ್ನ ಆಕ್ರಮಣಶೀಲತೆಯನ್ನು ಪ್ರದರ್ಶಿಸುತ್ತಲೇ ಇದೆ. ಇದರ ಒಂದು ಭಾಗವೇ ಪೇಜಾವರರ ಚಾತುರ್ಮಾಸ್ಯದ ಪಾದಯಾತ್ರೆ ಪ್ರಹಸನ.

ಜನ ಸಂಸ್ಕೃತಿಯ ಉಳಿವು

ಪೇಜಾವರರ ಪಾದಯಾತ್ರೆ ಪ್ರಹಸನದ ಹಿನ್ನೆಲೆಯಲ್ಲಿ ಹಲವು ಪ್ರಶ್ನೆಗಳು ಗಾಢವಾಗಿ ಕಾಡುತ್ತವೆ. ಪೇಜಾವರರಾಗಲೀ ಅವರ ಸಮರ್ಥಕರಾಗಲೀ ಪಾದಯಾತ್ರೆಯ ಮೂಲಕ ಸಾಧಿಸುತ್ತಿರುವುದಾದರೂ ಏನನ್ನು ? ಅವರದೇ ಆದ ಮಾತುಗಳಲ್ಲಿ ಹೇಳುವುದಾದರೆ, ಹಿಂದೂ ಧರ್ಮ ನಶಿಸುತ್ತಿದೆ, ಮತಾಂತರದ ಪರಿಣಾಮವಾಗಿ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು ಗಟ್ಟಿಯಾಗುತ್ತಿವೆ, ಹಿಂದೂ ಧರ್ಮದ ಉಳಿವಿಗೆ ಸಮಸ್ತ ಹಿಂದೂಗಳು, ತಮ್ಮ ಜಾತಿ ತಾರತಮ್ಯಗಳನ್ನು ಮರೆತು ಒಂದಾಗುವ ಅವಶ್ಯಕತೆ ಇದೆ, ಈ ನಿಟ್ಟಿನಲ್ಲಿ ಅಸ್ಪೃಶ್ಯತೆಯಿಂದ ಬೇಸತ್ತು ಅನ್ಯಧರ್ಮಗಳನ್ನು ಸ್ವೀಕರಿಸುತ್ತಿರುವ ದಲಿತರನ್ನು ಹಿಂದೂ ಧರ್ಮದಲ್ಲೇ ಉಳಿಸಿಕೊಳ್ಳುವ ತುರ್ತು ಅಗತ್ಯತೆ ಇದೆ. ಈ ಎಲ್ಲಾ ಕಾರಣಗಳಿಗಾಗಿ ದಲಿತ ಸಮುದಾಯಗಳಿಗೆ ಹಿಂದೂ ಧರ್ಮದಲ್ಲಿ ನಂಬಿಕೆ ಹುಟ್ಟಿಸಲು, ವೈದಿಕಶಾಹಿಯಲ್ಲಿ ವಿಶ್ವಾಸ ಮೂಡಿಸಲು ಪಣತೊಟ್ಟಿರುವ ಪೇಜಾವರರು ದಲಿತ ಕೇರಿಗಳಿಗೆ ಭೇಟಿ ನೀಡುವ ಮಹತ್ಕಾರ್ಯ(?) ಕೈಗೊಂಡಿದ್ದಾರೆ.

ಇಲ್ಲಿ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಮೊದಲನೆಯದಾಗಿ ವೈದಿಕ ಧರ್ಮವು ತನ್ನ ಶತಮಾನಗಳ ಪಾಪ ಕೃತ್ಯಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳುವ ನಿರ್ಧಾರ ಮಾಡಿದೆ. ಜಾತಿ ವ್ಯವಸ್ಥೆ ಎಂಬುದೇ ಇಲ್ಲ, ವೈದಿಕಶಾಹಿ ಎಂದಿಗೂ ಜಾತಿ ವ್ಯವಸ್ಥೆಯನ್ನು ಪೋಷಿಸಿಲ್ಲ, ವರ್ಣಾಶ್ರಮ ಧರ್ಮವೇ ಕಾಲಾನುಕ್ರಮದಲ್ಲಿ ಜಾತಿ ಪದ್ಧತಿಯಾಗಿ ಪರಿವರ್ತನೆ ಹೊಂದಿದೆ ಎಂದೆಲ್ಲಾ ವಾದಿಸುತ್ತಿದ್ದ ವೈದಿಕಶಾಹಿಯ ವಕ್ತಾರರು ಈಗ ಅಸ್ಪೃಶ್ಯತೆಯ ವಾಸ್ತವತೆಯನ್ನು ಒಪ್ಪಿಕೊಳ್ಳುತ್ತಿದ್ದಾರೆ. ಎರಡನೆಯದಾಗಿ ವೈದಿಕಶಾಹಿಯು ಪ್ರತಿನಿಧಿಸುವ ಮತ್ತು ವ್ಯಾಖ್ಯಾನಿಸುವ ಹಿಂದೂ ಧರ್ಮದ ಉಳಿವಿಗೆ ಅಸ್ಪೃಶ್ಯರ ಅಥವಾ ದಲಿತ ಸಮುದಾಯಗಳ ಅಸ್ತಿತ್ವವೂ ಅನಿವಾರ್ಯ ಎಂಬ ಸತ್ಯವನ್ನು ಬ್ರಾಹ್ಮಣಶಾಹಿಯು ಈಗ ಒಪ್ಪಿಕೊಳ್ಳುತ್ತಿದೆ. ಒಂದು ಕಾಲಘಟ್ಟದಲ್ಲಿ ಹಿಂದೂ ವರ್ಣಾಶ್ರಮ ಧರ್ಮದ ಪರಿಧಿಯಿಂದಲೇ ಹೊರದೂಡಲ್ಪಟ್ಟಿದ್ದ ಪಂಚಮ ಸಮುದಾಯಗಳು ಈಗ ಹಿಂದೂ ಧರ್ಮದ ಪುನರುತ್ಥಾನಕ್ಕೆ ಅನಿವಾರ್ಯವಾಗಿದ್ದಾರೆ. ಈ ಪ್ರಕ್ರಿಯೆಯ ವಿಸ್ತೃತ ಪ್ರಯತ್ನಗಳಲ್ಲಿ ಪೇಜಾವರರ ಪಾದಯಾತ್ರಾ ಪ್ರಹಸನವೂ ಒಂದು.

ಆದರೆ ಪೇಜಾವರರು ತಮ್ಮ ಸ್ವಂತ ನಿರ್ಧಾರದಿಂದ ವ್ಯಕ್ತಿಗತವಾದ ನಿಲುವಿನಿಂದ ದಲಿತ ಕೇರಿಯನ್ನು ಭೇಟಿ ಮಾಡಿದ ಮಾತ್ರಕ್ಕೆ ಅಸ್ಪೃಶ್ಯತೆಯ ನಿವಾರಣೆಗೆ ಹೊಸ ಆಯಾಮ ದೊರಕುವುದು ಸಾಧ್ಯವೇ ? ಪೇಜಾವರರು ಮಾಧ್ವ ಸಂಪ್ರದಾಯಸ್ಥರು, ಬ್ರಾಹ್ಮಣರಲ್ಲೇ ಇತರ ಸಂಪ್ರದಾಯಗಳನ್ನು ಒಪ್ಪಿಕೊಂಡರೂ ಅಪ್ಪಿಕೊಳ್ಳುವವರಲ್ಲ. ಮಾಧ್ವ ಸಂಪ್ರದಾಯಕ್ಕೇ ಒಳಪಡುವ ಉತ್ತರಾದಿಮಠದ ವಿಧಿವಿಧಾನಗಳನ್ನು ಸ್ವೀಕರಿಸುವರೇ? ಶೈವಾರಾಧನೆಯನ್ನು ಅಪ್ಪಿತಪ್ಪಿಯಾದರೂ ಮಾಡುವರೇ ? ತಮ್ಮ ಅರ್ಥವ್ಯಾಪ್ತಿಯ ಹಿಂದೂ ಧರ್ಮದ ಚೌಕಟ್ಟಿನಲ್ಲಿ ವೈದಿಕಶಾಹಿಯ ಸಕಲ ಪ್ರವೃತ್ತಿಗಳನ್ನೂ ಅಳವಡಿಸಿಕೊಂಡಿರುವ ಸಮಕಾಲೀನ ವೀರಶೈವ ಧರ್ಮದೊಡನೆ ಪೇಜಾವರರು ಯಾವ ರೀತಿ ಸ್ಪಂದಿಸುತ್ತಾರೆ ? ತಮ್ಮದೇ ಆದ ಮಠದಲ್ಲಿ ಅನ್ಯ ಪ್ರಕಾರದ ವಿಧಿವಿಧಾನಗಳನ್ನು ಆಚರಿಸಲು ಒಪ್ಪಿಕೊಳ್ಳಲು ಸಾಧ್ಯವೇ? ಎಲ್ಲ ಪ್ರಶ್ನೆಗಳಿಗೂ ಒಂದೇ ಉತ್ತರ, ಅಸಾಧ್ಯ !

ಹೀಗಿರುವಾಗ ಪೇಜಾವರರಾಗಲೀ, ಅವರ ಸೋಗಲಾಡಿ ಹಿಂಬಾಲಕರಾಗಲೀ ಯಾವ ಹಿಂದು ಧರ್ಮವನ್ನು ಒಟ್ಟುಗೂಡಿಸಲು ಮುಂದಾಗಿದ್ದಾರೆ ? ದಲಿತ ಕೇರಿಗೆ ಭೇಟಿನೀಡಿ, ತಮ್ಮದೇ ಸಂಪ್ರದಾಯದಲ್ಲಿ ಪೂರ್ಣ ಕುಂಭ ಸ್ವಾಗತ ಪಡೆದು, ಪಾದಪೂಜೆ ಮಾಡಿಸಿಕೊಂಡು, ಅಲ್ಲಿನ ಜನತೆಗೆ ಆಶೀರ್ವಚನ ಮಾಡುವ ಯತಿವರೇಣ್ಯರು ದಲಿತನ ಮನೆಯೊಂದರಲ್ಲಿ ಕುಳಿತು ದೇವರ ಪೂಜೆ ಮಾಡುವುದಾದರೂ ಹೇಗೆ. ಆ ದಲಿತನ ಮನೆಯಲ್ಲಿರುವ ದೈವಕ್ಕೆ ಪೂಜೆ ಸಲ್ಲಿಸುತ್ತಾರೆಯೇ ? ಇದು ಅಸಾಧ್ಯದ ಮಾತು. ಪೇಜಾವರರಷ್ಟೇ ಅಲ್ಲ, ವೈದಿಕಶಾಹಿಯ ಎಲ್ಲ ಯತಿಗಳೂ ತಮ್ಮೊಡನೆ ಕೊಂಡೊಯ್ಯುವ ಸಂಪುಟಕ್ಕೆ ಮಾತ್ರ ಪೂಜೆ ಮಾಡುತ್ತಾರೆ. ಈ ಸಂಪುಟವನ್ನು ಅವರ ವಿನಃ ಮತ್ತಾರೂ ಸ್ಪರ್ಶಿಸಲಾಗುವುದಿಲ್ಲ. ಅಥವಾ ಪೂಜಿಸಲೂ ಆಗುವುದಿಲ್ಲ. ಒಂದು ರೀತಿ ಡಾಕ್ಟರ್ ಕಿಟ್ ಇದ್ದಂತೆ.

ಸಂಪುಟದಲ್ಲಿ ಸಾಲಿಗ್ರಾಮ, ವಿಷ್ಣು ಚಕ್ರಗಳಿರುತ್ತವೆ. ಯತಿಗಳು ಮಡಿಯುಟ್ಟು, ಪರಿಶುದ್ಧತೆಯಿಂದ ಅದನ್ನು ಪೂಜಿಸುವುದರಿಂದ, ಅನ್ಯರ ಸ್ಪರ್ಶದಿಂದ ಅದು ಮೈಲಿಗೆಯಾಗುವುದನ್ನು ಒಪ್ಪಲಾಗುವುದಿಲ್ಲ, ಹಾಗಾಗಿ ಇದು ಜಾತಿಯ ಪ್ರಶ್ನೆಗಿಂತಲೂ, ಪರಿಶುದ್ಧತೆ ಮತ್ತು ನಂಬಿಕೆಗಳ ಪ್ರಶ್ನೆ ಎಂದು ಬ್ರಾಹ್ಮಣಶಾಹಿಗಳು ವಾದಿಸುತ್ತಾರೆ. ಇದು ವಾಸ್ತವವೂ ಹೌದು. ಸಾಲಿಗ್ರಾಮ ಇರುವ ಮನೆಗಳಲ್ಲಿ ಕುಟುಂಬದ ಸದಸ್ಯರಿಗೂ ಅದನ್ನು ಸ್ಪರ್ಶಿಸುವ ಹಕ್ಕು ಇರುವುದಿಲ್ಲ. ಮಹಿಳೆಯರಿಗಂತೂ ಇರುವುದೇ ಇಲ್ಲ. ಆದರೆ ಭಾರತದ ಜನಸಂಸ್ಕೃತಿಯ ದೃಷ್ಟಿಯಲ್ಲಿ ಈ ನಂಬಿಕೆ ಮತ್ತು ಪರಿಶುದ್ಧತೆಯ ಪರಿಕಲ್ಪನೆಗಳೇ ಜನವಿರೋಧಿಯಾಗಿ ಕಾಣುತ್ತದೆ. ಭಾರತದಲ್ಲಿ ಅಸ್ಪೃಶ್ಯರಿಗೆ ಸ್ಪರ್ಶಿಸಲ್ಪಡುವ ಹಕ್ಕು ಲಭ್ಯವಾಗಿದೆ, ಅದೂ ಅನಿವಾರ್ಯತೆಗಳಿಂದ, ಸಾಂವಿಧಾನಿಕ ನಿಯಮಗಳಿಂದ. ಆದರೆ ಸ್ಪರ್ಶಿಸುವ ಹಕ್ಕು ಇಂದಿಗೂ ಲಭ್ಯವಾಗಿಲ್ಲ. ಈ ಸ್ಪರ್ಶಿಸುವ ಹಕ್ಕನ್ನು ನಿರಾಕರಿಸುವ ಮೂಲ ಕಾರಣ ಜಾತಿಯ ಲೇಪನವೇ ಆದರೂ, ನೀಡಲಾಗುವ ಕಾರಣಗಳು ಶುದ್ಧತೆ, ನಂಬಿಕೆ ಇತ್ಯಾದಿ.

ದೇವಾಲಯದ ಗರ್ಭಗುಡಿಯ ಪ್ರವೇಶದ ನಿರಾಕರಣೆಗೂ ಇದೇ ಕಾರಣಗಳನ್ನು ನೀಡಲಾಗುತ್ತದೆ. ಆದರೆ ವೈದಿಕಶಾಹಿಯ ಪರಿಶುದ್ಧತೆಯ ಕಲ್ಪನೆ, ವೈದಿಕ ಸಂಸ್ಕೃತಿಯ ಋಷಿ ಸಂಸ್ಕೃತಿಯಲ್ಲಿರುವುದೇ ಹೊರತು, ಜನಪದದ ಮುನಿ ಸಂಸ್ಕೃತಿಯಲ್ಲಿಲ್ಲ. ರಾಮಾಯಣದ ಶಂಭೂಕ, ಮಹಾಭಾರತದ ಕರ್ಣನಿಂದ ಹಿಡಿದು ಸಮಕಾಲೀನ ಭಾರತದ ದಲಿತರವರೆಗೆ ಈ ಕಲ್ಪನೆಯನ್ನು ವೈದಿಕಶಾಹಿ ಪೋಷಿಸುತ್ತಾ ಬಂದಿದೆ. ಪರಿಶುದ್ಧತೆಯ ವ್ಯಾಖ್ಯಾನ ಮಾಡುತ್ತಾ ಮಾನವನ ಆಂತರಿಕ ಶುದ್ಧಿ ಮುಖ್ಯವೇ ಹೊರತು, ಬಾಹ್ಯ ಶುದ್ಧಿಯಲ್ಲ ಎಂದು ಪುಂಖಾನುಪುಂಖವಾಗಿ ಉಪನ್ಯಾಸ ಮಾಡುವ ಯತಿವರೇಣ್ಯರು, ಗರ್ಭಗುಡಿ ಪ್ರವೇಶದ ವಿಷಯದಲ್ಲಿ ಮಾತ್ರ ಮಡಿ, ಆಚಾರಗಳ ನೆಪದಲ್ಲಿ ಪರಿಶುದ್ಧತೆಯ ಸೋಗು ಪ್ರದರ್ಶಿಸುತ್ತಾರೆ. ಭಾರತೀಯ ಸಮಾಜದಲ್ಲಿ ಹಾಸುಹೊಕ್ಕಾಗಿರುವ "ಅನ್ಯತೆ" ಮತ್ತು "ಶ್ರೇಷ್ಠತೆ" ಎಂಬ ಮನೋಭಾವಗಳಿಗೆ ಪ್ರೇರಣಾಶಕ್ತಿಯಾದ ಪರಿಶುದ್ಧತೆಯ ಕಲ್ಪನೆಯೇ ಅಸ್ಪೃಶ್ಯತೆಯ ಮೂಲ ಬೇರು ಎಂಬುದನ್ನು ಈ ಸಂದರ್ಭದಲ್ಲಿ ಗಮನಿಸಬೇಕಿದೆ.

ಇದೇ ಪರಂಪರೆಯ ಪರಿಣಾಮವಾಗಿಯೇ ವೈದಿಕಶಾಹಿ ಸಂಸ್ಕೃತಿಯಲ್ಲಿ ಸಾಷ್ಟಾಂಗ ನಮಸ್ಕಾರ, ದೀರ್ಘದಂಡ ನಮಸ್ಕಾರ, ಪೂರ್ಣಕುಂಭ ಸ್ವಾಗತ ಇವೇ ಮುಂತಾದ ಆಚರಣೆಗಳು ಜಾರಿಗೆ ಬಂದಿವೆ. ದೂರದಲ್ಲೇ ನಿಂತು ಎರಡೂ ಕೈಗಳನ್ನು ಜೋಡಿಸಿ ನಮಸ್ಕರಿಸುವುದು ಉನ್ನತ ಸಂಸ್ಕೃತಿಯ ದ್ಯೋತಕವೆಂದು ಹೇಳಲಾಗುವುದಾದರೂ, ಈ ಸಂಸ್ಕೃತಿಯ ಮೂಲಕಾರಣ ಭಾರತೀಯ ಸಮಾಜದಲ್ಲಿನ ಅಸ್ಪೃಶ್ಯತೆಯೇ ಆಗಿದೆ. ಕೆಳಜಾತಿ ಯವರನ್ನು ಕಣ್ಣೆತ್ತಿ ನೋಡುವುದೂ ಅಪರಾಧವಾಗಿದ್ದ ಸಮಾಜದಲ್ಲಿ, ಮನುಜ–ಮನುಜರ ನಡುವೆ ಸ್ಪರ್ಶಕ್ರಿಯೆ ನಡೆಯುವುದೇ ನಿಷಿದ್ಧವಾಗಿದ್ದ ಸಮಾಜದಲ್ಲಿ, ಕೈ ಕುಲುಕುವುದಾಗಲೀ, ಪರಸ್ಪರ ಅಪ್ಪುಗೆಯಾಗಲೀ ಸ್ವೀಕಾರಾರ್ಹ ವಾಗುವ ಸಾಧ್ಯತೆಗಳೇ ಇರಲಿಲ್ಲ. ಹಾಗಾಗಿ ಕೈಮುಗಿದು ನಮಸ್ಕರಿಸುವುದೇ ಪದ್ಧತಿಯಾಗಿ ಬೆಳೆದುಬಂದಿತ್ತು. ಈ ಪರಂಪರೆಯ ವಿಸ್ತೃತ ರೂಪವಾಗಿಯೇ ವೈದಿಕಶಾಹಿಯು ಪಾದಪೂಜೆಯ ಸಂಸ್ಕೃತಿಯನ್ನೂ ಬೆಳೆಸಿಕೊಂಡು ಬಂದಿದೆ. ದಲಿತ ಸಮುದಾಯಗಳನ್ನು ಅಪ್ಪಿಕೊಳ್ಳುವ ಮೂಲಕ ತಮ್ಮ ವೈದಿಕ ಚೌಕಟ್ಟಿನಿಂದ ಹೊರಬಂದು, ಅಖಂಡ ಹಿಂದೂ ಧರ್ಮದ ಸ್ಥಾಪನೆಗೆ ಪಣ ತೊಡುವ ಯತಿವರ್ಯರು ದಲಿತ ಕೇರಿಯಲ್ಲೂ ಪಾದಪೂಜೆ ಮಾಡಿಸಿಕೊಂಡಿದ್ದು ಈ ಸಂಸ್ಕೃತಿಯ ದ್ಯೋತಕವೇ ಆಗಿದೆ.

ಆದರೆ ಭಾರತದ ಮೂಲ ನಿವಾಸಿಗಳ ಇತಿಹಾಸದಲ್ಲಿ ಕಂಡುಬರುವ ಮುನಿ ಸಂಸ್ಕೃತಿಯ ಸಂಕಥನಗಳಲ್ಲಿ ಆಚರಣೆಗಳ, ವಿಧಿವಿಧಾನಗಳ ಉಲ್ಲೇಖ ಇರುವುದಿಲ್ಲ. ಜನಪದ ಸಂಸ್ಕೃತಿಯಲ್ಲಿ ಪ್ರಕೃತಿಯಲ್ಲೇ ದೈವತ್ವವನ್ನು ಕಾಣಲಾಗುತ್ತದೆ. ಇಲ್ಲಿನ ದೇವಾಧಿದೇವತೆಗಳು ಜನರ ಒಡಲಾಳದಲ್ಲೇ ಜನಿಸುತ್ತಾರೆ. ಗ್ರಾಮೀಣ–ಆದಿವಾಸಿ ದೇವತೆಗಳು ಜನಸಮುದಾಯಗಳಿಗೆ ಸನಿಹದಲ್ಲಿರುತ್ತಾರೆ. ಇಲ್ಲಿ ದೇವ–ಮಾನವರ ನಡುವೆ ಯಾವುದೇ ಏಜೆಂಟರಿರುವುದಿಲ್ಲ. ಜನರ ಅಹವಾಲುಗಳನ್ನು ದೇವರು ನೇರವಾಗಿ ಆಲಿಸುತ್ತಾನೆ ಎಂಬ ನಂಬಿಕೆ, ಸಾಮುದಾಯಿಕವಾಗಿ ಬೇರೂರಿರುತ್ತದೆ. ಹಾಗಾಗಿಯೇ ಮಾರಮ್ಮ, ಯಲ್ಲಮ್ಮ ಇತ್ಯಾದಿ ಗ್ರಾಮದೇವತೆಗಳು ಗುಡಿಯಲ್ಲೇ ಪ್ರತಿಷ್ಠಾಪಿತವಾಗಿದ್ದರೂ, ಭಕ್ತರಿಗೆ ಎಟುಕುವಂತಿರುತ್ತದೆ. ಸ್ಪರ್ಶದ ಹಂಗು ಇಲ್ಲಿರುವುದಿಲ್ಲ. ಸ್ಪೃಶ್ಯ–ಅಸ್ಪೃಶ್ಯರ ಕಲ್ಪನೆ ಇರುವುದಿಲ್ಲ. ತಮ್ಮ ನೆಚ್ಚಿನ ದೇವ ದೇವತೆಗಳನ್ನು ಅತ್ಯಂತ ಸನಿಹದಲ್ಲಿ ಕಾಣುವ ಜನತೆಗೆ ಭಕ್ತಿಯ ಆವೇಶದಿಂದ ದೇವರು ಮೈಮೇಲೆ ಬಂದಂತೆ ಭಾಸವಾಗುವುದನ್ನು ಈ ದೃಷ್ಟಿಯಿಂದಲೇ ನೋಡಬೇಕಾಗುತ್ತದೆ. ಎಷ್ಟೇ ಭಕ್ತಿ ಭಾವಗಳಿಂದ ಪೂಜೆ ಮಾಡಿದರೂ ವೈದಿಕ ಪುರೋಹಿತರ ಮೇಲೆ ದೇವರು ಬರುವುದಿಲ್ಲ. ಏಕೆಂದರೆ ಅಲ್ಲಿ ದೇವರು ಎಂಬ ಕಾಲ್ಪನಿಕ ಶಕ್ತಿಯನ್ನು ದೂರದಲ್ಲಿಟ್ಟು ಪೂಜಿಸಲಾಗುತ್ತದೆ.

ಭಾರತದ ಮೂಲ ನಿವಾಸಿಗಳ ಇತಿಹಾಸದಲ್ಲಿ ಕಂಡುಬರುವ ಮುನಿ ಸಂಸ್ಕೃತಿಯ ಸಂಕಥನಗಳಲ್ಲಿ ಆಚರಣೆಗಳ, ವಿಧಿವಿಧಾನಗಳ ಉಲ್ಲೇಖ ಇರುವುದಿಲ್ಲ. ಜನಪದ ಸಂಸ್ಕೃತಿಯಲ್ಲಿ ಪ್ರಕೃತಿಯಲ್ಲೇ ದೈವತ್ವವನ್ನು ಕಾಣಲಾಗುತ್ತದೆ. ಇಲ್ಲಿನ ದೇವಾಧಿದೇವತೆಗಳು ಜನರ ಒಡಲಾಳದಲ್ಲೇ ಜನಿಸುತ್ತಾರೆ. ಗ್ರಾಮೀಣ–ಆದಿವಾಸಿ ದೇವತೆಗಳು ಜನಸಮುದಾಯಗಳಿಗೆ ಸನಿಹದಲ್ಲಿರುತ್ತಾರೆ. ಇಲ್ಲಿ ದೇವ–ಮಾನವರ ನಡುವೆ ಯಾವುದೇ ಏಜೆಂಟರಿರುವುದಿಲ್ಲ.

ಈ ಪರಂಪರೆಯ ಭಾಗವಾಗಿಯೇ ಮುನಿ ಸಂಸ್ಕೃತಿಯ ಬೆಳವಣಿಗೆಯನ್ನು ಋಷಿ ಸಂಸ್ಕೃತಿಯ ಬೆಳವಣಿಗೆಯೊಡನೆ ವಿಶ್ಲೇಷಿಸಬೇಕಾಗುತ್ತದೆ. ತಮ್ಮ ಪಾದಯಾತ್ರೆಯ ಮೂಲಕ ಈ ಉನ್ನತಾದರ್ಶಗಳ ಮುನಿ ಸಂಸ್ಕೃತಿಯನ್ನು ಆಪೋಷನ ತೆಗೆದುಕೊಂಡು, ಋಷಿ ಸಂಸ್ಕೃತಿಯನ್ನೇ ಹಿಂದೂ ಧರ್ಮದ ಆಂತರಿಕ ಶಕ್ತಿಯನ್ನಾಗಿ ರೂಪಿಸುವ ಹುನ್ನಾರವನ್ನು ಪೇಜಾವರರ ಪಾದಯಾತ್ರೆಯಲ್ಲಿ ಕಾಣಬಹುದು. ಅಯೋಧ್ಯೆಯ ರಾಮಮಂದಿರ ವಿವಾದದಲ್ಲೂ ಇದೇ ಜಾಡನ್ನು ಗುರುತಿಸಬಹುದು. ಶ್ರೀರಾಮನನ್ನು ಒಬ್ಬ ಚಾರಿತ್ರಿಕ ಪುರುಷನೆಂದು ನೋಡದೆ, ಮಾನವ ಸಮಾಜದ ಬೆಳವಣಿಗೆಯಲ್ಲಿ ಕಂಡುಬರುವ ಒಬ್ಬ ಆದರ್ಶ ಮಹಾಪುರುಷನ ರೂಪದಲ್ಲಿ ಕಾಣಬಯಸುವ ಜನಪದ ಸಂಸ್ಕೃತಿಗಳನ್ನು ನಿರ್ಲಕ್ಷಿಸುವುದಷ್ಟೇ ಅಲ್ಲದೆ ನೆಲಸಮ ಮಾಡಿ, ಆ ಜಾಗದಲ್ಲಿ ವೈದಿಕಶಾಹಿಯನ್ನು ಪ್ರತಿನಿಧಿಸುವ ಆಕ್ರಮಣಶೀಲ ರಾಮನನ್ನು ಪ್ರತಿಷ್ಠಾಪಿಸುವುದು ಸಂಘ ಪರಿವಾರದ, ಹಿಂದೂ ಧರ್ಮ ರಕ್ಷಕರ ಹುನ್ನಾರವಾಗಿದೆ. ಇದನ್ನೇ ನ್ಯಾಯಾಂಗವೂ ನಂಬಿಕೆಯ ಆಧಾರದ ಮೇಲೆ ಪುಷ್ಟೀಕರಿಸಿರುವುದು ಅಯೋಧ್ಯೆಯ ತೀರ್ಪಿನಲ್ಲಿ ವ್ಯಕ್ತವಾಗಿದೆ. ಇದೇ ಕಾರ್ಯವನ್ನು ಪೇಜಾವರರು ತಮ್ಮ ಪಾದಯಾತ್ರೆಗಳ ಮೂಲಕ ಸಾಧಿಸುತ್ತಿದ್ದಾರೆ.

ಸಮಾಜ ಸುಧಾರಣೆಯ ಸೋಗು

ತಾವು ಪ್ರತಿನಿಧಿಸುವ ನಿರ್ದಿಷ್ಟ ದ್ವೈತ ಸಿದ್ಧಾಂತ ಮತ್ತು ಹಿಂದೂ ಧರ್ಮದ ಶತಶತಮಾನಗಳ ಸಾಮಾಜಿಕ ಪಾಪ ಕೃತ್ಯಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಉದ್ದೇಶದಿಂದ ಮಾನ್ಯ ಪೇಜಾವರ ಶ್ರೀಗಳು ತಮ್ಮ ಚಾತುರ್ಮಾಸ್ಯದ ಅವಧಿಯಲ್ಲಿ ಕೆಲವು ದಲಿತ ಕೇರಿಗಳಿಗೆ ಭೇಟಿ ನೀಡಿದ್ದಾರೆ. ಪೇಜಾವರರ ಈ ಪಾದಯಾತ್ರೆ ಕಾರ್ಯಕ್ರಮದ ಹಿಂದಿನ ಉದ್ದೇಶಗಳನ್ನು ಹೇಳಬೇಕಿಲ್ಲ. ಯತಿವರ್ಯರು ದಲಿತ ಸಮುದಾಯಗಳಿಗೆ ವೈಷ್ಣವ/ಶೈವ ದೀಕ್ಷೆ ನೀಡುವುದಾಗಿ ಘೋಷಿಸಿದ್ದಾರೆ. ವೈಷ್ಣವ ದೀಕ್ಷೆ ಪಡೆಯುವುದೆಂದರೆ ತಮ್ಮ ನಿತ್ಯ ಜೀವನದ ಆಚರಣೆ ಮತ್ತು ಅನುಸರಿಸುವ ಆಚಾರ ವಿಚಾರಗಳಲ್ಲಿ ವೈಷ್ಣವ ಪರಂಪರೆಯ ತಾತ್ವಿಕ ನೆಲೆಗಳನ್ನು ಗ್ರಹಿಸಿ ಪಾಲಿಸುವುದೇ ಆಗಿರುತ್ತದೆ. ಹಾಗಾಗಿ ವೈಷ್ಣವ ದೀಕ್ಷೆ ಪಡೆದ ದಲಿತರು ತಮ್ಮ ಮೂಲ ಜನಪದ ದೇವಾಧಿದೇವತೆಗಳನ್ನು ತ್ಯಜಿಸಿ, ಬ್ರಾಹ್ಮಣ ಸಂಪ್ರದಾಯವನ್ನು ಸ್ವೀಕರಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಮಾಂಸಾಹಾರವನ್ನು ತ್ಯಜಿಸುವುದೂ ಒಂದು. ಗೋಮಾಂಸ ಭಕ್ಷಣೆಯನ್ನು ತ್ಯಜಿಸಬೇಕೆಂದು ಹೇಳಲೇಬೇಕಿಲ್ಲ.

ಈ ಪ್ರಶ್ನೆಗಳೊಡನೆಯೇ ಪೇಜಾವರರ ಪಾದಯಾತ್ರೆಯ ಸಂದರ್ಭದಲ್ಲಿ ಅವರ ಮಾತುಗಳನ್ನೂ ಗಮನಿಸಬೇಕು. "ಸಾಮಾಜಿಕ ಸಾಮರಸ್ಯ ಮತ್ತು (ದಲಿತರನ್ನು) ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ದಲಿತರಿಗೆ ವೈಷ್ಣವ ದೀಕ್ಷೆ ನೀಡಲು ಸಿದ್ಧ, ದಲಿತ ಬಂಧುಗಳು ಮಂತ್ರ ಶ್ಲೋಕಗಳನ್ನು ಕಲಿತು ಜ್ಞಾನ ವೃದ್ಧಿಸಿಕೊಂಡು ಪೂಜೆ ಕಾರ್ಯದಲ್ಲಿ ಪಾಲ್ಗೊಳ್ಳಬೇಕು, ಸಾಮೂಹಿಕ ಭಜನೆಯಲ್ಲಿ ಪಾಲ್ಗೊಳ್ಳಬೇಕು. ಇದರಿಂದ ಹಿಂದೂ ಧರ್ಮದ ಬಗ್ಗೆ

ಭಾರತದ ಶ್ರೇಣೀಕೃತ ಜಾತಿ ವ್ಯವಸ್ಥೆಯ ಮೂಲ ಸೆಲೆಗಳನ್ನು ಬ್ರಾಹ್ಮಣ ಶಾಹಿಯ ಪ್ರತಿನಿಧಿಗಳು ಮಾತ್ರ ಗ್ರಹಿಸಿಲ್ಲ ಎಂದೆಣಿಸುವವರಿಗೆ, ಮಾದಾರ ಚನ್ನಯ್ಯ ಸ್ವಾಮಿಗಳ ಈ ಕ್ರಮ ಕಣ್ತೆರೆಸಬೇಕು. ಶೋಷಿತ ವರ್ಗಗಳನ್ನು ಪ್ರತಿನಿಧಿಸುವ ಸ್ವಾಮೀಜಿಗಳೂ ಸಹ ಜಾತಿವ್ಯವಸ್ಥೆ – ಅಸ್ಪೃಶ್ಯತೆಯ ಮೂಲ ಸೆಲೆಗಳನ್ನು ಗ್ರಹಿಸಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಹಾಗಾಗಿಯೇ ಮಾದಾರ ಚನ್ನಯ್ಯ ಸ್ವಾಮಿಗಳು ತಾವು ತೋಡಿಕೊಂಡ ಬಾವಿಗೆ ತಾವೇ ಬಿದ್ದಿರುವುದು ಅವರ ಪಾದಯಾತ್ರೆಯಲ್ಲಿ ಸ್ಪಷ್ಟವಾಗಿದೆ.

ಅಭಿಮಾನ ಮೂಡಿಸುವುದೇ ಅಲ್ಲದೆ ಕೀಳರಿಮೆ ಹೋಗುತ್ತದೆ " ಎಂದು ಪೇಜಾವರರು ಹೇಳಿದ್ದಾರೆ. ಇದರ ಅರ್ಥ ವೇನು? ಒಂದೆಡೆ ಮತಾಂತರವನ್ನು ವಿರೋಧಿಸಬೇಕು, ತಡೆಗಟ್ಟಬೇಕು ಎಂದು ಹೇಳುವ ಪೇಜಾವರರು ದಲಿತರಿಗೆ ವೈಷ್ಣವ ದೀಕ್ಷೆ ನೀಡುವ ಮಾತನಾಡುವುದು ಎಷ್ಟು ಸರಿ ? ಇದೂ ಒಂದು ರೀತಿ ಮತಾಂತರವೇ ಅಲ್ಲವೇ ? ನಮ್ಮ ಮಾರ್ಗವನ್ನು ಒಪ್ಪಿಕೊಳ್ಳಿ, ನಿಮ್ಮನ್ನು ಅಪ್ಪಿಕೊಳ್ಳುತ್ತೇವೆ ಎಂದು ಹೇಳಿರುವುದು ಸಾತ್ವಿಕರಿಗೆ ತರವೇ ?

ಭಾರತೀಯ ಶ್ರೇಣೀಕೃತ ಸಮಾಜದಲ್ಲಿ ಅಸ್ಪೃಶ್ಯರಿಗೆ, ದಲಿತರಿಗೆ ಬೇಕಿರುವುದು ದೀಕ್ಷೆ, ಮಂತ್ರ ಬೋಧನೆಗಳಲ್ಲ. ಮಂತ್ರ ಶ್ಲೋಕಗಳನ್ನು ಕಲಿತು ಜ್ಞಾನ ವೃದ್ಧಿಸಿಕೊಳ್ಳಿ ಎಂದರೆ ಜ್ಞಾನ ವೃದ್ಧಿಗೆ ಅನ್ಯಮಾರ್ಗ ಇಲ್ಲವೆಂದು ಅರ್ಥವೋ ಅಥವಾ ದಲಿತರಿಗೆ ಸ್ವಾಭಾವಿಕವಾಗಿ ಒದಗಿ ಬಂದಿರುವ ಕಸುಬು ಆಧಾರಿತ ಜ್ಞಾನ ಮೌಲ್ಯರಹಿತ ಎಂದು ಅರ್ಥವೋ? ಸಾಮಾಜಿಕ ಸಾಮರಸ್ಯಕ್ಕಾಗಿ ಪೇಜಾವರರು ದಲಿತರಿಗೆ ವೈಷ್ಣವ ದೀಕ್ಷೆ ನೀಡಲು ಸಿದ್ಧರಾಗಿದ್ದರೆ, ಕ್ರೈಸ್ತ ಮಿಷನರಿಗಳು ಮಾಡುವುದೂ ಇದನ್ನೇ ತಾನೆ? ಹಾಗಾದರೆ ಮತಾಂತರವನ್ನು ವಿರೋಧಿಸುವುದೇಕೆ? ವೈಷ್ಣವ ದೀಕ್ಷೆ ಸ್ವೀಕರಿಸದೆ, ದಲಿತರು ತಮ್ಮ ಪಾರಂಪರಿಕ ಆಚರಣೆ ಮತ್ತು ಸಂಪ್ರದಾಯಗಳನ್ನೇ ಪಾಲಿಸಿದರೆ ಸಾಮಾಜಿಕ ಸಾಮರಸ್ಯ ಮೂಡಲಾರದೇ? ಹಾಗೆ ಮೂಡುವುದಿಲ್ಲ ಎನ್ನುವುದಾದರೆ ಅಂತಹ ಸಮಾಜವನ್ನು ನಾಗರಿಕ, ಸ್ವಾಸ್ಥ್ಯ ಸಮಾಜವೆಂದು ಹೇಳಲಾಗುವುದೇ?

ಭಾರತದ ಜಾತಿ ವ್ಯವಸ್ಥೆಯ ಮೂಲ ತಳಹದಿಯಾಗಿ ಶತಮಾನಗಳಿಂದ ಕಾಡುತ್ತಿರುವ ಅಸ್ಪೃಶ್ಯತೆಯ ಮೂಲವನ್ನು ಪೇಜಾವರರಾಗಲೀ, ಅವರ ಅನುಯಾಯಿಗಳಾಗಲೀ ಗ್ರಹಿಸಿಯೇ ಇಲ್ಲ. ಹಾಗಾಗಿಯೇ ಪೇಜಾವರರು ದಲಿತ ಕೇರಿಗೆ ಭೇಟಿ ನೀಡುತ್ತಾರೆ, ಆದರೆ ಉಡುಪಿ ಕೃಷ್ಣ ಮಂದಿರದ ಗರ್ಭಗುಡಿಗೆ ದಲಿತರನ್ನು ಸೇರಿಸುವುದಿಲ್ಲ. ತಮ್ಮ ಮಠಗಳಲ್ಲಿ ಇಂದಿಗೂ ಬ್ರಾಹ್ಮಣರಿಗೆ, ಅದೂ ಪಂಚೆ ಉಟ್ಟು, ಜನಿವಾರ ತೊಟ್ಟ ಬ್ರಾಹ್ಮಣರಿಗೆ ಪ್ರತ್ಯೇಕವಾಗಿ ಊಟ ಬಡಿಸುವ ಪರಂಪರೆಯನ್ನು ಪಾಲಿಸಿಕೊಂಡು ಬಂದಿರುವ ಮಧ್ವ ಮತದ ಅನುಯಾಯಿಗಳು, ಮಠಗಳಲ್ಲಿ ದಲಿತರೊಡನೆ ಸಹಪಂಕ್ತಿ ಭೋಜನ ಸ್ವೀಕರಿಸುವರೇ? ವೈಷ್ಣವ ದೀಕ್ಷೆ ಪಡೆಯದೆ ತಮ್ಮ ಸ್ವ ಇಚ್ಛೆಯಿಂದ ಮಂತ್ರ ಶ್ಲೋಕಗಳನ್ನು ಕಲಿತ ದಲಿತರಿಗೆ ಮಠಗಳಲ್ಲಿ, ದೇವಾಲಯಗಳಲ್ಲಿ ಪೌರೋಹಿತ್ಯದ ಹಕ್ಕು ನೀಡುತ್ತಾ ರೆಯೇ? ಇದು ಅಸಾಧ್ಯದ ಮಾತು.

ಮಠಾಧೀಶರ ಇಂತಹ ನಾಟಕೀಯ ನಡುವಳಿಕೆಯಿಂದ ಜಾತಿ ವ್ಯವಸ್ಥೆಯ ಭಂಗವಾಗುತ್ತದೆ, ಅಸ್ಪೃಶ್ಯತೆ ಅಳಿಯುತ್ತದೆ ಎಂದು ಭಾವಿಸುವುದು ಸೈದ್ಧಾಂತಿಕ ದೀವಾಳಿತನದ ಲಕ್ಷಣವಷ್ಟೆ. ಪೇಜಾವರರ ಈ ಪಾದಯಾತ್ರೆಯ ಉದ್ದೇಶ ಸಾಮಾಜಿಕ ಸಾಮರಸ್ಯ ಮೂಡಿಸುವುದೇ ಆಗಿದ್ದಲ್ಲಿ ಈ ವೇಳೆಗೆ ಎಂದೋ ಉಡುಪಿಯ ಶ್ರೀಕೃಷ್ಣ ಮಠವನ್ನು ಕನಕಮಂದಿರವನ್ನಾಗಿ ಮಾಡಬಹುದಿತ್ತಲ್ಲವೇ? ಯಾವುದೇ ಒಂದು ಮಠ, ಓರ್ವ ಸ್ವಾಮೀಜಿ ಅಥವಾ ಒಂದು ಧರ್ಮ ಕೇಂದ್ರದ ಮೂಲಕ ಅಸ್ಪೃಶ್ಯತೆಯಂತಹ ಅನಿಷ್ಟವನ್ನು ಹೋಗಲಾಡಿಸುವುದು ಸಾಧ್ಯವಾಗಿದ್ದಲ್ಲಿ, ವಿವೇಕಾನಂದರು, ರಾಮಕೃಷ್ಣ ಆಶ್ರಮಗಳು ವಿಫಲವಾದದ್ದೇಕೆ? ವೈಯ್ಯಕ್ತಿಕ ನೆಲೆಗಟ್ಟಿನಲ್ಲಿ ತಮ್ಮ ಜನಪರ(!) ಕಾಳಜಿಯನ್ನು ಬಲವಾಗಿ ಪ್ರತಿಪಾದಿಸುವ ಯತಿವರ್ಯರು ತಮ್ಮದೇ ಆದ ಸಾಮಾಜಿಕ ಚೌಕಟ್ಟಿನಲ್ಲಿ ಯಾವುದೇ ವ್ಯಕ್ತಿಗತ ಅಸ್ಮಿತೆಯನ್ನು ಹೊಂದಿರುವುದಿಲ್ಲ. ಹಾಗಾಗಿಯೇ ಒಂದೆಡೆ ಸಂಘ ಪರಿವಾರದ ಪ್ರಚಾರಕರಾಗಿ ಕಾರ್ಯನಿರ್ವಹಿಸುತ್ತಲೇ ಮತ್ತೊಂದೆಡೆ ದಲಿತ ಸಮುದಾಯಗಳ ಪರಿಚಾರಕರಾಗಿ ಕಂಡುಬರುತ್ತಾರೆ.

ಪಾಪಪ್ರಜ್ಞೆ ಮತ್ತು ಪ್ರಾಯಶ್ಚಿತ್ತ

ಆದರೂ ಪೇಜಾವರರಿಗೆ ಈ ರೀತಿಯ ಪಾದಯಾತ್ರೆಯನ್ನು ಕೈಗೊಳ್ಳುವ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಅನಿವಾರ್ಯತೆ ಇದೆ. ಆದರೆ ಶೋಷಿತ ಸಮುದಾಯದ ಸ್ವಾಮೀಜಿ ಎಂದು ಗುರುತಿಸಲ್ಪಡುವ ಮಾದಾರ ಚನ್ನಯ್ಯ ಸ್ವಾಮೀಜಿಯವರಿಗೆ ಬ್ರಾಹ್ಮಣ ಕೇರಿಯಲ್ಲಿ ಪಾದಯಾತ್ರೆ ನಡೆಸುವ ಅನಿವಾರ್ಯತೆ ಏನಿತ್ತು? ಮಾದಾರ ಚನ್ನಯ್ಯ ಸ್ವಾಮಿಗಳು ದಲಿತ ಸಮುದಾಯಗಳನ್ನು ಪ್ರತಿನಿಧಿಸುವ ಮಠಾಧೀಶರು. ಸ್ವಾಭಾವಿಕವಾಗಿ ಭಾರತೀಯ ಮೂಲ ನಿವಾಸಿಗಳ ಸಾಂಸ್ಕೃತಿಕ ಸಂವೇದನೆಗಳನ್ನು, ದಲಿತ ಸಂಸ್ಕೃತಿಯ ಐತಿಹ್ಯಗಳನ್ನು, ಚಾರಿತ್ರಿಕ ಲಕ್ಷಣಗಳನ್ನು ಅರಿತಿರಲೇ ಬೇಕು. ಋಷಿ ಸಂಸ್ಕೃತಿ ಮತ್ತು ಮುನಿ ಸಂಸ್ಕೃತಿಗಳ ನಡುವಿನ ಭಿನ್ನತೆಯನ್ನು ಗ್ರಹಿಸಿರಬೇಕು. ಬ್ರಾಹ್ಮಣ ಕೇರಿಯಲ್ಲಿ ಸಂಚರಿಸಿ, ದ್ವಿಜೋತ್ತಮರಿಂದ ಸತ್ಕರಿಸಿಕೊಂಡ ಮಾತ್ರಕ್ಕೆ ತಾವು ಪ್ರತಿನಿಧಿಸುವ ಇಡೀ ಸಮುದಾಯವನ್ನೇ ವೈದಿಕಶಾಹಿ ಅಪ್ಪಿಕೊಂಡಿದೆ ಎಂದು ಮಾದಾರ ಸ್ವಾಮಿಗಳು ಭಾವಿಸಿರಲು ಸಾಧ್ಯವೇ ?

ಬ್ರಾಹ್ಮಣ ಕೇರಿಯನ್ನೇ ಆಯ್ಕೆ ಮಾಡಿಕೊಳ್ಳುವುದರ ಮೂಲಕ ಅಸ್ಪೃಶ್ಯತೆಯನ್ನು ಒಂದು ನಿರ್ದಿಷ್ಟ ಚೌಕಟ್ಟಿಗೆ ಒಳಪಡಿಸುವ ಪ್ರಮಾದವನ್ನು ಮಾದಾರ ಸ್ವಾಮಿಗಳು ಎಸಗಿದ್ದಾರೆ. ಜಾತಿ ವ್ಯವಸ್ಥೆಗೂ ಅಸ್ಪೃಶ್ಯತೆಗೂ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಭಾವನಾತ್ಮಕ ಸಂಬಂಧ ಇರುವುದಾದರೂ, ಅಸ್ಪೃಶ್ಯತೆಯ ಪಿಡುಗು ಜಾತಿ ವ್ಯವಸ್ಥೆಯನ್ನೂ ಮೀರಿದ ಒಂದು ಮನಸ್ಥಿತಿ ಎಂಬ ಸತ್ಯವನ್ನು ಈ ಪಾದಯಾತ್ರಾ ಪ್ರವೀಣರು ಗ್ರಹಿಸಬೇಕಾಗಿದೆ. ಪ್ರಸ್ತುತ ಭಾರತೀಯ ಸಮಾಜದಲ್ಲಿ ಸಾಂವಿಧಾನಿಕ ಅನಿವಾರ್ಯತೆಗಳು ಮತ್ತು ಆಧುನಿಕತೆಯ ಆಗ್ರಹಗಳ ಪರಿಣಾಮವಾಗಿ ಮೇಲ್ನೋಟಕ್ಕೆ ಜಾತಿ ತಾರತಮ್ಯಗಳು ಕಾಣುವುದಿಲ್ಲವಾದರೂ, ಜನಮಾನಸದಲ್ಲಿ ಸುಪ್ತವಾಗಿರುವ ಜಾತಿ ಪ್ರಜ್ಞೆ ಎಲ್ಲೋ ಒಂದೆಡೆ ಅಸ್ಪೃಶ್ಯತೆಯ ಭಾವನೆಗಳನ್ನು ರಕ್ಷಿಸಿರುವುದು ಸತ್ಯ. ಈ ಭಾವನೆಗಳು ಅನೇಕ ಸಂದರ್ಭಗಳಲ್ಲಿ ಪ್ರಜ್ಞಾಪೂರ್ವಕ ಮೌನದಲ್ಲಿ ವ್ಯಕ್ತವಾಗುವುದುಂಟು. ಅಸ್ಪೃಶ್ಯತೆಯ ಆಚರಣೆಯನ್ನು ವಿರೋಧಿಸುವುದಿಲ್ಲವೆಂದ ಮಾತ್ರಕ್ಕೆ ಯಾವುದೇ ಸಮುದಾಯ ತನ್ನ ಜಾತಿ ಪ್ರಜ್ಞೆಯಿಂದ ಮುಕ್ತವಾಗಿದೆ ಎಂದು ಭಾವಿಸಲಾಗುವುದಿಲ್ಲ. ಸವಣೂರಿನ ಸಂದರ್ಭದಲ್ಲಿ ಕಂಡುಬಂದ ಮೌನ ವ್ರತವೇ ಇದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿ ನಿಲ್ಲುತ್ತದೆ. ಈ ನಿಟ್ಟಿನಲ್ಲಿ ನೋಡಿದಾಗ ಮಾದಾರ ಚನ್ನಯ್ಯ ಸ್ವಾಮಿಗಳ ಪೈಪೋಟಿ ಕೇವಲ ಪರಿಚಾರಿಕತೆಯ ಪ್ರಚಾರವಾಗ ಬಹುದಷ್ಟೆ.

ಭಾರತದ ಸಾಮಾಜಿಕ ಚೌಕಟ್ಟಿನಲ್ಲಿ ಪ್ರತಿಯೊಂದು ಜಾತಿ ಉಪಜಾತಿಗಳೂ ಶ್ರೇಷ್ಠತೆಯ ಮನೋಭಾವವನ್ನು ಹೊಂದಿದ್ದು, ಜನಸಮುದಾಯಗಳನ್ನು ನಿಕೃಷ್ಟವಾಗಿ ಪರಿಗಣಿಸುವ ಪರಂಪರೆಯನ್ನು ಪಾಲಿಸಿಕೊಂಡು ಬಂದಿವೆ. ವೈಯ್ಯಕ್ತಿಕ, ಕೌಟುಂಬಿಕ ನೆಲೆಗಟ್ಟಿನಲ್ಲಿ ವ್ಯಕ್ತಗವಾಗದ ಈ ಭಾವನೆಗಳು ಸಾಮುದಾಯಿಕ ನೆಲೆಗಟ್ಟಿನಲ್ಲಿ ವ್ಯಕ್ತವಾಗುವುದು ಖೈರ್ಲಾಂಜಿ, ಕಂಬಾಲಪಲ್ಲಿ, ಸವಣೂರು, ಅಂಕನಹಳ್ಳಿಗಳು ಸಂಭವಿಸಿದಾಗ ಮಾತ್ರ, ಒಪ್ಪಿಕೊಂಡಿದ್ದನ್ನು ಅಪ್ಪಿಕೊಂಡಾಗ ಮಾತ್ರ ಮನುಕುಲದ ಉದಾತ್ತತೆ ಪ್ರಕಟಗೊಳ್ಳುತ್ತದೆ. ಇಲ್ಲವಾದಲ್ಲಿ, ಸುಪ್ತ ಭಾವನೆಗಳನ್ನು ಮರೆಮಾಚುವ ಆಚರಣೆಗಳು ವಿಜೃಂಭಿಸುತ್ತಲೇ ಯಥಾಸ್ಥಿತಿಯನ್ನು ಕಾಪಾಡುತ್ತಿರುತ್ತವೆ. ಪ್ರಸ್ತುತ ಪಾದಯಾತ್ರಾ ಪ್ರಹಸನಗಳು ಮಾಡುತ್ತಿರುವುದೂ ಅಷ್ಟೇ. ದಲಿತ ಸಮುದಾಯದ ಮಾದಾರ ಚನ್ನಯ್ಯ ಸ್ವಾಮೀಜಿಗಳಿಗೆ ಬ್ರಾಹ್ಮಣ ಕೇರಿ (?)ಯಲ್ಲಿ ದೊರೆತ ಸ್ವಾಗತ ಅಭೂತಪೂರ್ವ ಎನಿಸಿದರೂ, ಅಲ್ಲಿ ನೆರೆದಿದ್ದ ಪೂರ್ವಾಗ್ರಹ ಭೂತ ಪೀಡಿತರ ನೆನೆಗುದಿಗಳೂ ಸ್ಪಷ್ಟವಾಗಿ ಗೋಚರಿಸಿವೆ.

ಭಾರತದ ಶ್ರೇಣೀಕೃತ ಜಾತಿ ವ್ಯವಸ್ಥೆಯ ಮೂಲ ಸೆಲೆಗಳನ್ನು ಬ್ರಾಹ್ಮಣ ಶಾಹಿಯ ಪ್ರತಿನಿಧಿಗಳು ಮಾತ್ರ ಗ್ರಹಿಸಿಲ್ಲ ಎಂದೆಣಿಸುವವರಿಗೆ, ಮಾದಾರ ಚನ್ನಯ್ಯ ಸ್ವಾಮಿಗಳ ಈ ಕ್ರಮ ಕಣ್ತೆರೆಸಬೇಕು. ಶೋಷಿತ ವರ್ಗಗಳನ್ನು ಪ್ರತಿನಿಧಿಸುವ ಸ್ವಾಮೀಜಿಗಳೂ ಸಹ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ಮೂಲ ಸೆಲೆಗಳನ್ನು ಗ್ರಹಿಸಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಹಾಗಾಗಿಯೇ ಮಾದಾರ ಚನ್ನಯ್ಯ ಸ್ವಾಮಿಗಳು ತಾವು ತೋಡಿಕೊಂಡ ಬಾವಿಗೆ ತಾವೇ ಬಿದ್ದಿರುವುದು ಅವರ ಪಾದಯಾತ್ರೆಯಲ್ಲಿ ಸ್ಪಷ್ಟವಾಗಿದೆ. ಪೂರ್ಣ ಕುಂಭ ಸ್ವಾಗತವೇ ಬ್ರಾಹ್ಮಣಶಾಹಿಯ ಮತ್ತು ಋಷಿಸಂಸ್ಕೃತಿಯ ಒಂದು ವಿಶಿಷ್ಟ ಪರಂಪರೆಯಾಗಿದ್ದು, ಮಾದಾರ ಚನ್ನಯ್ಯನವರಿಗೆ ತಮ್ಮ ಸಾಮುದಾಯಿಕ ಸಂವೇದನೆಗಳ ಗ್ರಹಿಕೆ ಇದ್ದಿದ್ದಲ್ಲಿ ಈ ರೀತಿಯ ಸ್ವಾಗತವನ್ನು ತಿರಸ್ಕರಿಸುತ್ತಿದ್ದರು. ಖಾವಿ ತೊಟ್ಟ ಮಾತ್ರಕ್ಕೆ ಹಿಂದೂ ಧರ್ಮದ ಹೆಸರಿನಲ್ಲಿ ನಡೆಸಲಾಗುವ ಬ್ರಾಹ್ಮಣಶಾಹಿ ಧಾರ್ಮಿಕ ಕ್ರಿಯೆಗಳಿಗೆ ತಮ್ಮನ್ನು ಒಪ್ಪಿಸಿಕೊಳ್ಳಬೇಕೆಂಬ ನಿಯಮವೇನೂ ಇಲ್ಲ ಅಲ್ಲವೇ? ಧಾರ್ಮಿಕ ನೆಲೆಗಟ್ಟಿನಲ್ಲೇ ನೋಡಿದರೂ ಭಾರತೀಯ ಸಂಸ್ಕೃತಿಯಲ್ಲೇ ವಿಭಿನ್ನವಾದ ವೈವಿಧ್ಯಮಯ ಸಂಪ್ರದಾಯ, ಪರಂಪರೆಗಳನ್ನು ಕಾಣಬಹುದು. ಭಾರತದ ಮೂಲ ನಿವಾಸಿಗಳಾದ ದಲಿತ ಪರಂಪರೆಯು ಜನಸಂಸ್ಕೃತಿಯ ಕುರುಹಾಗಿದ್ದು, ತನ್ನದೇ ಆದ ವೈಶಿಷ್ಟ್ಯವನ್ನೂ ಹೊಂದಿದೆ. ಈ ನಿಟ್ಟಿನಲ್ಲೇ ಧರ್ಮದ ಚೌಕಟ್ಟಿನಲ್ಲೇ ದಲಿತ ವಿಮೋಚನೆಗಾಗಿ ಹೋರಾಡಿದ ಅಂಬೇಡ್ಕರ್, ಫುಲೆ ಮುಂತಾದ ಮಹನೀಯರು

(49ನೇಪುಟಕ್ಕೆ)

ಹಾವಳಿ ಮಂಜನ ಕಾರ್ಮಿಕ ಹೋರಾಟ

ಡಾ. ವಿಠ್ಠಲ ಭಂಡಾರಿ, ಕೆರೆಕೋಣ

ದಿನಕರ ದೇಸಾಯಿಯವರ 'ಹೋರಾಟದ ಬದುಕು'- 'ಸಾಹಿತ್ಯದ ಬದುಕು' ಎಂದು ಭಿನ್ನವಾಗಿ ಗುರುತಿಸಲಾಗದ ವ್ಯಕ್ತಿತ್ವ ಅವರದು. ಹೋರಾಟಕ್ಕೆ ಸಾಹಿತ್ಯವನ್ನು ಬಳಸಿಕೊಂಡರು. ಸಾಹಿತ್ಯಕ್ಕೆ ಹೋರಾಟ ಮೂಲ ಮಾತೃಕೆಯಾಯಿತು; ಸಾಹಿತ್ಯ ಹೋರಾಟಗಳೆರಡೂ ಮಿಳಿತ ವಾಗಿ ದೇಸಾಯಿ 'ಹಾವಳಿ ಮಂಜ' ನಾಗಿದ್ದು ಈ ನೆಲದಲ್ಲಿಯೆ.

'ದುಡಿಮೆಯ ಹಕ್ಕನ್ನು ಪಡೆಯುವವರೆಗೂ ಬೆಳಕಿದ್ದರು ತಿಮಿರ' ಎನ್ನುವ ಸತ್ಯ ಅರಿತ ದೇಸಾಯಿಯವರು ಇದಕ್ಕಾಗಿ 'ಕೆಂಪು ಬಾವುಟವು ರೈತನದೋ \ಈ ರಕ್ತ ಬಾವುಟವು ಕೂಲಿಯದೋ "ಎಂದು ಕೆಂಬಾ ವುಟ ಎತ್ತಿ ಹಿಡಿದರು. ರೈತ-ಕಾರ್ಮಿಕರ ಒಗ್ಗಟ್ಟಿನ "ಬಿರುಗಾಳಿಯಲ್ಲಿಯೇ ಬರಲಿ ನರನಿಗೆ ಗೆಲವು" ಎಂದು ಆಶಿಸಿದ ದಿನಕರ ದೇಸಾಯಿಯವರು ಹುಟ್ಟಿ ನೂರು ವರ್ಷಗಳು ಸಂದವು. ಕೆಂಬಾವುಟ ಹಾರಾಡಿದ ನೆಲದಲ್ಲಿ ಕೇಸರಿ ಬಾವುಟ ಹಾರಾಡುತ್ತಿದೆ. ಈ ಹೊತ್ತಿನಲ್ಲಿ ದೇಸಾಯಿಯವರ ವಿಚಾರಧಾರೆ ಎಂದಿಗಿಂತಲೂ ಇಂದು ಹೆಚ್ಚು ಅಗತ್ಯವಿದೆ. ಕೋಮುವಾದ- ಜಾಗತೀಕರಣ ಸೃಷ್ಟಿಸಿರುವ ಬಿಕ್ಕಟ್ಟೊಂದು ಎದುರಿರುವಾಗ ಒಂದು ಪರ್ಯಾಯಕ್ಕಾಗಿ ಎದುರು ನೋಡುವ ಈ ಸಂದರ್ಭದಲ್ಲಿ ದೇಸಾಯಿಯವರ ಕುರಿತು ಚರ್ಚೆ ಹೆಚ್ಚು ಅರ್ಥಪೂರ್ಣ ಎಂದು ಕೊಂಡಿದ್ದೇನೆ.

ದೇಸಾಯಿಯವರನ್ನು ಕಾರ್ಮಿಕ ಮುಖಂಡರನ್ನಾಗಿ ನೋಡುವುದಕ್ಕಿಂತ 'ಹಾವಳಿ ಮಂಜ' ನನ್ನಾಗಿ ನೋಡುವುದೇ ನನಗೆ ವೈಯಕ್ತಿಕವಾಗಿ ಹೆಚ್ಚು ಖುಶಿಯ ಸಂಗತಿಯಾಗಿದ್ದರೂ ನನ್ನ ಪ್ರಬಂಧವನ್ನು ಅವರ ಕಾರ್ಮಿಕ ಹೋರಾಟಕ್ಕೆ ಸೀಮಿತಗೊಳಿಸುತ್ತೇನೆ. ಮುಂಬೈನಲ್ಲಿ ಅವರು ನಡೆಸಿದ ಕಾರ್ಮಿಕ ಸಂಘಟನೆ ಮತ್ತು ವಿವಿಧ ಹಂತದಲ್ಲಿ ನಡೆಸಿದ ಹೋರಾಟ, ಮಾತುಕತೆಗಳು ಅವರು ಉತ್ತರ ಕನ್ನಡದಲ್ಲಿ ನಡೆಸಿದ ರೈತಹೋರಾಟಕ್ಕೆ ಸೈದ್ಧಾಂತಿಕ ಸ್ಪಷ್ಟತೆಯನ್ನು, ಪ್ರಾಯೋಗಿಕ ಕಣ್ಣೋಟವನ್ನು ಒದಗಿಸಿತ್ತು.

ಜಮೀನ್ದಾರಿ ವರ್ಗದಿಂದ ಬಂದಿದ್ದ ದೇಸಾಯಿಯವರು ವಿದ್ಯಾಭ್ಯಾಸ ಮುಗಿಸಿ **'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈ ಟಿಯ'** ಸದಸ್ಯರಾಗಿ ಸೇರುವಾಗ ಅವರಲ್ಲಿದ್ದುದು ಒಂದು ಉದಾರವಾದಿ ಸೇವೆಯ ಮನೋಭಾವ ಮಾತ್ರ ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಈ ದೇಶದ ಸೇವೆಯ ಕರ್ತವ್ಯದ ಭಾಗವಾಗಿ ಭಾರತ ಸೇವಕ ಸಮಾಜದಲ್ಲಿ ದುಡಿಯುವ ಒಂದು ನೈತಿಕ (ಗಾಂಧಿ ಪ್ರಣೀತ)ಕ್ರಿಯೆ ಮಾತ್ರ ಆಗಿತ್ತು. ಆದರೆ ಅವರೇ ಹೇಳಿಕೊಂಡಂತೆ (ಎನ್.ಎಂ. ಜೋಶಿಯವರೇ ನನ್ನ ಗುರುಗಳು" [ನಾಕಂಡ ಪಡುವಣ ಪು.13] ಕಾರ್ಮಿಕ ಚಳುವಳಿಯಲ್ಲಿ ಎ.ಐ.ಟಿ.ಯು.ಸಿ.ಯಲ್ಲಿ ಈಗಾಗಲೆ ತೊಡಗಿಸಿಕೊಂಡ ಎನ್.ಎಂ. ಜೋಶಿಯವರ ಮಾರ್ಗ ದರ್ಶನ ಸಿಕ್ಕಿದ್ದು ಮಹತ್ವದ ಸಂಗತಿ. ಆ ಕಾಲದಲ್ಲಿ ಪ್ರಭಲವಾಗಿದ್ದ ಕಮ್ಯುನಿಸ್ಟ್ ಚಿಂತನೆಗಳಿಂದ ಪ್ರಭಾವಿತವಾಗಿದ್ದು, ಮುಂಬೈ ನಗರ ವನ್ನೂ ಸೇರಿಕೊಂಡಂತೆ ದೇಶದ ವಿವಿಧೆಡೆ ತೀವ್ರರೂಪ ಪಡೆದುಕೊಳ್ಳುತ್ತಿರುವ ಕಾರ್ಮಿಕ ಚಳುವಳಿ-ಮುಷ್ಕರದ ಬಿಸಿ, ಬ್ರಿಟೀಷ್ ರಾಜಸತ್ತೆಯೊಂದಿಗೆ ಸೇರಿಕೊಂಡು ಸ್ಥಳೀಯ ಬಂಡ ವಾಳಗಾರ - ಭೂಮಾಲಿಕರು ದುಡಿಯುವ ಜನರ ಮೇಲೆ ನಡೆಸುತ್ತಿರುವ ನಗ್ನ ದೌರ್ಜನ್ಯ, ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ತಲೆದೋರಿದ ಆರ್ಥಿಕ ಬಿಕ್ಕಟ್ಟುಗಳು ದಿನಕರ ದೇಸಾಯಿಯವರ ಮೂಲ ತಿಳುವಳಿಕೆಯನ್ನು ಬದಲಾಯಿಸಿದವು.

ಗೋಖಲೆಯವರಿಂದ 'ಸೇವೆ'ಯ ಉದ್ದೇಶದಿಂದ ಸ್ಥಾಪಿಸಲ್ಪಟ್ಟ 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ'ಯಲ್ಲನ ಒಂದು ಗುಂಪು ಪ್ರಾರಂಭದಿಂದಲೂ ರೈತ-ಕಾರ್ಮಿಕರ ಸಂಘಟನೆಯ ಕಡೆ ಗಮನ ಕೊಟ್ಟಿತ್ತು. ನಾನಿಲ್ಲಿ ಪ್ರಮುಖವಾಗಿ ಹೆಸರಿಸಬಹುದಾದ ಹೆಸರು ಗೋದುತಾಯಿ ಪುರಳೇಕರ, ಶ್ಯಾಮರಾವ್ ಪುರಳೇಕರ, ಎನ್.ಎಂ. ಜೋಶಿ, ಥಕ್ಕರಬಾಪ ಮುಂತಾದವರು. ಮುಂದೆ ಮಾರ್ಕ್ಸ್ ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕರಾಗಿ, ರೈತ ಮುಖಂಡರಾಗಿರುವ ಗೋದುತಾಯಿ ಪುರಳೇಕರ ದಂಪತಿಗಳ ಪ್ರಭಾವ ಕೂಡ ದೇಸಾಯಿಯವರ ಮೇಲೆ ಆಯಿತು. ಇವರಿಬ್ಬರೂ ಭೂಗತರಾಗಿದ್ದಾಗ ಉತ್ತರ-ಕನ್ನಡದಲ್ಲಿ ಹಳಗಾ - ಉಳಗಾದಲ್ಲಿದ್ದು ಇಲ್ಲಿಯ ರೈತ ಹೋರಾಟಕ್ಕೆ ಕೂಡ ಮಾರ್ಗದರ್ಶನ ಮಾಡಿದ್ದಾರೆ.



ಗೋಖಲೆಯವರಿಂದ 'ಸೇವೆ'ಯ ಉದ್ದೇಶದಿಂದ ಸ್ಥಾಪಿಸಲ್ಪಟ್ಟ 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ' ಯಲ್ಲಿನ ಒಂದು ಗುಂಪು ಪ್ರಾರಂಭದಿಂದಲೂ ರೈತ-ಕಾರ್ಮಿಕರ ಸಂಘಟನೆಯ ಕಡೆ ಗಮನ ಕೊಟ್ಟಿತ್ತು. ನಾನಿಲ್ಲ ಪ್ರಮುಖವಾಗಿ ಹೆಸರಿ ಸಬಹುದಾದ ಹೆಸರು ಗೋದುತಾಯಿ ಪುರ ಳೇಕರ, ಶ್ಯಾಮರಾವ್ ಪುರಳೇಕರ, ಎನ್. ಎಂ. ಜೋಶಿ, ಥಕ್ಕ ರಬಾಪ ಮುಂತಾದವರು. ಮುಂದೆ ಮಾರ್ಕ್ಸ್‌ವಾದಿ ಕಮ್ಯು ನಿಸ್ಟ್ ಪಕ್ಷದ ನಾಯಕ ರಾಗಿ, ರೈತ ಮುಖಂಡ ರಾಗಿರುವ ಗೋದು ತಾಯಿ ಪುರಳೇಕರ ದಂಪತಿಗಳ ಪ್ರಭಾವ ಕೂಡ ದೇಸಾ ಯಿಯವರ ಮೇಲೆ ಆಯಿತು. ಇವರಿಬ್ಬರೂ ಭೂಗತ ರಾಗಿದ್ದಾಗ ಉತ್ತರ ಕನ್ನಡದಲ್ಲ ಹಳಗಾ-ಉಳಗಾದಲ್ಲಿದ್ದು ಇಲ್ಲಿಯ ರೈತ ಹೋರಾಟಕ್ಕೆ ಕೂಡ ಮಾರ್ಗದರ್ಶನ ಮಾಡಿದ್ದಾರೆ.

ಇವರೊಂದಿಗೆ ದೇಸಾಯಿಯವರ ಮೇಲೆ ಪ್ರಭಾವ ಬೀರಿದ ಇನ್ನೊಂದು ಸಂಗತಿ ಸಿ.ಎಸ್.ಪಿ.ಯ ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿ ಕಾರ್ಯ ಚಟುವಟಿಕೆ. ಇದರಲ್ಲಿ ಜಯಪ್ರಕಾಶ ನಾರಾಯಣ, ಇ.ಎಂ. ಎಸ್. ನಂಬೂದರಿ ಪಾದ್, ಅಚ್ಚುತ್ ಪಟವರ್ಧನ, ಮೀನು ಮಸಾನಿ, ಮುಂತಾದವರೊಂದಿಗೆ ದೇಸಾಯಿಯವರು ಸಂಬಂಧ ಹೊಂದಿದ್ದರು. ಹೀಗೆ ಅವರ ವೈಚಾರಿಕತೆ ರೂಪಿತವಾಗಿದ್ದೇ ಈ ದೇಶದ ರಾಜಕಾರಣದಲ್ಲಿ ಬಹುಮುಖ್ಯ ಪಾತ್ರ ವಹಿಸಿದ ಎಡ ಪಂಥೀಯ ಚಿಂತನಕಾರರ ಗರಡಿಯಲ್ಲಿ.

ದೇಸಾಯಿಯವರ ಮೂಲ ತಿಳುವಳಿಕೆಯ ಬದಲಾವಣೆ ಮುಂಬೈ ಕಾರ್ಮಿಕರ ಹೋರಾಟಕ್ಕೆ ಕೊಟ್ಟ ಕೊಡುಗೆಗಿಂತ ಉತ್ತರ ಕನ್ನಡ ಜಿಲ್ಲೆಯ ರೈತ ಹೋರಾಟಕ್ಕಂತು ಪ್ರಯೋಜನವಾಯಿತು. ಯಾಕೆಂದರೆ ದೇಸಾಯಿಯವರು ಉತ್ತರ ಕನ್ನಡದಲ್ಲಿ ಯಾವುದೇ ಕಾರ್ಮಿಕ ಸಂಘ

ವನ್ನು ಸಂಘಟಿಸಿದ್ದಾಗಲಿ, ಆಂದೋಲನಕ್ಕೆ ಕರೆಕೊಟ್ಟಿದ್ದಾಗಲೀ ಇಲ್ಲ. ಉತ್ತರ ಕನ್ನಡದಿಂದ ಗಡಿಪಾರಾದ 5-6 ವರ್ಷಗಳು ಮುಂಬೈನಲ್ಲಿ ಅವರ ಕಾರ್ಮಿಕ ಸಂಘಟನೆಯ ಬಹುಮುಖ್ಯ ಕಾಲವಾಗಿತ್ತು. ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಅವರು ಕಾರ್ಮಿಕರನ್ನು ಪ್ರತಿನಿಧಿಸಿದ್ದು ಇದೇ ಸಂದರ್ಭದಲ್ಲಿ.

ಕರ್ನಾಟಕದಲ್ಲಿ ಕಾರ್ಮಿಕ ಹೋರಾಟ :

'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ' ಸೇರಿದ ಮೇಲೆ ದೇಸಾಯಿಯವರು ಕಾರ್ಮಿಕ ಚಳುವಳಿಯಲ್ಲಿ ಗಂಭೀರವಾಗಿಯೇ ತೊಡಗಿಸಿಕೊಂಡರು. ಇದಕ್ಕೆ ಪೂರ್ವ ಅವರು ಅಧ್ಯಯನವನ್ನು ನಡೆಸಿದರು. ಇದರ ಫಲವಾಗಿಯೇ 1936 ರಲ್ಲಿ ಅವರು ಬರೆದ 'ಪ್ರಪಂಚದ ಕೆಲಸಗಾರರು'. ಇದು ಅಂತರಾಷ್ಟ್ರೀಯ ಕಾರ್ಮಿಕರ ಸ್ಥಿತಿಗತಿಯನ್ನು ಪರಿಚಯಿಸುತ್ತದೆ. "ಹೊಟ್ಟೆಯ ಸಲುವಾಗಿ ಪ್ರತಿದಿವಸ ಕೂಲಿಮಾಡಿ, ಮೈಮುರಿದು ದುಡಿಯುವ ಕೋಟ್ಯಾವಧಿ ಕೆಲಸಗಾರರು ಪ್ರಪಂಚದಲ್ಲಿದ್ದಾರೆ. ಇವರೆಲ್ಲರ ಸುಖ-ದುಃಖಗಳನ್ನು ವಿಚಾರಿಸಿ ಅವರಿಗೆ ಹೊಟ್ಟೆ ತುಂಬ ಅನ್ನ, ಮೈತುಂಬ ಬಟ್ಟೆ ಮತ್ತು ಇರಲಿಕ್ಕೆ ಗುಡಿಸಲು ಇವುಗಳನ್ನು ಒದಗಿಸಿಕೊಡುವುದೇ ಮಾನವ ಜಾತಿಯ ಧರ್ಮ" (ಉದ್ಧರಣ ಶ್ರೀಪಾದಶೆಟ್ಟಿ ಪು.324-25) ಎಂದು ಈ ಪುಸ್ತಕದಲ್ಲಿ ಬರೆದಿದ್ದಾರೆ. ಎಲ್ಲಾ ದೇಶದಲ್ಲಿಯೂ ಕಾರ್ಮಿಕರ ಸ್ಥಿತಿ ಒಂದೇ ಆಗಿರುವ ಮತ್ತು ಬಡ-ಶ್ರೀಮಂತ ದೇಶಗಳೆರಡರಲ್ಲೂ ಕಾರ್ಮಿಕರ ಸಮಸ್ಯೆ ಅನ್ನ, ಬಟ್ಟೆ, ವಸತಿಯದೇ ಆಗಿದೆ ಎನ್ನುವ ಮೂಲಭೂತ ಅಂಶವನ್ನು ಸರಿಯಾಗಿಯೇ ಗುರುತಿಸಿದ್ದಾರೆ.

"ವಿಶ್ವದ ಕಾರ್ಮಿಕರೆ ಒಂದಾಗಿ ಹೋರಾಟಕ್ಕೆ ಮುಂದಾಗಿ" ಎನ್ನುವ ನವಯುಗ ವಾಣಿಯನ್ನು ಅವರ ರಾಜಕೀಯ ಅಂತಃಸತ್ವದ ನೆಲೆಯಲ್ಲಿ ಅರ್ಥೈಸಿಕೊಳ್ಳುವಲ್ಲಿ ಮಾತ್ರ ಹಿಂದೇಟು ಹಾಕುತ್ತಾರೆ. ಹಾಗಾಗಿ ಕಾರ್ಮಿಕ ಸಮಸ್ಯೆಯ ಪರಿಹಾರದ ಸಂದರ್ಭದಲ್ಲಿ ಮಾತ್ರ ಅವರು 'ಮಾಸ್ ಮೂಮೆಂಟ್' (ಸಾಮೂಹಿಕ ಹೋರಾಟ) ಕಡೆಗೆ ಒಲವು ತೋರದೆ ಕೇವಲ ಸಂಪು, ಮಾತುಕತೆ, ಒಪ್ಪಂದದ ಹಂತಕ್ಕೆ ನಿಂತುಬಿಡುತ್ತಾ ಸಮುದ್ರ ಕಾರ್ಮಿಕರ ಸಮಸ್ಯೆಯ ಇತ್ಯರ್ಥದ ಸಂದರ್ಭದಲ್ಲಿಯೂ ಅವರು ಬ್ರಿಟೀಷ್ ಸರ್ಕಾರವನ್ನು ಮಾತುಕತೆಯ ಮೂಲಕ 'ಒಪ್ಪಿಸಿ' ಒಂದಿಷ್ಟು ಪರಿಹಾರ ಕೊಡಿಸುತ್ತಾರೆ.

"ಕಾರ್ಮಿಕ ಕ್ಷೇತ್ರದಲ್ಲಿ ಅವರಿಗೆ ಒದಗಿಬಂದ ಮೊದಲ ಸವಾಲು ಮತ್ತು ಅವಕಾಶ" ಎಂದು ಪ್ರಸಿದ್ಧ ಪತ್ರಕರ್ತ ಖಾದ್ರಿ ಶಾಮಣ್ಣನವರಿಂದ ವರ್ಣಿತವಾದ ಗೋಕಾಕ ಗಿರಣಿ ಕಾರ್ಮಿಕರ ಹೋರಾಟವೇ ದೇಸಾಯಿಯವರು ಕರ್ನಾಟಕದಲ್ಲಿ ಪಾಲ್ಗೊಂಡ ಮೊದಲ ಕಾರ್ಮಿಕ ಹೋರಾಟವಾಗಿದೆ.

ಗೋಕಾಕದ ಮರಡಿ ಮಠದಲ್ಲಿ 4 ತಿಂಗಳು ಉಳಿದುಕೊಂಡು ದೇಸಾಯಿಯವರು ಬೆಳಗಾವಿ ಜಿಲ್ಲೆಯ ಗೋಕಾಕ ಹತ್ತಿ ಗಿರಣಿಯಲ್ಲಿ ಕಾರ್ಮಿಕರ ಮುಷ್ಕರದಲ್ಲಿ ನಾಯಕತ್ವ ವಹಿಸಿದರು. ಈ ಕಾಲಕ್ಕಾಗಲೇ ರಷ್ಯಾದಲ್ಲಿ ನಡೆದ ಕ್ರಾಂತಿಯ ನಂತರ ಸ್ಫೂರ್ತಿ ಪಡೆದ ದೇಶದ ಕಾರ್ಮಿಕರು ಬ್ರಿಟೀಷರ ವಿರುದ್ಧ ಹೋರಾಟಕ್ಕಿಳಿದಿದ್ದರು. ಪ್ರಜ್ಞಾವಂತ ಕಾರ್ಮಿಕರು ಹೋರಾಟದ ಹಾದಿ ಹಿಡಿದ ಮೊದಲ ಘಟ್ಟ ಇದು. ಹಾಗೆಯೇ ಇದು ಈ ದೇಶದ ಸ್ವಾತಂತ್ರ್ಯ ಹೋರಾಟದ ಭಾಗವೂ ಆಗಿತ್ತು. ಈ ಸಂದರ್ಭದಲ್ಲಿ ಎ.ಐ.ಟಿ.ಯು.ಸಿ.ಯ ಮುಖಂಡರಾಗಿದ್ದ ಜೋಶಿಯವರು ಕನ್ನಡ ಬಲ್ಲ ದೇಸಾಯಿಯವರನ್ನು ಗೋಕಾಕಿಗೆ ಕಳುಹಿಸಿದರು. ನಿರೀಕ್ಷೆ ಮೀರಿ ಸಂಪು 4 ತಿಂಗಳುಗಳ ಕಾಲ ನಡೆಯಿತು.

ಗೋಕಾಕದ ಮರಡಿ ಮಠದಲ್ಲಿ 4 ತಿಂಗಳು ಉಳಿದುಕೊಂಡು ದೇಸಾಯಿಯವರು ಬೆಳಗಾವಿ ಜಿಲ್ಲೆಯ ಗೋಕಾಕ ಹತ್ತಿ ಗಿರಣಿಯಲ್ಲಿ ಕಾರ್ಮಿಕರ ಮುಷ್ಕರದಲ್ಲಿ ನಾಯಕತ್ವ ವಹಿಸಿದರು. ಈ ಕಾಲಕ್ಕಾಗಲೇ ರಷ್ಯಾದಲ್ಲಿ ನಡೆದ ಕ್ರಾಂತಿಯ ನಂತರ ಸ್ಫೂರ್ತಿ ಪಡೆದ ದೇಶದ ಕಾರ್ಮಿಕರು ಬ್ರಿಟೀಷರ ವಿರುದ್ಧ ಹೋರಾಟಕ್ಕಿಳಿದಿದ್ದರು. ಪ್ರಜ್ಞಾವಂತ ಕಾರ್ಮಿಕರು ಹೋರಾಟದ ಹಾದಿ ಹಿಡಿದ ಮೊದಲ ಘಟ್ಟ ಇದು. ಹಾಗೆಯೇ ಇದು ಈ ದೇಶದ ಸ್ವಾತಂತ್ರ್ಯ ಹೋರಾಟದ ಭಾಗವೂ ಆಗಿತ್ತು. ಈ ಸಂದರ್ಭದಲ್ಲಿ ಎ.ಐ.ಟಿ.ಯು.ಸಿ.ಯ ಮುಖಂಡರಾಗಿದ್ದ ಜೋಶಿಯವರು ಕನ್ನಡಬಲ್ಲ ದೇಸಾಯಿಯವರನ್ನು ಗೋಕಾಕಿಗೆ ಕಳುಹಿಸಿದರು.

ಇದು ಕಾರ್ಮಿಕರಿಗೆ ಮಾತ್ರವಲ್ಲ ಹೋರಾಟದ ಹಾದಿಯಲ್ಲಿ ಮೊದಲ ಹೆಜ್ಜೆ ಇಟ್ಟ ದೇಸಾಯಿಯವರಿಗೆ ಸತ್ವ ಪರೀಕ್ಷೆಯ ಕಾಲ ಕೂಡ ಆಗಿತ್ತು. ಮಾಲಿಕರೊಂದಿಗೆ ದಿನನಿತ್ಯದ ಮಾತುಕತೆ, ಸಂಬಳವಿಲ್ಲದೆ ಕಂಗಾಲಾದ ಕಾರ್ಮಿಕ ಕುಟುಂಬಗಳ ಹಸಿವನ್ನು ನೀಗಿಸುವ ಹೊಣೆ ಕೂಡ ಇತ್ತು. ಈ ಸಂದರ್ಭದಲ್ಲಿ ದೇಸಾಯಿಯವರು ಹುಬ್ಬಳ್ಳಿ, ಬೆಳಗಾವಿ, ಧಾರವಾಡಗಳಲ್ಲಿ ಬೀದಿ ಸಂಗ್ರಹ ಕೂಡ ಮಾಡಿರುವ ಬಗ್ಗೆ ವರದಿಗಳಿವೆ. ಅಂತೂ ಕಾರ್ಮಿಕರ ಒಗ್ಗಟ್ಟಿನ ಹೋರಾಟದ ಭಾಗವಾಗಿ ಮಾತುಕತೆ ನಡೆಯಿತು. ಹೋರಾಟ ಯಶಸ್ವಿಯಾಯಿತು. ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಗೆ ದೇಸಾಯಿ ಯವರ ಮೇಲೆ ವಿಶ್ವಾಸ ಮೂಡಿತು. ಅದರ ಫಲವೇ ಕಡಲ ಕೆಲಸಗಾರರ ಸಂಘಟನೆ.

ಆದರೆ ಈ ಹೋರಾಟ ಹೊರತು ಪಡಿಸಿದರೆ ದೇಸಾಯಿಯವರು ಕರ್ನಾಟಕದಲ್ಲಿ ಬೇರೆ ಯಾವುದೇ ಕಾರ್ಮಿಕ ಸಂಘಟನೆ ಕಟ್ಟಿದ್ದಾಗಲೀ, ಅವರ ನಾಯಕತ್ವ ವಹಿಸಿದ್ದಾಗಲೀ ಗಮನಕ್ಕೆ ಬರುವುದಿಲ್ಲ. ಯಾಕೆ? ಎನ್ನುವ ಪ್ರಶ್ನೆ ಹಾಗೇ ಉಳಿದಿದೆ. ಈ ಬಗ್ಗೆ ಸುರೇಂದ್ರದಾನಿ, ಕೃಷ್ಣ ಮಣಸೆ, ಸ್ಥಳೇಕರ, ಮಂಜುನಾಥ ಪುಲ್ಕರ, ಮೊದಲಾದವರನ್ನು ವಿಚಾರಿಸಿದರೂ ಸಿಗಲಿಲ್ಲ. ಪ್ರಭಾಕರ ಸಾಂಝುಗಿರಿಯವರು ಬರೆದ ಕಾರ್ಮಿಕ ಚಳುವಳಿಯ ಇತಿಹಾಸ ನೋಡಿದೆ. ಸಿಗಲಿಲ್ಲ.

ಮುಂಬಯಿ ಕಡೆಗೆ ಮುಖ

ದೇಸಾಯಿಯವರು ನಡೆಸಿದ ಚಾರಿತ್ರಿಕ ಹೋರಾಟದಲ್ಲಿ ಸಮುದ್ರ ಕೆಲಸಗಾರರ ಸಂಘಟನೆ ಮುಖ್ಯವಾದದ್ದು. ಮುಂಬಯಿಯಲ್ಲಿ ಹಡುಗಿನಲ್ಲಿ ಕೆಲಸಮಾಡುವ ಬಹುತೇಕರು ಗೋವಾದವರಾಗಿದ್ದರಿಂದ ಕೊಂಕಣಿ ಬಲ್ಲ ದಿನಕರ ದೇಸಾಯಿಯವರನ್ನು ಅಲ್ಲಿಗೆ ಕಳುಹಿಸುವ ತೀರ್ಮಾನವನ್ನು ಎನ್. ಎಂ. ಜೋಶಿಯವರು ಕೈಗೊಂಡಿರಬಹುದು. ಈ ಸಂಘಟನೆಯ ಪ್ರಾರಂಭದ ಬಗ್ಗೆ ದೇಸಾಯಿಯವರು ಹೀಗೆ ಬರೆದಿದ್ದಾರೆ. ನನ್ನ ಗುರುಗಳ ಇಚ್ಛೆಯಂತೆಯೆ 1936ರಲ್ಲಿ ಮುಂಬಯಿ ನಗರದಲ್ಲಿ ಸಮುದ್ರ ಕೆಲಸಗಾರರ ಸಂಘಟನೆಯ ಕಾರ್ಯವನ್ನು ನಾನು ಕೈಗೊಂಡೆ. ಸಂಘ ಸ್ಥಾಪನೆಯ ಸಲುವಾಗಿ ನಾನು ಕರೆದ ಪ್ರಾರಂಭದ ಸಭೆಗೆ ಬರೇ ಏಳು ಮಂದಿ ಕಾರ್ಮಿಕರು ಹಾಜರಿದ್ದರು.

ಈ ರೀತಿ ಆರಂಭವಾದ ಸಂಘಟನೆಯ ಬೀಜವು ಎರಡೇ ವರ್ಷಗಳಲ್ಲಿ ವಿಶಾಲ ವೃಕ್ಷವಾಗಿ ಬೆಳೆದು, ಮುಂಬಯಿಯಲ್ಲಿ ಬಲಾಢ್ಯ ಬ್ರಿಟೀಷ್ ಪಿ. ಅಂಡ್, ಓ (P&O) ಉಗಿ ಹಡಗು ಕಂಪೆನಿಯವರನ್ನು ಸಹ ಕಾಡಿಸಿತು. ಈ ವೃಕ್ಷದ ಬೇರುಗಳು ಕಂಪೆನಿಯ ನೆಲೆಗಳನ್ನು ಭೇದಿಸಿ ಅವರ ಶಕ್ತಿಯನ್ನು ಸ್ವಲ್ಪ ಹೀರಿಕೊಂಡವು. ನಲವತ್ತು ದಿನಗಳವರೆಗೆ ನಿರಂತರವಾಗಿ ಸಾಗಿದ ಕಾರ್ಮಿಕರ ಸಂಪಿನಲ್ಲಿ ಸಂಘಕ್ಕೆ ವಿಜಯ ಲಭಿಸಿತು. ಬಲಾಢ್ಯ ಬ್ರಿಟೀಷ್ ಕಂಪನಿಯ ಪ್ರತಿಷ್ಠೆಗೆ ಕುಂದು ಬಂತು" (ನಾಕಂಡ ಪಡುವಣ 1985ಪು (4) ಏಳು ಸದಸ್ಯರಿಂದ ಪ್ರಾರಂಭ ವಾದ ಸಮುದ್ರ ಕಾರ್ಮಿಕರ ಸಂಘಟನೆಯು ನಂತರದಲ್ಲಿ 25 ಸಾವಿರ ಸದಸ್ಯರನ್ನು ಹೊಂದಿರುವ ಈ ಸಂಘ ಮುಂಬಯಿ ಬಂದರಿನ ಏಕಮೇವ ಸಂಘಟನೆಯಾಗಿತ್ತು ಮಾತ್ರವಲ್ಲ ಭಾರತ ಸರಕಾರದಿಂದಲೂ ಮಾನ್ಯತೆ ಪಡೆದ, ಉಗಿ ಹಡಗು ಕಂಪೆನಿಯಿಂದಲೂ ಮನ್ನಣೆ ದೊರೆತ ಯೂನಿಯನ್ ಆಗಿ ರೂಪಿತವಾಯಿತು.

ಸಂಘವು ಸ್ಥಾಪನೆಯಾದಾಗ ನನ್ನ ಸಂಗಡ ಮಾತನಾಡಲು ಸಹ ನಿರಾಕರಿಸುತ್ತಿದ್ದ ಬ್ರಿಟೀಷ್ ಹಡಗು - ಕಂಪೆನಿಗಳ ಅಧಿಕಾರಿಗಳು ಕ್ರಮೇಣ ಮೆತ್ತಗಾಗಿ, ಸರಳ ದಾರಿಗೆ ಬಂದದ್ದು ನಮಗೊಂದು ಅಭಿಮಾನದ ಸಂಗತಿ, ಬಡ ಕಾರ್ಮಿಕರ ಆಂದೋಲನಕ್ಕೆ ಒಂದು ಹೆಮ್ಮೆಯ ಕುರುಹು ಇದು (ಅದೇ ಪು.14) ಎಂದು ಯೂನಿಯನ್ ಬಲಗೊಂಡಾಗ ಆದ ಖುಷಿಯನ್ನು ದೇಸಾಯಿಯವರು ಹಂಚಿಕೊಳ್ಳುತ್ತಾರೆ. ಮತ್ತು ಅವರು ಈ ಸಂಘದ ಕಾರ್ಯದರ್ಶಿಯಾಗಿ ಅಧ್ಯಕ್ಷರಾಗಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ್ದಾರೆ. ಹೀಗೆ ಸಂಘ ಗಟ್ಟಿಗೊಂಡಿದ್ದರಿಂದ ಅನುಕೂಲತೆಗಳು ತಕ್ಷಣ ಈಡೇರಿದವು.

1) ಕಾರ್ಮಿಕರ ಸಂಬಳ ನಾಲ್ಕು ಪಟ್ಟು ಏರಿತು.
2) ಅವರಿಗೆ ಮೂಲಭೂತ ಸೌಕರ್ಯಗಳು ಹೆಚ್ಚಿದವು.
3) ನೌಕರಿಗಳಿಸಲು ಲಂಚ ಕೊಡಬೇಕಾದ ನೀತಿ ತಪ್ಪಿತು.
4)ಸಂಘಟನಾ ಶಕ್ತಿಯಿದ್ದರೆ ಏನೆಲ್ಲಾ ಸಾಧಿಸ ಬಹುದೆನ್ನುವ ಪ್ರಾಥಮಿಕ ತಿಳುವಳಿಕೆ ಲಭಿಸಿತು.

ಇವರ ಸಂಘಕ್ಕೆ ಮಾನ್ಯತೆ ಕೊಟ್ಟು **1945** ರಲ್ಲಿ **ಡೆನ್ಮಾರ್ಕಾ ಕೋಪನ್ ಹೆಗನ್**‌ನಲ್ಲಿ ನಡೆದ ಐ.ಎಲ್.ಓ. ಸಭೆಗೆ ಪ್ರತಿನಿಧಿಯನ್ನಾಗಿ ಭಾರತ ಸರ್ಕಾರವು ಆಯ್ಕೆ ಮಾಡಿತು. ಇದು ಕೂಡ ಅವರ ಬದುಕಿನ ಮಹತ್ವದ ಘಟ್ಟವೇ ಆಗಿದೆ.

ಕೋಪನ್ ಹೆಗನ್ ಸಮುದ್ರ ಕಾರ್ಮಿಕರ ಪರಿಷತ್ತಿನಲ್ಲಿ ದೇಸಾಯಿಯವರು ಮಂಡಿಸಿದ ಭಾಷಣ ತೀರಾ ಮಹತ್ವಪೂರ್ಣವಾದದ್ದು. ಅದು **ಸಾಮಾಜಿಕ ಸುರಕ್ಷೆ / ಭದ್ರತೆ** (ಸೋಶಿಯಲ್ ಸೆಕ್ಯುರಿಟಿ) ಗೆ ಸಂಬಂಧಿಸಿದ್ದು. ಇಂಗ್ಲೇಂಡಿನ ಕೆಲಸಗಾರರ ಹಿತಕ್ಕಾಗಿ ನಿರುದ್ಯೋಗ ವಿಮಾ ಪದ್ಧತಿ, ಆರೋಗ್ಯ ವಿಮಾ ಪದ್ಧತಿ, ವಿಶ್ರಾಂತಿ ವಿಮಾ ಪದ್ಧತಿ 1920 ಮತ್ತು 1924ರಲ್ಲಿ ಜಾರಿಗೆ ಬಂದವು.

ಆದರೆ ಬ್ರಿಟೀಷ್ ಹಡಗಿನಲ್ಲಿ ಕೆಲಸ ಮಾಡುವ 75% ಭಾರತೀಯ ಕೆಲಸಗಾರರಿಗೆ ಈ ವಿಮಾ ಪದ್ಧತಿಯನ್ನು ನಿರಾಕರಿಸಲಾಗಿತ್ತು. ಹೀಗೆ ಭಾರತೀಯ ಕಾರ್ಮಿಕರಿಗಾದ ಅನ್ಯಾಯವನ್ನು ಕಂಡು ಇಲ್ಲಿ ಅಗತ್ಯ ಅಂಕಿ-ಅಂಶಗಳೊಂದಿಗೆ ಗಮನಸೆಳೆದರು.

ಭಾರತೀಯ ಸಮುದ್ರ - ಕಾರ್ಮಿಕರ ಸಲುವಾಗಿ ಇಂಗ್ಲೇಂಡಿನಲ್ಲಿ ಕೂಡಿದ ನಿಧಿಯನ್ನು ಭಾರತೀಯರ ಕಲ್ಯಾಣಕ್ಕಾಗಿ ವಿನಿಯೋಗಿಸಬೇಕೆಂದು ಬ್ರಿಟೀಷ್ ಸರಕಾರವು ಈ ನಿಧಿಯನ್ನು ಭಾರತ ಸರಕಾರದ ಸ್ವಾಧೀನ ಪಡಿಸಬೇಕೆಂದೂ ಮೊದಲಬಾರಿಗೆ ಅಂತರಾಷ್ಟ್ರೀಯ ವೇದಿಕೆ ಗಮನ ಸೆಳೆದರು. ಮಾತ್ರವಲ್ಲ ಭಾರತೀಯ ಕಾರ್ಮಿಕರಿಗೆ ಆದ ಅನ್ಯಾಯಕ್ಕೆ ಬ್ರಿಟೀಷ್ ಸರಕಾರವೇ ಕಾರಣ ಎಂದು ನೇರವಾಗಿ ಆಪಾದಿಸಿದರು; ಅಂತಿಮವಾಗಿ ಭಾರತ ಸರ್ಕಾರಕ್ಕೆ ಬ್ರಿಟೀಷ್ ಸರ್ಕಾರ ಮೇಲಿಂದ ವಂತಿಕೆ ಕೊಡುವ ಆಶ್ವಾಸನೆ ಇತ್ತರು. ಆದರೆ ಭಾರತ ಸರ್ಕಾರವು ಇದುವರೆಗೆ ವಿಮಾ ಪದ್ಧತಿಯನ್ನು ಸ್ಥಾಪಿಸದೇ ಇರುವ ಕುರಿತು ಆಗ ದೇಸಾಯಿಯವರು ವಿಶಾದ ವ್ಯಕ್ತಪಡಿಸಿದ್ದರು.

ಡೆನ್ಮಾರ್ಕಿನಿಂದ ವಾಪಾಸಾಗುವಾಗ ದೇಸಾಯಿಯವರು 40 ದಿನಗಳ ಕಾಲ ಇಂಗ್ಲೆಂಡಿನಲ್ಲಿ ವಾಸ್ತವ್ಯ ಹೂಡಿದರು. ಬ್ರಿಟೀಷ್ ಹಡಗುಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿರುವ ಕಾರ್ಮಿಕರ ಸ್ಥಿತಿಗತಿಯ ಅಧ್ಯಯನ ಮಾಡುವುದು ಕೂಡ ಅವರ ಉದ್ದೇಶವಾಗಿತ್ತು. 'ಲೀವರ್ ಪೂಲ್' ಬಂದರಿಗೆ ಭೇಟಿ ಕೊಟ್ಟರು. 'ಮ್ಯಾಗ್‌ಹಲ್ ಕ್ಯಾಂಪ್' ಎನ್ನುವ ಹೆಸರಿನಲ್ಲಿ ಪ್ರತ್ಯೇಕ ಕ್ಯಾಂಪ್ ತೆರೆಯಲಾಗಿತ್ತು. ಇಲ್ಲಿಯ ವ್ಯವಸ್ಥೆ ನೋಡಿ ದೇಸಾಯಿಯವರು ರೋಸಿ ಹೋದರು. ಅಲ್ಲಿಯ ಅವ್ಯವಸ್ಥೆಯನ್ನು ಸುಮಾರು 3-4 ಪುಟದಷ್ಟು ವಿವರವಾಗಿ (ನಾಕಂಡ ಪಡುವಣದಲ್ಲಿ ವಿವರವಾಗಿ ದಾಖಲಿಸಿದ್ದಾರೆ. ನೋಡಿ ಪು.46-47) ಬ್ರಿಟೀಷ್ ಸರ್ಕಾರಕ್ಕೆ ವರದಿ ಕಳುಹಿಸುತ್ತಾರೆ. ಬ್ರಿಟೀಷ್ ಸರಕಾರದ ಅಂಡರ್ ಸೆಕ್ರೆಟರಿ ಆದ ಎಲ್.ಎ. ಗಟರಿ ಸಾಹೇಬರನ್ನು ಕಂಡು ವಿವರಿಸಿರುತ್ತಾರೆ. ಆನಂತರ 'ಗ್ಲಾಸಗೋ' ಬಂದರು, 'ಕೋಟ್ ಬ್ರಿಜ್' ಬಂದರುಗಳಿಗೆ ಭೇಟಿ ಕೊಟ್ಟು ಬ್ರಿಟೀಷ್ ಸರ್ಕಾರಕ್ಕೆ ದೂರಿದರು. ಇದರಿಂದಾಗಿ ಅಲ್ಲಿ ವಾಸಿಸುವ ಕಾರ್ಮಿಕರ ಕ್ಯಾಂಪಿನ ಮೂಲ ಸೌಕರ್ಯದಲ್ಲಿ ಸಾಕಷ್ಟು ಬದಲಾವಣೆಗಳಾದವು. ಹೀಗೆ ಕಾರ್ಮಿಕರ ಬದುಕನ್ನು ಸಹ್ಯಗೊಳಿಸುವಲ್ಲಿ ಪಾತ್ರ ಬಹುಮುಖ್ಯವಾದದ್ದು.

ಹಾಗೆಯೇ 1946ರಲ್ಲಿ ಅಮೇರಿಕಾದ ಸಿಯಾಟಲ್‌ನಲ್ಲಿ ನಡೆದ ಅಂತರಾಷ್ಟ್ರೀಯ ಕಾರ್ಮಿಕ ಮಹಾಪರಿಷತ್ತಿನ ಅಧಿವೇಶನಕ್ಕೆ ದಿನಕರ ದೇಸಾಯಿಯವರು ಭಾರತದ ಪ್ರತಿನಿಧಿಗಳಲ್ಲಿ ಒಬ್ಬರಾಗಿ ಹೋಗಿ ಬಂದರು (ಶ್ರೀಪಾದ ಶೆಟ್ಟಿ ; ಪು.329)

1940ರಲ್ಲಿ ದೇಸಾಯಿಯವರು ಬರೆದ Maritime Labour in India(ಭಾರತೀಯ ನೌಕಾ ಕಾರ್ಮಿಕರು) ಪುಸ್ತಕ ಭಾರತೀಯ ನೌಕಾ ಚರಿತ್ರೆಗಳ ಗ್ರಂಥಗಳಲ್ಲಿ ಒಂದು ಮಹತ್ವದ ಸ್ಥಾನ ಪಡೆದಿದೆ ಎಂದು ಟಿ.ಎಸ್. ಸಂಜೀವ ರಾವ್ ಅವರು ಬರೆಯುತ್ತಾರೆ. (ಉದ್ಧರಣ : ಶ್ರೀಪಾದ ಶೆಟ್ಟಿ; ಪು.329) 146 ಅಧ್ಯಾಯಗಳ ಈ ಪುಸ್ತಕ ಆ ಕಾಲದ ನಾವಿಕರ ಕಾರ್ಯದ ಸ್ವರೂಪದಿಂದ ಮೊದಲ್ಗೊಂಡು ಕಾರ್ಮಿಕರ ಆರೋಗ್ಯ, ಆಹಾರ, ಮಕ್ಕಳು-ಯುವಕರು, ಮನೆವ್ಯವಸ್ಥೆ, ಕಲ್ಯಾಣ ಕಾರ್ಯ, ಶಿಕ್ಷಣ ಪ್ರಸಾರ, ಸಾಮಾಜಿಕ ವಿಮೆ. ಹಡಗುಕೆಲಸಗಾರರಿಗೆ ಪರಿಹಾರಕಾರ್ಯ, ಔದ್ಯೋಗಿಕ ಸಂಬಂಧ, ಹಡಗು ಮಾಲಿಕ ಧೋರಣೆ, ಸರಕಾರದ ಧೋರಣೆ, ಒಪ್ಪಂದ, ಕರಾರಿನ ಮಾತುಕತೆ, ವ್ಯಾಪಾರಿ ಹಡಗುಗಳ ಭಾರತೀಯ ನಾವಿಕ ಮತ್ತು ಮಹಾಯುದ್ಧ ಮುಂತಾದ ಮಹತ್ವದ ವಿಷಯವನ್ನು ಚರ್ಚಿಸಿದ್ದಾರೆ. (ಶ್ರೀಪಾದ ಶೆಟ್ಟಿ, ಪು.330)

ಇದರೊಂದಿಗೆ ದೇಸಾಯಿಯವರು ಮುಂಬಯಿ ಪ್ರಾಂತದ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾಗಿ ಹತ್ತು ವರ್ಷ ಕೆಲಸ ಮಾಡಿದರು. ಹಿಂದ್ ಮಜ್ದೂರ್ ಸಭೆಯ ಕಾರ್ಯದರ್ಶಿಯಾಗಿ 3 ವರ್ಷ ಕೆಲಸ ಮಾಡಿದರು. ಸರ್ಕಾರ ನೇಮಿಸಿದ ವಿವಿಧ ಸಮಿತಿಯಲ್ಲಿ (ಉದಾ: 1946 ಆಗಸ್ಟ್ 27ರಂದು ಅಮಲನಾರದ ಬಟ್ಟೆ ಗಿರಣಿ ಕಾರ್ಮಿಕರ ಮೇಲೆ ನಡೆದ ಪೋಲೀಸ್ ಗೋಲಿಬಾರ್ ಕುರಿತ ವರದಿ) ಕೆಲಸ ಮಾಡಿದ್ದಾರೆ. ಅಲ್ಲದೆ ಮುಂಬಯಿ ಮುನ್ಸಿಪಲ್ ಕಾರ್ಪೋರೇಶನ್‌ನಲ್ಲಿ 1948 - 1961ರವರೆಗೆ ಸದಸ್ಯರಾಗಿ ಆಯ್ಕೆಯಾದರು. ಮೊದಲ ಅವಧಿಯಲ್ಲಿ ಅವರು ಕಾರ್ಮಿಕರೆ ಹೆಚ್ಚಾಗಿರುವ ಪ್ರದೇಶದಿಂದ ಕಾರ್ಮಿಕ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದರು.

ಆದರೆ ಇಂದು ದೇಸಾಯಿಯವರು ಕಟ್ಟಿದ ಸಮುದ್ರ ಕಾರ್ಮಿಕರ ಯೂನಿಯನ್ ಇಲ್ಲದಿದ್ದರೂ ಈಗ ಅದರ ಚಳುವಳಿಯಲ್ಲಿ ಇದೊಂದು ಮೈಲುಗಲ್ಲಾಗಿತ್ತು.

ಭಾಗ- 2

ಲೇಖನದ ಪ್ರಾರಂಭದಲ್ಲಿ ಹೇಳಿದ ಸಂಗತಿಯನ್ನು ಸ್ವಲ್ಪ ವಿಸ್ತರಿಸಲು ಪ್ರಯತ್ನಿಸುತ್ತೇನೆ. ದಿನಕರ ದೇಸಾಯಿಯವರ ಕರ್ಮಭೂಮಿ - ಅಂಕೋಲೆ ಮತ್ತು ಮುಂಬೈ, ಅಂಕೋಲೆ ರಾಜ್ಯದ ಹಿಂದುಳಿದ ಪ್ರದೇಶಗಳಲ್ಲಿ ಒಂದಾದರೆ, ಮುಂಬೈ 20ನೇ ಶತಮಾನದ ಆರಂಭದಲ್ಲಿಯೇ ಭಾರತದ ಎರಡನೇ ಅತಿದೊಡ್ಡ ನಗರವಾಗಿತ್ತು ಮತ್ತು ಔದ್ಯೋಗಿಕ ಕೇಂದ್ರವಾಗಿತ್ತು. ಮೊದಲೇ ಹೇಳಿದಂತೆ ರೈತ ಕೂಟ ಕಟ್ಟಿದ ದೇಸಾಯಿಯವರನ್ನು ಸಿದ್ಧಪಡಿಸಿದ ಕುಲುಮೆ ಮುಂಬೈ ಆಗಿತ್ತು.

ಆರಂಭದಿಂದಲೇ ಭಾರತದ ದುಡಿಯುವ ವರ್ಗ ಮೂಲಭೂತವಾಗಿ ಒಂದಕ್ಕೊಂದು ವಿರುದ್ಧವಾದ ಎರಡು ಶಕ್ತಿಗಳ ವಿರುದ್ಧ ಹೋರಾಟ ನಡೆಸಬೇಕಾಯಿತು. ಸಾಮ್ರಾ ಜ್ಯಶಾಹಿ ರಾಜಕೀಯ ಆಡಳಿತ ಮತ್ತು ದೇಶೀಯ, ವಿದೇಶೀಯ ಬಂಡವಾಳಗಾರರ ಶೋಷಣೆಯ ವಿರುದ್ಧ ಆರ್ಥಿಕ ಹೋರಾಟ, ಇದರಿಂದಾಗಿ ದೇಶದ ಕಾರ್ಮಿಕ ಚಳುವಳಿ ಮತ್ತು ಸ್ವಾತಂತ್ರ್ಯ ಚಳುವಳಿ ಪರಸ್ಪರ ಬೆಸೆದಿದ್ದವು. ತಮ್ಮ ವರ್ಗಮೂಲ ಸಮಸ್ಯೆಯನ್ನು ಜಾಗತಿಕ ರಾಜಕೀಯ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳುವ ಪ್ರಜ್ಞಾವಂತಿಕೆಯನ್ನು ಕಾರ್ಮಿಕರು ಮರೆಯುತ್ತಿದ್ದರು. ಇದರ ಭಾಗವಾಗಿಯೇ ಬ್ರಿಟಿಷ್ ರಾಜಸತ್ತೆಯ ವಿರುದ್ಧವೂ, ಅವರೊಂದಿಗೆ ಒಳ ಒಪ್ಪಂದಮಾಡಿ ಕೊಂಡಿರುವ ಭೂಮಾಲಿಕ ಬಂಡವಾಳಗಾರರ ವಿರುದ್ಧವೂ ಕಾರ್ಮಿಕರು ಹೋರಾಟ ನಡೆಸಿದರು.

ಇದರ ಅವಲೋಕನ ಕೂಡ ಮಹತ್ವದ್ದೇ ಆಗಿದೆ. ಬಾಲಗಂಗಾಧರ ತಿಲಕರ ಬಂಧನವನ್ನು ವಿರೋಧಿಸಿ 1908ರಲ್ಲಿ ಮೊದಲ ಬೃಹತ್ ಸಾರ್ವತ್ರಿಕ ರಾಜಕೀಯ ಮುಷ್ಕರವನ್ನು ಕಾರ್ಮಿಕರು ಮಾಡಿದರು. 1928ರ ಒಂದೇ ವರ್ಷದಲ್ಲಿ ದೇಶಾದ್ಯಂತ 200ಕ್ಕೂ ಹೆಚ್ಚು ಕೈಗಾರಿಕಾ ಮುಷ್ಕರಗಳು ನಡೆದವು. ಸುಮಾರು 5 ಲಕ್ಷ ಕಾರ್ಮಿಕರು ಭಾಗವಹಿಸಿದರು. ಅಂಬೇಡ್ಕರ್ ನೇತೃತ್ವದಲ್ಲಿ ದಲಿತರ ಹೋರಾಟ ನಡೆಯುತ್ತಿತ್ತು. 'ಗಿರಣಿ ಕಾಮಗಾರ್' ಯೂನಿಯನ್ ನೇತೃತ್ವದಲ್ಲಿ ನಡೆದ ಕಾರ್ಮಿಕರ ಮುಷ್ಕರ, ಅದರಲ್ಲಿ 65000 ಜನ ಪಾಲ್ಗೊಂಡರು.

ಸ್ವಾತಂತ್ರ್ಯ ಚಳುವಳಿಯ ತಾತ್ವಿಕತೆಯು ಪಡೆದುಕೊಂಡ ತಿರುವು, ರಷ್ಯಾ ಕ್ರಾಂತಿ, ಮೊದಲ ಮಹಾಯುದ್ಧ ಸೃಷ್ಟಿಸಿದ ಬಿಕ್ಕಟ್ಟಿನ ಹಿನ್ನೆಲೆ, ಕಾಂಗ್ರೆಸ್‌ನಲ್ಲಿಯೇ ಸಾಂದ್ರೀಕರಣಗೊಳ್ಳುತ್ತಿರುವ ಮಾರ್ಕ್ಸ್‌ವಾದಿ ಚಿಂತನೆಗಳು....... ಇತ್ಯಾದಿ ಹಿನ್ನೆಲೆಯಲ್ಲಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎ.ಐ.ಟಿ.ಯು.ಸಿ.) 1920ರಲ್ಲಿ ಹುಟ್ಟಿಕೊಂಡಿತು. ಈ ದೇಶದ ಕಾರ್ಮಿಕ ಚಳುವಳಿಯ ಏಕಕಾಲದಲ್ಲಿ ಸಾಮ್ರಾಜ್ಯಶಾಹಿಯ ವಿರೋಧವಾಗಿಯೂ, ದೇಶೀಯ ಬಂಡವಾಳಗಾರರ ವಿರುದ್ಧವಾಗಿಯೂ ಮುನ್ನಡೆಸಿದ ಸಂಘಟನೆ ಇದು. ಇವರಲ್ಲಿ ದಿನಕರ ದೇಸಾಯಿ ಕೂಡ ಪದಾಧಿಕಾರಿಯಾಗಿದ್ದರು. ಆಗಲೇ ಇವರಿಗೆ ಕಮ್ಯುನಿಸ್ಟ್ ನಾಯಕರಾದ ಇ.ಎಂ.ಎಸ್. ಶ್ಯಾಮರಾವ್ ಮರಳೇಕರ, ಡಾಂಗೆ, ಪಟವರ್ಧನ ಮುಂತಾದವರ ಪರಿಚಯವಾಯಿತು. ಎಡಪಂಥೀಯ ವಿಚಾರಧಾರೆಯ ಪ್ರಭಾವಕ್ಕೆ ಒಳಗಾದರು.

ಆರಂಭದಿಂದಲೇ ಭಾರತದ ದುಡಿಯುವ ವರ್ಗ ಮೂಲಭೂತವಾಗಿ ಒಂದಕ್ಕೊಂದು ವಿರುದ್ಧವಾದ ಎರಡು ಶಕ್ತಿಗಳ ವಿರುದ್ಧ ಹೋರಾಟ ನಡೆಸಬೇಕಾಯಿತು. ಸಾಮ್ರಾಜ್ಯಶಾಹಿ ರಾಜಕೀಯ ಆಡಳಿತ ಮತ್ತು ದೇಶೀಯ, ವಿದೇಶೀಯ ಬಂಡವಾಳಗಾರರ ಶೋಷಣೆಯ ವಿರುದ್ಧ ಆರ್ಥಿಕ ಹೋರಾಟ, ಇದರಿಂದಾಗಿ ದೇಶದ ಕಾರ್ಮಿಕ ಚಳುವಳಿ ಮತ್ತು ಸ್ವಾತಂತ್ರ್ಯ ಚಳುವಳಿ ಪರಸ್ಪರ ಬೆಸೆದಿದ್ದವು. ತಮ್ಮ ವರ್ಗಮೂಲ ಸಮಸ್ಯೆಯನ್ನು ಜಾಗತಿಕ ರಾಜಕೀಯ - ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳುವ ಪ್ರಜ್ಞಾವಂತಿಕೆಯನ್ನು ಕಾರ್ಮಿಕರು ಮರೆಯುತ್ತಿದ್ದರು. ಇದರ ಭಾಗವಾಗಿಯೇ ಬ್ರಿಟಿಷ್ ರಾಜ ಸತ್ತೆಯ ವಿರುದ್ಧವೂ, ಅವರೊಂದಿಗೆ ಒಳ ಒಪ್ಪಂದ ಮಾಡಿಕೊಂಡಿರುವ ಭೂಮಾಲಿಕ ಬಂಡವಾಳಗಾರರ ವಿರುದ್ಧವೂ ಕಾರ್ಮಿಕರು ಹೋರಾಟ ನಡೆಸಿದರು. ಆದರೆ ಕಾರ್ಮಿಕ ಸಂಘಟನೆಯಲ್ಲಿಯೇ (ಎ.ಐ.ಟಿ.ಯು.ಸಿ.) ತಲೆದೋರಿದ ಮತ ಭಿನ್ನತೆ ಕೂಡ ಈ ಕಾಲದ ಪ್ರಮುಖ ಘಟನೆ.

ಕಾರ್ಮಿಕರ ಸಮಸ್ಯೆಯನ್ನು, ಎದುರಿಸುತ್ತಿರುವ ಶೋಷಣೆಯನ್ನು ವರ್ಗ ಸ್ವರೂಪದ ಹಿನ್ನೆಲೆಯಲ್ಲಿ ಅರ್ಥೈಸುವುದು ಮತ್ತು ಅವರ ಪರಿಹಾರಕ್ಕಾಗಿ ಸಾಮೂಹಿಕ ಕ್ರಾಂತಿಕಾರಿ ಹೋರಾಟ ಕಟ್ಟುವ ಕ್ರಿಯೆ ಒಂದೆಡೆಯಾದರೆ ಕಾರ್ಮಿಕರ ಸಮಸ್ಯೆಯನ್ನು ವರ್ಗ ಸ್ವರೂಪದಲ್ಲಿ ಅರ್ಥೈಸದೆ (ಕಾರ್ಮಿಕ ವರ್ಗದ ಸಂಘಟನೆ ಎಂದು ಪರಿಗಣಿಸದೆ) ಸರ್ಕಾರದೊಂದಿಗೆ ಮಾತುಕತೆ ನಡೆಸುವ ಒಂದು

ಸಾಧಾರಣ ಸಂಘ–ಸಂಸ್ಥೆಯಂತೆ ಪರಿಗಣಿಸುವುದು ಇನ್ನೊಂದೆಡೆ. ಮೊದಲನ್ನೇಯದು ಸಂಘರ್ಷದ ಮಾರ್ಗ ಅನುಸರಿಸಿದರೆ ಎರಡನೆಯದು ಮಾತುಕತೆ, ಒಪ್ಪಂದ ಇತ್ಯಾದಿ ಮಾರ್ಗವನ್ನು ಅವಲಂಬಿಸಿತು. ಕಾರ್ಮಿಕರ ಸಮಸ್ಯೆಯ ಪರಿಹಾರಕ್ಕೆ ಸಂಘರ್ಷದ ಮಾದರಿ ಬಿಟ್ಟು ಐ.ಎಲ್.ಓ.(ಅಂತರಾಷ್ಟ್ರೀಯ ಕಾರ್ಮಿಕ ಸಂಘ)ದಂತಹ ಸಂಸ್ಥೆಯೊಂದಿಗಿನ ಮಾತುಕತೆಯ ಮೂಲಕ ಸಮಸ್ಯೆ ಪರಿಹರಿಸುವ ಪರಿಪಾಠ ಬೆಳೆಸಿಕೊಂಡಿತು. ಮೊದಲ ಗುಂಪಿನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ನೇತಾರರು ಇದ್ದರೆ, ಎರಡನೇ ಗುಂಪಿನಲ್ಲಿ ಉದಾರವಾದಿ ಕಮ್ಯುನಿಸ್ಟ್‌ರಿದ್ದರು.

ಈ ಎರಡನೇ ಗುಂಪಿನ ನಾಯಕತ್ವವನ್ನು ವಹಿಸಿದವರು ಎನ್.ಎಂ.ಜೋಶಿ. ಅವರು ಎ.ಐ.ಟಿ.ಯು.ಸಿ.ಯಿಂದ ಹೊರಬಂದು ಇಂಡಿಯನ್ ಟ್ರೇಡ್ ಯೂನಿಯನ್ ಫೆಡರೇಶನ್ (ಐ.ಟಿ.ಯು.ಎಫ್) ಎನ್ನುವ ಹೊಸ ಸಂಘಟನೆ ಕಟ್ಟಿದರು. ಇವರ ಶಿಷ್ಯರಾದ ದೇಸಾಯಿಯವರೂ ಕೂಡ ಇದೇ ಮಾರ್ಗವನ್ನು ಅನುಸರಿಸಿದರು. ಅವರ ಸಮುದ್ರ ಕೆಲಸಗಾರರ ಸಂಘ ಈ ಪ್ರಭಾವದಿಂದ ಆಚೆ ಬಂದಿರಲಿಲ್ಲ. ಬ್ರಿಟೀಷ್ ರಾಜಸತ್ತೆಯನ್ನು ಒಪ್ಪಿಸಿ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸಿದರು.

ಆದರೆ ಆನಂತರದ ಬೆಳವಣಿಗೆಯಲ್ಲಿ ಎನ್.ಎಂ. ಜೋಶಿಯವರು ಪುನಃ ಎ.ಐ.ಟಿ.ಯು.ಸಿ. ಸೇರಿದರು. ದಿನಕರ ದೇಸಾಯಿ ಅದರ ಬಾಂಬೇ ಪ್ರಾಂತದ ಕಾರ್ಯದರ್ಶಿಯೂ ಆಗಿದ್ದರು. ಆಗಲೇ ಅವರು ಪೂರ್ಣ ಪ್ರಮಾಣದ ಕಮ್ಯುನಿಸ್ಟ್ ಆಲೋಚನೆಯನ್ನು ಒಪ್ಪಿಕೊಂಡು ರೈತ ಹೋರಾಟದ ಕಡೆಗೆ ಒಲಿದದ್ದು.

ರಷ್ಯಾಕ್ರಾಂತಿಯ ನಂತರ ಬದಲಾದ ಜಾಗತಿಕ ಸಂದರ್ಭದಿಂದ ಭಾರತವೇನೂ ಹೊರಗಿರುವ ಸಾಧ್ಯತೆ ಇರಲಿಲ್ಲ. ರಷ್ಯಾ ಹೊಸ ಕನಸನ್ನು ಬಿತ್ತಿತು. ಅದನ್ನು ಭಾರತದಲ್ಲಿ ಬೆಳೆಸಲು ಸಂಘಟಿತ ಪ್ರಯತ್ನಗಳು ನಡೆದವು. ಕಾರ್ಮಿಕ ಚಳುವಳಿಯ ಜೊತೆ ಜೊತೆಗೆ ರೈತರನ್ನು ಸಂಘಟಿಸುವುದು ಮತ್ತು ಹೋರಾಟಕ್ಕೆ ಇಳಿಸುವುದು ಅಗತ್ಯವೆಂದು ಕಮ್ಯುನಿಸ್ಟ್ ಸಿದ್ಧಾಂತವನ್ನು ಒಪ್ಪಿಕೊಂಡ ಕಾರ್ಮಿಕರ ನಾಯಕತ್ವ ಪರಿಭಾವಿಸಿತು.ಅವರ ಪರಿಣಾಮ ಅಖಿಲ ಭಾರತ ಕಿಸಾನ ಸಭಾ (ಎ.ಐ.ಕೆ.ಎಸ್.). ಹೊಸದಾಗಿ ಉದಯಿಸಿದ ಕಾರ್ಮಿಕವರ್ಗ ಬಂಡವಾಳಗಾರರ ವಿರುದ್ಧ ಮತ್ತು ಹಳೆಯ ಭೂ ಮಾಲಿಕರ ವಿರುದ್ಧ ರೈತ–ಕೂಲಿಕಾರ ವರ್ಗ ಹೋರಾಟ ನಡೆಸುವ ಮೂಲಕ ಶೋಷಣೆಯ ವಿರುದ್ಧ ಒಂದು ಐಕ್ಯ ಚಳುವಳಿ ಕಟ್ಟಲು ಮುಂದಾದರು.

ರಷ್ಯಾಕ್ರಾಂತಿಯ ನಂತರ ಬದಲಾದ ಜಾಗತಿಕ ಸಂದರ್ಭದಿಂದ ಭಾರತವೇನೂ ಹೊರಗಿರುವ ಸಾಧ್ಯತೆ ಇರಲಿಲ್ಲ. ರಷ್ಯಾ ಹೊಸ ಕನಸನ್ನು ಬಿತ್ತಿತು. ಅದನ್ನು ಭಾರತದಲ್ಲಿ ಬೆಳೆಸಲು ಸಂಘಟಿತ ಪ್ರಯತ್ನಗಳು ನಡೆದವು. ಕಾರ್ಮಿಕ ಚಳುವಳಿಯ ಜೊತೆಜೊತೆಗೆ ರೈತರನ್ನು ಸಂಘಟಿಸುವುದು ಮತ್ತು ಹೋರಾಟಕ್ಕೆ ಇಳಿಸುವುದು ಅಗತ್ಯವೆಂದು ಕಮ್ಯುನಿಸ್ಟ್ ಸಿದ್ಧಾಂತವನ್ನು ಒಪ್ಪಿಕೊಂಡ ಕಾರ್ಮಿಕರ ನಾಯಕತ್ವ ಪರಿಭಾವಿಸಿತು. ಅವರ ಪರಿಣಾಮವೇ ಅಖಿಲ ಭಾರತ ಕಿಸಾನ ಸಭಾ (ಎ.ಐ.ಕೆ.ಎಸ್.). ಹೊಸದಾಗಿ ಉದಯಿಸಿದ ಕಾರ್ಮಿಕ ವರ್ಗ ಬಂಡವಾಳಗಾರರ ವಿರುದ್ಧ ಮತ್ತು ಹಳೆಯ ಭೂಮಾಲಿಕರ ವಿರುದ್ಧ ರೈತ–ಕೂಲಿಕಾರ ವರ್ಗ ಹೋರಾಟ ನಡೆಸುವ ಮೂಲಕ ಶೋಷಣೆಯ ವಿರುದ್ಧ ಒಂದು ಐಕ್ಯ ಚಳುವಳಿ ಕಟ್ಟಲು ಮುಂದಾದರು. ಹಲವು ರಾಜ್ಯಗಳಲ್ಲಿ ಅದು ಭೂಮಾಲಿಕರ–ಒಡೆಯರ ವಿರುದ್ಧ ಗೇಣಿ ರೈತರ ಹೋರಾಟವಾಗಿ ರೂಪುಗೊಂಡಿತು. ಅಖಿಲ ಭಾರತ ಕಿಸಾನ ಸಭಾ ರಾಷ್ಟ್ರ ಮಟ್ಟದಲ್ಲಿ ಬೇಡಿಕೆಯ ಪಟ್ಟಿಯನ್ನೂ ಸಿದ್ಧಪಡಿಸಿತು. ರೈತ ಹೋರಾಟಕ್ಕೆ ಇದು ಸೈದ್ಧಾಂತಿಕ ನೆಲೆಯನ್ನು ಒದಗಿಸಿತು. 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ'ಯಲ್ಲಿರುವ ಹಲವರು ಈ ಎರಡೂ ಹೋರಾಟದಲ್ಲಿ ಪಾಲ್ಗೊಂಡರು. ದಿನಕರ ದೇಸಾಯಿಯವರು ಕೂಡ.

ಭಿನ್ನದಾರಿಯಲ್ಲಿ ದೇಸಾಯಿ.

ಉತ್ತರ ಕನ್ನಡ ಜಿಲ್ಲೆಯ ರೈತ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದ ದಿನಕರ ದೇಸಾಯಿಯವರು ತುಳಿದ ಭಿನ್ನದಾರಿಯಿಂದಾಗಿ ಅವರು ಸಾಧಿಸಬಹುದಾದದ್ದನ್ನು ಸಾಧಿಸಲು ಸಾಧ್ಯವಾಗಿಲ್ಲವೆನಿಸುತ್ತದೆ. 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ'ಯಲ್ಲಿಯೇ ಕೆಲಸ ಮಾಡುತ್ತಿದ್ದ ಗೋದಾವರಿ ಪುರಳೇಕರ – ಶ್ಯಾಮರಾವ್ ಪುರಳೇಕರರೊಂದಿಗೆ ದೇಸಾಯಿಯವರನ್ನು ಇಟ್ಟು ನೋಡಿದರೆ ನನ್ನ ಮೇಲಿನ ಹೇಳಿಕೆ ಹೆಚ್ಚು ಸ್ಪಷ್ಟವಾಗಬಹುದು ಎಂದುಕೊಂಡಿದ್ದೇನೆ.

ದೇಸಾಯಿಯವರು ಮತ್ತು ಪುರಳೇಕರ ದಂಪತಿಗಳು ಪ್ರಭಾವಿತಗೊಂಡಿದ್ದು ಒಂದೇ ಸಿದ್ಧಾಂತದಿಂದಾಗಿ. ಪುರಳೇಕರ ದಂಪತಿಗಳು ಈ ಸಿದ್ಧಾಂತವನ್ನು ಇನ್ನಷ್ಟು ಆಳವಾಗಿ ಅಧ್ಯಯನ ಮಾಡಿದರು. ಸಿದ್ಧಾಂತದಿಂದ ವಿಚಲಿತ ಆಗಲಿಲ್ಲ. ಗೋದುತಾಯಿ ಪುರಳೇಕರ' ಮಹಾರಾಷ್ಟ್ರದ ಥಾಣೆ ಜಿಲ್ಲೆಯಲ್ಲಿರುವ 'ವಾರಲೀ' ಬುಡಕಟ್ಟು ಜನರನ್ನು ಸಂಘಟಿಸಲು ಮುಂದಾದರು. ಭೂಮಾಲಿಕರೆದುರು ಪಶುಗಳಂತೆ ಬದುಕುತ್ತಿದ್ದ, ಅಕ್ಷರಾಭ್ಯಾಸವಿಲ್ಲದ ಆಧುನಿಕ ಸಾಮ್ರಾಜ್ಯದ ಸಂಪರ್ಕ ಇಲ್ಲದ ವಾರಲೀಗಳ ಮಧ್ಯೆ ಮೊದಲ ಬಾರಿಗೆ ಸಂಘಟನೆ, ಹೋರಾಟಕ್ಕೆ ಇಳಿದರು. ಇದರಲ್ಲಿ ಯಶಸ್ವಿಯಾದರೂ ಕೂಡ ಭೂಮಾಲಿಕರ ಮಿತಿ ಇಲ್ಲದ ಶೋಷಣೆಯಿಂದ 'ವಾರಲೀ' ಜನರನ್ನು ವಿಮೋಚನೆ ಮಾಡಿದರು (ಚಿಂತನ: ಉತ್ತರ ಕನ್ನಡವು ಪ್ರಕಟಿಸಿದ 'ಮಾನವ ಎಚ್ಚೆತ್ತಾಗ' ಪುಸ್ತಕದಲ್ಲಿ ಈ ಹೋರಾಟದ ಸಂಪೂರ್ಣ ಚಿತ್ರ ಇದೆ). ಅಲ್ಲಿ ಶಿಕ್ಷಣ ಸಂಸ್ಥೆಯನ್ನು ತೆರೆದರು. ಎ.ಐ.ಕೆ.ಎಸ್. ಅಡಿಯಲ್ಲಿ ಅವರು ಕಟ್ಟಿದ ರೈತ ಸಂಘ ಈಗಲೂ ಒಂದು ಎಚ್ಚೆತ್ತ ಪ್ರಜ್ಞೆ ; ಈಗಲೂ ವಾರಲೀ ಬುಡಕಟ್ಟಿನ ನಡುವೆಯೇ ಮಹತ್ವದ ನಾಯಕರು ಬೆಳೆದು ಬಂದಿದ್ದಾರೆ.

ಸಾಮಾನ್ಯ ರೈತನ ರಾಜಕೀಯ ಪ್ರಜ್ಞೆಯಿಂದಾಗಿ ಇಂದೂ ಥಾಣಾ ಜಿಲ್ಲೆಯಲ್ಲಿ ರೈತ ಪ್ರತಿನಿಧಿಗಳೇ ವಿಧಾನ ಸಭೆಯಲ್ಲಿ ಹಲವುಬಾರಿ ಪಾರ್ಲಿಮೆಂಟಿನಲ್ಲಿ ಆಯ್ಕೆಯಾಗಿ ಹೋಗುತ್ತಿದ್ದಾರೆ. ಇಂದು ಪುರಳೇಕರ ದಂಪತಿಗಳು ಇಲ್ಲದಿರಬಹುದು. ಆದರೆ ಅವರು ಬೆಳೆಸಿದ ರೈತ ಸಂಘ ಈಗಲೂ ಕ್ರಿಯಾಶೀಲವಾಗಿದೆ. ಕ್ರಾಂತಿಕಾರಕವಾಗಿದೆ. ವ್ಯಕ್ತಿ ಕೇಂದ್ರಿತ ಸಂಘಟನೆಗೆ ಒಲವು ತೋರುವ ಬದಲು ಇವರು ಸಾಮೂಹಿಕ ನಾಯಕತ್ವಕ್ಕೆ (mass leadership) ಬದ್ಧರಾದ ಪರಿಣಾಮ ಇದು.

ದೇಸಾಯಿಯವರೂ ಪುರಳೇಕರ ದಂಪತಿಗಳಂತೆ ರೈತ ಆಂದೋಲನಕ್ಕೆ ಧುಮುಕಿದರು. ಶಿಕ್ಷಣ ಸಂಸ್ಥೆ ತೆರೆದರು. ಭೂಮಿ ಮತ್ತು ಶಿಕ್ಷಣ ಹಾಲಕ್ಕಿ, ಆಗೇರರಂತಹ ಹಿಂದುಳಿದವರಿಗೆ ಅಗತ್ಯವೆಂದು ಮನಗಂಡರು. ಹೋರಾಟಕ್ಕೆ ಪೂರಕವಾದ ಸಾಹಿತ್ಯ (ಚುಟುಕ–ಹಾಡು) ರಚಿಸಿದರು. ಆದರೆ ದೇಸಾಯಿಯವರು ಜಿಲ್ಲೆಯ ಆಂದೋಲನದಲ್ಲಿ ಪಾಲ್ಗೊಳ್ಳುವ ಮೊದಲೇ ಕೆಂಬಾವುಟದಡಿಯಲ್ಲಿ ರೈತ ಹೋರಾಟ (AIKS) ಪ್ರಾರಂಭವಾಗಿತ್ತು. ದೇಸಾಯಿಯವರ ಆಗಮನ ಹೊಸ ಹುಮ್ಮಸ್ಸನ್ನು ಕೊಟ್ಟಿತು. ಆದರೆ 60–70ರ ದಶಕದ ನಂತರ ದೇಸಾಯಿಯವರು ತಮ್ಮ ಮೂಲ ಸಿದ್ಧಾಂತದಿಂದ ಸ್ವಲ್ಪ ವಿಚಲಿತರಾದಂತೆ ಕಂಡರು. ಹಾಗಾಗಿ ಉ.ಕ. ಇನ್ನೊಂದು 'ವಾರಲೀ' ಆಗಲಿಲ್ಲ. ಕಾಗೋಡು ಸತ್ಯಾಗ್ರಹಕ್ಕೆ ಪ್ರೇರಣೆಯಾಗಿದ್ದ ರೈತ ಹೋರಾಟ ದೇಸಾಯಿಯವರ ಕಾಲದಲ್ಲಿಯೇ ಕ್ಷೀಣಿಸುತ್ತಾ ಬಂದಿತು.

ತಾವು ಕಾರ್ಮಿಕ ರೈತ ಹೋರಾಟ ಕಟ್ಟಲು ಮೂಲ ಪ್ರೇರಣೆಯಾದ ಕಮ್ಯುನಿಸ್ಟ್ ಸಿದ್ಧಾಂತದ ಮಾರ್ಗದಿಂದ ವಿಚಲಿತರಾದ್ದರಿಂದ ಅವರು ಕಟ್ಟಿದ ಚಳುವಳಿ ಕೂಡ ಅಸ್ತಂಗತವಾಗುತ್ತಾ ನಡೆಯಿತು. (ದೇಸಾಯಿ ಅವರೊಂದಿಗೆ ಹೋರಾಟದಲ್ಲಿ ತೊಡಗಿದ್ದ ಶೇಷಗಿರಿರಾವ್ ಪಿಕಳೆಯವರ ನಡುವಿನ ಜಗಳದಿಂದಾಗಿ ಪಿಕಳಯವರು ಕೂಡ ಪೂರ್ಣವಾಗಿ ಹೊಸ ಶಿಕ್ಷಣ ಸಂಸ್ಥೆ ತೆರೆಯುವಲ್ಲಿ ತಲ್ಲೀನರಾದರು. ಸಂಘಟನೆಯ ಬಗೆಗಿನ ಗಮನ ಸಾಲದಾಯಿತು). ಅವರ ನಂತರ ಅಂತಹ ಸಮರ್ಥ ನಾಯಕತ್ವ ಕೂಡ ಮೂಡಿ ಬರಲಿಲ್ಲ. ದೇಸಾಯಿಯವರು ಪುರಳೇಕರರಂತೆ ,ಇ.ಎಂ.ಎಸ್. ನಂಬೂದಿರಿಪಾದ್‌ರಂತೆ ಸಿದ್ಧಾಂತದ ಪರ ಗಟ್ಟಿಯಾಗಿ ನಿಂತಿದ್ದರೆ ಜಿಲ್ಲೆಯ ಚಿತ್ರ ಬದಲಾಗುತ್ತಿತ್ತು. ಇಂದು ಕಾಣುವಂತೆ ಕೋಮುವಾದಿ ಬೆಳವಣಿಗೆ – ಪ್ರಜಾಸತ್ತಾತ್ಮಕತೆಯನ್ನು ಅಣಕಿಸುವಂತಹ ರಾಜಕೀಯ ಅನೈತಿಕತೆ ಭ್ರಷ್ಟಾಚಾರಗಳನ್ನು ಕಾಣುವ ಸ್ಥಿತಿ ಬರುತ್ತಿರಲಿಲ್ಲ ಎನ್ನುವ ಬಲವಾದ ನಂಬಿಕೆ ನನ್ನದು.

ಹಾಗಾಗಿಯೇ ನಾನು ಹಿಂದೆ ಪ್ರಸ್ತಾಪಿಸಿದಂತೆ ಸಧ್ಯದ ಬಿಕ್ಕಟ್ಟಿನಲ್ಲಿ ಪರ್ಯಾಯವೊಂದರ ಅರಸುವಿ ಯಲ್ಲಿದ್ದವರಿಗೆ ದೇಸಾಯಿಯವರ ಮಾರ್ಗ ಮತ್ತು ಮಿತಿಯ ವಸ್ತುನಿಷ್ಠ ಅಧ್ಯಯನ ಹೊಸದಾರಿ ತೋರುವುದರಲ್ಲಿ ಅನುಮಾನವಿಲ್ಲ.

ಆಕರ ಗ್ರಂಥ :

ದಿನಕರ ದೇಸಾಯಿ: ನಾಕಂಡ ಪಡುವಣ: 1985.
ಸಾಹಿತ್ಯ ಭಂಡಾರ. ಹುಬ್ಬಳ್ಳಿ.
ಸಂ. ಗೌರೀಶ ಕಾಯ್ಕಿಣಿ: ದಿನಕರ ದರ್ಶನ: 1971.
ದಿನಕರ ಷಷ್ಠ್ಯಬ್ದಿ ಸತ್ಕಾರ ಸಮಿತಿ.
ಶ್ರೀಪಾದ ಶೆಟ್ಟಿ: ದಿನಕರ ದೇಸಾಯಿ: ಬದುಕು
ಬರಹ: ಪ್ರಸಾರಾಂಗ: ಕ.ವಿ.ವಿ.ಧಾರವಾಡ
ವಿಷ್ಣು ನಾಯ್ಕ: ದಿನಕರ ದರ್ಶನ: 2006.
ರಾಘವೇಂದ್ರ ಪ್ರಕಾಶನ, ಅಂಕೋಲಾ.

□

ಅಯೋಧ್ಯೆ ತೀರ್ಪು

(13ನೇ ಪುಟದಿಂದ)

ನ್ಯಾಯಾಧೀಶರು ಪರಿಗಣಿಸಿದ್ದಾರೆ? ಅದೂ ಸಹ ಒಂದು ನಂಬಿಕೆಯಷ್ಟೆ.

ಏಕೆಂದರೆ ಹಿಂದೂ ಧರ್ಮದವರೆಂದು ಪರಿಗಣಿಸಲಾಗುವ ಬಹುಸಂಖ್ಯಾತ ಜನರಿಗೆ ರಾಮ ದೇವರಲ್ಲ. ದಲಿತರಂತೂ ತಮ್ಮನ್ನು ಹಿಂದುಗಳೇ ಅಲ್ಲವೆಂದು ಪರಿಗಣಿಸಿಕೊಳ್ಳುತ್ತಾರೆ. ಹಾಗಿದ್ದ ಮೇಲೆ ರಾಮನ ಕಲ್ಪನೆ ಬಹುಸಂಖ್ಯಾತ ಹಿಂದೂಗಳ ಧಾರ್ಮಿಕ ನಂಬಿಕೆಯ ಅಂತರ್ಗತ ಭಾಗ ಎಂಬ ತೀರ್ಮಾನಕ್ಕೆ ಬರಲು ಹೇಗೆ ಸಾಧ್ಯ? ಅದು ಒಂದು ಸ್ಥಳದ ಧಾರ್ಮಿಕ ಸ್ವರೂಪದ ಬಗ್ಗೆ ವಿವಾದವಿದ್ದಾಗ ಯಾವ ತಳಹದಿಯೂ ಇಲ್ಲದೆ ಇಂಥ ವಿವಾದಾತ್ಮಕ ತೀರ್ಮಾನಕ್ಕೆ ಹೇಗೆ ಬರಲು ಸಾಧ್ಯ? ಅತಿ

ತೀರ್ಮಾನಮುಖ್ಯವಾಗಿ ಉಲ್ಲೇಖಗೊಂಡಿರುವ ಪುರಾಣಗಳು ರಾಮನ ಜನ್ಮಸ್ಥಾನ ಅಯೋಧ್ಯೆಯೇ ಎಂದು ಹೇಳುತ್ತವೆಯೇ ವಿನಃ, ರಾಮ ಬಾಬ್ರಿ ಮಸೀದಿ ಇದ್ದ 115*95 ಅಡಿ ವಿಸ್ತೀರ್ಣದಲ್ಲಿ ಜನ್ಮ ತಳೆದ ಎಂದೇನೂ ಹೇಳುವುದಿಲ್ಲ. ಇತಿಹಾಸಕಾರರು ಹೇಳುವಂತೆ ಬಾಬ್ರಿ ಮಸಿದಿಯೇ ರಾಮಜನ್ಮಭೂಮಿ ಎಂಬ ನಂಬಿಕೆ ಬ್ರಿಟಿಷರ ನಂತರದ್ದು.

ಹೀಗಿರುವಾಗ ಯಾವ ಕಾನೂನು, ಸಾಕ್ಷ್ಯ, ಪುರಾವೆ, ಸಂವಿಧಾನಿಕ ಮೌಲ್ಯಗಳ ಆಧಾರದಲ್ಲಿ ಬಾಬ್ರಿ ಮಸೀದಿಯಲ್ಲೇ ರಾಮಜನ್ಮಭೂಮಿ ಇದೆಯೆಂಬ ನಿರ್ಣಯಕ್ಕೆ ಬರಲು ಸಾಧ್ಯ?

ಪ್ರಾಯಶಃ ಸ್ವತಂತ್ರ ಭಾರತದಲ್ಲಿರಲಿ ಬ್ರಿಟಿಷ್ ಭಾರತವೂ ಸಹ ಈ ರೀತಿ ಒಂದು ಸಿವಿಲ್ ವಿವಾದವನ್ನು ಬಗೆಹರಿಸಲು ಬಹುಸಂಖ್ಯಾತರ ನಂಬಿಕೆ ಮತ್ತು ಶ್ರದ್ಧೆ ಯನ್ನು ಏಕೈಕ ಮಾನದಂಡವಾಗಿ ಪರಿಗಣಿಸಿರಲಿಲ್ಲ. ಉದಾಹರಣೆಗೆ 1886ರಲ್ಲಿ ಇದೇ ವಿವಾದವನ್ನು ಬಗೆಹರಿ ಸುತ್ತಾ ಬ್ರಿಟಿಷ್ ನ್ಯಾಯಾಧೀಶ ಯಂಗ್ ಹೇಳಿದ್ದು "ಹಿಂದೂಗಳ ನಂಬಿಕೆಯ ಪ್ರಕಾರ ಇಲ್ಲಿ ಮಂದಿರವನ್ನು ಕೆಡವಿ ಮಸೀದಿಯನ್ನು ಕಟ್ಟಿರುವುದು ನಿಜವೇ ಎಂದಿಟ್ಟು ಕೊಂಡರೂ 350 ವರ್ಷಗಳ ಕೆಳಗೆ ಆಗಿಹೋಗಿರುವ ವಿಷಯಕ್ಕೆ ಈಗ ನ್ಯಾಯ ಒದಗಿಸಲು ಸಾಧ್ಯವಿಲ್ಲ". ಅದೇ ರೀತಿ ಲಾಹೋರಿನಲ್ಲಿ 18ನೇ ಶತಮಾನದಲ್ಲಿ ಇದ್ದ ಮಸೀ ದಿಯನ್ನು ಸಿಖ್ ಆಡಳಿತದಲ್ಲಿ ಗುರುದ್ವಾರವಾಗಿ ಪರಿವರ್ತ ನೆಗೊಳ್ಳುತ್ತದೆ. ಅದನ್ನು ತಮಗೆ ಮರಳಿಸಬೇಕೆಂಬ ದೂರನ್ನು ಮುಸ್ಲಿಮರು ಪ್ರಿವೀ ಕೌನ್ಸಿಲ್‌ಗೆ ಒಯ್ದಾಗಲೂ ಇತಿಹಾಸದಲ್ಲಿ ಆದ ಸಂಗತಿಗಳಿಗೆ ಈಗ ಪರಿಹಾರ ಒದಗಿಸಲು ಸಾಧ್ಯವಿಲ್ಲವೆಂದು ತೀರ್ಮಾನವಾಗುತ್ತದೆ. ಆ ಗುರುದ್ವಾರ ಈಗಲೂ ಪಾಕಿಸ್ತಾನದಲ್ಲಿ ನಾಶಗೊಳ್ಳದೆ ಅಸ್ತಿತ್ವದಲ್ಲಿದೆ.

ಆದರೆ ಒಂದು ಆಧುನಿಕ ಪ್ರಜಾಪ್ರಭುತ್ವದ ಸೆಕ್ಯುಲಾರ್ ಸಂವಿಧಾನದ ಆಧಾರದಲ್ಲಿ ನಡೆಯುವ ದೇಶವೊಂದರ ನ್ಯಾಯಾಲಯ 60ವರ್ಷಗಳ ನಂತರ ನೀಡುವ ತೀರ್ಪಿಗೆ ಪ್ರಧಾನವಾಗಿ ಆಧರಿಸುವುದು ಬಹುಸಂಖ್ಯಾತರೆಂದು ಹೇಳಿಕೊಳ್ಳುವ ಕೂಗುಮಾರಿಗಳ ನಂಬಿಕೆ ಮತ್ತು ಶ್ರದ್ಧೆಗಳನ್ನು!

ಹೀಗೆ ಸಾಕ್ಷಿ, ಪುರಾವೆ ಮತ್ತು ಕಾನೂನುಗಳನ್ನೆಲ್ಲಾ ಪರಿಗಣಿಸದೆ ಕೇವಲ ಬಹುಸಂಖ್ಯಾತರೆಂದು ಹೇಳಿಕೊಳ್ಳುವವರ ಶ್ರದ್ಧೆ ಮತ್ತು ನಂಬಿಕೆಗಳೇ ನ್ಯಾಯ ತೀರ್ಮಾನದ ಮಾನದಂಡವಾಗಿಬಿಟ್ಟರೆ ಬಹುಸಂಸ್ಕೃತಿ ಮತ್ತು ಬಹುಧರ್ಮೀಯರ ದೇಶವಾದ ಈ ಭಾರತ ಒಂದು ದೇಶವಾಗಿ ಉಳಿಯಲು ಸಾಧ್ಯವೇ?

ಕಾಯುವವರೇ ಕೊಲ್ಲುವವರಾದರೆ, ನ್ಯಾಯಾಧೀಶರೇ ವಕೀಲರಾದರೆ?

ಸಾರಾಂಶದಲ್ಲಿ ಈ ತೀರ್ಪು 1949ರಲ್ಲಿ ಗೂಂಡಾಗಿರಿ ಮಾಡಿ ಪ್ರತಿಮೆಗಳನ್ನು ತಂದಿಟ್ಟವರ ಹಕ್ಕುಗಳನ್ನೂ ಎತ್ತಿ ಹಿಡಿದಿದೆ. 1992ರಲ್ಲಿ ಬಾಬ್ರಿ ಮಸೀದಿ ಕೆಡವಿದವರನ್ನು ಶಿಕ್ಷಿಸುವ ಬದಲು ಸನ್ಮಾನಿಸಿದೆ. ಏಕೆಂದರೆ ಬಾಬ್ರಿ ಮಸಿದಿಯನ್ನು ತಾವು ನಾಶ ಮಾಡಲು ಕಾರಣ ಅಲ್ಲಿ ರಾಮ ಜನ್ಮ ತಳೆದಿದ್ದ ಎಂಬ ಮತ್ತು ರಾಮಮಂದಿರವನ್ನು ಕೆಡವಿಯೇ ಅಲ್ಲಿ ಬಾಬ್ರಿ ಮಸೀದಿಯನ್ನು ಕಟ್ಟಲಾಗಿದೆ ಎಂಬ ತಮ್ಮ ನಂಬಿಕೆಯಿಂದಲೇ ಎಂದು ಸಂಘ ಪರಿವಾರ ಹೇಳಿಕೊಂಡು ಬಂದಿದೆ. ಬಾಬ್ರಿ ಮಸೀದಿಯ ಮಧ್ಯ ಗುಮ್ಮಟವಿದ್ದ ಜಾಗದಲ್ಲೇ ರಾಮನು ಜನ್ಮ ತಳೆದಿದ್ದಾನೆಂಬುದು ನಮ್ಮ ನಂಬಿಕೆಯಾದ್ದರಿಂದಲೇ ಗುಮ್ಮಟವನ್ನು ಒಡೆದುಹಾಕಿದೆವೆಂದು ಮಸೀದಿ ನಾಶ ಮಾಡಿದ ಆರೆಸ್ಸೆಸ್ಸಿಗರು ಸಮರ್ಥಿಸಿಕೊಂಡಿದ್ದರು. ಈಗ ಮೂರೂ ನ್ಯಾಯಾಧೀಶರು ಜಾಗವನ್ನು ಹಂಚಿಕೊಡುವಾಗ ಗುಮ್ಮಟದ ಮಧ್ಯಭಾಗದಲ್ಲಿ ರಾಮ ಜನ್ಮ ತಳೆದಿದ್ದ ಎಂದು ಹಿಂದೂಗಳು ಭಾವಿಸುತ್ತಾರಾದ್ದರಿಂದ ಅದನ್ನು ಅವರಿಗೇ ಕೊಡಬೇಕೆಂದು ಆದೇಶಿಸಿದ್ದಾರೆ.

ಆ ಮೂಲಕ ಬುನಾದಿಯಿಲ್ಲದ ನಂಬಿಕೆಯ ಆಧಾರದಲ್ಲಿ ಸಂಘ ಪರಿವಾರ ಮಾಡಿದ ಗುಮ್ಮಟ ನಾಶ ವನ್ನು ನ್ಯಾಯಾಲಯ ಪರೋಕ್ಷವಾಗಿ ನ್ಯಾಯವೆಂದು ಸಮರ್ಥಿಸಿ ನ್ಯಾಯಬದ್ಧಗೊಳಿಸಿದೆ. ಸತ್ಯವೋ, ಸುಳ್ಳೋ ಬಹುಸಂಖ್ಯಾತರ ನಂಬಿಕೆಯನ್ನು ಗೌರವಿಸಿ ಬಾಬ್ರಿ ಮಸೀದಿ ಇರುವ ಜಾಗದಲ್ಲಿ ಭವ್ಯ ರಾಮಮಂದಿರ ಕಟ್ಟಿ ಕೊಳ್ಳಲು ಮುಸ್ಲಿಮರು ಸಹಕರಿಸಬೇಕೆಂದು ಸಂಘ ಪರಿವಾರ ಬಹಿರಂಗವಾಗಿ ಅಲ್ಪಸಂಖ್ಯಾತರನ್ನು ಬ್ಲಾಕ್ ಮೇಲ್ ಮಾಡುತ್ತಿದೆ. ಈ ತೀರ್ಪು ಅದಕ್ಕೆ ಬೇಕಾದ ಕಾನೂನಿನ ದಾರಿಯನ್ನು ಸುಗಮಗೊಳಿಸಿದಂತಾಗಿದೆ,

ಮೂರನೇ ಒಂದು ಭಾಗದಷ್ಟು ಜಾಗವನ್ನು ನ್ಯಾಯಾಲಯ ಮುಸ್ಲಿಮರಿಗೆ ಕೊಟ್ಟಿದೆ. ಆದರೆ ಅಲ್ಲಿ ಮುಸ್ಲಿಮರು ಮಂದಿರದ ಪಕ್ಕದಲ್ಲಿ ಮಸೀದಿಯನ್ನು ನಿರ್ಮಿಸಿಕೊಳ್ಳಲು ಸಾಧ್ಯವೇ? ಈಗಾಗಲೆ ವಿಶ್ವಹಿಂದೂ ಪರಿಷತ್ತಿನ ತೊಗಾಡಿಯಾ ಅವರು ಮಂದಿರದ ಕನಿಷ್ಟ 10 ಕಿಮೀ ಫಾಸಲೆಯಲ್ಲಿ ಮಸೀದಿ ನಿರ್ಮಾಣಕ್ಕೆ ಅವಕಾಶ ಮಾಡಿಕೊಡುವುದಿಲ್ಲವೆಂದು ಘೋಷಿಸಿದ್ದಾರೆ.. ಹಾಗೂ ಮುಸ್ಲಿಮರು ಪ್ರಾಕ್ಟಿಕಲ್ ಆಗಿ ಯೋಚಿಸಿ ಸುಪ್ರಿಂ ಕೋರ್ಟಿಗೆ ಮೇಲ್ಮನವಿ ಮಾಡಿಕೊಳ್ಳದೆ ರಾಜಿಗೆ ಬರಬೇಕೆಂದು ಸಂಘ ಪರಿವಾರ ಆಗ್ರಹಿಸಿದೆ. ಇಲ್ಲಿ ರಾಜಿ ಎಂದರೆ ಅರ್ಥ ತಮ್ಮ ಮೂರನೇ ಒಂದು ಜಾಗವನ್ನು ಬಿಟ್ಟುಕೊಡಿ ಎಂದು. ಪ್ರಾಕ್ಟಿಕಲ್ ಎಂದರೆ ಇತಿಹಾದದಲ್ಲಿ ಆದ ರಕ್ತಪಾತ ನೆನಪಿರಲಿ ಎಂಬುದೇ ಅಲ್ಲವೇ? ಹೀಗೆ ಈ ತೀರ್ಪು ಸಂಘ ಪರಿವಾರದ ಫ್ಯಾಸಿಸ್ಟ್ ಶಕ್ತಿಗಳಿಗೆ ಇನ್ನಿಲ್ಲದ ಬಲವನ್ನು ತಂದುಕೊಟ್ಟು ಭಾರತದ ಪ್ರಜಾಸತ್ತೆಯನ್ನು ಸೆಕ್ಯುಲಾರ್ ಬದುಕನ್ನು ಇನ್ನಷ್ಟು ಆತಂಕಕ್ಕೆ ದೂಡಿದೆ.

ಅಷ್ಟು ಮಾತ್ರವಲ್ಲ. ಈಗಾಗಲೇ ಸಂಘ ಸಪರಿವಾರವು ಇಂಥಾ 2000 ಮಸೀದಿ ಮತ್ತು ಚರ್ಚುಗಳಲ್ಲಿ ತಮ್ಮ ದೇವರು ಹುಟ್ಟಿದ್ದಾರೆ ಅಥವಾ ಬೆಳೆದಿದ್ದಾರೆ ಎಂಬ ತಮ್ಮ ನಂಬಿಕೆಯ ವಾದವನ್ನು ಮುಂದಿಟ್ಟಿದ್ದಾರೆ. ಅದರಲ್ಲಿ 72 ಸ್ಥಳಗಳು ಕರ್ನಾಟಕದಲ್ಲಿವೆ. ಈ ತೀರ್ಪಿನಲ್ಲಿ ನ್ಯಾಯಾಧೀಶರು ಅನುಸರಿಸಿದ ಮಾರ್ಗವೇ ಮೇಲ್ಪಂಕ್ತಿಯಾದರೆ ಇದು ದೇಶಾದ್ಯಂತ ಎಂಥಾ ಅರಾಜಕತೆಯನ್ನೂ, ಕೋಮು ಸಂಘರ್ಷವನ್ನೂ ಹುಟ್ಟುಹಾಕಬಹುದು?

ಈಗ ಎರಡೂ ಪಕ್ಷಗಳು ಸುಪ್ರೀಂ ಕೋರ್ಟಿಗೆ ಮೇಲ್ಮನವಿ ಹೋಗಲು ಮುಂದಾಗಿವೆ. ದೇಶದ ವರಿಷ್ಠ ನ್ಯಾಯಾಲಯವಾದರೂ ದೇಶದಲ್ಲಿ ಸಂವಿಧಾನವನ್ನೂ ಕಾನೂನು ಬದ್ಧ ಆಡಳಿತವನ್ನೂ ಎತ್ತಿ ಹಿಡಿಯಬಹುದೇ? ಹಾಗಿಲ್ಲದೆ ಬಹುಸಂಖ್ಯಾತರ ನಂಬಿಕೆ ಮತ್ತು ಶ್ರದ್ಧೆಗಳೇ ನ್ಯಾಯಸಂಹಿತೆಯಾಗಿಬಿಟ್ಟರೆ ಈ ದೇಶ ಛಿದ್ರ ಛಿದ್ರವಾಗುವುದಿಲ್ಲವೇ?

ಹಾಗಾಗದಿರಲಿ. ನ್ಯಾಯಾಲಯವೇ ಮಸೀದಿ ಕೆಡವಿ ಮಂದಿರ ಕಟ್ಟುವಂತೆ ಆಗದಿರಲಿ.

ಇತಿಹಾಸದ ಭೂತ ಭವಿಷ್ಯದ ಬೆನ್ನು ಬಿಡದ ಹೊರತು..!

1947ಕ್ಕೂ ಹಿಂದೆ ಈ ದೇಶದಲ್ಲಿ ಧರ್ಮಗಳ ನಡುವೆ, ಶ್ರದ್ಧೆಗಳ ನಡುವೆ ಸಾಕಷ್ಟು ಕಲಹಗಳು ನಡೆದು ಹೋಗಿವೆ. 47ರ ಆಗಸ್ಟ್ 15ರ ನಂತರ ಈ ದೇಶದ ನಾಗರಿಕರಿಂದಲೂ ಸಾಮಾನತೆ ಮತ್ತು ಭ್ರಾತೃತ್ವದಿಂದ ಬಾಳಲು ಸಂಕಲ್ಪ ತೊಟ್ಟಿದ್ದೇವೆ. ಆದುದರಿಂದ ಇತಿಹಾಸಗಳ ಸಂಗತಿಗಳನ್ನು ಇತಿಹಾಸಕ್ಕೆ ಬಿಟ್ಟು ಹೊಸದಾಗಿ ಬದುಕು ಕಟ್ಟುವ ಭವಿಷ್ಯಮುಖಿ ರಾಜಕೀಯ ಮತ್ತು ನ್ಯಾಯಸಂಹಿತೆ ಇಂದಿನ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ 1991ರಲ್ಲಿ ಸಂಸತ್ತಿನಲ್ಲಿ place of worship (special provisions) act–1991 ಎಂಬ ಕಾಯಿದೆ ಜಾರಿಗೆ ಬಂದಿದೆ. ಇದರ ಪ್ರಕಾರ ಈ ದೇಶದಲ್ಲಿ ಯಾವುದೇ ಶ್ರದ್ಧಾ ಕೇಂದ್ರಗಳ ಬಗ್ಗೆ ವಿವಾದವಿದ್ದರೂ ಆ ಶ್ರದ್ಧಾ ಕೇಂದ್ರಗಳನ್ನು 1947ರ ಆಗಸ್ಟ್ 15ರಂದು ಯಾವ ಸ್ಥಿತಿಯಲ್ಲಿತ್ತೋ, ಯಾವ ಧಾರ್ಮಿಕ ಸ್ವರೂಪದಲ್ಲಿತ್ತೋ ಅದೇ ಯಥಾಸ್ಥಿತಿಯನ್ನು ಕಾಯ್ದುಕೊಂಡು ಬರಬೇಕೆಂದು ನಿರ್ದೇಶಿಸಲಾಗಿದೆ. ದುರದೃಷ್ಟವಶಾತ್ ಬಾಬರಿ ಮಸೀದಿ ವಿವಾದವೊಂದನ್ನು ಈ ಕಾಯಿದೆಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ.

1947ರ ಹಿಂದಿನ ಇತಿಹಾಸವನ್ನು ಇತಿಹಾಸಕ್ಕೆ ಬಿಟ್ಟು ಭ್ರಾತೃತ್ವ ಮತ್ತು ಸಮಾನತೆಯನ್ನು ಕಾಪಾಡಿಕೊಂಡು ಬರಲು ಆಯಾ ಸ್ಥಳಗಳ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಬರಬೇಕು ಎಂಬ ಈ ಕಾಯಿದೆಯ ತರ್ಕ, ಅತ್ಯಂತ ನ್ಯಾಯೋಚಿತವಾದುದು ಮತ್ತು ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿ ಹಿಡಿಯುವಂತದ್ದು, ಬಾಬರಿ ಮಸೀದಿ ವಿವಾದಕ್ಕೂ ಇದೇ ಮಾನದಂಡ ಅನ್ವಯವಾದರೆ ಮಾತ್ರ ಈ ವಿವಾದ ನ್ಯಾಯೋಚಿತವಾಗಿ ಬಗೆಹರಿಯುತ್ತದೆ.

ಶಾಂತಿ ಅತ್ಯಂತ ಮುಖ್ಯವಾದುದು. ಆದರೆ ಅದು ಅನ್ಯಾಯದ ನೆಲೆಗಟ್ಟಿನಿಂದ ಮೂಡಿದ ಶಾಂತಿಯಾದರೆ ಅದರ ಬಾಳು ಅತ್ಯಂತ ಅಲ್ಪಾವಧಿಯಾಗಿರುತ್ತದೆ. ನ್ಯಾಯದ ನೆಲೆಗಟ್ಟಿನಿಂದ ಅರಳುವ ಶಾಂತಿಯೇ ಶಾಶ್ವತವಾಸದದು ಮತ್ತು ಸೌಹಾರ್ದಯುತವಾದುದು. □

ಝೆನಾಯಣ

○ ಜಂಬಣ್ಣ ಅಮರಚಿಂತ

ಅಕ್ಷರ ಕಲಿತ ದಿನದಿಂದಲೇ
ನಾನು ನಿರಕ್ಷರನಾದೆ
ಮಾತು ಕಲಿತ ದಿನದಿಂದಲೇ
ನಾನು ಮೂಕನಾದೆ
ಅರಿಯದ್ದು : ವಾಗ್ವಾದ
ಅರಿತದ್ದು : ಮಹಾಮೌನ

೨

ನಾನಿನ್ನೂ ಅರ್ಧ, ಅಪೂರ್ಣ ಮನುಷ್ಯ
ನಿನ್ನ ಕೂಡಿ ಪೂರ್ಣಗೊಳ್ಳ ಬೇಕಿದೆ
ಬಿಂದುವಾಗಿ ಹರಿದು ನಾನು,
ಜ್ಞಾನಸಿಂಧುವಾಗಿ ಪರಿಣಮಿಸಬೇಕಿದೆ

೩

ದಮ್ಮ, ದಮ್ಮಪದವೆಂಬುದು
ಸ್ಥಿರ ಗೆರೆಯಲ್ಲ, ಅದು ಚಲಿಸುವ ಚಕ್ರ
ಚಲಿಸುವುದು ಅದರ ಧರ್ಮ ಮತ್ತು ಕರ್ಮ
ಚಲಿಸು, ಚಲಿಸಿ ಮೂಲಕೆ ಹಿಂದಿರುಗು
ಆದಿ, ಅನಾದಿ ಅರ್ದಹಾದಿ

೪

ನಿನ್ನನ್ನು ನೀನು ಅರಿತುಕೊ
ಬಾಳುವುದನು ಕಲಿತುಕೊ
ನಿನ್ನನು ನೀನು ಗೆದ್ದು
ಯುದ್ಧವಲ್ಲದ ಯುದ್ಧ ಗೆದ್ದುಕೊ

೫

ಬುದ್ಧ, ಬೇಪಾರವಲ್ಲದ ವ್ಯಾಪಾರ ಮಾಡಿದ್ದ
ದುಡ್ಡಲ್ಲದ ದೊಡ್ಡ ಸೊನ್ನೆ ದುಡ್ಡು ಗಳಿಸಿದ್ದ
ಪ್ರೀತಿಯನ್ನೆ ಉತ್ತು ಪ್ರೀತಿಯನ್ನೆ ಬೆಳದು
ಹಸಿದಾತ್ಮಗಳಿಗೆ ಪ್ರೀತಿ ಸಹಬೋಜನ ಮಾಡಿಸಿದ್ದ

೬

ಎಲ್ಲಾ ನೋವುಗಳನ್ನು ಏಗು
ನಿನಗೆ ನೀನೇ ಬಾಗು
ನಿನ್ನೊಳಗೆ ಮಾನವಂತ
ಮಹಾಂತ ತಥಾಗತನ ಆಶ್ರಯಿಸು
ನಮಿಸು, ನಮಿಸು, ನಮಿಸು

೭

ನೋವುಗಳ ಮಧ್ಯೆ ಬುದ್ಧ
ಸದಾ ನಗುತ ನಿಂತಿರುವನು
ರೋಗಿಗಳ ಮಧ್ಯೆ ಸೇವಾನಿರತ
ದಾದಿಯನು ನೆನಪಿಸುವನು

೮

ಹೆಚ್ಚು ಅರಿತವರೆನ್ನುವವರು
ನಿಂತ ಮಲೆತ ನೀರಿನಂತಿರುವರು
ಹೆಚ್ಚು ಕಲಿತವರೆನ್ನುವವರು
ಮನುಷ್ಯನನು ಕಡಿಮೆ ಅರಿತಿರುವರು
ಕಲಿತದ್ದೆಲ್ಲಾ ಕಾಗದದ ಜ್ಞಾನ
ಮೂಸಿದ್ದೆಲ್ಲಾ ಕಾಗದದ ಹೂ ಸುಗಂಧ
ಸಂಗ್ರಹಿಸಿದ್ದು ಆವಿಯಾಗುವ ನಿರ್ಜಲ
ಯಾವ ಜಲದಿಂದ ನೀರಡಿಕೆ ನೀಗಿಸಲಿ
ಯಾವ ಗಂಧದಿಂದ ಈ ದುರ್ಗಂಧ ನಿವಾರಿಸಲಿ

೯

ಬೊಗಸೆಯಲಿ ಸಂಗ್ರಹಿಸಿದ ನೀರು ಸೋರಿದೆ
ನೀರಡಿಕೆ ಅಧಿಕವಾಗಿ ನಾಲಗೆ ಒಣಗಿದೆ
ನನ್ನೊಳಗೆ ನಾನಿಳಿದು ಅಗೆಯಬೇಕಿದೆ
ಅಂತರಜೀವಜಲ ಸಿಗುವತನಕ
ಅಂತರಾಂತರ ಅಗೆಯುತ ಹೋಗಬೇಕಿದೆ

೧೦

ಮರೆವನ್ನರಿವುದು
ಕುರೂಪದಲ್ಲಿ ಸುರೂಪ ಕಾಣುವುದು
ಕನಸುಗಳಿಲ್ಲದೆ ಮಲಗುವುದು
ಚಿಂತೆಗಳಿಲ್ಲದೆ ಏಳುವುದು
ಇಂಥ ಇಚ್ಛಾಶಕ್ತಿ ತನ್ನ ತಾ ಅರಿತ
ಅರಹತ ಆ ಶಾಕ್ಯ ಮುನಿಗೆ ಮಾತ್ರ ಶಕ್ಯ
ಅಂಥವರ ಆಶ್ರಯಿಸಿ ಪಡೆದುಕೊ ಜ್ಞಾನದ ಸಖ್ಯ
ಕಂಡುಕೊ ನಿನ್ನೊಳಗಿನ ಸ್ವಯಂ ಸುಮುಖ



ಹೊಸ ಪುಸ್ತಕ

ಪಿಳ್ಳಂಗೋವಿ
ಲೇ: ಬಂಜಗೆರೆ ಜಯಪ್ರಕಾಶ
ಬೆಲೆ: ರೂ. ೧೮೦/-

ವಿವಿಧ ಸಂದರ್ಭಗಳಲ್ಲಿ ಬರೆದ ಹಲವು ಲೇಖನಗಳು ಮತ್ತು ಇತರರ ಕೃತಿಗಳಿಗೆ ಬರೆದ ಮುನ್ನುಡಿಗಳನ್ನು ಒಟ್ಟುಗೂಡಿಸಿದ ಈ ಕೃತಿಯ ಬರಹಗಳು ಸಾಹಿತ್ಯ ಮತ್ತು ಸಾಮಾಜಿಕ ಸಂವೇದನೆಯನ್ನು ಉದ್ದೀಪಿಸುವ ಹಾಗೂ ಮಾನವ ಸಂಬಂಧಗಳು ಕ್ರಿಯಾಶೀಲವಾಗಿರಲು ಪ್ರೇರೇಪಿಸುವಂತಿವೆ. ಹಲವು ಹರವು ಹೊಂದಿರುವ ಇಲ್ಲಿನ ವೈಚಾರಿಕ ವಿಶ್ಲೇಷಣೆಗಳು ಅಪರೂಪದ ಒಳನೋಟಗಳನ್ನು ಹೊಂದಿದ್ದು, ಓದುಗರನ್ನು ತನ್ನ ಪ್ರಭಾವಲಯಕ್ಕೆ ಸಳೆದು ಕೊಳ್ಳುವ ಆಪ್ತತೆಯನ್ನೂ ಪಡೆದಿವೆ.

ಪ್ರಕಾಶಕರು: ಕಿಟಕಿ ಪ್ರಕಾಶನ
ಮೈಸೂರು-೫೭೦೦೨೩



ಅನಾವರಣ
ಲೇ: ಗೋಪಾಲ ಬಿ.ಶೆಟ್ಟಿ
ಬೆಲೆ: ರೂ. ೧೩೦/-

ಆಯಾ ಸಂದರ್ಭದ ಘಟನೆಗಳಿಗೆ ಮುಖಾಮುಖಿಯಾಗುವ ಇಲ್ಲಿನ ಬರಹಗಳು ಜೀವಪರ ದೃಷ್ಟಿಯ ಅಗತ್ಯತೆಯನ್ನು ಒತ್ತಿ ಹೇಳುತ್ತವೆ. ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆ, ತಾರತಮ್ಯ, ಅಂಧಶ್ರದ್ಧೆ, ಮೂಢನಂಬಿಕೆ, ಕಂದಾಚಾರಗಳು, ಅವು ತಂದೊಡ್ಡುವ ಪಡಿಪಾಟಲುಗಳ ಆಳವಾದ ವಿಶ್ಲೇಷಣೆಯಿದೆ. 'ವಾರ್ತಾ ಭಾರತಿ' ಪ್ರತಿಕೆಯಲ್ಲಿ ಪ್ರಕಟಗೊಂಡು ಇಲ್ಲಿ ಸಂಗ್ರಹಗೊಂಡ ಈ ಲೇಖನಗಳು ಆಷಾಢಭೂತಿತನವನ್ನು ತೊರೆದು ಎಲ್ಲರೂ 'ವಿಶ್ವ ಕುಟುಂಬಿ'ಗಳಾಗಿ ಬಾಳಬೇಕೆಂಬ ಆಶಯದವು

ಪ್ರಕಾಶಕರು: ನೂತನ ಪಬ್ಲಿಕೇಶನ್ಸ್
ಉಡುಪಿ-೫೭೬೧೦೨

ಸಂಚಲ
ಲೇ: ಡಾ. ಎನ್. ಗಾಯತ್ರಿ
ಬೆಲೆ: ರೂ.೧೨೦/-

ಮಹಿಳಾ ಸಂವೇದನೆಗಳನ್ನು ಎತ್ತಿ ಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ 'ಅಚಲ' ಪತ್ರಿಕೆಗೆ ಬರೆದ ಸದರಿ ಲೇಖಕಿಯ 109 ಸಂಪಾದಕೀಯ ಬರಹಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ ಪ್ರಕಟಿಸಿದ ಈ ಕೃತಿಯು ಭಾರತದ ಮಹಿಳಾ ಚಳವಳಿಯು ಸಾಗಿಬಂದ ಹೆಜ್ಜೆಗಳನ್ನು ಸಮರ್ಥವಾಗಿ ಗುರುತಿಸುತ್ತದೆ. ದೀರ್ಘಕಾಲೀನ ಆಶಯ, ದೃಷ್ಟಿಕೋನ, ಸೈದಾಂತಿಕ ನೆಲೆಗಟ್ಟಿನಲ್ಲಿ ಮಹಿಳಾ ಸಮಸ್ಯೆಗಳ ವಿವಿಧ ಮಗ್ಗುಲುಗಳನ್ನು ಸಮಗ್ರವಾಗಿ ಅವಲೋಕಿಸಿ ಮಹಿಳಾ ಹಕ್ಕುಗಳು, ಅವರ ಬಗೆಗಿನ ಪೂರ್ವಾಗ್ರಹ ಮತ್ತು ದೌರ್ಜನ್ಯಗಳ ಬಗ್ಗೆ ಬೆಳಕನ್ನು ಚಲ್ಲುತ್ತವೆ. ಮಹಿಳಾ ವಿಕಾಸದ ಹಾದಿಗೆ ನಮ್ಮ ಚರಿತ್ರೆ, ಸಾಮಾಜಿಕ ರಚನೆ, ಸಂಪ್ರದಾಯ, ಜಡ್ಡುಗಟ್ಟಿದ ಭಾವನೆಗಳೇ ಪ್ರಧಾನ ಕಾರಣಗಳು ಎಂಬುದನ್ನು 'ಸಂಚಲ' ಪ್ರತಿಪಾದಿಸುತ್ತದೆ.

ಮತಧರ್ಮ ಬೆಲೆ: ರೂ. ೩೫/-
ಲೇ: ಜಾರ್ಜ್ ಥಾಮ್ಸನ್
ಅನು: ಎಚ್.ಕೆ. ರಾಮಚಂದ್ರಮೂರ್ತಿ

ಯುರೋಪ್ ಮತ್ತು ಕ್ರೈಸ್ತ ಮತದ ಹಿನ್ನಲೆಯಲ್ಲಿ ವಿಶ್ಲೇಷಿಸಿದ ಥಾಮ್ಸನ್‌ರ 'ಎನ್ ಎಸ್ಸೆ ಆನ್ ರಿಲೀಜಿಯನ್' ಆಂಗ್ಲ ಕೃತಿಯ ಕನ್ನಡ ಅನುವಾದದ ಈ ಕೃತಿ ಅತ್ಯಂತ ಪ್ರಾಚೀನ ಕಾಲದಲ್ಲಿ ಮತಧರ್ಮದ ಉಗಮ ಮತ್ತು ನಂತರ ಅದರ ಚಾರಿತ್ರಿಕ ಬೆಳವಣಿಗೆಯನ್ನು ಕೇಂದ್ರೀಕರಿಸಿ ಮಾರ್ಕ್ಸ್‌ವಾದವು ಮತಧರ್ಮದ ಬಗ್ಗೆ ನೀಡುವ ವಿಶ್ಲೇಷಣೆಯನ್ನು ನೀಡುತ್ತದೆ. ಪರಸ್ಪರ ಸಾಂಗತ್ಯದ ಬದಲು ದ್ವೇಷಾಸೂಯೆಗಳನ್ನು ಬೆಳೆಸಲು ಮತಧರ್ಮಗಳ ಪೈಪೋಟಿ, ಅವುಗಳ ಸಕರಾತ್ಮಕ ಹಾಗೂ ನಕರಾತ್ಮಕ ಕೊಡುಗೆಗಳ ಬಗ್ಗೆ ವಿವರವಿದೆ.

ಈ ಎರಡು ಪುಸ್ತಕಗಳ ಪ್ರಕಾಶಕರು:
ಮಾ-ಲೆ ಪ್ರಕಾಶನ-ಬೆಂಗಳೂರು



ಮರು ಚಿಂತನ
ಲೇ: ಡಾ. ಬಸವರಾಜ ಸಬರದ
ಬೆಲೆ: ರೂ. ೯೦/-

ಒಟ್ಟಾರೆ ಈ ಕೃತಿಯಲ್ಲಿ ಮೂಡಿ ಬಂದಿರುವ ವೈಚಾರಿಕ ಲೇಖನಗಳು ಜಡತ್ವವು ಅಳಿದು ಚಲನಶೀಲತೆಯಡೆಗೆ ಪ್ರೇರೇಪಿಸುವ ಆಶಯ ಹೊಂದಿವೆ. ಸೀಮಿತ ದೃಷ್ಟಿಕೋನ, ಸಂಕುಚಿತ ಮನೋಭಾವ, ಜನವಿರೋಧಿ ತಾತ್ವಿಕತೆ ಮತ್ತು ಮೌಲ್ಯಗಳು ಹಾಗೂ ತುಕ್ಕು ಹಿಡಿದ ಬೌದ್ಧಿಕತೆಗೆ ಸಾಣೆ ಹಿಡಿಯುವಂತಿದ್ದು ಹೊಸ ಹೊಳಹುಗಳನ್ನು ನೀಡುತ್ತವೆ. ಪ್ರಮುಖ ವಿದ್ಯಮಾನಗಳ ಗ್ರಹಿಕೆಯಲ್ಲಿ ತಾರ್ಕಿಕ ಮತ್ತು ಜನಪರ ಕಾಳಜಿಗಳು ಸಮರ್ಥವಾಗಿ ಧ್ವನಿಸುತ್ತವೆ.

ಪ್ರಕಾಶಕರು: ಪಲ್ಲವಿ ಪ್ರಕಾಶನ
ಗುಲ್ಬರ್ಗಾ-೫೮೫೧೦೬

ಎಲ್ಲಾ ಕಾಲದ ಬೆಳಕು
ಸಂ: ಡಾ. ದಸ್ತಗೀರಸಾಬ್ ದಿನ್ನಿ
ಬೆಲೆ: ರೂ. ೧೦೦/-

ಸಮಾಜವಾದಿ ದಾರ್ಶನಿಕ ಲೋಹಿಯಾರ ಬಹುಮುಖಿ ವಿಚಾರಧಾರೆಗಳನ್ನು ಕುರಿತು ನಾಡಿನ ಪ್ರಖರ ಲೇಖಕರು ಬರೆದ ೨೮ ಲೇಖನಗಳು ಇಲ್ಲಿವೆ. ಒಟ್ಟಾರೆ ಲೋಹಿಯಾರ ವಿಚಾರಗಳು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ರಂಗದ ಮೇಲೆ ಇಂದಿಗೂ ಗಾಢವಾದ ಪ್ರಭಾವವನ್ನು ಬೀರುವುದರ ಜೊತೆಗೆ ಅಸಮಾನತೆ, ಅನ್ಯಾಯ, ಶೋಷಣೆಗಳ ವಿರುದ್ಧ ಸಿಡಿದೇಳಲು ನಮ್ಮನ್ನು ಅಣಿಗೊಳಿಸುವಂತಿವೆ. ಅಲ್ಲದೆ ಅವರು ಕರ್ನಾಟಕದ ಸಾಂಸ್ಕೃತಿಕ ರಾಜಕಾರಣದ ಮೇಲೆಬೀರಿದ ದಟ್ಟ ಪ್ರಭಾವ ಇಲ್ಲಿ ಅನಾವರಣಗೊಂಡಿದೆ.

ಪ್ರಕಾಶಕರು: ಕನಸು ಪ್ರಕಾಶನ
ರಾಯಚೂರು



ಹೊಸ ಪುಸ್ತಕ

* ಕಡಲ ತಡಿಯ ಮನೆ, ಬೆಲೆ: ರೂ. ೫೦/–
  ಲೇ: ಡಾ. ಸಬಿಹಾ ಭೂಮೀಗೌಡ
* ಮುಗ್ಗಲು ಮನಸಿನ ಪದರು, ಬೆಲೆ: ರೂ. ೫೦/–
  ಲೇ: ಎಸ್.ಬಿ. ಜೋಗುರ
* ನಮಗೆ ಗೋಡೆಗಳಿಲ್ಲ, ಬೆಲೆ: ರೂ ೬೦/–
  ಅನು: ಬಿ. ಸುಜ್ಞಾನಮೂರ್ತಿ
* ಮನುಸ್ಮೃತಿ ಮತ್ತು ದಲಿತರು, ಬೆಲೆ: ರೂ. ೪೦/–
  ಲೇ: ಜ.ಹೊ. ನಾರಾಯಣಸ್ವಾಮಿ
* ಬಿಟಿ ಬದನೆ, ಬೆಲೆ: ರೂ. ೫೦/–
  ಸಂ: ಬಸವರಾಜ ಸೂಳಿಭಾವಿ
* ಕೋರೆಗಾವ ಕದನ: ದಲಿತ ದಿಗ್ವಿಜಯ
  ಲೇ: ಸುಧಾಕರ ಖಾಂಬೆ
  ಅನು: ಸಿದ್ರಾಮ ಕಾರಣಿಕ
  ಬೆಲೆ: ರೂ.೪೦/–
* ಗೋಹತ್ಯೆ ನಿಷೇಧದ ಸುತ್ತಲಿನ ರಾಜಕೀಯ
  ಲೇ: ಪ್ರೊ.ಬಿ. ಗಂಗಾಧರಮೂರ್ತಿ
  ಬೆಲೆ: ರೂ. ೩೦/–
* ದಲಿತ ತತ್ವ * ಜಾತಿವಿನಾಶ
  ಲೇ: ಕಂಚ ಐಲಯ್ಯ
  ಅನು: ಬಿ. ಸುಜ್ಞಾನಮೂರ್ತಿ
  ಜೋಡಿ ಪುಸ್ತಕದ ಬೆಲೆ: ರೂ. ೧೦೦/–

ಜಾಗತೀಕರಣದ ಸಂದರ್ಭದ ಗ್ರಾಮೀಣ ಬದುಕಿನ ಸಂಬಂಧ, ತಲ್ಲಣಗಳನ್ನು ಗಂಭೀರವಾಗಿ ಮೂಡಿಸಿರುವ 'ಕಡಲ ತಡಿಯ ಮನೆ' ಕೃತಿಯಲ್ಲಿನ ಕಥೆಗಳು ಮಾನವೀಯ ಸಂಬಂಧಗಳ ಮತ್ತು ಹೊಸ ಸಂಸ್ಕೃತಿಯ ಸಾಧ್ಯತೆಗಳೆಡೆಗೆ ತುಡಿಯುತ್ತವೆ. ಬದುಕಿನ ವೈರುಧ್ಯಗಳ ನಡುವೆ ಪ್ರೀತಿಯ ಸೆಲೆಗಳನ್ನು ಅರಸುತ್ತ ಹೋಗುವ ಕಥನ ಸಾಮಾಗ್ರಿ, ಪರಿಕರಗಳು ಮತ್ತು ಅವುಗಳನ್ನು ಕಟ್ಟಿಕೊಟ್ಟಿರುವಲ್ಲಿ ನಾವಿನ್ಯತೆಯಿದೆ.

ಹನ್ನೆರಡು ಕಥೆಗಳ 'ಮುಗ್ಗಲು ಮನಸಿನ ಪದರು' ಸಂಕಲನದಲ್ಲಿ ಬಳಕೆಯಾದ ಗ್ರಾಮೀಣ ಬದುಕಿನ ಭಾಷೆ ಕಥೆಗಳಿಗೆ ಒಂದು ಬಗೆಯ ವಿಶೇಷ ಗಟ್ಟಿತನ ಒದಗಿಸಿದೆ. ಹಳ್ಳಿಯ ಬದುಕು–ಸಂಸ್ಕೃತಿ ಎದುರಿಸುತ್ತಿರುವ ತಲ್ಲಣಗಳು, ಏಳು–ಬೀಳು, ಸಂಕಷ್ಟಗಳು ಹಾಗೂ ಸಂಕೀರ್ಣ ವ್ಯವಸ್ಥೆಗಳ ವರ್ತಮಾನದ ಸಂದರ್ಭಕ್ಕೆ ಸೃಜನಶೀಲ ಮನಸ್ಸುಗಳು ಮುಖಾಮುಖಿಯಾಗಬೇಕಾದ ಅನಿವಾರ್ಯತೆಯನ್ನು ಸಮರ್ಥವಾಗಿ ಬಿಚ್ಚಿಟ್ಟಿವೆ.

ಆಂಧ್ರದಲ್ಲಿ ಚಳವಳಿಗಳಲ್ಲಿರುವ ಮಹಿಳೆಯರ ಅನುಭವಗಳೊಂದಿಗೆ ಸ್ತ್ರೀವಾದ ದೃಷ್ಟಿಕೋನವನ್ನು ಹೊಂದಿ, ಮಹಿಳೆಯರ ಸಮಸ್ಯೆಗಳ ಬಗ್ಗೆ ಹೊಸ ಪ್ರಶ್ನೆಗಳನ್ನು ಹಾಕಿ, ಹೊಸ ಚಿಂತನೆಗಳನ್ನು ಕೆರಳಿಸಿ, ಮಹಿಳೆಯರ ಚರಿತ್ರೆಯನ್ನು ಪರಿಚಯ ಮಾಡಿಕೊಡುವ ತೆಲುಗಿನ ಪ್ರಬಂಧಗಳು ಕನ್ನಡೀಕರಣಗೊಂಡು 'ನಮಗೆ ಗೋಡೆಗಳಿಲ್ಲ' ಕೃತಿಯ ಮೂಲಕ ಕನ್ನಡ ಸ್ತ್ರೀವಾದಿ ಚಿಂತನೆಗೆ ಹೊಸ ಸೇರ್ಪಡೆಯಾಗಿವೆ.

ಮನುಸ್ಮೃತಿ ಒಂದು ವರ್ಗದವರ ಪಾಲಿಗೆ ಅಮೃತವಾದರೆ, ದಲಿತರ ಪಾಲಿಗೆ ವಿಷವಾಗಿದೆ ಎಂಬುದನ್ನು ಪ್ರತಿಪಾದಿಸುವ ಈ ಕೃತಿಯಲ್ಲಿ ಸನಾತನಿಗಳು ಮನುಧರ್ಮವನ್ನು ಆಧಾರವಾಗಿಟ್ಟುಕೊಂಡು ಆಹಾರದ ನಿರಾಕರಣೆ, ವಿದ್ಯೆಯ ನಿರಾಕರಣೆ ಸೇರಿದಂತೆ ಒಟ್ಟಾರೆ ದಲಿತರ ಬದುಕಿನ ನಿಕೃಷ್ಟತೆಗೆ ಕಾರಣವಾದದ್ದನ್ನು ವಿಸ್ತಾರವಾಗಿ ಅಷ್ಟೇ ಸಮರ್ಥವಾಗಿ ವಿಶ್ಲೇಷಿಸಲಾಗಿದೆ.

ಬಿಟಿ ಬದನೆಯನ್ನೇ ಮುಖ್ಯವಾಗಿರಿಸಿಕೊಂಡು ಅಪಾಯಕಾರಿ ಜೈವಿಕ ತಂತ್ರಜ್ಞಾನ ಕುರಿತಂತೆ ವಿವಿಧ ಲೇಖಕರು ಬರೆದ ಲೇಖನಗಳ ರೂಪವೇ ಈ ಕೃತಿ. ಪ್ರತಿಯೊಂದನ್ನು ವ್ಯಾಪಾರ ಮತ್ತು ಉದ್ಯಮ ದೃಷ್ಟಿಕೋನದಿಂದ ನೋಡುವ ಬಹುರಾಷ್ಟ್ರೀಯ ಕಂಪನಿಗಳು ಬಿಟಿ ಬೀಜಗಳ ಮೂಲಕ ರೈತರ ಬೀಜ ಉತ್ಪಾದನೆ ಮೇಲೆ ಅಧಿಪತ್ಯ ಸಾಧಿಸುವುದನ್ನು, ದೇಶಿ ತಳಿ ನಾಶವನ್ನು ತಡೆಗಟ್ಟಬೇಕಾದ ಜರೂರತ್ತಿನ ಬಗ್ಗೆ ಎಚ್ಚರಿಸುತ್ತವೆ.

೧೮೧೮ರಲ್ಲಿ ನಡೆದ ಭೀಮಾ–ಕೋರೆಗಾವ ಯುದ್ಧವು ದಲಿತ ಬದುಕಿನ ಆತ್ಮಾಭಿಮಾನವನ್ನು ಎತ್ತಿಹಿಡಿಯುವ ಐತಿಹಾಸಿಕ ಘಟನೆಯಾಗಿದ್ದರೂ ಇತಿಹಾಸದಲ್ಲಿ ದಾಖಲಾಗದ್ದು ಚೋದ್ಯದ ಸಂಗತಿ. ಆ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಸುಧಾಕರ ಖಾಂಬೆಯವರ ಮರಾಠಿ ಪುಸ್ತಕವನ್ನು ಕನ್ನಡಕ್ಕೆ ಸಿದ್ರಾಮ ಕಾರಣಿಕ ಅನುವಾದಿಸಿದ್ದಾರೆ. ಕನ್ನಡಿಗರಿಗೆ ಕೋರೆ ಗಾವದ ಬಗ್ಗೆ ವಿಶೇಷವಾದ ಯಾವುದೇ ಮಾಹಿತಿಗಳಿಲ್ಲದ ಈ ಸಂದರ್ಭದಲ್ಲಿ ಮಹಾರ ಯೋಧರ ಶೌರ್ಯ, ಪರಾಕ್ರಮ ಮತ್ತು ಚತುರತೆಗಳನ್ನು ದಾಖಲಿಸುವಲ್ಲಿ ಇದೊಂದು ಸ್ತುತ್ಯಾರ್ಹ ಕಾರ್ಯ.

'ದ ಪೊಲಿಟಿಕ್ಸ್ ಆಫ್ ಬ್ಯಾನಿಂಗ್ ಭೀಫ್' ಆಂಗ್ಲ ಲೇಖನ, ಅದರ ಅನುವಾದಿತ 'ಗೋಹತ್ಯೆ ನಿಷೇಧದ ಸುತ್ತಲಿನ ರಾಜಕೀಯ' ಲೇಖನಗಳೆರಡೂ ಮುದ್ರಿತ ಈ ಪುಟ್ಟ ಕೃತಿ, ಮಾಂಸಾಹಾರ ನಿಷೇಧದ ಚಿಂತನೆಗೆ ಧಾರ್ಮಿಕ, ಆರ್ಥಿಕ ಹಾಗೂ ರಾಜಕಾರಣವನ್ನು ಬಲಪಡಿಸಿಕೊಳ್ಳುವ ಹುನ್ನಾರವೇ ಕಾರಣವೆಂಬುದನ್ನು ಪ್ರತಿಪಾದಿಸುತ್ತದೆ.

ದಲಿತರ ಸಾಮಾಜಿಕ ತಾತ್ವಿಕತೆಯನ್ನು, ರೂಪುರೇಖೆಗಳನ್ನು, ಆ ತತ್ವದಿಂದ ರೂಪುಗೊಂಡ ವಿಭಿನ್ನ ಶಾಖೆಗಳ ಜ್ಞಾನಪ್ರಕ್ರಿಯೆಗಳನ್ನು ಎತ್ತಿಹಿಡಿದು ಪ್ರಪಂಚಕ್ಕೆ ಮನದಟ್ಟು ಮಾಡಿಸುವ ಹಾಗೂ ಪುರೋಹಿತಶಾಹಿಗಳು ಯಜಮಾನಿಕೆಯನ್ನು ಚಲಾಯಿಸುತ್ತಾ, ದೋಚುತ್ತಾ, ತುಳಿಯುತ್ತಿರುವ ಅವರು ದಲಿತರಷ್ಟೇ ಅಲ್ಲದೆ ಈ ದೇಶದ ಅಭಿವೃದ್ಧಿಗೆ ಹೇಗೆ ಮಾರಕವಾಗಿದ್ದಾರೆ ಎಂಬುದನ್ನು 'ದಲಿತ ತತ್ವ' ಕೃತಿ ಪ್ರತಿಪಾದಿಸುತ್ತದೆ.

ಜಾತಿ ವ್ಯವಸ್ಥೆ ಸಮಾಜವನ್ನು ಒಡೆದು ವಿಭಜಿಸುತ್ತದೆ. ಅದು ಭಾರತವನ್ನು ವಿಭಜಿಸಿದಂತೆ ಜಗತ್ತಿನಲ್ಲಿ ಯಾವ ಪದ್ಧತಿಯೂ ಯಾವ ದೇಶವನ್ನೂ ವಿಭಜಿಸಲಿಲ್ಲ ಎಂಬ ಅಂಶವನ್ನು ಧ್ವನಿಸುವ ಇಲ್ಲಿನ ವಿಚಾರಧಾರೆ ಪ್ರಖರತೆಯನ್ನು ಪಡೆದಿದೆ. ಅಲ್ಲದೆ ಎಷ್ಟೇ ಗೋಜಲುಗಳಿದ್ದರೂ ದಲಿತ ಸಂಘಟನೆಗಳು ಸಮಗ್ರ ಹೋರಾಟಗಳನ್ನು ಹಮ್ಮಿಕೊಳ್ಳಬೇಕಾದ ಪ್ರಸ್ತುತತೆಯನ್ನು 'ಜಾತಿವಿನಾಶ' ಕೃತಿಯಲ್ಲಿ ಕಾಣಬಹುದು.

ತೆಲುಗಿನ ಹೆಸರಾಂತ ಲೇಖಕ ಕಂಚ ಐಲಯ್ಯನವರ ಮುಪ್ಪರಿಗೊಂಡ ವಿಚಾರಗಳನ್ನು ಒಳಗೊಂಡ 'ದಲಿತ ತತ್ವ' ಮತ್ತು 'ಜಾತಿವಿನಾಶ' ಕನ್ನಡಕ್ಕೆ ಅನುವಾದಗೊಂಡ ಒಂದೇ ಹೊದಿಕೆಯ ಜೋಡಿ ಪುಸ್ತಕ.

ಮೇಲಿನ ಎಲ್ಲಾ ಪುಸ್ತಕಗಳ ಪ್ರಕಾಶಕರು:
ಲಡಾಯಿ ಪ್ರಕಾಶನ, ಗದಗ
ಫೋ:–೯೪೪೮೦೨೮೬೮೪೪

'ವಿಶ್ವಾಸಮತ' ಗೆದ್ದ ಅದ್ಭುತ ನಟನೆ!

-ಜ್ಯೋತಿ ಗುರುಪ್ರಸಾದ್

'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು
ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು'

ಕನ್ನಡ ನಾಡಿನ ಏಳಿಗೆಯ ಉದಯಕ್ಕಾಗಿ ಅದೆಷ್ಟು ಚೆನ್ನಾಗಿ ಹೀಗೆ ಪ್ರಾರ್ಥಿಸಿದ್ದರು ಹುಯಿಲು ಗೋಳ ನಾರಾಯಣ ರಾಯರು! ಈ ಪ್ರಾರ್ಥನೆಯ ಆಶಯದ 'ಉದಯವಾಗಲಿ' ಎಂಬ ಮೊದಲ ಪದದಲ್ಲಿಯೇ ಸೃಜನಶೀಲತೆಯ ಹೊಳಪಾದ ಕ್ರಿಯಾಶೀಲತೆ ಅಡಗಿದೆ. ಜೀವಿಸಲು ಬದುಕಾಗಿರುವ – ಆಶ್ರಯ ನೀಡಿರುವ ಸದಭಿಮಾನದ ಗೂಡಿದು. ಈ ನಮ್ಮ ನಾಡು ಚೆಲುವಿನಿಂದ ಕೂಡಿ ಉದಯಿಸಬೇಕು. ಅಂದರೆ ಹಳೆಯ ಸಂಕಷ್ಟಗಳನ್ನೆಲ್ಲ ಕಳೆದುಕೊಂಡು ನಾಡಿಗೆ ಸಂಬಂಧಿಸಿದ ಎಲ್ಲ ಸಮೃದ್ಧಿಯ ಅಂಶಗಳನ್ನೂ ಮನಗಂಡು ನಾಡು-ನುಡಿಯ ಒಗ್ಗಟ್ಟಿನಿಂದ ಕನ್ನಡ ಜನತೆ ಒಂದಾಗಿ 'ಕನ್ನಡ ರಾಜ್ಯ'ದ ಉತ್ಸವವನ್ನು ಆಚರಿಸುವಂತಾಗಬೇಕು ಎಂಬುದು ಮೇಲ್ಕಂಡ 'ಕವಿ ನುಡಿ'ಯ 'ಉದಯವಾಗಲಿ' ಎಂಬ ಹಂಬಲದ ತೀವ್ರತೆಯ ಒಳತೋಟಿ.

ಈ ಹಾಡಿನಲ್ಲಿ ಕವಿ ಈ ನೆಲಕ್ಕೆ ಸಂಬಂಧಿಸಿದಂಥ ಸಾಹಸ, ತೇಜಸ್ಸು, ವೀರ ವೃಂದವನ್ನು ನೆನೆಯುತ್ತ ಒಂದು ಸಾಲನ್ನು ಹೇಳುತ್ತಾರೆ. ಅದು 'ಓಜೆಯಿಂ ಮೆರೆದರಸುಗಳ ಸಾಹಸದ ಗೂಡು' ಎಂಬುದು. ಇಲ್ಲಿ 'ಓಜೆಯಿಂ'ಎಂಬ ಪದದ ಅರ್ಥ ಬಹಳ ಮುಖ್ಯ. 'ಓಜೆ' ಎಂದರೆ ಇಲ್ಲಿ 'ಒಪ್ಪವಾಗಿ', 'ತಾಳ, ಲಯ ಕ್ರಮದಿಂದ ಕೂಡಿದ ಶಕ್ತಿ ಸಾಮರ್ಥ್ಯ' ಎಂಬ ಅರ್ಥವನ್ನು ಧ್ವನಿಸುತ್ತದೆ. ನಮ್ಮ ರಾಜರುಗಳು ಇಂಥ ಓಜಸ್ಸಿನಿಂದ ಕೂಡಿದವರಾಗಿ ಮೆರೆದರು ಅಂದರೆ ತಮ್ಮನ್ನು ತಾವು ತೋರ್ಪಡಿಸಿಕೊಂಡರು-ಶ್ರೀಮಂತವಾಗಿ ಅನಾವರಣಗೊಳಿಸಿದರು ಎಂಬ ಸ್ಮರಣೆಯ ನಿಜದ ಅಭಿಮಾನ ಇಲ್ಲಿ ವ್ಯಕ್ತವಾಗಿ ಕನ್ನಡನಾಡು 'ಸದಭಿಮಾನ'ದ ಗೂಡಾಗಿರುವ ವಿವರ ಸಿಗುತ್ತದೆ.

ಜಕ್ಕಣನ ಶಿಲ್ಪಕಲೆಯಂಥ ಕಲೆಗೆ ಆ ಅಚ್ಚರಿಗೆ ತವರೂರಾಗಿರುವ, 'ಚೊಕ್ಕಮತ'ಗಳ ಸಾರಿದವರಿಗೆ ನೆಲೆಬೀಡಾಗಿರುವ ಅಂದರೆ ಸ್ವಚ್ಛವಾದ ಮತ ಸಾರಿದವರಿಗೆ ಅಂದರೆ ಮತೀಯ ಭಾವನೆಯನ್ನು ಕೆರಳಿಸದೆ ಒಳಿತಿನ ಬಲವನ್ನು ಸಾರಿದವರಿಗೆ ಆಶ್ರಯವನ್ನಿತ್ತಿರುವ ಈ ನಾಡು ಇದೇ ಪರಂಪರೆಯ ಬೆಳಕು ಚೆಲ್ಲುವ ಹಾಗೆ ಉದಯವಾಗಬೇಕು. ಇದು ಈ ಗೀತೆಯ ಹಿಂದಿರುವ ಕನ್ನಡ ಮನಸ್ಸಿನ ಸದಾಶಯ. ಕಾವೇರಿ, ಗೋದೆ, ಕೃಷ್ಣೆ, ಭೀಮ ಮುಂತಾದ ಜೀವ ನದಿಗಳು ನಮ್ಮ ಮೈ ತೊಳೆದು ಶುದ್ಧಿ ಮಾಡುವ ನಮ್ಮ ಈ ತಾಯಿನಾಡು ಕವಿಗಳ ನಡೆಯನ್ನು ಸುಭದ್ರಗೊಳಿಸುವಂಥದ್ದು. ಕುಮರವ್ಯಾಸನಂಥ ಹೆಮ್ಮೆಯ ಕವಿಗೆ ಸ್ಫೂರ್ತಿ ದೇವತೆಯಾದ ಗದುಗಿನ ವೀರನಾರಾಯಣನ ಬೀಡು ಇದು ಎಂದು ಮುಂತಾಗಿ ಕವಿ ಮನಸು ಆಶ್ರಯ ಕೊಟ್ಟಿರುವ ಈ ನೆಲವನ್ನು, ಪರಸ್ಪರ ಸಂವಹನ-ಸಂವಾದಕ್ಕೆ ಕಾರಣವಾಗಿರುವ ನೆಲದ ಭಾಷೆ ಕನ್ನಡವನ್ನೂ ಮನಸಾರೆ ನೆನೆಯುತ್ತದೆ.

ಈ ನೆನಪು ಕೇವಲ ಹಳಹಳಿಕೆಯಾಗಿರದೆ ನಿಜಕ್ಕೂ ನಾಡು-ನುಡಿಗೆ ಗೌರವ ಸಲ್ಲಿಸುವ ಭಾವನೆಯನ್ನು -ವಿಚಾರವನ್ನೂ ಒಳಗೊಂಡಿರುವ ಸಮತೋಲನ ಬದುಕಿನ ಚಿಂತನೆಯಾಗಿದೆ. ಈ ಚಿಂತನೆಯ ಬಲ ಇಂದಿಗೂ ನಮಗೆ ಅತ್ಯಗತ್ಯವಾಗಿ ನಮ್ಮನ್ನು ಈ ನಾಡಿಗೆ ಸೇರಿದ ಹೊಸ ಮನುಷ್ಯರನ್ನಾಗಿ ಸಬೇಕಿದೆ. ಈ ಹೊಸತನದ ಹುಟ್ಟನ್ನೇ ನಾನು ಸೃಜನಶೀಲತೆ ಎಂದು ಕರೆಯುವುದು. 'ಸೃಜನಶೀಲತೆ' ಎಂಬ ಪದ ಪ್ರಯೋಗ ಪಶ್ಚಾತ್ಯರ 'ಕೈಗಾರಿಕಾ ಕ್ರಾಂತಿ' ನಂತರದ 'Creativity' ಎಂಬ ಪದದ ಪರಿಕಲ್ಪನೆ ಯಿಂದ ಉಗಮವಾದದ್ದು ಎಂಬ ವಾದವಿದೆ. ಆದರೆ ಅದು ಏನೇ ಆದರೂ ಆಗಿರಲಿ. ನಾವೀಗ ಬರೀ ವಾದಗಳಲ್ಲಿ ಕಳೆದು ಹೋಗದೆ ನಿಜಕ್ಕೂ ಏನನ್ನಾದರೂ ಸೃಜಿಸಬಹುದಾದ ಅಥವಾ ಒಳ್ಳೆಯದನ್ನು ಹಾಳು ಮಾಡದೇ ಉಳಿಸಿಕೊಳ್ಳಬಹುದಾದ ನಮ್ಮ ಗಟ್ಟಿ ವ್ಯಕ್ತಿತ್ವದ ಸಾಧ್ಯತೆಯತ್ತ ನಿಜವಾಗಿ ಚಿಂತಿಸಬೇಕಿದೆ ಎಂಬ ಅನುಷ್ಠಾನದ ಬಗ್ಗೆ ಮಾತ್ರ ನಾನು ಹೇಳಲು ಹೊರಟಿರುವುದು.

ತನು ಕರಗದವರಲ್ಲಿ
ಪುಷ್ಪವನೊಲ್ಲೆಯಯ್ಯ ನೀನು
ಮನ ಕರಗದವರಲ್ಲಿ
ಗಂಧಾಕ್ಷತೆಯನೊಲ್ಲೆಯ್ಯ ನೀನು
ಅರಿವು ಕಣ್ತೆರೆಯದವರಲಿ
ಆರತಿಯನೊಲ್ಲೆಯ್ಯ ನೀನು
ಭಾವಶುದ್ಧವಿಲ್ಲದವರಲಿ
ಧೂಪವನೊಲ್ಲೆಯ್ಯ ನೀನು
ಹೃದಯ ಕಮಲವಿಲ್ಲದವರಲಿ
ಇರಲೊಲ್ಲೆಯ್ಯ ನೀನು..

ಎಂದು ಅಕ್ಕಮಹಾದೇವಿ ಹಾಡುವ ವಚನ ಶುದ್ಧ ಪ್ರಾರ್ಥನೆಯ ಹೊಸತನದ ಅರಿವನ್ನು ವಿಸ್ತರಿಸುವ ಒಂದು ನಿರಂತರ ರೂಪಕದಂತೆ ನನಗೆ ಕಾಣುತ್ತದೆ. ಇಲ್ಲಿ 'ನೀನು' ಎನ್ನುವುದು ದೈವಿಕ ವಿಶ್ವಾಸದ ಪತೀಕವಾಗಿ ನಂಬಿಕೆಯ ನೆಲೆಯ ಒಳಗಣ್ಣ ಸತ್ಯದ ಇರುವಿಕೆಯ ಫಲದಿಂದ ಉದಯಿಸಿರುವ ಅನುಭವದ-ಅನುಭಾವದ ನುಡಿಯಾಗಿದೆ. ಇದು ಸಾಧಾರಣವಾಗಿ ಎಲ್ಲರಿಗೂ ಗೊತ್ತಿರುವ ಜನ ಜನಿತ ವಚನ. ಆದರೆ ಎಷ್ಟು ಮಂದಿ ಈ ವಚನದಲ್ಲಿರುವ ಸರಳ ಸತ್ಯವನ್ನು ತಮ್ಮಲ್ಲೂ ಆವಿರ್ಭರಿಸಿಕೊಂಡು ಯಾರ ಅವಲಂಬನೆಯೂ ಇಲ್ಲದೆ ಸತ್ವ ಪರೀಕ್ಷೆ-ಸತ್ಯ ಪರೀಕ್ಷೆಗಳನ್ನು ಸ್ವಯಂ ಮಾಡಿಕೊಳ್ಳುತ್ತಾರೆ ಎಂಬುದೇ ನಾನು ಕೇಳಬೇಕಾಗಿರುವ ಮುಖ್ಯ ಪ್ರಶ್ನೆ. ಏಕೆಂದರೆ ನಮ್ಮ ರಾಜ್ಯದ ಮುಖ್ಯಮಂತ್ರಿ ಎನಿಸಿಕೊಂಡಿರುವ ಯಡಿಯೂರಪ್ಪನವರೇ ಇಂದು ತನ್ನ ಅಧಿಕಾರದ ಸರ್ಕಾರ ಎಲ್ಲಿ ಕುಸಿದು ಬೀಳುವುದೋ ಎಂಬ ಭಯದಿಂದ ಬೆಂಗಳೂರಿನ ಗಾಳಿಆಂಜನೇಯನ ದೇವಸ್ಥಾನಕ್ಕೆ ಭೇಟಿ ಕೊಟ್ಟು ಸಂಕಷ್ಟ ನಿವಾರಕ ಅಸ್ತ್ರವೆಂದು ತೋಳಿಗೆ'ತಾಯ್ತ' ಕಟ್ಟಿಸಿಕೊಳ್ಳುತ್ತಾರೆ! ಮಾಧ್ಯಮಗಳ

ನಮ್ಮ ನಾಡು ಚೆಲುವಿನಿಂದ ಕೂಡಿ ಉದಯಿಸಬೇಕು. ಅಂದರೆ ಹಳೆಯ ಸಂಕಷ್ಟಗಳನ್ನೆಲ್ಲ ಕಳೆದುಕೊಂಡು ನಾಡಿಗೆ ಸಂಬಂಧಿಸಿದ ಎಲ್ಲ ಸಮೃದ್ಧಿಯ ಅಂಶಗಳನ್ನೂ ಮನ ಗಂಡು ನಾಡು-ನುಡಿಯ ಒಗ್ಗಟ್ಟಿನಿಂದ ಕನ್ನಡ ಜನತೆ ಒಂದಾಗಿ 'ಕನ್ನಡ ರಾಜ್ಯ'ದ ಉತ್ಸವವನ್ನು ಆಚರಿಸುವಂತಾಗಬೇಕು. ಜಕ್ಕಣನ ಶಿಲ್ಪ ಕಲೆಯಂಥ ಕಲೆಗೆ ಆ ಅಚ್ಚರಿಗೆ ತವರೂರಾಗಿರುವ, 'ಚೊಕ್ಕಮತ'ಗಳ ಸಾರಿದವರಿಗೆ ನೆಲೆಬೀಡಾಗಿರುವ ಅಂದರೆ ಸ್ವಚ್ಛವಾದ ಮತ ಸಾರಿದವರಿಗೆ ಅಂದರೆ ಮತೀಯ ಭಾವನೆಯನ್ನು ಕೆರಳಿಸದೆ ಒಳಿತಿನ ಬಲವನ್ನು ಸಾರಿದವರಿಗೆ ಆಶ್ರಯವನ್ನಿತ್ತಿರುವ ಈ ನಾಡು ಇದೇ ಪರಂಪರೆಯ ಬೆಳಕು ಚೆಲ್ಲುವ ಹಾಗೆ ಉದಯವಾಗಬೇಕು.

ಮೂಲಕ ಇದು ರಂಜಕವಾಗಿ ಫೋಕಸ್ ಆಗಿ ಬಿತ್ತರವಾಗುತ್ತದೆ.

ಹೂವು-ಹಣ್ಣು-ಕುಂಕುಮದ ಪ್ರಸಾದವನ್ನು ದೇವಸ್ಥಾನದ ಅರ್ಚಕರಿಂದ ಸ್ವೀಕರಿಸಿ 'ದೇವರ ಕೃಪೆ' ತನ್ನ ಮೇಲಿದೆ ಎಂದು ವಿಶ್ವಾಸವನ್ನು ಪ್ರದರ್ಶಿಸಲು ಕ್ಯಾಮರಾದ ಮುಂದೆ ಹಲ್ಕಿರಿಯುವ ಮುಖ್ಯಮಂತ್ರಿಗಳು ನನಗೆ ಒಮ್ಮೆಲೇ ಅವಕಾಶವಾದಿಯಾಗಿಯೂ-ಮೂಢರಾಗಿಯೂ ಕಾಣುತ್ತಾರೆ. ಏಕೆಂದರೆ ಸಂವಿಧಾನಾತ್ಮಕವಾದ ವೈಚಾರಿಕ-ವೈಜ್ಞಾನಿಕ ಮನೋಭಾವಕ್ಕೆ ಒತ್ತು ಕೊಟ್ಟು ತನ್ನ ನಡಾವಳಿಗಳನ್ನು ರೂಪಿಸಿಕೊಳ್ಳುವುದು ಪ್ರಜಾಪ್ರಭುತ್ವವನ್ನು ಮುನ್ನಡೆಸುವ ನಾಯಕನೊಬ್ಬನ ಕರ್ತವ್ಯ. ಸಮುದಾಯದ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಹಬ್ಬ-ಜಾತ್ರೆಗಳಲ್ಲಿ ಪಾಲ್ಗೊಳ್ಳುವುದು ಬೇರೆ ಸಂಗತಿ. ಅಲ್ಲಿ ಜನಪರ ಭಾವನೆಯನ್ನು ಗೌರವಿಸುವ ಒಂದು ನಿರಪೇಕ್ಷ ಸಂತೋಷ ಮಾತ್ರ ಇರುತ್ತದೆ. ಇಂಥ ಮುಗ್ಧ ಜಾನಪದ ಗೀತೆಗಳು-ಮಲೆಯ ಮಹದೇಶ್ವರ ಕಾವ್ಯ ಮುಂತಾದವು. ಇದೆಲ್ಲಾ ನಿಜವಾದ ಸಾಹಿತ್ಯದ ನಂಟಿನ ಮನದಲ್ಲಿ ಬೆಳಕು ಚೆಲ್ಲುವ ಮಾತಾಯಿತು.

ಆದರೆ ಇತ್ತೀಚೆಗೆ ವಿಧಾನಸೌಧದಲ್ಲಿ ನಡೆದ 'ವಿಶ್ವಾಸಮತ' ಗೆಲ್ಲುವ ವರಸೆ ಅಥವಾ ನಾಟಕ ಹೇಗಿತ್ತೆಂದರೆ ಅದು 'ವಿಶ್ವಾಸಮತ' ವನ್ನು ಗೆದ್ದ ಅದ್ಭುತ ನಟನೆಯಾಗಿತ್ತು ಅಲ್ಲಿ ನಿಜವಾದ 'ವಿಶ್ವಾಸ' ಮಾತ್ರ ಮಾಯವಾಗಿತ್ತು. ಭಯ-ಸಂಶಯ-ಕರ್ತವ್ಯ ಲೋಪಗಳ ಮಧ್ಯೆ ವಿಶ್ವಾಸವೆಂಬುದು ಇರಲು ಸಾಧ್ಯವೇ?! ಪರಸ್ಪರ ವ್ಯಕ್ತಿ ಗೌರವವೂ ಮಾಯವಾದಂತೆ ಕೇವಲ 'ವೋಟು ರಾಜಕಾರಣ'ದಿಂದ ಮಾತ್ರ ಮನುಷ್ಯಾಕೃತಿಯನ್ನು ಆ ಕ್ಷಣಕ್ಕೆ ಮಾತ್ರ ಸಲ್ಲುವ ಐಶ್ವರ್ಯದಂತೆ ಅಳೆಯುವ- ಕೋಣೆಗೆ ಬೀಗ ಹಾಕಿ ಕೂಡಿಡುವ- ಕೋಟ್ಯಾಂತರ ರೂಪಾಯಿ ಆಸೆ ತೋರಿಸಿ ತಮ್ಮ ಪಕ್ಷಕ್ಕೆ ಕೊಂಡುಕೊಳ್ಳುವ ಜೂಜಿನ ವ್ಯಭಿಚಾರದಲ್ಲಿ 'ವಿಶ್ವಾಸಮತ' ವೆಂಬುದು-ಬಹುಮತವೆಂಬುದು ಕೇವಲ ಕಣ್ಣೊರೆಸುವ ನಟನೆಯಲ್ಲದೆ ನಿಜದ ವಿಶ್ವಾಸ ಮತವೇ? ವಿಶ್ವಾಸ ನಿಜವಾಗಿ ಇದ್ದಿದ್ದೇ ಆದರೆ ಹಲ್ಲುಗಿಂಜಿಕೊಂಡು-ಹೆದರಿಕೊಂಡು-ಹೆದರಿಸಿಕೊಂಡು ಒತ್ತಡದಿಂದ ಅದನ್ನು ಸಾಬೀತುಪಡಿಸುವ ಕರ್ಮವಾದರೂ ಇರುತ್ತದೆಯೇ?

'ನಾನು ಜನ ಸೇವಕ. ಅವರ ಸೇವೆಯನ್ನು ಸರಿಯಾಗಿ ನಿರ್ವಹಿಸುವುದೇ ನನ್ನ ಪಾಲಿನ ಕರ್ತವ್ಯ; ಜನಾರ್ಧನನೆಂಬ ದೇವರ ಸೇವೆ. ಈ ಜನತಾ ಜನಾರ್ಧನ ನನ್ನನ್ನು ನಿರಾಕರಿಸಿದರೆ ನನಗೆ ಈ ಪದವಿ ಬೇಡ! ಎಂಬ ಸರಳ ವಿವೇಕ-ವೈರಾಗ್ಯ ಜನರಿಂದ ಆರಿಸಿ ಬಂದಿರುವ ಪ್ರಜಾ ಪ್ರತಿನಿಧಿಗಳಿಗಿರಬೇಕ ಲ್ಲವೇ? ಇಂಥ ಅಂತರಂಗದ ಅರ್ಹತೆ ಇಲ್ಲದವರ್ಯಾರೂ ಯಾವುದೇ ಜನಪ್ರತಿನಿಧಿಗಳಾಗಲು-ಕುರ್ಚಿಯಲ್ಲಿ ಕುಳಿತು ಅಧಿಕಾರ ಚಲಾಯಿಸಲು ಅರ್ಹರಲ್ಲದ ಲಜ್ಜೆಗೇಡಿಗಳು. ಆದರೂ ಇಂಥ ದುರುಳ ರಾಜಕೀಯ ಕುತಂತ್ರವೇ ಮೆರೆ ಯುತ್ತಾ ರಾಜಕಾರಣದ ನಿಜವಾದ ಸಾಂತ್ವನದ ನೀತಿ ಯನ್ನು ಕಂಡುಕೊಂಡಿದ್ದ ಲೋಹಿಯಾ ಅವರನ್ನಾಗಲೀ ಗೋಪಾಲ ಗೌಡರನ್ನಾಗಲೀ, ನಜೀರ್ ಸಾಬಾರನ್ನಾಗಲೀ ನಮ್ಮ ಕಣ್ಣಿಂದ ಮರೆ ಮಾಡಿ ಮರೀಚಿಕೆ ಆಗಿಸುತ್ತಿದೆ ಏಕೆ? ಇದೇ ಇಂದು 'ಪ್ರಜಾಪ್ರಭುತ್ವ'ದಂಥ ಅದ್ಭುತ ಸೃಜನಶೀಲ ಆಡಳಿತದಡಿಯಲ್ಲಿ ಜೀವಿಸುತ್ತಲೂ ಆ ಸೃಜನಶೀಲತೆಯ ಅನುಷ್ಠಾನ ಪೂರ್ಣ ಪ್ರಮಾಣದಲ್ಲಾಗದ ಸ್ವಾರ್ಥ ರಾಜಕೀಯಕ್ಕೆ ಸಿಕ್ಕು ನಾಡು ಗದ್ದಲದ ಗೂಡಾಗುತ್ತಿರುವುದನ್ನು ಸಹಿಸಲಾಗದೆ

ಆದರೆ ಇತ್ತೀಚೆಗೆ ವಿಧಾನಸೌಧದಲ್ಲಿ ನಡೆದ 'ವಿಶ್ವಾಸಮತ' ಗೆಲ್ಲುವ ವರಸೆ ಅಥವಾ ನಾಟಕ ಹೇಗಿತ್ತೆಂದರೆ ಅದು 'ವಿಶ್ವಾಸಮತ' ವನ್ನು ಗೆದ್ದ ಅದ್ಭುತ ನಟನೆಯಾಗಿತ್ತು ಅಲ್ಲಿ ನಿಜವಾದ 'ವಿಶ್ವಾಸ' ಮಾತ್ರ ಮಾಯವಾಗಿತ್ತು. ಭಯ-ಸಂಶಯ-ಕರ್ತವ್ಯ ಲೋಪಗಳ ಮಧ್ಯೆ ವಿಶ್ವಾಸವೆಂಬುದು ಇರಲು ಸಾಧ್ಯವೇ?!

ನಮ್ಮ ನಮ್ಮ ಸಾಧ್ಯತೆಯಲ್ಲಿ ಪ್ರತಿಭಟಿಸಬೇ ಕಾಗಿರುವ ನಮ್ಮಂಥ ಸಾಮಾನ್ಯ ಪ್ರಜೆಗಳಿಗೆ ಒದಗಿ ಬಂದಿರುವ ಸಂಕಷ್ಟ-ಆತ್ಮಗೌರವದ ಪ್ರಶ್ನೆ.

ರಾಜಕೀಯ ಪಕ್ಷದ ಚಿನ್ಹೆ 'ಕಮಲ'ವಾಗಿಬಿಟ್ಟರೆ ಭಾಗ್ಯವೇನು ಬಂತು? ಅಲ್ಲಿ 'ಹೃದಯಕಮಲ'ವೇ ಮುಖ್ಯವಾಗಿ ಅರಳಿದಿದ್ದರೆ! ಕರುಣೆ-ಸಹನೆಗಳಿಂದ, ಪ್ರೀತಿ-ಮಮತೆಗಳಿಂದ ತನು-ಮನ ಕರಗದೆ ಬೊಜ್ಜು ಸಂಗ್ರಹವಾಗುತ್ತಾ ಹೋಗಿ ಹೃದಯ ಜಡವಾಗಿ ಕೇವಲ ಕೈಯಿಂದ ಯಾಂತ್ರಿಕವಾಗಿ ಹೂವನ್ನು ಲಂಚದಂತೆ ದೇವರಿಗರ್ಪಿಸಿದರೆ ಆ ಹೂವನ್ನು 'ದೇವರು' ಖಂಡಿತ ಸ್ವೀಕರಿಸಲಾರ. ಏಕೆಂದರೆ 'ದೇವರು' ಅಲ್ಲಿ ಇರುವುದೇ ಇಲ್ಲ ಎಂಬುದು ನಿಜ ಶರಣೆ ಅಕ್ಕನ ಸೃಜನಶೀಲ ತುಡಿತ. ಹಾಗೆಯೇ 'ಆರತಿ', 'ಗಂಧಾಕ್ಷತೆ', 'ಧೂಪ' ಎಲ್ಲ ಪರಿಕರಗಳನ್ನೂ ಅಕ್ಕ ಸಹಜ ಸುಂದರವಾಗಿ ಹೊಮ್ಮುವ ಅರ್ಪಣ ಮನೋಭಾವದ ಅಂತರಂಗ ಶುದ್ಧಿಯ ಶಕ್ತಿಯ ಸಂಕೇತವಾಗಿ ಹೆಸರಿಸುತ್ತಾಳೆ. ಅರಿವು ಕಣ್ತೆರೆಯುವುದೇ ಅಕ್ಕನ ದೇವರ ಕಲ್ಪನೆ. ಇಲ್ಲದಿದ್ದರೆ ಅದೊಂದು ದೈವ ದ್ರೋಹ. ಸ್ವಂತ ನಮಗೆ ನಾವೇ ಮಾಡಿಕೊಳ್ಳುವ ಮೋಸ.

ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ-ಸ್ನೇಹಗಳ
ಗುರುತಿಸದಾದೆನು ನಮ್ಮೊಳಗೆ
ಎಲ್ಲಿದೆ ನಂದನ ಎಲ್ಲಿದೆ ಬಂಧನ
ಎಲ್ಲಾ ಇದೆ ಈ ನಮ್ಮೊಳಗೆ
ಒಳಗಿನ ತಿಳಿಯನು ಕಲಕದೆ ಇದ್ದರೆ
ಅಮೃತದ ಸವಿಯೋ ನಾಲಿಗೆಗೆ
ಹತ್ತಿರವಿದ್ದೂ ದೂರ ನಿಲ್ಲುವೆವು
ನಮ್ಮ ಅಹಮ್ಮಿನ ಕೋಟೆಯಲಿ
ಎಷ್ಟು ಕಷ್ಟವೋ ಹೊಂದಿಕೆಯೆಂಬುದು
ನಾಲ್ಕು ದಿನದ ಈ ಬದುಕಿನಲಿ....

ಎಂಬ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ಕವಿತೆ ಸದ್ಯದ ನಮ್ಮ ನಾಡಿನ ಪರಿಸ್ಥಿತಿಗೆ ಕನ್ನಡಿ ಹಿಡಿಯುವಂತಿದೆ ಅನಿಸುತ್ತದೆ. ಒಬ್ಬರ ಭಾವನೆಯ ಮೇಲೆ ಬರ್ಬರವಾಗಿ ಧಾಳಿಮಾಡಿ ಅಲ್ಲಿ ತನ್ನ 'ಸೌಧ'ವನ್ನು ಕಟ್ಟಬೇಕೆಂದರೆ ಅಲ್ಲಿ ದೇವರಿರಲು ಸಾಧ್ಯವೇ? ಎಂಬ ಸರಳ ಸಾಮಾನ್ಯ ಜ್ಞಾನ ಮಾತ್ರ ನಮಗೀಗ ದಾರಿ ದೀಪವಾಗಬಲ್ಲದು. ಅದರ ಹೆಸರು ಪರಸ್ಪರ ನಿಜವಿಶ್ವಾಸದ-ಸ್ನೇಹದ 'ತಿಳಿಮನ' ಆ ತಿಳಿಮನದಲ್ಲಿ 'ಮಗು'ವೊಂದು ಸದಾ ವಾಸವಿರುತ್ತದೆ. ಇದೇ ನನಗನಿಸುವ ಸೃಜನಶೀಲತೆ. □

ಜಾತಿ ವಿನಾಶವೋ ಪ್ರೀತಿ ವಿನಾಶವೋ?

(7ನೇ ಪುಟದಿಂದ)

ಕೆಲವೇ ಕೆಲವು ರಾಜಕಾರಣಿಗಳು, ಪುಡಾರಿಗಳು ಹಾಗೂ ಮತಾಂಧರು ತಮ್ಮ ಸ್ವಾರ್ಥಕ್ಕಾಗಿ, ಪ್ರಚಾರಕ್ಕಾಗಿ ಹಾಗೂ ಒಂದು ಐಡೆಂಟಿಟಿಗಾಗಿ ಇಂತಹ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ, ಇಂತಹವರು ತಮ್ಮದೇ ಜಾತಿ ಧರ್ಮಗಳಲ್ಲಿ ಹಸಿವೆ, ಬಡತನ, ಅನಾರೋಗ್ಯ, ಅನಕ್ಷರತೆ ಹಾಗೂ ನಿರುದ್ಯೋಗದಿಂದ ಬಳಲುತ್ತಿರುವವರ ಬಗ್ಗೆ ಏನು ಕೆಲಸ ಮಾಡಿದ್ದಾರೆ ಎಂಬುದನ್ನು ಯೋಚಿಸಬೇಕು.

ಅಂತರ್ಜಾತಿ-ಅಂತರ್ಧರ್ಮಿಯ ವಿವಾಹ ಘಟಿಸುವದರಿಂದ ಒಂದು ಜಾತಿ ಅಥವಾ ಧರ್ಮದ ಮೇಲೆ ಯಾವ ರೀತಿಯ ಪರಿಣಾಮ ಉಂಟಾಗುತ್ತದೆ ಎಂಬುದನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿವೇಚಿಸಬೇಕಾಗಿದೆ. ಅನ್ಯ ಜಾತಿ-ಧರ್ಮದ ಹೆಣ್ಣು ಮದುವೆಯಾಗಿ ಬರುವದರಿಂದ ಸ್ವಜಾತಿ ಧರ್ಮಕ್ಕೆ ಯಾವುದೇ ಹಾನಿಯಾಗುವದಿಲ್ಲ ಎಂದು ಭಾವಿಸುವದು ಹಾಗೂ ಸ್ವಜಾತಿ ಧರ್ಮದ ಹೆಣ್ಣು ಮದುವೆಯಾಗಿ ಅನ್ಯ ಜಾತಿ-ಧರ್ಮಕ್ಕೆ ಸೇರ್ಪಡೆಯಾಗುವದರಿಂದ ಸ್ವಜಾತಿ ಧರ್ಮಕ್ಕೆ ಹಾನಿಯಾಗುತ್ತದೆ ಎಂದು ಭಾವಿಸುವದಕ್ಕೆ ಯಾವ ಆಧಾರವನ್ನು ವಿರೋಧಿಗಳು ಕೊಡುತ್ತಾರೆ?

ಮೂಲಭೂತವಾಗಿ ಸಮಾಜವು ಹೆಣ್ಣು ಗಂಡು ಎಂಬ ತಾರತಮ್ಯವನ್ನು ಇಟ್ಟುಕೊಂಡು ಇಂತಹ ಘಟನೆಗಳನ್ನು ನೋಡುವದು ನೈಸರ್ಗಿಕ ನಿಯಮಕ್ಕೆ ವಿರುದ್ಧ ವಾದದ್ದು. ಒಂದು ಜಾತಿ ಧರ್ಮದ ಹೆಣ್ಣು ಅನ್ಯಜಾತಿ-ಧರ್ಮಕ್ಕೆ ಹೋಗುತ್ತಿದ್ದಾಳೆ ಎಂದರೆ ಅವಳು ತನ್ನ ಪೂರ್ವಾಶ್ರಮದ ಆಚರಣೆ - ಸಂಸ್ಕಾರಗಳನ್ನು ಹೊತ್ತುಕೊಂಡು ಹೋಗುತ್ತಾಳೆ. ತಾನು ವಲಸೆ ಹೋದ ಜಾತಿ-ಧರ್ಮದಲ್ಲಿ ಬುದ್ಧಿಪೂರ್ವಕ ಅಲ್ಲದಿದ್ದರೂ ಸಹಜ ಪ್ರವೃತ್ತಿಯಿಂದ ತನಗರಿವಿಲ್ಲದಂತೆ ಅವಳು ತನ್ನ ಮೂಲತನವನ್ನು ಅಲ್ಲಿ ಪ್ರತಿಫಲಿಸುತ್ತಾಳೆ. ಅವಳಿಗೆ ಹುಟ್ಟುವ ಮಕ್ಕಳೂ ಸಹ ತಂದೆಗಿಂತ ತನ್ನ ತಾಯಿಯ ಭಾಷೆ ಮತ್ತು ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಬೆಳೆಯುತ್ತವೆ. ಈ ಕಾರಣಕ್ಕಾಗಿಯೇ ತಾಯಿಯನ್ನು ಮೊದಲ ಗುರು ಎಂದು, ಮಕ್ಕಳು ಕಲಿಯುವ ಭಾಷೆಯನ್ನು ಮಾತೃಭಾಷೆಯೆಂದು ಕರೆಯುತ್ತೇವೆ.

ಹೀಗಾಗಿ, ಒಂದು ವೈರುಧ್ಯದ ಸಂಸ್ಕೃತಿಯೊಳಗೆ ತನ್ನ ಜಾತಿ-ಧರ್ಮದ ಪ್ರಭಾವವನ್ನು ಹೆಣ್ಣು ಮಾತ್ರ ಮಾಡಬಲ್ಲಳು. ಆದರೆ, ಇಂತಹ ಪರಿವರ್ತನೆ ಗಂಡಿನಿಂದ ಸಾಧ್ಯವಾಗಲಾರದು. ಆದ್ದರಿಂದ ಹೆಣ್ಣು ಹೊರ ಕುಲಕ್ಕೆ ಹೋಗುವದರಿಂದ ಸ್ವಂತ ಕುಲದ ವಿಸ್ತರಣೆಯನ್ನು ಮಾಡುವ ರಾಯಭಾರಿಯಾಗಬಲ್ಲಳು. ಅಲ್ಲದೇ, ಅನ್ಯ ಜಾತಿ-ಧರ್ಮದ ಹೆಣ್ಣನ್ನು ಪ್ರೀತಿಸಿ ಮದುವೆಯಾದ ವ್ಯಕ್ತಿ ತನ್ನ ಹೆಂಡತಿಯನ್ನು ಪ್ರೀತಿಸುವಷ್ಟೆ ಅವಳ ಜಾತಿ-ಧರ್ಮವನ್ನು ಕೂಡಾ ಆತ ಗೌರವಿಸುತ್ತಾನೆ. ಇಲ್ಲದಿದ್ದರೆ, ತನ್ನ ಹೆಂಡತಿಯ ಅಸಂತೋಷಕ್ಕೆ ಕಾರಣನಾಗುತ್ತಾನೆ. ಇಂತಹ ದಂಪತಿಗಳಿಗೆ ಹುಟ್ಟುವ ಮಕ್ಕಳೂ ಸಹ ಸಮ ಸಂಸ್ಕೃತಿಯನ್ನು ಬೆಳೆಸಬಲ್ಲವು. ಇದು ಅಂತರ್ಜಾತಿ-ಧರ್ಮದ ನಡುವೆ ಒಂದು ಸೌಹಾರ್ದತೆ ಮತ್ತು ಮಧುರ ಸಂಬಂಧವನ್ನು ಬೆಳೆಸಲು ಸಾಧ್ಯವಾಗುತ್ತದೆ. ಆದ್ದರಿಂದ ಪ್ರಜ್ಞಾವಂತರೆಲ್ಲರು ಜಾತಿ ಸಂಕುಚಿತತೆಯನ್ನು ತೊರೆದು, ಪ್ರೀತಿ ಸಂಬಂಧಗಳಿಗೆ ಮಾನ್ಯತೆ ಮತ್ತು ಪ್ರೋತ್ಸಾಹ ನೀಡಬೇಕಾಗಿದೆ. □

'ದಲಿತ ಆಧುನಿಕತೆ' ಹಾಗೂ ಅಂಬೇಡ್ಕರ್ ರೂಪಕ



ಕಾಲಮಾನ-೧೧

ಡಾ. ಮುಜಾಫ್ಫರ್ ಅಸ್ಸಾದಿ

ಇತ್ತೀಚಿನ ಒಂದು ಚರ್ಚೆಯಿಂದ ಈ ಲೇಖನವನ್ನು ಆರಂಭಿಸುತ್ತೇನೆ: ಈ ಚರ್ಚೆ ಅಂಬೇಡ್ಕರವರ ಜನ್ಮ ದಿನವನ್ನು ಹೇಗೆ ಆಚರಿಸಬೇಕೆಂಬುದರ ಕುರಿತಾಗಿದೆ. ನಮ್ಮ ದೇಶದಲ್ಲಿ ರಾಷ್ಟ್ರೀಯ ನಾಯಕರ ಜನ್ಮದಿನವನ್ನು ಸರಕಾರಿ ದಿನವನ್ನಾಗಿ ಆಚರಿಸುವ ವಾಡಿಕೆ ಇದೆ. ಸರಕಾರ ನಾಯಕರನ್ನು ವೈಭವೀಕರಿಸುವುದು, ಉತ್ಸವ ಮೂರ್ತಿಗಳಂತೆ ಚಿತ್ರಕರಿಸುವುದು ಸರ್ವೆ ಸಾಮಾನ್ಯ. ಆದರೆ ಅಂಬೇಡ್ಕರ್ ಹುಟ್ಟು ಹಬ್ಬ ವಿವಿಧ ರಾಷ್ಟ್ರೀಯ ನಾಯಕರ ಹುಟ್ಟು ಹಬ್ಬಗಿಂತಲೂ ವಿಭಿನ್ನ. ಆ ವಿಭಿನ್ನತೆಯೆ ಚರ್ಚೆಗೆ ಗ್ರಾಸವಾಗಿರುವ ವಿಷಯವಾಗಿರುವುದು. ಗಾಂಧಿ ಅಥವಾ ನೆಹರೂರವರ ಹುಟ್ಟು ಹಬ್ಬವಾದರೆ ಅವರ ಸಮಾಧಿ ಬಳಿ ಸಂಗೀತ ಕಚೇರಿಗಳು ನಡೆಯುತ್ತವೆ. ಅದಕ್ಕಿಂತಲೂ ಮುಖ್ಯವಾಗಿ ದೇಶದ ಪ್ರಧಾನಿ ಹಾಗೂ ರಾಷ್ಟ್ರಪತಿಗಳು ಸಮಾಧಿಗೆ ಗೌರವ ಸಲ್ಲಿಸುತ್ತಾರೆ. ಇದು ವಾರ್ಷಿಕ ಸಾಂಪ್ರದಾಯ ಅಥವಾ ಪರಂಪರೆಯಾಗಿರುವುದು ವಾಸ್ತವ. ಆದರೆ ಈ ರೀತಿಯ ಶಿಷ್ಟಾಚಾರ ಅಥವಾ ರಿವಾಜು ಅಂಬೇಡ್ಕರ್‌ರವರಿಗೆ ಭಾರತದ ಸರಕಾರ ಈಗಲೂ ನೀಡಿಲ್ಲವೆಂದೆ ಹೇಳಬೇಕು.

ವರ್ಷಕ್ಕೊಮ್ಮೆ ರಾಷ್ಟ್ರಪತಿಯಾಗಲೀ, ಪ್ರಧಾನ ಮಂತ್ರಿಯಾಗಲೀ ಅಥವಾ ಭಾರತಕ್ಕೆ ಭೇಟಿ ನೀಡುವ ವಿದೇಶಿ ಗಣ್ಯರಾಗಲೀ ಮುಂಬಾಯಿ ದಾದರ್‌ನ ಶಿವಾಜಿ ಪಾರ್ಕ್‌ನಲ್ಲಿರುವ ಚೈತ್ಯ ಭೂಮಿ ಅಥವಾ ಸಮಾದಿಗೆ ಇಲ್ಲವೇ ನಾಗಪುರದ ಪರಿವರ್ತನಾ ಭೂಮಿಗೆ ಭೇಟಿ ನೀಡುವ ಸಂಪ್ರದಾಯ ಅಥವಾ ಪರಿಪಾಠ ನಮ್ಮಲ್ಲಿಲ್ಲ. ಅಂಬೇಡ್ಕರ್ ಹುಟ್ಟು ಹಬ್ಬ ಯಾಕೆ ಪಾರ್ಲಿಮೆಂಟಿಗೆ ನೇತು ಹಾಕಿರುವ ಫೋಟೂ ಅಥವಾ ಪ್ರತಿಮೆಗೆ ಸೀಮಿತಗೊಳ್ಳಬೇಕು? ಲಕ್ಷಗಟ್ಟಲೆ ಜನರು ಮುಂಬಾಯಿ ಅಥವಾ ನಾಗಪುರಕ್ಕೆ ಭೇಟಿ ನೀಡಲು ಸಾಧ್ಯವಾದರೆ ರಾಷ್ಟ್ರದ ಪ್ರಥಮ ಪ್ರಜೆಗೆ ಸಾಧ್ಯವಿಲ್ಲವೆ? ವಾಸ್ತವವಾಗಿ ಗಾಂಧಿಜಯಂತಿ ದಿನ ಗಾಂಧಿಯ ಅಮರ್ ಭೂಮಿಗೆ ಭೇಟಿ ನೀಡುವವರ ಸಂಖ್ಯೆ ಸಾವಿರಕ್ಕೂ ಮಿಕ್ಕಿರುವುದಿಲ್ಲ. ಈ ಭೇಟಿ ಜನಪ್ರಿಯತೆಯ ಮಾನದಂಡವೂ ಹೌದು. ಇದೇ ಸಂದರ್ಭದಲ್ಲಿ ಅಂಬೇಡ್ಕರ್ ಹಲವು ಮನೆಗಳಲ್ಲಿ "ದೇವರ"ಸ್ಥಾನವನ್ನು ಪಡೆದಿರುವುದನ್ನು ಗಮನಿಸಬೇಕು. ಬಹಳಷ್ಟು ಜನರಿಗೆ ಅಂಬೇಡ್ಕರ್ ಒಬ್ಬ "ಪರ್ಯಾಯ ದೇವರು", "ಪರ್ಯಾಯ ಶಕ್ತಿ","ಪರ್ಯಾಯ ಚಿಂತನೆ", "ಪರ್ಯಾಯ ಜೀವನ". ಇಲ್ಲಿರುವ ಚರ್ಚೆಯೆಂದರೆ: ಅಂಬೇಡ್ಕರ್ ಸರಕಾರಕ್ಕೆ ಬರೇ ಒಬ್ಬ ಉತ್ಸವ ಮೂರ್ತಿಯಾಗಿರಬೇಕೇ? ಅಥವಾ ಅವರನ್ನು ಸೀಮಿತವಾಗಿ ದಲಿತರ ರೂಪಕವನ್ನಾಗಿ ಗುರುತಿಸಬೇಕೇ?

ಅಂಬೇಡ್ಕರ್‌ರವರನ್ನು ವರ್ತಮಾನದ ರೂಪಕವಾಗಿ ನೋಡುವುದಾದರೂ ಹೇಗೆ? ಅಥವಾ ನಿರ್ಮಿಸುವುದಾದರೂ ಹೇಗೆ ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಸ್ವಾತಂತ್ರ ಪೂರ್ವ-ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಅಂಬೇಡ್ಕರ್‌ರವರನ್ನು ಬಹುಮುಖ್ಯವಾಗಿ ಮಹಾರಾಷ್ಟ್ರದ "ಮಹರ್"ನಾಯಕನನ್ನಾಗಿ ಮಾತ್ರ ಬಿಂಬಿಸಲು ಅಂದಿನ ಕಾಂಗ್ರೆಸ್ - ರಾಷ್ಟ್ರೀಯ ಹೋರಾಟ ಯತ್ನಿಸಿದ್ದು ತೆರೆದಸಂಗತಿ. ಕಾಂಗ್ರೆಸ್‌ಗೆ ಅಂಬೇಡ್ಕರ್ ಎಲ್ಲಾ ಸಮುದಾಯಗಳ ನಾಯಕನಾಗುವುದು ಇಷ್ಟವಿರಲಿಲ್ಲ. 1930 ಹಾಗೂ 1940ರ ದಶಕದ ಗಾಂಧಿ-ಅಂಬೇಡ್ಕರ್ ಚರ್ಚೆಯನ್ನು ಗಮನಿಸಿದರೆ ಈ ಅಂಶ ಸ್ಪಷ್ಟವಾಗಿ ಕಂಡುಬರುತ್ತದೆ. ಒಂದೆಡೆ "ಮಾನವೀಯ ಮೌಲ್ಯಗಳಿದ್ದರೆ" ,ಇನ್ನೊಂದೆಡೆ "ಸಾಮಾಜಿಕ ನ್ಯಾಯ"ದ ಚರ್ಚೆ ಅಥವಾ ಸಂಕಥನ. ಈ ಸಂವಾದದಲ್ಲಿ ಕಾಂಗ್ರೆಸ್ ಹಾಗೂ ಗಾಂಧಿಗೆ ಅಂಬೇಡ್ಕರ್ ಒಬ್ಬ ಪರ್ಯಾಯವಾದ ನಾಯಕನಾದರೆ ಅದರ ಪ್ರಭಾವ ರಾಷ್ಟ್ರೀಯ ಹೋರಾಟದ ಸಾಮಾಜಿಕ ತಳಹದಿಯ ಮೇಲಾಗಬಹುದೆಂಬ ಹೆದರಿಕೆ ಇಲ್ಲಿ ಅಡಕವಾಗಿತ್ತು.

ಈ ಹೆದರಿಕೆ ಅಂದಿನ ಸಂದರ್ಭದಲ್ಲಿ ಸಹಜವಾಗಿತ್ತು. ಅದೇ ಸಂದರ್ಭದಲ್ಲಿ ಅದಕ್ಕೆ ಅಂಬೇಡ್ಕರ್ ಕೂಡಬೇಕಾಗಿತ್ತು. ಈ ರೀತಿಯ ದ್ವಂದ್ವ ನೀತಿ ಕಾಂಗ್ರೆಸ್ ರಾಜಕಾರಣದಲ್ಲಿ ಹೊಸತೇನಲ್ಲ. ಇದಕ್ಕೆ ಉತ್ತಮ ಉದಾಹರಣೆ ಸಂವಿಧಾನ ರಚನಾ ಸಮಿತಿ. ನೆಹರೂರವರು ಸಂವಿಧಾನ ರಚನಾ ಸಮಿತಿಗೆ ಖ್ಯಾತ ರಾಜಕೀಯ ಶಾಸ್ತ್ರಜ್ಞ ಐವರ್ ಜೆನ್ನಿಂಗ್‌ರನ್ನು ಸೂಚಿಸಿದರೆ, ಗಾಂಧಿಯವರು ಅಂಬೇಡ್ಕರ್ ಪರವಾಗಿದ್ದರು. ಇಂತಹ ಉದಾಹರಣೆಗಳು ಹತ್ತು ಹಲವು. 1946/47ರ ಸುಮಾರಿಗೆ ಒಂದೆಡೆ ಪಟೇಲ್ ಅಂಬೇಡ್ಕರ್‌ರವರ ಸಂಗಾತಿಗಳನ್ನು ಚುನಾವಣೆಯಲ್ಲಿ ಸೋಲಿಸಲು ಯತ್ನಿಸಿದರೆ, ಬಾಬು ರಾಜೇಂದ್ರ ಪ್ರಸಾದ್‌ರವರು ಸಂವಿಧಾನ ರಚನಾ ಸಮಿತಿಯಲ್ಲಿ ಅಬೇಡ್ಕರ್‌ರವರ ತೀವ್ರ ಅವಶ್ಯಕತೆಯನ್ನು ಮನಗಂಡಿದ್ದರು.

ರಾಜೇಂದ್ರ ಪ್ರಸಾದ್ ಜೂನ್ 30 1947ಕ್ಕೆ ಬಿ.ಜಿ. ಖೇರ್‌ಗೆ ಬರೆದ ಪತ್ರವನ್ನು ಗಮನಿಸಿದರೆ ಈ ಅಂಶ ಹಾಗೂ ಕಾಂಗೆಸ್ಸ್‌ನ ದ್ವಂದ್ವ ಸ್ಪಷ್ಟವಾಗಿ ಗೋಚರಿಸುತ್ತದೆ. "Apart from any other consideration we have found Dr. Ambedkar's work both in the Constituent Assembly and the various committees to which he was appointed to he of such an order as to require that we should not he deprived of his services. As you know, he was elected from Bengal and after the division of the Province he has ceased to be a member of the Constituent Assembly. I am anxious that he should attend the next session of the Constituent Assembly commencing from the 14th July and it is therefore necessary that he should be elected immediately." ಅಲ್ಲದೇ ನೆಹರೂ ಸರಕಾರದ ಮಂತ್ರಿಯಾಗಲು ಹತ್ತು ಹಲವು ಶಕ್ತಿಗಳು ಅಂಬೇಡ್ಕರ್ ಪರವಾಗಿ ಕೆಲಸಮಾಡಿದ್ದವು - ಇದಕ್ಕೆ ಗಾಂಧಿಯವರು ಮಾತ್ರ ಕಾರಣರಲ್ಲ. ಪಟೇಲ್, ಎಸ್.ಕೆ ಪಾಟೀಲ್, ಆಚಾರ್ಯ ದಂಡೆ, ಆಚಾರ್ಯ ಕೃಪಲಾನಿ ಇತ್ಯಾದಿ.. 1952ರ ಪ್ರಥಮ ಮಹಾ ಚುನಾವಣೇಯಲ್ಲಿ ಅಂಬೇಡ್ಕರ್‌ರವರನ್ನ ಸೋಲಿಸಿದ್ದು ಬೇರಾರು ಅಲ್ಲ. ಅಂಬೇಡ್ಕರ್‌ರಿಂದ ಲಾಭ ಪಡೆದ ಇದೇ ಕಾಂಗ್ರೆಸ್. ಇದಕ್ಕೆ ಕಾಂಗ್ರೆಸ್‌ನ ಅಸಹನೆ, ದ್ವಂದ್ವ ನೀತಿ, ಯಜಮಾನಿಕೆ ಹಾಗೂ ಕುಬ್ಜ ರಾಜಕಾರಣ ಕಾರಣವೆನ್ನಬ

ಅಂಬೇಡ್ಕರ್ ಹುಟ್ಟು ಹಬ್ಬ ಯಾಕೆ ಪಾರ್ಲಿಮೆಂಟಿಗೆ ನೇತು ಹಾಕಿರುವ ಫೋಟೂ ಅಥವಾ ಪ್ರತಿಮೆಗೆ ಸೀಮಿತಗೊಳ್ಳಬೇಕು? ಲಕ್ಷಗಟ್ಟಲೆ ಜನರು ಮುಂಬಾಯಿ ಅಥವಾ ನಾಗಪುರಕ್ಕೆ ಭೇಟಿ ನೀಡಲು ಸಾಧ್ಯವಾದರೆ ರಾಷ್ಟ್ರದ ಪ್ರಥಮ ಪ್ರಜೆಗೆ ಸಾಧ್ಯವಿಲ್ಲವೆ? ವಾಸ್ತವವಾಗಿ ಗಾಂಧಿ ಜಯಂತಿ ದಿನ ಗಾಂಧಿಯ ಅಮರ್ ಭೂಮಿಗೆ ಭೇಟಿ ನೀಡುವವರ ಸಂಖ್ಯೆ ಸಾವಿರಕ್ಕೂ ಮಿಕ್ಕಿರುವುದಿಲ್ಲ. ಈ ಭೇಟಿ ಜನಪ್ರಿಯತೆಯ ಮಾನದಂಡವೂ ಹೌದು. ಇದೇ ಸಂದರ್ಭದಲ್ಲಿ ಅಂಬೇಡ್ಕರ್ ಹಲವು ಮನೆಗಳಲ್ಲಿ "ದೇವರ" ಸ್ಥಾನವನ್ನು ಪಡೆದಿರುವುದನ್ನು ಗಮನಿಸಬೇಕು. ಬಹಳಷ್ಟು ಜನರಿಗೆ ಅಂಬೇಡ್ಕರ್ ಒಬ್ಬ "ಪರ್ಯಾಯ ದೇವರು", "ಪರ್ಯಾಯ ಶಕ್ತಿ","ಪರ್ಯಾಯ ಚಿಂತನೆ", "ಪರ್ಯಾಯ ಜೀವನ". ಇಲ್ಲಿರುವ ಚರ್ಚೆಯೆಂದರೆ: ಅಂಬೇಡ್ಕರ್ ಸರಕಾರಕ್ಕೆ ಬರೇ ಒಬ್ಬ ಉತ್ಸವ ಮೂರ್ತಿಯಾಗಿರಬೇಕೆ? ಅಥವಾ ಅವರನ್ನು ಸೀಮಿತವಾಗಿ ದಲಿತರ ರೂಪಕವನ್ನಾಗಿ ಗುರುತಿಸಬೇಕೇ?

ಹುದು. ಇದೇ ಸಂದರ್ಭದಲ್ಲಿ ಅಂಬೇಡ್ಕರ್‌ರವರನ್ನು "ಸೀಮಿತ" ನ್ಯಾಯಕನಾಗಿಸುವಲ್ಲಿ ಅಂದಿನ ಭೂಮಾಲೀಕರು, "ಬಾಬುಗಳು", ಹಾಗೂ "ಮಧ್ಯಮ ವರ್ಗ"ದ ಪಾತ್ರವಿರುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಅಂಬೇಡ್ಕರೋತ್ತರ ಕಾಲಾವಧಿಯಲ್ಲಿ ಅಂಬೇಡ್ಕರ್‌ರವರನ್ನು ಒಂದೇ ಒಂದು ಸೀಮಿತ ರೂಪಕವಾಗಿ ವಿಶ್ಲೇಷಿಸಲು ಸಾಧ್ಯವಿಲ್ಲ. ಇಲ್ಲಿ ಬಹುರೂಪಿ ಅಂಬೇಡ್ಕರ್ ಉದ್ಭವಿಸಿರುವುದನ್ನು ನಾವು ಗಮನಿಸಬೇಕು. ಒಂದೆಡೆ 'ಅಂಬೇಡ್ಕರ್ ಸರಕಾರಿ ಅಂಬೇಡ್ಕರ್" ಆಗಿರುವುದು ವಾಸ್ತವ. ಅದಕ್ಕಿಂತಲೂ ಹೆಚ್ಚಾಗಿ ಅಂಬೇಡ್ಕರ್ "ದಲಿತ ಆಧುನಿಕತೆ"ಯ ರೂಪಕವಾಗಿರುವುದು ಕೂಡ ಅಷ್ಟೇ ಸ್ಪಷ್ಟ. ಅಷ್ಟು ಮಾತ್ರವಲ್ಲದೆ ಅಂಬೇಡ್ಕರ್ ಹೊಸ ಸಾಮಾಜಿಕ ಐಡೆಂಟಿಟಿಯ, ಕ್ರಿಯಾತ್ಮಕ ಚಿಂತನೆಗಳ, ನಾಗರಿಕ ಸಮಾಜದ ರೂಪಕನೂ ಆಗಿರುವುದನ್ನು ಕಡೆಗಣಿಸಬಾರದು.

ಇದೇ ಸಂದರ್ಭದಲ್ಲಿ ಒಂದು ಸಾಮಾಜಿಕ ದುರಂತವನ್ನು ಮರೆಯಬಾರದು. ಆ ದುರಂತವೆಂದರೆ ಅಂಬೇಡ್ಕರ್ ಇವತ್ತಿಗೂ ಸಮಷ್ಟಿ ಸಮುದಾಯಗಳ ರೂಪ ಕವಾಗದಿರುವ ಅಂಶ. ದಲಿತೇತರರಿಗೆ ಅಂಬೇಡ್ಕರ್ ಈಗಲೂ "ಹೊರಗಿನವ","ಬೇರೆಯವ", "ಅನ್ಯ". ಎಷ್ಟೋ ಸಮುದಾಯಗಳು ಅಂಬೇಡ್ಕರ್‌ರವನ್ನು ಇನ್ನೂ ಕೂಡ "ತಮ್ಮವವೆಂದು" ಸ್ವಿಕರಿಸಲಿಲ್ಲವೆಂದೇ ಹೇಳಬೇಕು. ಇದು ಅಂಬೇಡ್ಕರ್‌ರವರಿಗಿಂತ ಅಂಬೇಡ್ಕರೋತ್ತರ ರಾಜಕಾರಣದ ಫಲಶ್ರುತಿ. ಅಂಬೇಡ್ಕರ್‌ರನ್ನು ದಲಿತ ನಾಯಕನಾಗಿ ಮತ್ತೆ ಮತ್ತೆ ಸ್ಥಾಪಿಸುವ ಆಥವಾ ಸ್ಥಾವರಗೊಳಿಸುವ ಯತ್ನ ಒಂದು ಕಾರಣವಾದರೆ, ದಲಿತ ಆಧುನಿಕತೆಯ ಅಪೂರ್ಣಗೊಂಡಿರುವ ಪ್ರಕ್ರಿಯೆ ಇನ್ನೊಂದುಕಾರಣವೆನ್ನ ಬಹುದು.

"ದಲಿತ ಆಧುನಿಕತೆ" ಎಂಬುವುದು ಒಂದು ಹಂತವಲ್ಲ, ಅದೊಂದು ವಾಸ್ತವ ಪ್ರಕ್ರಿಯೆ ಹಾಗೂ ಪರಿಕಲ್ಪನೆ. ಈ ಪ್ರಕ್ರಿಯೆಗೆ ಪುಷ್ಠಿ ದೊರೆತದ್ದು ವಸಾಹತು ಕಾಲದಲ್ಲಿ ದಲಿತ ಆಧುನಿಕತೆಗೆ ಹೊಸತನವನ್ನು ನೀಡಿದವರು ಅಂಬೇಡ್ಕರ್. ಕಾಲಾಂತರದಲ್ಲಿ ಅವರೇ ಅದರ ರೂಪಕವಾದರು. ವಿಶಿಷ್ಟವೆಂದರೆ ಈ ಆಧುನಿಕತೆ ದಲಿತ ಬಂಡವಾಳಶಾಹಿಯ ಕೊರತೆ ನಡುವೆ, ವೈರುದ್ಧಗಳ ನಡುವೆ, ವಸಾಹತುಶಾಹಿಯ ಚೌಕಟ್ಟಿನಲ್ಲಿ, ಹಾಗೂ ದಲಿತೇತರರಿಗೆ ಮುಖಾಮುಖಿಯಾಗಿ ಬೆಳೆಯಿತು. ಗಾಂಧಿ–ನೆಹರೂರವರ ಆಧುನಿಕತೆಯನ್ನು, ಪರಿಕಲ್ಪನೆಗೆ ಪರ್ಯಾಯವಾಗಿ ಹಾಗೂ ಅದನ್ನು ಪ್ರಶ್ನಿಸುತ್ತಾ ಬೆಳೆಯಿತು.

ವಿಚಿತ್ರವೆಂದರೆ ದಲಿತ ಆಧುನಿತಕತೆಯು ವಸಾಹತುಶಾಹಿ ಆಧುನಿಕತೆಯ ಪರಿಕಲ್ಪನೆಯನ್ನು ತಿರಸ್ಕರಿಸದೆ ಜೊತೆ ಜೊತೆಯಾಗಿ ಬೆಳೆಯಿತು, ಕೆಲವೊಮ್ಮೆ ವಸಾಹತುಶಾಹಿಗೆ ಜೋತುಬಿದ್ದು ಬೆಳೆಯಿತು. ಆದಕಾರಣ ವಸಾಹತುಶಾಹಿ ಆಧುನಿಕತೆಯ ಪ್ರತೀಕವಾಗಿದ್ದ ಪಾರ್ಲಿಮೆಂಟರಿ ಸಂಸ್ಥೆಗಳನ್ನು, ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು, ಪಾಶ್ಚಾತ್ಯ ಜ್ಞಾನವನ್ನು, ಪಾಶ್ಚಾತ್ಯ ಸಂಕೇತಗಳನ್ನು ತಿರಸ್ಕರಿಸಲೇ ಇಲ್ಲ. ಹೊರತು ಅವುಗಳನ್ನು ಸಾರಸಗಟಾಗಿ ಯಾವುದೇ ಮುಲಾಜಿಲ್ಲದೇ ಹಾಗೂ ಪ್ರಶ್ನೆಗಳಿಲ್ಲದೆ ಒಪ್ಪಿಕೊಂಡಿತ್ತು, ಅದರ ಭಾಗವಾಯಿತು. ಅದರರ್ಥ ಅದು

ಅಂಬೇಡ್ಕರೋತ್ತರ ಕಾಲಾವಧಿಯಲ್ಲಿ ಅಂಬೇಡ್ಕರ್‌ರವರನ್ನು ಒಂದೇ ಒಂದು ಸೀಮಿತ ರೂಪಕವಾಗಿ ವಿಶ್ಲೇಷಿಸಲು ಸಾಧ್ಯವಿಲ್ಲ. ಇಲ್ಲಿ ಬಹುರೂಪಿ ಅಂಬೇಡ್ಕರ್ ಉದ್ಭವಿಸಿರುವುದನ್ನು ನಾವು ಗಮನಿಸಬೇಕು. ಒಂದೆಡೆ 'ಅಂಬೇಡ್ಕರ್ ಸರಕಾರಿ ಅಂಬೇಡ್ಕರ್" ಆಗಿರುವುದು ವಾಸ್ತವ. ಅದಕ್ಕಿಂತಲೂ ಹೆಚ್ಚಾಗಿ ಅಂಬೇಡ್ಕರ್ "ದಲಿತ ಆಧುನಿಕತೆ"ಯ ರೂಪಕವಾಗಿರುವುದು ಕೂಡ ಅಷ್ಟೇ ಸ್ಪಷ್ಟ. ಅಷ್ಟು ಮಾತ್ರವಲ್ಲದೆ ಅಂಬೇಡ್ಕರ್ ಹೊಸ ಸಾಮಾಜಿಕ ಐಡೆಂಟಿಟಿಯ, ಕ್ರಿಯಾತ್ಮಕ ಚಿಂತನೆಗಳ, ನಾಗರೀಕ ಸಮಾಜದ ರೂಪಕನೂ ಆಗಿರುವುದನ್ನು ಕಡೆಗಣಿಸಬಾರದು. ಇದೇ ಸಂದರ್ಭದಲ್ಲಿ ಒಂದು ಸಾಮಾಜಿಕ ದುರಂತವನ್ನು ಮರೆಯಬಾರದು. ಆ ದುರಂತವೆಂದರೆ ಅಂಬೇಡ್ಕರ್ ಇವತ್ತಿಗೂ ಸಮಷ್ಟಿ ಸಮುದಾಯಗಳ ರೂಪ ಕವಾಗದಿರುವ ಅಂಶ. ದಲಿತೇತರರಿಗೆ ಅಂಬೇಡ್ಕರ್ ಈಗಲೂ "ಹೊರಗಿನವ","ಬೇರೆಯವ", "ಅನ್ಯ". ಎಷ್ಟೋ ಸಮುದಾಯಗಳು ಅಂಬೇಡ್ಕರ್‌ರವನ್ನು ಇನ್ನೂ ಕೂಡ "ತಮ್ಮವವೆಂದು" ಸ್ವಿಕರಿಸಲಿಲ್ಲವೆಂದೇ ಹೇಳಬೇಕು.

ತನ್ನ ಸ್ವಂತಿಕೆಯನ್ನು ಅಥವಾ ಸ್ವಾಯತ್ತವನ್ನು ಉಳಿಸಲಿಲ್ಲ ವೆಂದಲ್ಲ. ಅದೇ ಸಂದರ್ಭದಲ್ಲಿ ಸಾಮಾಜಿಕ ನೆಲೆಗಟ್ಟಿನಲ್ಲಿ ಐತಿಹಾಸಿಕವಾಗಿದ್ದ ಕೆಲವು ನಂಬಿಕೆಗಳನ್ನು, ಸಂಪ್ರದಾಯವನ್ನು ಅದು ಪ್ರಶ್ನಿಸುತ್ತಾ ಹೋಯಿತು. ಆದಕಾರಣ ಭಾರತದಲ್ಲಿದ್ದ ಜಾತಿ ಪದ್ಧತಿ, ಹಿಂದೂ ಧರ್ಮ ಹಾಗೂ ಅದರ ಆಚರಣೆಗಳು ಅದರ ವಿಮರ್ಶೆಗೊಳಗಾಯಿತು.

ಇದರಲ್ಲಿ ಜಾತಿಯೊಂದಿಗೆ ರಾಮಾಯಣದ "ರಾಮ"ನ ಕುರಿತಾದ ಪರಿಕಲ್ಪನೆಯ ಉಲ್ಲೇಖ ಮುಖ್ಯವೆ ನಿಸುತ್ತದೆ. ವಾಸ್ತವವಾಗಿ ಅಂಬೇಡ್ಕರ್ ತಮ್ಮ ರಿಡ್ಲ್ ಆಫ್ ರಾಮ್‌ನಲ್ಲಿ ರಾಮನ ಕುರಿತಾದ ಸಾಂಪ್ರದಾಯಿಕ ಪರಿಕಲ್ಪನೆಗಳನ್ನು, ಪಡಿಯಚ್ಚುಗಳನ್ನು ವಿಮರ್ಶಿಸುತ್ತಾ ತಿರಸ್ಕರಿಸುವುದು "ದಲಿತ–ಆಧುನಿಕತೆ"ಯ ಭಾಗವಾಗಿ ಎಂಬುವುದನ್ನು ನಾವು ಗಮನಿಸಬೇಕು. ಈ ತಿರಸ್ಕರಣೆಯಲ್ಲಿ ಸಂಶೋಧನೆ ಅಡಗಿದೆ, ಪರ್ಯಾಯ ಆಲೋಚನೆಗಳು ಅಡಗಿವೆ, ದಲಿತ ದೃಷ್ಟಿಕೋನವಿದೆ ಹಾಗೂ ಜ್ಞಾನವಿದೆ, ವಿಶಾಲವಾದ ವಿವೇಚನೆ ಅಡಗಿದೆ. ಈ ಪುಸ್ತಕದಲ್ಲಿ "ರಾಮ" ಅಯೋಧ್ಯೆಯಲ್ಲಿಯೇ ಜನಿಸಿದ ಎಂಬ ವಾದವನ್ನು ಅಂಬೇಡ್ಕರ್ ತಿರಸ್ಕರಿಸುತ್ತಾರೆ. ರಾಜ್ಯವನ್ನು ಬಹುಕಾಲ ಆಳಿದ, ರಾಮ "ಶಾಖಾಹಾರಿ" ಯಾಗಿದ್ದ, "ಪತ್ನಿಗೆ ವಿಧೇಯನಾಗಿದ್ದ, ಶಂಭೂಕನನ್ನು ನೇರವಾಗಿಕೊಂದ ಎಂಬೆಲ್ಲಾ ವಾದಗಳನ್ನು ತಿರಸ್ಕರಿಸುತ್ತಾರೆ ಹಾಗೂ ಆಳವಾದ ವಿಮರ್ಶೆಯನ್ನು ಮಾಡುತ್ತಾರೆ. ಆಸಕ್ತಿದಾಯಕ ವಿಷಯ ವೆಂದರೆ ಇತಿಹಾಸದ ಪ್ರಪ್ರಥಮ ಧರಣಿ ಸತ್ಯಾಗ್ರಹವನ್ನು "ರಾಮ"ನ "ಒಂದು ದಿನದ ಆಳ್ವಿಕೆ"ಯಲ್ಲಿ ನೋಡುತ್ತಾರೆ.

ಈ ಸಂದರ್ಭದಲ್ಲಿ ಅಂಬೇಡ್ಕರ್ ರವರನ್ನು ಉಲ್ಲೇಖಿಸುವುದು ಉತ್ತಮ: As a matter of fact Rama never functions, as a King. He was a nominal King. The administration as Valmiki states were entrusted to Bharata his brother. He had freed himself from the cares and worries about his kingdom and his subjects. Valmiki has very minutely described the daily life of Rama after he became King. According to that account the day was divided into two parts. Up to forenoon and afternoon. From morning to forenoon he was engaged in performing religious rites and ceremonies and offering devotion. The afternoon he spent alternately in the company of Court jesters and in the Zenana. When he got tired of the Zenana he joined the company of jesters and when he got tired of jesters he went back to the Zenana. Valmiki also

gives a detailed description of how Rama spent his life in the Zenana. This Zenana was housed in a park called Ashoka Vana. There Rama, used to take his meal. The food according to Valmiki consisted of all kinds of delicious viands. They included flesh and fruits and liquor. Rama was not a teetotaller. He drank liquor copiously and Valmiki records that Rama saw to it that Sita joined with him in his drinking bouts. From the description of the Zenana of Rama as given by Valmiki it was by no means a mean thing. There were Apsaras, Uraga and Kinnari accomplished in dancing and singing. There were other beautiful women brought from different parts. Rama sat in the midst of these women drinking and dancing. They pleased Rama and Rama garlanded them. Valmiki calls Rama as a 'Prince among women's men '. This was not a day's affair. It was a regular course of his life.

As has already been said Rama never attended to public business. He never observed the ancient rule of Indian kings of hearing the wrongs of his subjects and attempting to redress them. Only one occasion has been recorded by Valmiki when he personally heard the grievance of his subjects. But unfortunately the occasion turned out to be a tragic one. He to1ok upon himself to redress the wrong but in doing so committed the worst crime that history has ever recorded. The incident is known as the murder of Sambuka the Shudra. It is said by Valmiki that in Rama's reign there were no premature deaths in his kingdom. It happened, however, that a certain Brahman's son died in a premature death. The bereaved father carried his body to the gate of the king's palace, and placing it there, cried aloud and bitterly reproached Rama for the death of his son, saying that it must be the consequence of some sin committed within his realm, and that the king himself was guilty if he did not punish it: and Finally threatened to end his life there by sitting dharna (hunger-strike) against Rama unless his son was restored to life.

ಈ ರೀತಿಯ ವಿಮರ್ಶಾತ್ಮಕ ಚಿಂತನೆ ಅಂಬೇಡ್ಕರೋತ್ತರ ಕಾಲಾವಧಿಯಲ್ಲಿ ದಲಿತರಲ್ಲಿ ನವ-ದಲಿತ ಪ್ರಜ್ಞೆಗೆ, ದಲಿತ ಐಡೆಂಟಿಟಿಗೆ ದಾರಿ ಮಾಡಿಕೊಟ್ಟದ್ದು ಸಹಜ. ಅಂಬೇಡ್ಕರೋತ್ತರ ಕಾಲಾವಧಿಯಲ್ಲಿ "ದಲಿತ ಆಧುನಿಕತೆ" ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತಗೊಳ್ಳಲಿಲ್ಲ: ಸಾಹಿತ್ಯ, ಬದುಕು, .ಜೀವನ ಶೈಲಿ, ರಾಜಕೀಯ, ಅಧಿಕಾರ, ಸಾಮಾಜಿಕ ಚಳುವಳಿ, ನಾಗರಿಕ ಅಥವಾ ಪೌರ ಸಮಾಜ ಇತ್ಯಾದಿಗೆಲ್ಲಾ ಹರಡಿತ್ತು. ಅಲ್ಲದೇ ಅದು ದಲಿತ ದೃಷ್ಟಿಕೋನದ ಪರ್ಯಾಯ ಆಲೋಚನೆಗಳಿಗೆ ದಾರಿ ಮಾಡಿಕೊಟ್ಟಿತ್ತು. ಅಲ್ಲದೇ ಇದೇ ಸಂದರ್ಭದಲ್ಲಿ ಶ್ರೇಷ್ಠ ಮಟ್ಟದ ಚಿಂತಕರ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿತ್ತು.

ಅದರಲ್ಲಿ ಕನ್ನಡದ ದೇವನೂರು ಮಹಾದೇವರವರ ಕುಸುಮ ಬಾಲೆ, ಒಡಲಾಳ ಇತ್ಯಾದಿ ಮುಖ್ಯವೆನಿಸುತ್ತದೆ. "ದಲಿತ ಸಾಹಿತ್ಯ", "ದಲಿತ ಚಳುವಳಿ, ದಲಿತ ಸಂಘಟನೆಗಳು, ದಲಿತ ದೃಷ್ಟಿಕೋನದ ಭಾಷೆಗಳು, ದಲಿತ ಸಂಕಥನಗಳು, ದಲಿತ ಚಿಂತನಾ ಶಾಲೆಗಳು, ದಲಿತ ಮಾನವ ಹಕ್ಕು ಸಂಘಟನೆಗಳು ಈ ಆಧುನಿಕತೆಯ ಫಲಶ್ರುತಿ. ಇವತ್ತು ಭಾರತಾದ್ಯಂತ ಹರಡಿರುವ ಅಂಬೇಡ್ಕರ್ ಸಂಘಗಳು, ಯುವಕ ಮಂಡಲಗಳು, ನಾಮಫಲಕಗಳು, ಸರಕಾರೇತರ ಸಂಘಸಂಸ್ಥೆಗಳು ಈ ಆಧುನಿಕತೆಯನ್ನು ಹಾಗೂ ಆಂಬೇಡ್ಕರ್‌ರವರ ವಿವಿಧ ರೂಪಕಗಳನ್ನು ದೃಢಪಡಿಸುತ್ತವೆ, ಇವತ್ತು ಭಾರತದಲ್ಲಿ ಕಡಿಮೆಯೆಂದರೂ ಒಂದು ಲಕ್ಷಕ್ಕೂ ಮಿಕ್ಕಿ ಅಂಬೇಡ್ಕರ್ ಯುವಕ ಮಂಡಲಗಳಿವೆ, ಅಷ್ಟೇ ಸಂಖ್ಯೆಯ ಸರಕಾರೇತರ ಸಂಸ್ಥೆಗಳಿವೆ. ಆಶ್ಚರ್ಯವೆಂದರೆ ಈ ಸಂಸ್ಥೆಗಳು ಅಂತರ ರಾಷ್ಟ್ರೀಯ ಮಟ್ಟದಲ್ಲೂ ಬೆಳೆದಿವೆ.

"ದಲಿತ ಸಾಹಿತ್ಯ", "ದಲಿತ ಚಳುವಳಿ, ದಲಿತ ಸಂಘಟನೆಗಳು, ದಲಿತ ದೃಷ್ಟಿಕೋನದ ಭಾಷೆಗಳು, ದಲಿತ ಸಂಕಥನಗಳು, ದಲಿತ ಚಿಂತನಾ ಶಾಲೆಗಳು, ದಲಿತ ಮಾನವ ಹಕ್ಕು ಸಂಘಟನೆಗಳು ಈ ಆಧುನಿಕತೆಯ ಫಲಶ್ರುತಿ. ಇವತ್ತು ಭಾರತಾದ್ಯಂತ ಹರಡಿರುವ ಅಂಬೇಡ್ಕರ್ ಸಂಘಗಳು, ಯುವಕ ಮಂಡಲಗಳು, ನಾಮಫಲಕಗಳು, ಸರಕಾರೇತರ ಸಂಘ ಸಂಸ್ಥೆಗಳು ಈ ಆಧುನಿಕತೆಯನ್ನು ಹಾಗೂ ಆಂಬೇಡ್ಕರ್‌ರವರ ವಿವಿಧ ರೂಪಕಗಳನ್ನು ದೃಢ ಪಡಿಸುತ್ತವೆ. ಇವತ್ತು ಭಾರತದಲ್ಲಿ ಕಡಿಮೆಯೆಂದರೂ ಒಂದು ಲಕ್ಷಕ್ಕೂ ಮಿಕ್ಕಿ ಅಂಬೇಡ್ಕರ್ ಯುವಕ ಮಂಡಲಗಳಿವೆ, ಅಷ್ಟೇ ಸಂಖ್ಯೆಯ ಸರಕಾರೇತರ ಸಂಸ್ಥೆಗಳಿವೆ. ಆಶ್ಚರ್ಯ ವೆಂದರೆ ಈ ಸಂಸ್ಥೆಗಳು ಅಂತರ ರಾಷ್ಟ್ರೀಯ ಮಟ್ಟದಲ್ಲೂ ಬೆಳೆದಿವೆ. ಇತ್ತೀಚೆಗೆ ಹುಟ್ಟಿಕೊಂಡ ಇಂಟರ್ ನ್ಯಾಶನಲ್ ದಲಿತ್ ಸಾಲಿಡಾರಿಟಿ ನೆಟ್‌ವರ್ಕ್ ಇದಕ್ಕೊಂದು ಉದಾ ಹರಣೆ. ಇವೆಲ್ಲನ್ನು ಗಮನಿದರೆ ಅಂಬೇಡ್ಕರ್ ವರ್ತಮಾನದಲ್ಲಿ, ಅದರಲ್ಲೂ "ದಲಿತ – ಆಧುನಿಕತೆ"ಯ ಚೌಕಟ್ಟಿನಲ್ಲಿ ಬಹುರೂಪಿಯಾಗುತ್ತಾರೆ:

ಇತ್ತೀಚೆಗೆ ಹುಟ್ಟಿಕೊಂಡ ಇಂಟರ್ ನ್ಯಾಶನಲ್ ದಲಿತ್ ಸಾಲಿಡಾರಿಟಿ ನೆಟ್‌ವರ್ಕ್ ಇದಕ್ಕೊಂದು ಉದಾಹರಣೆ. ಇವೆಲ್ಲನ್ನು ಗಮನಿದರೆ ಅಂಬೇಡ್ಕರ್ ವರ್ತಮಾನದಲ್ಲಿ, ಅದರಲ್ಲೂ "ದಲಿತ – ಆಧುನಿಕತೆ"ಯ ಚೌಕಟ್ಟಿನಲ್ಲಿ ಬಹುರೂಪಿಯಾಗುತ್ತಾರೆ: ಐಡೆಂಟಿಟಿಯ ರೂಪಕ, ದಲಿತತ್ವದ ರೂಪಕ, ಪರ್ಯಾಯ ಚಿಂತನೆಗಳ ರೂಪಕ, ದಲಿತ ಚಳುವಳಿಗಳ ರೂಪಕ, ದಲಿತ ಜ್ಞಾನದ ರೂಪಕ, ಪ್ರಜಾಪ್ರಭುತ್ವ ಅವಕಾಶಗಳ ರೂಪಕ ಇತ್ಯಾದಿ. ಈ ಸಂದರ್ಭದಲ್ಲಿ ಅಂಬೇಡ್ಕರ್‌ರವರ ಭಾವ ಚಿತ್ರ, ಅವರ ಹೆಸರಿನ ಯುವಕ ಮಂಡಲಗಳು, ಪ್ರತಿಮೆಗಳು ಅಂಬೇಡ್ಕರೋತ್ತರ ಕಾಲಾವಧಿಯಲ್ಲಿನ ಐಡೆಂಟಿಟಿಯ ಹಾಗೂ ಆಧುನಿಕತೆಯ ಸಂಕೇತಗಳಾದವು. ಭಾರತಾದ್ಯಂತ ನಡೆಯುತ್ತಿರುವ ದಲಿತ ಹಾಗೂ ಸವರ್ಣಿಯರ ಸಂಘರ್ಷಣೆಗಳ ಸಂದರ್ಭದಲ್ಲಿ ಇವುಗಳು ನಿಶ್ಚಳವಾಗಿ ಕಂಡುಬರುತ್ತವೆ.

ಇದರರ್ಥ ದಲಿತ ಆಧುನಿಕತೆಯ ಪ್ರಕ್ರಿಯೆ ಸಂಪೂರ್ಣಗೊಂಡಿದೆ ಎಂದರ್ಥವಲ್ಲ. ಆಧುನಿಕತೆಯೇ ಮುಗಿಯದ ಅಧ್ಯಾಯವಾಗಿರುವ ಸಂದರ್ಭದಲ್ಲಿ, ದಲಿತ ಆಧುನಿಕತೆ ಹೇಗೆ ಅಂತ್ಯಗೊಳ್ಳಬಹುದು? ವಾಸ್ತವವಾಗಿ ದಲಿತ ಆಧುನಿಕತೆ ಈಗಲೂ ಅಸಂಪೂರ್ಣಗೊಂಡಿರುವ ಯೋಜನೆ ಹಾಗೂ ಪ್ರಕ್ರಿಯೆ. ಕಾರಣವಿಷ್ಟೆ: ನೂರಾರು ದಲಿತ ಸಮುದಾಯಗಳು ಈಗಲೂ ಸ್ವಾಯತ್ತ, ಸ್ವತಂತ್ರವಾದ ಸಮುದಾಯಗಳಾಗಿ ರೂಪುಗೊಂಡಿಲ್ಲ. ದಿನನಿತ್ಯ ದಲಿತರ ಮೇಲಾಗುತ್ತಿರುವ ದೌರ್ಜನ್ಯವನ್ನೆ ಗಮನಿಸಿದರೆ ಈ ಅಂಶ ಸ್ಪಷ್ಟವಾಗಿ ಗೋಚರಿಸುತ್ತದೆ. ಪ್ರತಿ ನಿತ್ಯ ಕಡಿಮೆಯೆಂದರೂ ಒಬ್ಬ ದಲಿತ ಮಹಿಳೆ ದೌರ್ಜನ್ಯಕ್ಕೊಳಗಾಗುತ್ತಾಳೆ, ಪ್ರತೀ ಘಂಟೆಗೊಮ್ಮೆ ದಲಿತನೊಬ್ಬ ಅವಮಾನಿತನಾಗುತ್ತಾನೆ,

ಎರಡನೇದಾಗಿ ಇವತ್ತು ದಲಿತ ಪ್ರಜ್ಞೆ ಏಕರೂಪಿಯಾಗಿಲ್ಲ, ಇವತ್ತಿನ ಎಡ-ಬಲ ಚರ್ಚೆಗಳ ಸಂದರ್ಭದಲ್ಲಿ ಯಾರು ದಲಿತ ಐಡೆಂಟಿಟಿಯ ರೂಪಕವಾಗಬಹುದೆಂಬ ಗುಮಾನಿ ಬರುವುದು ಸಹಜ. ಅಲ್ಲದೇ ಯಾವ ದಲಿತವಾದಗಳನ್ನು, ಸಂಕಥನಗಳನ್ನು ನೈಜ ಹಾಗೂ ಪ್ರಾತಿನಿಧಿಕವಾಗಿ ತೆಗೆದುಕೊಳ್ಳಬೇಕೆಂಬ ಗೊಂದಲವಿದೆ. ಅಲ್ಲದೇ ಯಾವುದು ನೈಜವಾದ "ದಲಿತದ್ವನಿ" ಎಂಬ ಮತ್ತೊಂದು ಗೊಂದಲವಿದೆ. ವಾಸ್ತವವಾಗಿ ಈ ಎಡ-ಬಲ ಚರ್ಚೆಗಳು ದಲಿತ ಚಳುವಳಿಗಳನ್ನು , ದಲಿತತ್ವವನ್ನು ಹಾಗೂ ದಲಿತ ಐಡೆಂಟಿಟಿಯನ್ನು ಕ್ಷೀಣಗೊಳಿಸಿದ್ದನ್ನು ನಾವು ಅವಗಣನೆ ಮಾಡಬಾರದು.

ಮೂರನೇದಾಗಿ ಈ ದಲಿತ ಆಧುನಿಕತೆ ವಿಶಾಲವಾದ ಮಾರುಕಟ್ಟೆಯಲ್ಲಿ ದಲಿತರ ಯಜಮಾನಿಕೆಯನ್ನಾಗಲಿ, ಪ್ರಭುತ್ವವನ್ನಾಗಲೀ ಪ್ರತಿಪಾದಿಸುವುದಿಲ್ಲ. ಬಹಳಷ್ಟು ಸಲ ಅದರ ವಿಶ್ಲೇಷಣೆ ಸೀಮಿತಗೊಳ್ಳುವುದು ಸಮಾಜೋ-ರಾಜಕೀಯ ವಿಷಯದ ಮೇಲೆ- ಅದು ಮೀಸಲಾತಿ ಇರಬಹುದು, ಸರಕಾರಿ ಶಿಕ್ಷಣವಿರಬಹುದು, ಅಥವಾ ಭೂ

ಹಂಚಿಕೆ ಇರಬಹುದು, ಇಲ್ಲವೇ ಜಾಗತೀಕರಣವನ್ನು ದಲಿತರು ಒಪ್ಪಿಕೊಳ್ಳಬೇಕೆ? ಇಲ್ಲವೇ? ಇತ್ಯಾದಿ. ಆರ್ಥಿಕ ಸಬಲೀಕರಣ ಎಂಬ ವಾದಗಳೂ ದಲಿತ ಸಂಕಥನದಲ್ಲಿ ಕೆಲವೊಮ್ಮೆ ಬರುತ್ತಿರುತ್ತವೆ. ಆದರೆ ಮಾರುಕಟ್ಟೆಯಲ್ಲಿ ದಲಿತರ ಯಜಮಾನಿಕೆಯ ಅವಶ್ಯಕತೆಯನ್ನು ಪ್ರತಿಪಾದಿಸುವುದಿಲ್ಲ-ಆದಕಾರಣ ಇವತ್ತು ರಾಷ್ಟ್ರೀಯ ಮಾರುಕಟ್ಟೆಯಲ್ಲಿ ದಲಿತರಿಲ್ಲ- ಅವರ ಬ್ಯಾಂಕ್‌ಗಳಿಲ್ಲ, ಮಾಲ್‌ಗಳಿಲ್ಲ, ವಾಣಿಜ್ಯ ಮಳಿಗೆಗಳಿಲ್ಲ. ಗಣಿಗಳಿಲ್ಲ. ಇದರ ಪರಿಣಾಮವೆಂದರೆ ದಲಿತ ಅಜೆಂಡಾಗಳ ಅಪಹರಣ. ಇವತ್ತು ದಲಿತ ಅಜೆಂಡಾಗಳನ್ನು ಯಾರು ಬೇಕಾದರೂ ಯಾವುದೇ ವಿರೋಧವಿಲ್ಲದೆ ಅಪಹರಿಸಬಹುದು.

ದಲಿತ ಆಧುನಿಕತೆ ಅಂಬೇಡ್ಕರ್‌ರವರನ್ನು ಯಾವುದೇ ತಕರಾರುಗಳಿಲ್ಲದೇ ಯಥಾವತ್ತಾಗಿ ಒಪ್ಪಿಕೊಳ್ಳುವ ಸಂದರ್ಭದಲ್ಲಿ ಅಂಬೇಡ್ಕರ್‌ರವರಿಗಿದ್ದ ಕೆಲವು ಸಂದೇಹಗಳನ್ನು ಎತ್ತಿಹಿಡಿಯುವುದಿಲ್ಲ, ಹೊರತು ಮೌನವಾಗಿರುತ್ತದೆ. ಪಂಚಾಯತಿ ವ್ಯವಸ್ಥೆ ಬಗ್ಗೆ ಅಂಬೇಡ್ಕರ್‌ಗಿದ್ದ ಸಂದೇಹವನ್ನು ಇಲ್ಲಿ ಉಲ್ಲೇಖಿಸಬೇಕು.

ಈ ಸಂದರ್ಭದಲ್ಲಿ ಒಂದು ಪ್ರಶ್ನೆ ಕೇಳುವುದು ಅನಿವಾರ್ಯ ಹಾಗೂ ಅವಶ್ಯಕ: ಅಂಬೇಡ್ಕರ್ ಬರೇ ದಲಿತರ ರೂಪಕವಾಗಿ ಸೀಮಿತಗೊಂಡ ರಾಷ್ಟ್ರೀಯ ನಾಯಕರಾಗಿರಬೇಕೇ? ಅಥವಾ ಅಲ್ಪ ಸಂಖ್ಯಾತರ ರೂಪಕವಾಗಬಲ್ಲರೆ? ದಲಿತ ಹಾಗೂ ಅಲ್ಪ ಸಂಖ್ಯಾತರ ಸಮನ್ವಯವನ್ನು ಸಾಧಿಸುವ ರೂಪಕವಾಗ ಬಲ್ಲರೆ? ದಲಿತ ಆಧುನಿತಕತೆಯ ದುರಂತವೆಂದರೆ ಅದು ಅಂಬೇಡ್ಕರ್‌ರವರನ್ನು ದಲಿತರಿಂದ ಹೊರತಾಗಿ ಅಥವಾ ಬಿಟ್ಟು ನಿರ್ಮಿಸಲು ಯತ್ನಿಸಿಲ್ಲವೆಂದೆ ಹೇಳಬೇಕು. ಅಥವಾ ಸಾಮಾಜಿಕ ಚಿಂತಕರೊಬ್ಬರು ಹೇಳಿದಂತೆ "ದಲಿತರಿಂದ ಬಿಡುಗಡೆ ಯಾಗಲಿಲ್ಲ"- ಒಂದು ಸಂತೋಷದ ವಿಷಯವೆಂದರೆ ಅಂಬೇಡ್ಕರ್ ಸ್ಥಾವರದ ಮೂರ್ತಿಯಾಗಲಿಲ್ಲ. ಇಲ್ಲದಿದ್ದರೆ ಅಂಬೇಡ್ಕರ್ "ಸ್ಥಾವರದ ಅಂಬೇಡ್ಕರ್" ಆಗುತ್ತಿದ್ದರೋ ಏನೋ?

ಎರಡು ಕಾರಣಗಳಿಗಾಗಿ ದಲಿತ ಹಾಗೂ ಅಲ್ಪ ಸಂಖ್ಯಾತರ ನಡುವೆ ಅಂತರ ಉಳಿದು ಬಿಟ್ಟಿದೆ. ಮೊದಲನೇದಾಗಿ ಅಲ್ಪಸಂಖ್ಯಾತರ ಕುರಿತು ಅಂಬೇಡ್ಕರ್‌ಗಿದ್ದ ಕೆಲವು ಸಂದೇಹಗಳು ಹಾಗೂ ಟಿಪ್ಪಣಿಗಳು. ಎರಡನೇದಾಗಿ, ದಲಿತ ಹಾಗೂ ಅಲ್ಪ ಸಂಖ್ಯಾತರ ನಡುವೆ ಇರುವ ವಿರುದ್ಧ ಸಾಮಾಜಿಕ ತಳಹದಿಗಳು. ವಾಸ್ತವವಾಗಿ ಅವರ ಟಿಪ್ಪಣಿಗಳು ವಾಸ್ತವತೆಯನ್ನು ಅರಿಯುವ ಒಂದು ಭಾಗವಾಗಿತ್ತು ಎಂದು ಹೇಳಬಹುದು. ಜಿನ್ನಾರ ಎರಡು ಅಥವಾ ದ್ವಿ-ರಾಷ್ಟ್ರದ ಸಿದ್ಧಾಂತವನ್ನು ವಿವರಿಸುವಾಗ, ಅವರಿಗೆ ಜಿನ್ನಾ ಹಾಗೂ ಸಾವರ್ಕರ್ ಒಂದೇ ನಾಣ್ಯದ ಎರಡು ಮುಖಗಳಾಗಿದ್ದವು. ಬಹುಷಃ ಮುಸ್ಲಿಮರಲ್ಲಿ ಜಾತಿ ಪದ್ದತಿ ಇರುವುದನ್ನು ಗುರುತಿಸಿದ ರಾಷ್ಟ್ರೀಯ ನಾಯಕರಲ್ಲಿ ಅಂಬೇಡ್ಕರ್ ಪ್ರಥಮರು ಅನ್ನಬಹುದು.

ಅವರ ಪ್ರಕಾರ ಮುಸ್ಲಿಮರಲ್ಲಿರುವ ಅರ್ಜಲ್ಸ್‌ಗಳು ಮೂಲತಃವಾಗಿ ದಲಿತ ಸಮುದಾಯಕ್ಕೆ ಸೇರಿದವರು. ಇವತ್ತು ದಲಿತ-ಮುಸ್ಲಿಂ, ದಲಿತ-ಕ್ರಿಶ್ಚಿಯನ್ ಎಂಬ ವರ್ಗಗಳ ಬೆಳವಣಿಗೆಗೆ ಅಂಬೇಡ್ಕರ್ ಒಂದು ಕಾರಣ. ಇಲ್ಲಿರುವ ವಿರೋಧಾಭಾಸವೆಂದರೆ ದಲಿತ-ಕ್ರಿಶ್ಚಿಯನ್ ತನ್ನ ಮೂಲ ಸ್ಪೂರ್ತಿಯನ್ನು "ಲಿಬರೇಷನ್‌ಥಿಯೋ ಲಾಜಿ-ಬಿಡುಗಡೆಯ ಧರ್ಮ"ದಿಂದ ಪಡೆಯುತ್ತದೆ. ಎರಡನೇದಾಗಿ ದಲಿತರ ಹಾಗೂ ಅಲ್ಪಸಂಖ್ಯಾತರ ಸಾಮಾಜಿಕ ತಳಹದಿಗಳು ಬೇರೆ ಬೇರೆ ಆದ ಕಾರಣ ದಲಿತರ ಮೇಲೆ ದೌರ್ಜನ್ಯಗಳಾದಾಗ ಅಲ್ಪಸಂಖ್ಯಾತರು ಪ್ರತಿಕ್ರಿಯಿಸುವುದಿಲ್ಲ. ಅದೇ ರೀತಿ ಕೋಮು ಗಲಭೆ ಸಂದರ್ಭದಲ್ಲಿ ದಲಿತರು ಅಲ್ಪಸಂಖ್ಯಾತರ ಪರವಾಗಿ ವಾದಿಸುವುದಿಲ್ಲ. ಅವರಿಬ್ಬರ ನಡುವೆ ಅಂತರ ಹೆಚ್ಚಾಗುತ್ತದೆಯೇ ಹೊರತು ಕಡಿಮೆಯಾಗುವ ಲಕ್ಷಣಗಳು ಕಂಡುಬರುತ್ತಿಲ್ಲ.

ಇದೇ ಸಮಸ್ಯೆಯನ್ನು ಆದಿವಾಸಿಗಳು ಹಾಗೂ ದಲಿತರ ನಡುವೆ ನೋಡಬಹುದು, ಆದಿವಾಸಿಗಳಿಗೆ ಬಿರ್ಸಾಮುಂಡಾ ಆದರ್ಶನಾಗುತ್ತಾನೆ ಹೊರತು ಅಂಬೇಡ್ಕರ್‌ರಲ್ಲ. ಆದಿವಾಸಿಗಳು ಹಾಗೂ ದಲಿತರ ಸಾಮಾಜಿಕ ಸಂರಚನೆಯಲ್ಲಿರುವ, ಶೋಷಣಾ ಸಂಬಂಧದಲ್ಲಿರುವ ವ್ಯತ್ಯಾಸಗಳು ಇವೆರಡು ವರ್ಗಗಳನ್ನು ಹತ್ತಿರ ಬರದಂತೆ ನೋಡುತ್ತಿವೆ. ವಾಸ್ತವವಾಗಿ ಆದಿವಾಸಿಗಳ ಬಗ್ಗೆ ಅಂಬೇಡ್ಕರ್‌ಗೆ ಪ್ರೀತಿಯಲ್ಲದೇ ಸಹಾನುಭೂತಿ ಇತ್ತು. ಆದಿವಾಸಿಗಳ ಐತಿಹಾಸಿಕ ಕೊಡುಗೆಯನ್ನು ಅವರು ಪುರಸ್ಕರಿಸಿದ್ದರು. ನಾಗಪುರವನ್ನು ತಮ್ಮ ಪರಿವರ್ತನಾ ಸ್ಥಳವಾಗಿ ಆಯ್ಕೆ ಮಾಡಲು ನಾಗ ಆದಿವಾಸಿಗಳು ಮೂಲತಃವಾಗಿ ಬೌದ್ಧರು ಎಂಬ ಪರಿಕಲ್ಪನೆ ಕಾರಣವಾಗಿತ್ತು. ಅಲ್ಲದೇ ಅವರು ಆದಿ ವಾಸಿಗಳ ನಾಯಕತ್ವ ಅಲ್ಲಿಂದಲೇ ಹುಟ್ಟಿ ಬರಬೇಕೆಂದು ಬಯಸುತ್ತಿದ್ದರು,

"ದಲಿತ -ಆಧುನಿಕತೆ" ಇಂದಿಗೂ ಅಪರಿಪೂರ್ಣಗೊಂಡಿರುವ ಪ್ರಕ್ರಿಯೆ. ಅಂಬೇಡ್ಕರ್ ಈ ಪ್ರಕ್ರಿಯೆಯ ರೂಪಕ. ಈ ಪ್ರಕ್ರಿಯೆ ನಿರಂತರವಾಗಿರುವುದು ಒಂದು ವಾಸ್ತವ. ಅಲ್ಲದೇ ಈ ಪ್ರಕ್ರಿಯೆ ಅಷ್ಟು ಸುಲಭವಾಗಿ ಮುಗಿಯಲಾರದು. ಅದಕ್ಕೆ ಸಾಕಷ್ಟು ಅಡೆತಡೆಗಳು ಬರುವುದು ಸಹಜ; ಅಂತರಿಕವಾಗಿಯೂ, ಬಾಹ್ಯವಾಗಿಯೂ. ಅಲ್ಲದೇ ಅದು ನಾರಾರು ವೈರುದ್ಧಗಳನ್ನು, ಸಂಘರ್ಷಗಳನ್ನು ಎದುರಿಸಬೇಕಾಗಬಹುದು, ಅಲ್ಲದೇ ಅದು ಬೇರೆ ಬೇರೆ ಸಮುದಾಯಗಳನ್ನು ಒಳಗೊಳ್ಳಬೇಕಾದ ಅವಶ್ಯಕತೆ ಇದೆ. ಆಂತರಿಕ ವೈರುದ್ಧಗಳನ್ನು ಮೆಟ್ಟಿ ನಿಲ್ಲಬೇಕಾದ ಅವಶ್ಯಕತೆಯೂ ಇದೆ. ರಾಷ್ಟ್ರದ ಗಣ್ಯರು ವರ್ಷಕ್ಕೊಮ್ಮೆ ಅಂಬೇಡ್ಕರ್ ಸಮಾಧಿಗೆ ಗೌರವ ಸಲ್ಲಿಸಿದರೆ ತಪ್ಪೇನಿಲ್ಲ. "ದಲಿತ-ಆಧುನಿಕತೆ"ಗೆ, ಅಂಬೇಡ್ಕರ್ ರೂಪಕಕ್ಕೆ ಹೊಸ ಐಡೆಂಟಿಟಿ ಅಥವಾ ಅರ್ಥ ದೊರೆಯುತ್ತದೆ. □

> **ದಲಿತ ಆಧುನಿಕತೆ ವಿಶಾಲವಾದ ಮಾರುಕಟ್ಟೆಯಲ್ಲಿ ದಲಿತರ ಯಜಮಾನಿಕೆಯನ್ನಾಗಲಿ, ಪ್ರಭುತ್ವವನ್ನಾಗಲೀ ಪ್ರತಿಪಾದಿಸುವುದಿಲ್ಲ. ಬಹಳಷ್ಟು ಸಲ ಅದರ ವಿಶ್ಲೇಷಣೆ ಸೀಮಿತಗೊಳ್ಳುವುದು ಸಮಾಜೋ -ರಾಜಕೀಯ ವಿಷಯದ ಮೇಲೆ. ಅದು ಮೀಸಲಾತಿ ಇರಬಹುದು, ಸರಕಾರಿ ಶಿಕ್ಷಣವಿರಬಹುದು, ಅಥವಾ ಭೂ ಹಂಚಿಕೆ ಇರಬಹುದು, ಇಲ್ಲವೇ ಜಾಗತೀಕರಣವನ್ನು ದಲಿತರು ಒಪ್ಪಿಕೊಳ್ಳಬೇಕೆ? ಇಲ್ಲವೇ? ಇತ್ಯಾದಿ. ಆರ್ಥಿಕ ಸಬಲೀಕರಣ ಎಂಬ ವಾದಗಳೂ ದಲಿತ ಸಂಕಥನದಲ್ಲಿ ಕೆಲವೊಮ್ಮೆ ಬರುತ್ತಿರುತ್ತವೆ.**

ಜೈಲಿನ ಕಥೆ ಬಂಧಿಗಳ ವ್ಯಥೆ

(25ನೇ ಪುಟದಿಂದ)

ಯಿಂದಲೂ ಆರೋಗ್ಯಕರವಲ್ಲ. ಇದರ ಪರಿಣಾಮ ಗಂಭೀರವೇ ಆಗಿರುತ್ತದೆ. [ಕೆಲವರು ಜೈಲಿನ ಶೋಷಕರೊಂದಿಗೆ ಸೇರಿಕೊಂಡು ಲೂಟಿಯ ಪಾಲನ್ನು ಪಡೆದು ಹಣ ಮಾಡುವವರೂ ಇದ್ದಾರೆ. ಇಂತಹವರನ್ನು ಜೈಲಿನ ಅಧಿಕಾರಿಗಳೇ ಬೆಳೆಸಿ ಇಟ್ಟುಕೊಂಡಿರುತ್ತಾರೆ. ಇವರಲ್ಲಿ ಹಲವರು ವೃತ್ತಿಪರ ಅಪರಾಧಿಗಳಾಗಿರುತ್ತಾರೆ. ಇವರನ್ನು ಅಧಿಕಾರಿಗಳು ಬಂಧಿಗಳ ಮೇಲೆ ಹಿಡಿತ ಸಾಧಿಸಿ ಒಡೆದು ಆಳಲು ಬಳಸಿಕೊಳ್ಳುತ್ತಿರುತ್ತಾರೆ.] ಇಂತಹ ಹಂತ ತಲುಪಿದ ನಂತರ ಆ ರೀತಿಯ ಬಂಧಿಗಳು ಸಹಜ ಜೀವನಕ್ಕೆ ಮರುಳುವ ಸಾಮರ್ಥ್ಯವನ್ನೇ ಕಳೆದುಕೊಳ್ಳುವ ಸಾಧ್ಯತೆಗಳೇ ಹೆಚ್ಚಾಗಿರುತ್ತದೆ. ಬಹುತೇಕ ಜೀವಾವಧಿ ಬಂಧಿಗಳ ಹೆಂಡತಿ, ಮಕ್ಕಳು, ಗಂಡ, ಬಂದುವರ್ಗಗಳ ಪರಿಸ್ಥಿತಿ ಕೂಡ ಹೃದಯ ವಿದ್ರಾವಕವಾಗಿರುತ್ತದೆ. ತಾವು ಮಾಡದ ತಪ್ಪುಗಳಿಗೆ ಅವರೆಲ್ಲಾ ಶಿಕ್ಷೆ ಅನುಭವಿಸುತ್ತಿರುತ್ತಾರೆ. ವಯಸ್ಸಾದ ಬಂಧಿಗಳ ಕಥೆಯಂತೂ ಮತ್ತೂ ಶೋಚನೀಯ. ಮಹಿಳಾ ಬಂಧಿಗಳ ಸ್ಥಿತಿ ಮತ್ತಷ್ಟೂ ಶೋಚನೀಯ, ಪುರುಷ ಬಂಧಿಗಳಿಗೆ ಇಲ್ಲದ ನಿರ್ಬಂಧಗಳೆಲ್ಲಾ ಅವರ ಮೇಲೆ ಇರುತ್ತವೆ. ಇದೆಲ್ಲದರ ಜೊತೆಗೆ ವೈದ್ಯರಿರದ, ಔಷಧಿಗಳಿರದ, ಮನೋವೈದ್ಯರಿರದ ರೋಗಿಗಳಿಗೆ ಹಾಸಿಗೆಗಳಿರದ ಸಮಸ್ಯೆಗಳು ಬೇರೆ.

ಕರ್ನಾಟಕದಲ್ಲಿ ಕಳೆದ ನಾಲ್ಕುವರ್ಷಗಳಿಂದ ಜೀವಾವಧಿ ಬಂಧಿಗಳನ್ನು ಸನ್ನಡತೆಯ ಆಧಾರದ ಮೇಲೆ ಬಿಡುಗಡೆಯೇ ಮಾಡಿಲ್ಲ. ಪಕ್ಕದ ರಾಜ್ಯಗಳು ಪ್ರತಿವರ್ಷವೂ ನೂರಾರು ಬಂಧಿಗಳನ್ನು ಸನ್ನಡತೆಯ ಆಧಾರದ ಮೇಲೆ ಅಕಾಲಿಕವಾಗಿ ಬಿಡುಗಡೆ ಮಾಡುತ್ತಿವೆ. ಆಂಧ್ರದಲ್ಲಿ 5ವರ್ಷ ಪೂರೈಸಿರುವ ಸನ್ನಡತೆಯ ಜೀವಾವಧಿ ಬಂಧಿಗಳನ್ನು ಬಿಡುಗಡೆಗೊಳಿಸುವ ಬಗ್ಗೆ ಎಡರಾಜಕೀಯ ಪಕ್ಷಗಳು ಒತ್ತಡ ಹೇರಿವೆ. ಒಬ್ಬ ವ್ಯಕ್ತಿಯು ಪಶ್ಚಾತಾಪ ಪಟ್ಟು ಸನ್ನಡತೆಯನ್ನು ರೂಢಿಸಿಕೊಳ್ಳಲು 5 ವರ್ಷಗಳ ಜೈಲು ಶಿಕ್ಷೆಯ ಅವಧಿ ಸಾಕಾಗಿರುತ್ತದೆ. ಈ ಅವಧಿಯು ಒಬ್ಬ ವ್ಯಕ್ತಿಯ ಪರಿವರ್ತನೆಯನ್ನು ಅಳೆಯಲು ಕೂಡ ಸಾಕಾಗುತ್ತದೆ.

ನಾಗರಿಕ ಸಮಾಜ ಜೈಲಿನ ಬಂಧಿಗಳು ಹಾಕಿದ ಕೂಗನ್ನು ಕೇಳಿಸಿಕೊಳ್ಳುವ, ಜೈಲುಹಕ್ಕಿಗಳೆಂದು ಕರೆಯಲ್ಪಡುವವರ ಕುರಿತು ಕಾಳಜಿ ವ್ಯಕ್ತಪಡಿಸುವ ಅವರನ್ನು ಸನ್ನಡತೆಯ ವ್ಯಕ್ತಿಗಳನ್ನಾಗಿಸಿ ಸಮಾಜದೊಳಕ್ಕೆ ಸೇರಿಸಿಕೊಳ್ಳುವ, ಅವರನ್ನು ಜೋಪಾನ ಮಾಡಿ ಉಳಿಸಿಕೊಳ್ಳುವ ಜವಾಬ್ದಾರಿ ಹೊರಬೇಕು. ಇದರಲ್ಲಿ ಸಾಮಾಜಿಕ ಸಂಘಟನೆಗಳು, ಮಾನವಹಕ್ಕು ಕಾರ್ಯಕರ್ತರು, ಸಾಹಿತಿಗಳು, ಬುದ್ಧಿಜೀವಿಗಳು, ಸಮಾಜಮುಖಿ ಚಿಂತಕರ ಪಾತ್ರ ಹೆಚ್ಚಿನದಾಗಿದೆ. ಜೈಲು ಸೇರಿದವರೆಲ್ಲಾ ಕ್ರೂರಿಗಳಲ್ಲ, ಸಮಾಜದ್ರೋಹಿಗಳಲ್ಲ. ಅವರಲ್ಲೂ ಮಾನವೀಯತೆ, ಅಂತಃಕರಣ, ಇದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಹಲವಾರು ನಾಟಕಕಾರರು, ಜಾನಪದ ಹಾಡುಗಾರರು, ರಕ್ತದಾನ ಮಾಡುವವರು ಜೈಲಿನಲ್ಲಿದ್ದಾರೆ. ಅಲ್ಲದೆ ಹಲವಾರು ಸಾಮಾಜಿಕ ಹೋರಾಟಗಾರರು ಜೈಲುವಾಸ ಅನುಭವಿಸುತ್ತಿದ್ದಾರೆ. ಈ ಎಲ್ಲಾ ಅಂಶಗಳನ್ನು ನಾಗರಿಕ ಸಮಾಜ ಮನಗಂಡು ಬಂಧಿಗಳ ಬಗ್ಗೆ ಸ್ಪಂದಿಸಿ ಸನ್ನಡತೆಯ ಬಂಧಿಗಳನ್ನು ಸಮಾಜದ ವಾಹಿನಿಯೊಳಗೆ ಕರೆದುಕೊಳ್ಳಲು ಜನಾಭಿಪ್ರಾಯ ರೂಪಿಸಿ ಸರ್ಕಾರದ ಮೇಲೆ ಒತ್ತಡ ಹಾಕಬೇಕಾದ ಕರ್ತವ್ಯವೂ ಇದೆ. □

ಅಭಿವೃದ್ಧಿ-ದುಸ್ಥಿತಿಯ ಕೂಪದಲ್ಲಿ ಕರ್ನಾಟಕ



ಡಾ. ಟಿ.ಆರ್. ಚಂದ್ರಶೇಖರ್

ನಮ್ಮ ಸಮಾಜದಲ್ಲಿ ಇಂದು ಉಚಿತವಾಗಿ ಸೀರೆ, ತಾಳಿಗಳನ್ನು ನೀಡುವ ದಾನಶೂರರು ಬಹಳವಾಗಿದ್ದಾರೆ. ದಾನ-ದಕ್ಷಿಣೆ ಎಂಬುದು ಸರಿ. ಆದರೆ ರಾಜಕೀಯ ಮುಂದಾಳುಗಳು ತಮ್ಮ ರಾಜಕೀಯ ಹಕ್ಕನ್ನು ಚಲಾಯಿಸಿ ಜನರಿಗೆ ಸರ್ಕಾರ್ರದ ವತಿಯಿಂದ ಸೌಲಭ್ಯಗಳನ್ನು ಒದಗಿಸುವುದು ಜನತಂತ್ರ ಕ್ರಮ. ಅದು ಬಿಟ್ಟು ತಾವೇ ಸ್ವಂತ ಖರ್ಚಿನಲ್ಲಿ ಎಲ್ಲವನ್ನೂ ನೀಡುತ್ತೇವೆ ಎಂಬುದು ಪಾಳೆಗಾರಿಕೆ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆಯೇ ವಿನಾ ಜನತಂತ್ರವನ್ನಲ್ಲ. ಜನರು ತಮ್ಮ ಹಂಗಿನಲ್ಲಿ ಬದುಕಬೇಕೆಂಬ ಈ ದಾನಿಗಳ ಧೋರಣೆಯು ಜನತಂತ್ರಕ್ಕೆ ಶೋಭೆಯನ್ನು ತರುವುದಿಲ್ಲ.

ಪ್ರಸ್ತಾವನೆ

ಇಂದು ಕರ್ನಾಟಕವು ಅನೇಕ ಮಹಾ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಅದು ಶಿಕ್ಷಣವಾಗಬಹುದು, (ಅನೇಕ ಕುಲಪತಿಗಳು ಕ್ರಿಮಿನಲ್ ಮೊಕ್ಕದಮ್ಮೆಗಳನ್ನು ಎದುರಿಸುತ್ತಿದ್ದಾರೆ) ಆರೋಗ್ಯವಾಗಬಹುದು (ಆರೋಗ್ಯ ಸಚಿವರ ನೇತೃತ್ವದಲ್ಲಿ ಉಚಿತ ವಿವಾಹ ಸಮಾರಂಭದಲ್ಲಿ ಹತ್ತಾರು ಬಾಲ್ಯ ವಿವಾಹಗಳು ನಡೆಯುತ್ತವೆ) ಆಹಾರ ಭದ್ರತೆಯಾಗಬಹುದು (ಗೋದಾಮುಗಳಲ್ಲಿ ಕೊಳೆತು ಹೋಗುತ್ತಿರುವ ಆಹಾರ ಪದಾರ್ಥಗಳ ಬಗ್ಗೆ ಸುಪ್ರೀಮ್ ಕೋರ್ಟಿನ ಆದೇಶದ ವಿವಾದವನ್ನು ನೆನಪಿಸಿಕೊಳ್ಳಬಹುದು), ರಾಜಕೀಯವಾಗಿರಬಹುದು (ಇದು ನಮ್ಮಲ್ಲಿ ತಲುಪಿರುವ ಅಧೋಗತಿಯನ್ನು ಹೇಳದಿರುವುದೇ ಲೇಸು), ಲಿಂಗ ಸಮಾನತೆಯಾಗಬಹುದು (ಅದು ಈಗ ಸೀರೆ, ತಾಳಿ ಹಂಚುವುದಕ್ಕೆ ಸೀಮಿತಗೊಂಡು ಬಿಟ್ಟಿದೆ). ಯಾಕೆ ಹೀಗೆ? ಯಾವುದೂ ಇಲ್ಲಿ ಸರಿಯಾಗಿಲ್ಲ. ಎಲ್ಲವೂ ಕೊಳೆತು ನಾರುವಂತಿದೆ. ನಮ್ಮ ಮುಂದಾಳುಗಳು ಇಲ್ಲಿ ಇರುವ ಸಮಸ್ಯೆಗಳನ್ನು ಬಿಟ್ಟು ಇಲ್ಲದಿರುವ ಸಂಗತಿಗಳನ್ನು ಸಮಸ್ಯೆಗಳನ್ನಾಗಿ ಹುಟ್ಟುಹಾಕುತ್ತಿದ್ದಾರೆ.

ಜನರು ಕೇಳದಿದ್ದ ಸಂಗತಿಗಳನ್ನು ಪಟ್ಟಭದ್ರರ ಹಿತಾಸಕ್ತಿಗಳನ್ನು ಈಡೇರಿಸುವುದಕ್ಕಾಗಿ ಸರ್ಕಾರವು ತಾನೇ ಮುಂದಾಗಿ ಅವುಗಳನ್ನು ನೀಡಲು ತಾನೇ ಸ್ವಇಚ್ಚೆಯಿಂದ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ (ಸಂಸ್ಕೃತ ವಿಶ್ವವಿದ್ಯಾಲಯವು ಇದಕ್ಕೆ ಒಂದು ಉದಾಹರಣೆಯಾದರೆ ಜಾನುವಾರು ಹತ್ಯಾ ನಿಷೇಧ ಮಸೂದೆ ಮತ್ತೊಂದು ನಿದರ್ಶನ). ಇರುವ ಸಮಸ್ಯೆಗಳನ್ನು ಬಿಟ್ಟು ಇಲ್ಲದಿರುವ ಸಮಸ್ಯೆಗಳನ್ನು ಹುಟ್ಟು ಹಾಕಿ ಜನರ ನೆಮ್ಮದಿಯನ್ನು ಹಾಳುಗೆಡವಲಾಗುತ್ತಿದೆ. ಕರ್ನಾಟಕವೆಂದರೆ ಬೆಂಗಳೂರು ಮಾತ್ರ ಎನ್ನುವಂತೆ ಸರ್ಕಾರವು ವರ್ತಿಸುತ್ತಿದೆ. ನಮ್ಮ ಸರ್ಕಾರದ ಕೆಲವು ಮಂತ್ರಿಗಳಿಗೆ ರಾಜ್ಯದ ಮೂವತ್ತು ಜಿಲ್ಲೆಗಳನ್ನು ಒಟ್ಟಾಗಿ ಪರಿಭಾವಿಸಿಕೊಂಡು ಅಭಿವೃದ್ಧಿ ಬಗ್ಗೆ ಚಿಂತಿಸುವುದು ಸಾಧ್ಯವಿಲ್ಲ. ಅವರು ಯಾವತ್ತೂ ಹಾಗೆ ಚಿಂತಿಸಿದವರಲ್ಲ.

ಅವರ ದೃಷ್ಟಿಯ ವ್ಯಾಪ್ತಿಯು ಬೆಂಗಳೂರು ಮೀರಿ ಹೋಗುವುದಿಲ್ಲ. ಕರ್ನಾಟಕವು ಇಂದು ತನ್ನ ಐವತ್ನಾಕನೆಯ ರಾಜ್ಯೋತ್ಸವವನ್ನು ಆಚರಿಸಿಕೊಳ್ಳುತ್ತಿದೆ. ಈ ಸಂದರ್ಭದಲ್ಲಿ ರಾಜ್ಯದ 'ಜನರ' ನೆಲೆಯಿಂದ ಅಭಿವೃದ್ಧಿಯನ್ನು ಪರಿಶೀಲಿಸುವುದು ಸೂಕ್ತವೆಂದು ತಿಳಿದಿದ್ದೇನೆ. ಪ್ರಸ್ತುತ ಪ್ರಬಂಧದಲ್ಲಿ ಇಂದು ಕರ್ನಾಟಕವು ರಾಜಕೀಯವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಎದುರಿಸುತ್ತಿರುವ ಸಂಗತಿಗಳನ್ನು ಚರ್ಚಿಸಲಾಗಿದೆ. ರಾಜ್ಯೋತ್ಸವದ ಸಂದರ್ಭದಲ್ಲಿ ಇದೊಂದು ಅಭಿವೃದ್ಧಿ ಸಮೀಕ್ಷೆಯೆಂದು ತಿಳಿಯಬಹುದು.

ಸಾಂಸ್ಕೃತಿಕ ದಿವಾಳಿತನ

ಸಂಸ್ಕೃತಿಯೆನ್ನುವುದನ್ನು ಶಾಲಾ-ಕಾಲೇಜುಗಳಲ್ಲಿನ ಮನರಂಜನಾ ಕಾರ್ಯಕ್ರಮಗಳ ಮಟ್ಟಕ್ಕೆ ಇಳಿಸುವುದು ಬೇಡ. ಅದು ತುಂಬಾ ವಿಶಾಲವಾದ ಮತ್ತು ಜನರನ್ನು ಒಳಗೊಳ್ಳುವ ಸಂಗತಿಯಾಗಿದೆ. ನಾವು ನಮ್ಮ ಬದುಕನ್ನು ಹೇಗೆ ಕಟ್ಟಿಕೊಳ್ಳುತ್ತೇವೆ? ನಾವು ನಮ್ಮ ಜನರನ್ನು ಹೇಗೆ ಕಾಣುತ್ತೇವೆ? ಸಮಾಜದಲ್ಲಿ ನಾವು ಬೇರೆಯವರ ಜೊತೆಯಲ್ಲಿ ಹೇಗೆ ವರ್ತಿಸುತ್ತೇವೆ? ಮನುಷ್ಯ-ಮನುಷ್ಯರ ನಡುವಿನ ಸಂಬಂಧ ಹೇಗಿರುತ್ತದೆ? ಮನೆಯ ಒಳಗೆ, ಮನೆಯ ಹೊರಗೆ ನಾವು ನಡೆದುಕೊಳ್ಳುವ ಬಗೆ ಯಾವುದು? ಈ ಸಂಗತಿಗಳನ್ನು ಆಧಾರವಾಗಿಟ್ಟುಕೊಂಡು ನಾವು ಸಂಸ್ಕೃತಿಯ ಬಗ್ಗೆ ಚರ್ಚೆ ಮಾಡಬಹುದು.

ನಮ್ಮ ನಗರಗಳ ಬೀದಿಗಳಲ್ಲಿ ವ್ಯಾಪಾರಸ್ಥರು ತಮ್ಮ ತಮ್ಮ ಅಂಗಡಿಗಳ ಕಸವನ್ನು ಬೆಳಿಗ್ಗೆ ಗುಡಿಸಿ-ಗುಡಿಸಿ ರಸ್ತೆಯ ಮಧ್ಯದಲ್ಲಿ ತಂದು ಹಾಕುತ್ತಾರೆ. ರಸ್ತೆಯನ್ನು ಈ ಜನರು ಕಸದ ತೊಟ್ಟಿಯನ್ನಾಗಿ ಮಾಡಿಕೊಂಡಿದ್ದಾರೆ. ಇದು ವ್ಯಾಪಾರಿ ಸಂಸ್ಕೃತಿಯಲ್ಲ. ಸಂಸ್ಕೃತಿಯ ಆರಾಧಕರೆಂದೂ, ಅದರ ಸಂರಕ್ಷಕರೆಂದೂ ಹೇಳಿಕೊಳ್ಳುವ ಮಾರವಾಡಿಗಳು ಮತ್ತು ವ್ಯಾಪಾರಸ್ಥರು ಮಾಡುವ ಕೆಲಸ ಇದಾಗಿದೆ. ಎದುರು-ಬದರು ಅಂಗಡಿಗಳ ಮಾಲೀಕರು ಹೀಗೆ ತಮ್ಮ ತಮ್ಮ ಅಂಗಡಿ ಕಸವನ್ನು ತಂದು ರಸ್ತೆಯ ಮಧ್ಯದಲ್ಲಿ ಬಿಟ್ಟುಬಿಟ್ಟರೆ ಅದು ಯಾವ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ? ಇವರೆಲ್ಲರೂ ಓದಿಕೊಂಡವರಾಗಿದ್ದಾರೆ, ಹಣವಂತರಾಗಿದ್ದಾರೆ, ಪ್ರಪಂಚವನ್ನು ನೋಡಿದವರಾಗಿದ್ದಾರೆ, ಸಂಸ್ಕೃತಿಯನ್ನು ಬೋಧಿಸುವವರಾಗಿದ್ದಾರೆ.

ಇಂದು ನಮ್ಮ ರಾಜ್ಯದಲ್ಲಿ 'ಸಂಸ್ಕೃತಿ ರಕ್ಷಕ'ರೆಂದು ತಮ್ಮನ್ನು ತಾವು ಕರೆದುಕೊಳ್ಳುತ್ತಿರುವ ಜನರನ್ನು ಪೋಷಿಸುವವರು ಇವರಾಗಿದ್ದಾರೆ. ಅವರು ಹೀಗೆ ವರ್ತಿಸಿದರೆ ಅದಕ್ಕೆ ನಾವೇನನ್ನಬೇಕು? ನಮ್ಮ ಮನೆಗಳಲ್ಲಿ, ನಮ್ಮ ಮನೆಯ ಮಂದಿಯನ್ನು ನಾವು ಹೇಗೆ ನೋಡಿಕೊಳ್ಳುತ್ತೇವೆ, ಹೇಗೆ ಪ್ರೀತಿಸುತ್ತೇವೆ ಎಂಬುದರ ಮೇಲೆ ಮನೆಯ ಹೊರಗೆ ನಾವು ಇತರರನ್ನು ಹೇಗೆ ನೋಡಿಕೊಳ್ಳುತ್ತೇವೆ ಎಂಬುದು ನಿರ್ಧಾರವಾಗುತ್ತದೆ. ಇದು ಸಂಸ್ಕೃತಿ. ಒಬ್ಬ ಪುರಾಣ ಪುರುಷನನ್ನು ಅವನು ಇಲ್ಲಿಯೇ ಜನಿಸಿದ್ದು ಎಂದು ಒಂದು ನಿರ್ದಿಷ್ಟ ಜಾಗದ ಬಗ್ಗೆ ನ್ಯಾಯಾಲಯವೊಂದು ತೀರ್ಪುಕೊಟ್ಟರೆ ಅದನ್ನು ನಾವು ನಂಬಬೇಕೆ?

ನಮ್ಮ ಸಮಾಜದಲ್ಲಿ ಇಂದು ಉಚಿತವಾಗಿ ಜನರಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವವರಿದ್ದಾರೆ. ಉಚಿತ ಸಾಮೂಹಿಕ ವಿವಾಹಗಳನ್ನು ನಡೆಸುವವರಿದ್ದಾರೆ. ಅದರಲ್ಲಿ ದಾಖಲೆಯನ್ನು ಮಾಡುವವರಿದ್ದಾರೆ (ಈ ದಾಖಲೆಯ ಜೋರಿನಲ್ಲಿ ಬಾಲ್ಯ ವಿವಾಹವಾದರೂ ಅದರ ಬಗ್ಗೆ ಅದರ ಸಂಘಟಕರು ತಲೆ ಕೆಡಿಸಿಕೊಳ್ಳುವುದಿಲ್ಲ ಎಂಬುದು ಬೇರೆ ಮಾತು.) ಸೀರೆ, ತಾಳಿಗಳನ್ನು ನೀಡುವ ದಾನಶೂರರು ಬಹಳವಾಗಿದ್ದಾರೆ. ದಾನ-ದಕ್ಷಿಣೆ ಎಂಬುದು ಸರಿ. ಆದರೆ ರಾಜಕೀಯ ಮುಂದಾಳುಗಳು ತಮ್ಮ ರಾಜಕೀಯ ಹಕ್ಕನ್ನು ಚಲಾಯಿಸಿ ಜನರಿಗೆ ಸರ್ಕಾರದ ವತಿಯಿಂದ ಸೌಲಭ್ಯಗಳನ್ನು ಒದಗಿಸುವುದು ಜನತಂತ್ರ ಕ್ರಮ. ಅದು ಬಿಟ್ಟು ತಾವೇ ಸ್ವಂತ ಖರ್ಚಿನಲ್ಲಿ ಎಲ್ಲವನ್ನೂ ನೀಡುತ್ತೇವೆ ಎಂಬುದು ಪಾಳೆಗಾರಿಕೆ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆಯೇ ವಿನಾ ಜನತಂತ್ರವನ್ನಲ್ಲ.

ಜನರು ತಮ್ಮ ಹಂಗಿನಲ್ಲಿ ಬದುಕಬೇಕೆಂಬ ಈ ದಾನಿಗಳ ಧೋರಣೆಯು ಜನತಂತ್ರಕ್ಕೆ ಶೋಭೆಯನ್ನು ತರುವುದಿಲ್ಲ. ಆದರೆ ಇಂತಹ ಸಂಗತಿಗಳನ್ನು ಸಮರ್ಥಿಸುವ ಬುದ್ಧಿಜೀವಿಗಳಿ

ದ್ದಾರೆ ಎಂಬುದೇ ನಮ್ಮ ಕಾಲದ ದುರಂತ. ಹಂಗಿನ ಸಂಸ್ಕೃತಿಯಲ್ಲಿ ಏನನ್ನು ಸಾಧಿಸಿಕೊಳ್ಳುವುದು ಸಾಧ್ಯವಿಲ್ಲ. ಅಲ್ಲಮಪ್ರಭುವಿನ ವಚನವನ್ನು ಇಲ್ಲಿ ನೋಡಬಹುದು.

ಅಂಗವಿಡಿದು ಅರಿವ ಅರಿವು ಅರಿವಲ್ಲದೆ
ಗುರುವಿಡಿದು ಅರಿವ ಅರಿವು ಅರಿವಲ್ಲ.
ಗುರುವಿಡಿದು ಲಿಂಗವುಂಟೆಂಬುದು ಕಲ್ಪಿತ
ತನ್ನಿಂದ ತಾನವುದಲ್ಲದೆ
ಗುಹೇಶ್ವರ ಲಿಂಗದಲ್ಲಿ ಹಂಗು ಹರಿಯದನ್ನಕ್ಕರ
ತನ್ನ ತಾನರಿಯಬಾರದು ಕೇಳಾ.

ಹಂಗಿನಲ್ಲಿ ಬದುಕು ಸಮೃದ್ಧವಾಗುವುದು ಸಾಧ್ಯವಿಲ್ಲ. ಈ ಮಾತನ್ನು ಅಲ್ಲಮಪ್ರಭು ತನ್ನವಚನದಲ್ಲಿ ಹೇಳುತ್ತಿದ್ದಾನೆ. ಅಲ್ಲಿನ 'ಹಂಗು'ಪದದ ಬಳಕೆ ಬಹಳ ಮುಖ್ಯ.

ಸಾರ್ವಜನಿಕ ಸಂಸ್ಕೃತಿ ಯಾವುದು, ಖಾಸಗಿಯಾದುದು ಯಾವುದು ಎಂಬುದರ ಭಿನ್ನತೆಯಿಲ್ಲದಂತೆ ನಮ್ಮ ನಾಯಕರು ಇಂದು ವರ್ತಿಸುತ್ತಿದ್ದಾರೆ. 'ಪ್ಯಾರಿಸ್ಸು ಉರಿಯುತ್ತಿದ್ದಾಗ ನೀರೋ ಚಕ್ರವರ್ತಿ ಪಿಟೀಲು ಬಾರಿಸುತ್ತಿದ್ದ' ಎನ್ನುವ ಮಾತೊಂದಿದೆ. ರಾಜ್ಯದಲ್ಲಿ ರಾಜಕೀಯ ಅಸ್ಥಿರತೆ ಭೂತಾಕಾರವಾಗಿ ಬೆಳೆದು ಆಡಳಿತ, ಅಭಿವೃದ್ಧಿ ನಿಸ್ತೇಜವಾಗಿ ಬಿದ್ದಿರುವಾಗ ನಮ್ಮ ಮುಖ್ಯಮಂತ್ರಿಯವರು ದೇವಾಲಯಗಳಿಗೆ ತೀರ್ಥಯಾತ್ರೆ ಹೋಗುತ್ತಾರೆಂದರೆ ನಮ್ಮ ಸಾರ್ವಜನಿಕ ಸಂಸ್ಕೃತಿ ಎಷ್ಟರಮಟ್ಟಿಗೆ ಶಿಥಿಲಗೊಂಡಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಈ ತೀರ್ಥಯಾತ್ರೆಯು ಖಾಸಗಿಯಾದುದಲ್ಲ.

ಆದರೆ ಸಾರ್ವಜನಿಕವಾದುದನ್ನು ಖಾಸಗಿಯಾಗಿ ಬಳಸಿಕೊಳ್ಳುತ್ತಿದ್ದಾರೆ. ನಮ್ಮ ಸಾರ್ವಜನಿಕ ಜೀವನಕ್ಕೆ ಆದರ್ಶವಾಗಬಹುದಾದ ಒಂದು ಘಟನೆಯನ್ನು ಸರ್.ಎಂ. ವಿಶ್ವೇಶ್ವರಯ್ಯನವರ ಬದುಕಿನ ಬಗ್ಗೆ ಜನರು ಹೇಳುತ್ತಾರೆ. ಅವರು ದಿವಾನರಾಗಿದ್ದಾಗ ಸಾರ್ವಜನಿಕ ಕಾರ್ಯಗಳಿಗಾಗಿ ರಾಜ್ಯದ ಬೇರೆ ಬೇರೆ ಭಾಗಗಳಿಗೆ ಟೂರು ಹೋಗುತ್ತಿದ್ದರು. ಅಲ್ಲಿ ಬಿಡಾರ ಹೂಡುತ್ತಿದ್ದರು. ಆಗ ಅವರ ಲಗೇಜಿನಲ್ಲಿ ಎರಡು ಕಟ್ಟು ಮೇಣದ ಬತ್ತಿಗಳು ಇರುತ್ತಿದ್ದವಂತೆ. ಯಾಕೆ ಹೀಗೆ ಅಂತ ವಿಚಾರಿಸಿದಾಗ ಕ್ಯಾಂಪಿನಲ್ಲಿ ಸಾರ್ವಜನಿಕ ಕೆಲಸದ ನಿಮಿತ್ತ ರಾತ್ರಿ ಕೆಲಸ ಮಾಡುವಾಗ ಸಾರ್ವಜನಿಕ ಲೆಕ್ಕದ ಮೇಣದ ಬತ್ತಿಗಳನ್ನು ಬಳಸುತ್ತಿದ್ದರಂತೆ. ಖಾಸಗಿ ಕೆಲಸಗಳು ಇದ್ದಾಗ ಖಾಸಗಿ ಮೇಣದ ಬತ್ತಿಗಳನ್ನು ಬಳಸುತ್ತಿದ್ದರಂತೆ.

ಇಲ್ಲಿ ಉಳಿತಾಯ ಮಹಾ ಎಷ್ಟಿದೆ ಎಂಬ ಪ್ರಶ್ನೆಯು ಮುಖ್ಯವಲ್ಲ. ಆದರೆ ಸಾರ್ವಜನಿಕ ಕೆಲಸ ಯಾವುದು ಖಾಸಗಿಯಾದುದು ಯಾವುದು ಎಂಬುದರ ಪರಿಜ್ಞಾನ ಅವರಿಗಿತ್ತು. ಇದು ಇಂದು ನಮ್ಮ ಸಾರ್ವಜನಿಕ ಜೀವನದಲ್ಲಿ ಕಾಣೆಯಾಗುತ್ತಿದೆ. ನಮ್ಮ ಸಂಸ್ಕೃತಿ ದಿವಾಳಿಯಾಗುತ್ತಿದೆ ಎಂದರೆ ಈ ಬಗೆಯ ಸಾರ್ವಜನಿಕ ಬದುಕಿನ ದುರುಪಯೋಗವನ್ನು ನಾನು ಹೇಳುತಿದ್ದೇನೆ. ಸಂಸ್ಕೃತಿ ಎಂದರೆ ಕೇವಲ ನಾಟಕ, ನೃತ್ಯ, ಸಂಗೀತ, ಸಿನಿಮಾ ಮಾತ್ರವಲ್ಲ. ನಮ್ಮ ಪ್ರತಿಯೊಂದು ವರ್ತನೆಯೂ ಸಂಸ್ಕೃತಿಯ ಭಾಗ.

ಇಂದು ಕರ್ನಾಟಕದಲ್ಲಿ ಸಂಸ್ಕೃತಿಯೆಂದರೆ ಮಠ-ಮಂದಿರಗಳಿಗೆ ಅನುದಾನ ನೀಡುವುದು, ಸರ್ಕಾರದ ಭದ್ರತೆಗೆ ಅಪಾಯ ಬಂದಾಗ ತೀರ್ಥಯಾತ್ರೆ ಹೋಗುವುದು, ಯಜ್ಞ-ಯಾಗ ನಡೆಸುವುದು, ದೇವಾಲಯಗಳನ್ನು ಕಟ್ಟಿಸುವುದು ಅಥವಾ ಅಂತಹ ಕೆಲಸಗಳಿಗೆ ದಾನ ನೀಡುವುದು ಮುಂತಾದವು ಎಂಬಂತಾಗಿದೆ. ಇಂದು ಸಂಸ್ಕೃತಿ

ಇಂದು ಕರ್ನಾಟಕದಲ್ಲಿ ಸಂಸ್ಕೃತಿಯೆಂದರೆ ಮಠ-ಮಂದಿರಗಳಿಗೆ ಅನುದಾನ ನೀಡುವುದು, ಸರ್ಕಾರದ ಭದ್ರತೆಗೆ ಅಪಾಯ ಬಂದಾಗ ತೀರ್ಥಯಾತ್ರೆ ಹೋಗುವುದು, ಯಜ್ಞ-ಯಾಗ ನಡೆಸುವುದು, ದೇವಾಲಯಗಳನ್ನು ಕಟ್ಟಿಸುವುದು ಅಥವಾ ಅಂತಹ ಕೆಲಸಗಳಿಗೆ ದಾನ ನೀಡುವುದು ಮುಂತಾದವು ಎಂಬಂತಾಗಿದೆ. ಇಂದು ಸಂಸ್ಕೃತಿ ಯೆಂಬುದು ಯಾವ ಮಟ್ಟಕ್ಕಿಳಿದಿದೆ ಎಂದರೆ ನಮ್ಮ ರಾಜಕಾರಣಿಗಳು ಸಾಮಾಜಿಕ ಸೂಕ್ಷ್ಮತೆಯನ್ನು ಮರೆತು 'ದೊಂಬರಾಟ', 'ಹಾದರ', ಜಾರಿಣಿ' ಎಂಬ ಪದಗಳನ್ನು ಎಷ್ಟು ಸಲೀಸಾಗಿ ಬಳಸುತ್ತಿದ್ದಾರೆಂದರೆ ಅದರ ಬಗ್ಗೆ ಕಿಂಚಿತ್ತೂ ಯೋಚಿಸುವುದಿಲ್ಲ.

ಯೆಂಬುದು ಯಾವ ಮಟ್ಟಕ್ಕಿಳಿದಿದೆ ಎಂದರೆ ನಮ್ಮ ರಾಜಕಾರಣಿಗಳು ಸಾಮಾಜಿಕ ಸೂಕ್ಷ್ಮತೆಯನ್ನು ಮರೆತು 'ದೊಂಬರಾಟ', 'ಹಾದರ', ಜಾರಿಣಿ' ಎಂಬ ಪದಗಳನ್ನು ಎಷ್ಟು ಸಲೀಸಾಗಿ ಬಳಸುತ್ತಿದ್ದಾರೆಂದರೆ ಅದರ ಬಗ್ಗೆ ಕಿಂಚಿತ್ತೂ ಯೋಚಿಸುವುದಿಲ್ಲ. ಈ ಪದಗಳು ಸಮಾಜದ ಕೆಲವು ವರ್ಗಗಳಿಗೆ ನೋವುಂಟು ಮಾಡುತ್ತವೆ ಎಂದು ಸಂಬಂಧಿಸಿದವರು, ವಿದ್ವಾಂಸರು, ಮತ್ತೆ ಮತ್ತೆ ಇದರ ದುರ್ಬಳಕೆ ಬಗ್ಗೆ ಪ್ರತಿಭಟನೆ ಮಾಡುತ್ತಿದ್ದರೂ ಸಾರ್ವಜನಿಕವಾಗಿ ರಾಜಕೀಯ ಮುತ್ಸದ್ದಿ(ಪುಡಾರಿಗಳು)ಗಳು ನಾಚಿಕೆ-ಹೇಸಿಗೆ ಇಲ್ಲದೆ ಬಳಸುತ್ತಿದ್ದಾರೆ.

ರಾಜಕಾರಣದಲ್ಲಿ ಬೈಗುಳಕ್ಕೆ ಮಹಿಳೆಗೆ ಸಂಬಂಧಿಸಿದ ನುಡಿಗಟ್ಟನ್ನೇ ಯಾಕೆ ಬಳಸುತ್ತಾರೆ? ಇಲ್ಲಿರುವ ಅಣಕವೆಂದರೆ ಈ ರಾಜಕಾರಣಿಗಳು 'ವಿಟ' ಎಂಬ ಪದವನ್ನು ಬಳಸುವುದಿಲ್ಲ. ಆದರೆ ಒತ್ತಿ ಒತ್ತಿ 'ಜಾರಿಣಿ, ಹಾದರ' ಎಂಬ ಪದವನ್ನು ಅಕ್ಟೋಬರ್ 9 ಮತ್ತು 10 ರಂದು ಟಿವಿಯವರ ಮುಂದೆ ಮುಖದ ಮೇಲೆ ಯಾವ ಸಂಕೋಚವೂ ಇಲ್ಲದೆ ನಮ್ಮ ನಾಯಕಮಣಿಗಳು ಉದುರಿಸುತ್ತಿದ್ದರು. ಇವರು ತಮ್ಮನ್ನು ತಾವು 'ಸಂಸ್ಕೃತಿಯ ರಕ್ಷಕ' ರೆಂದು ಕರೆದುಕೊಳ್ಳುತ್ತಾರೆ. ಇವರ ಸಂಸ್ಕೃತಿಯು ಮಹಿಳೆಯರ ಬಗ್ಗೆ ಯಾವ ಗೌರವವನ್ನು ಇಟ್ಟುಕೊಂಡಂತೆ ಕಾಣುವುದಿಲ್ಲ. ಇದನ್ನೇ ಇಲ್ಲಿ ಸಂಸ್ಕೃತಿಯನ್ನು ಭ್ರಷ್ಟಗೊಳಿಸುವ ಕ್ರಮವೆಂದು ಕರೆಯಲಾಗಿದೆ.

ಸಂಸ್ಕೃತಿಯೆನ್ನುವುದು ಸಮಾಜದ ಎಲ್ಲರನ್ನೂ ಒಳಗೊಳ್ಳುವಂತಿರಬೇಕು. 'ಆನು ದೇವ ಹೊರಗಣವನು' ಎನ್ನುವುದಕ್ಕೆ ಪ್ರತಿಯಾಗಿ 'ನಾನು ದೇವ ಒಳಗಣವನು' ಎನ್ನುವುದು ಸಂಸ್ಕೃತಿ. ಅಲ್ಲಿ ಕಿಂಚಿತ್ತೂ ತಾರತಮ್ಯಕ್ಕೆ ಆಸ್ಪದವಿರ ಕೂಡದು. ಇಂದು ಈ ತಾರತಮ್ಯವೆನ್ನುವುದು ರಾಜಾರೋಷವಾಗಿ ಜನರು ನಡೆಸುತ್ತಿದ್ದಾರೆ. ಎಲ್ಲದಕ್ಕಿಂತ ಹೆಚ್ಚಿನ ಅಪಾಯ ಯಾವುದೆಂದರೆ ಇಂತಹ ಕೆಲಸಗಳನ್ನು ಸಮರ್ಥಿಸಿಕೊಳ್ಳುತ್ತಿರುವುದು. ಈ ಸಮರ್ಥನೆಯನ್ನು ಹೆಣೆಯುವುದಕ್ಕಾಗಿಯೇ ಇಂದು ಸರ್ಕಾರ ಕೆಲವು 'ರಾಜರ್ಷಿ' ಗಳನ್ನು ಸಾಕಿಕೊಂಡಿದೆ. ಅವರ ಸಂಸ್ಕೃತಿ 'ಜಿ ಹುಜೂರ್' ಸ್ವರೂಪದ್ದಾಗಿದೆ ಮತ್ತು ಸೀಮಿತ ವ್ಯಾಪ್ತಿಯದ್ದಾಗಿದೆ.

ರಾಜಕೀಯ ದಿವಾಳಿತನ

ರಾಜಕಾರಣವೆನ್ನುವುದಕ್ಕೆ ಬಹಳ ಸೀಮಿತವಾದ ಅರ್ಥ ಬಂದು ಬಿಟ್ಟಿದೆ. ಅದನ್ನು ಪಕ್ಷ ರಾಜಕಾರಣದಿಂದ ಪ್ರತ್ಯೇಕವಾಗಿ ನೋಡುವ ಕ್ರಮವೇ ರೂಢಿಗೆ ಬಂದಿಲ್ಲ. ಪುಡಾರಿತನವೇ ರಾಜಕಾರಣವಾಗಿ ಬಿಟ್ಟಿದೆ. ಅದೊಂದು ಅಸಹ್ಯಕರವಾದ ಸಂಗತಿಯೆನ್ನುವಂತೆ ಕಾಣಲಾಗುತ್ತಿದೆ. ಅದರ ವಿಸ್ತೃತವಾದ ಮತ್ತು ಜ್ಞಾನಶಿಸ್ತುವಿನ ಚೌಕಟ್ಟಿನಲ್ಲಿ ಅದನ್ನು ನಾವು ಪರಿಭಾವಿಸಿಕೊಳ್ಳುವ ಕ್ರಮವನ್ನು ರೂಢಿಸಿಕೊಳ್ಳಬೇಕಾಗಿದೆ. ಈ ಬಗೆಯ ಸೀಮಿತತನದಿಂದ, ಪುಡಾರಿತನದ ಚೌಕಟ್ಟಿನಿಂದ ಯಾವ ರಾಜಕೀಯ ಪಕ್ಷಗಳು ಇಂದು ಹೊರತಾಗಿಲ್ಲ. ಹಾಗೆ ನೋಡಿದರೆ ಇಂದು ರಾಜಕೀಯ ಪಕ್ಷಗಳ ಮಧ್ಯದಲ್ಲಿನ ವ್ಯತ್ಯಾಸವೇ ಅಳಿಸಿಹೋದಂತೆ ಕಾಣುತ್ತದೆ.

ಎಲ್ಲ ಪಕ್ಷದವರು ಎಲ್ಲ ಪಕ್ಷದಲ್ಲಿರುತ್ತಾರೆ. ಪಕ್ಷಬೇಧವೆನ್ನುವುದು ಇಂದು ಮರೆಯಾಗಿ ಬಿಟ್ಟಿದೆ. ಪಕ್ಷಗಳಿಗೆ ಇಂದು ರ್‍ಯಾಂಕ್ ಆಂಡ್ ಫೈಲ್ ಎಂಬುದುರ ಅರ್ಥವೇ ತಿಳಿದಂತೆ ಇಲ್ಲ. ರಾಜಕಾರಣವೆಂದರೆ ಪುಡಾರಿತನವಲ್ಲ. ಅದು ಜನರು ತಮ್ಮ ಹಕ್ಕುಗಳನ್ನು, ಅಧಿಕಾರವನ್ನು ಒತ್ತಾಯಿಸುವ ಕ್ರಮವಾಗಿದೆ. ಅದಕ್ಕಾಗಿ ಪ್ರಭುತ್ವದ ಜೊತೆಯಲ್ಲಿ ಅನುಸಂಧಾನ ನಡೆಸುವುದು ರಾಜಕಾರಣ. ಈ ರಾಜಕಾರಣವೆಂಬುದು ಯಾವಾಗಲು ಒಳ್ಳೆಯದಿರುತ್ತದೆ ಎಂದು ಭಾವಿಸಬೇಕಾಗಿಲ್ಲ. ಪ್ರಜಾಪ್ರಭುತ್ವವೆಂದರೆ 'ಅನುಸಂಧಾನಾತ್ಮಕ ಸರ್ಕಾರ'ವೆಂಬ ಅರ್ಥವಿದೆ. ಆದರೆ ನಮ್ಮಲ್ಲಿ ಅನುಸಂಧಾನವೆಂಬುದು ಸಾಧ್ಯವಿಲ್ಲ. ಅದು ನಮ್ಮ ಪರಂಪರೆಯಲ್ಲ. ಮಾತಾಡುವ ಹಕ್ಕನ್ನು ನಿಷೇಧಿಸಿದ ಪರಂಪರೆ ನಮ್ಮದಾಗಿದೆ. ಅಲ್ಲಿ ಇರುವುದೇನಿದ್ದರೂ ಪಾಳೆಯಗಾರಿಕೆ. ಅದು ಕೇವಲ ಸಾರ್ವಜನಿಕವಾದುದಲ್ಲ. ಅದು ಖಾಸಗಿಯಾದುದು ಆಗಬಹುದು. ಅದು ಕೌಟುಂಬಿಕ ಸಂಬಂಧಗಳು ಆಗಬಹುದು.

ಈ ರಾಜಕಾರಣವೆಂಬುದು ಆಧ್ಯಾತ್ಮವನ್ನು ಬಿಟ್ಟಿಲ್ಲ. ಆದರೆ ಅದು ಪಕ್ಷ ರಾಜಕಾರಣವಲ್ಲ. ಇದಕ್ಕೆ ಬಸವಣ್ಣನ ಈ ವಚನ ನೋಡಿ

ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ ಬಳಗವನ್ನೆಲ್ಲ?
ಕೋಳಿ ಒಂದು ಗುಟುಕ ಕಂಡರೆ ಕೂಗಿ ಕರೆಯದೆ ತನ್ನ ಕುಲವನ್ನೆಲ್ಲ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಆ ಕಾಗೆ-ಕೋಳಿಗಳಿಗಿಂತ ಕರಕಷ್ಟ ಕೂಡಲಸಂಗಮದೇವಾ.

ಇದು ಸಾತ್ವಿಕವಾದ ರಾಜಕಾರಣ. ಅವನು ಭಕ್ತಿಪಕ್ಷದ ಬಗ್ಗೆ ಮಾತನಾಡುತ್ತಿದ್ದಾನೆ. ಆದರೆ ಇಂದು ಪಕ್ಷ

ಡಾ. ಟಿ. ಆರ್ ಚಂದ್ರಶೇಖರ್ ಅವರ 'ಧರೆ ಹತ್ತಿ ಉರಿದರೆ' ಅಂಕಣ ಈ ಸಂಚಿಕೆಯೊಂದಿಗೆ ಮುಕ್ತಾಯವಾಗುತ್ತಿದೆ. ಕಳೆದ ಇಪ್ಪತ್ತೇಳು ಸಂಚಿಕೆಗಳಲ್ಲಿ ಅವರು ಬರೆದ ಸಂಶೋಧನಾತ್ಮಕ ಲೇಖನಗಳು 'ಸಂವಾದ'ದ ಓದುಗರ ಅರಿವಿನ ವಿಸ್ತಾರಕ್ಕೆ ಸಹಕಾರಿಯಾಗಿವೆ. ಸರ್ಕಾರ ಹಾಗೂ ಸಮಾಜದ ವೈಫಲ್ಯಕ್ಕೆ ಹಿಡಿದ ಕನ್ನಡಿಯಾಗಿವೆ. ಅವರ ಸಹಕಾರಕ್ಕೆ 'ಸಂವಾದ' ಕೃತಜ್ಞತೆ ಸಲ್ಲಿಸುತ್ತದೆ. – ಸಂಪಾದಕ

ರಾಜಕಾರಣವು ಪಕ್ಷಪಾತ ಕ್ರಮವಾಗಿದೆ. ಇದಕ್ಕೆ ನಿದರ್ಶನಗಳಿಗಾಗಿ ನಾವು ಬಹಳ ದೂರ ಹೋಗಬೇಕಾಗಿಲ್ಲ. ಕರ್ನಾಟಕವು ಪ್ರತಿದಿನವೂ ಇದನ್ನು ಇಂದು ಅನುಭವಿಸುತ್ತಿದೆ. ಇದು ರಾಜಕೀಯ ದಾರಿದ್ರ್ಯವನ್ನು ತೋರಿಸುತ್ತದೆ. ಈ ಬಗೆಯ ರಾಜಕಾರಣ ಮಾಡುವವರು ಮಾತು ಮಾತಿಗೆ ಉದುರಿಸುವ ಸಂಗತಿಯೆಂದರೆ 'ನಮಗೆ ಜನಾದೇಶ ಸಿಕ್ಕಿದೆ' ಎಂಬುದಾಗಿದೆ. ಈ ಜನಾದೇಶವೆನ್ನುವುದು ಎಷ್ಟು ತೆಳುವಾಗಿರುತ್ತದೆ ಎಂಬುದನ್ನು ಇವರು ಕಂಡುಕೊಂಡಂತೆ ಕಾಣುವುದಿಲ್ಲ. ಮೊನ್ನೆ ನಡೆದ ಎರಡು ಉಪ ಚುನಾವಣೆಯಲ್ಲಿ ಎರಡೂ ಕ್ಷೇತ್ರದಿಂದ ಆಳುವ ಪಕ್ಷವು ಪಡೆದುಕೊಂಡ ಮತಗಳ ಪ್ರಮಾಣ ಕೇವಲ ಶೇ37. ಉಳಿದ ಶೇ63 ವಿರೋಧ ಪಕ್ಷಗಳಿಗೆ ಸಂದಿವೆ.

ಇಲ್ಲಿ ಯಾವುದು ಜನಾದೇಶ? ಪ್ರಜಾಪ್ರಭುತ್ವದಲ್ಲಿ ಒಂದು ಸಂಪ್ರದಾಯವನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಅದರ ಪ್ರಕಾರ ಆಳುವ ಪಕ್ಷವಿರಲಿ ಅಥವಾ ಆಳುವುದಕ್ಕೆ ಸಿದ್ಧವಿರುವ ಪಕ್ಷವಿರಲಿ ಯಾರೂ ಶೇ 50ಕ್ಕಿಂತ ಅಧಿಕ ಮತಗಳನ್ನು ಪಡೆದುಕೊಳ್ಳುವುದಿಲ್ಲ. ಆದ್ದರಿಂದ ವಿರೋಧ ಪಕ್ಷಗಳನ್ನು ಮನ್ನಿಸುವುದು, ಅವರ ನೆರವನ್ನು ಪಡೆದುಕೊಳ್ಳುವುದು, ಅದರ ಸಲಹೆಯನ್ನು ಗೌರವದಿಂದ ಪರಿಗಣಿಸುವುದು ರಾಜಕಾರಣ, ಅದಿಲ್ಲದಿದ್ದರೆ ಅದು ಪುಡಾರಿತನವಾದೀತು. ಇಂದು 'ನಾನೇ ಸರ್ಕಾರ' ಎಂದು ಅಬ್ಬರಿಸುವವರಿಗೆ ಪುಡಾರಿಯೆನ್ನಬೇಕೇ ವಿನಾ ಮುತ್ಸದ್ದಿಯೆಂದಲ್ಲ.

ಹೀಗೆ ರಾಜಕಾರಣವನ್ನು ನಿರ್ವಚಿಸಿಕೊಂಡರೆ ನಮ್ಮ ರಾಜಕಾರಣ ಯಾವ ಬಗೆಯ ಬಡತನದಿಂದ ನರಳುತ್ತಿದೆ ಎಂಬುದು ತಿಳಿಯುತ್ತದೆ. ಇದನ್ನೇ ಇಲ್ಲಿ ನಾನು ರಾಜಕೀಯ ದಿವಾಳಿತನವೆಂದು ಕರೆಯುತ್ತಿದ್ದೇನೆ. ಪ್ರಜಾತಂತ್ರವನ್ನು ಬೋಧಿಸುವ ನಮ್ಮ ರಾಜಕೀಯ ಪಕ್ಷಗಳು ತಮ್ಮ ಪಕ್ಷದೊಳಗೆ ಅದನ್ನು ಮಾತ್ರ ಪಾಲಿಸುವುದಿಲ್ಲ.

ಯಾವ ಸಾರ್ವಜನಿಕ ಸಂಗತಿಗಳನ್ನು ನಮ್ಮ ರಾಜಕಾರಿಣಿಗಳು ರಾಜಕೀಕರಣ ಮಾಡುತ್ತಿದ್ದಾರೆ? 'ನಾನು 2006, ಅಕ್ಟೋಬರ್ 11'ರಲ್ಲಿ ಹೇಳಿದಂತೆ ಗೋಲಿಯಾಡುವುದರಲ್ಲೂ ಕೂಡ ಸೋತಿಲ್ಲ. ಇನ್ನು ರಾಜಕಾರಣದಲ್ಲಿ ಸೋಲುವುದು ಸಾಧ್ಯವೇ ಇಲ್ಲ' ಎಂದು ದಿನಾಂಕ, ತಿಂಗಳು ಮತ್ತು ವರ್ಷವನ್ನು ಮರೆಯದೆ ಹೇಳುವ ನಮ್ಮ ನಾಯಕರೊಬ್ಬರು ತಾವೇ ಕಳೆದ ವರ್ಷ(2009) ನೆರೆ ಸಂತ್ರಸ್ತರಿಗೆ ಸ್ವಂತ ಬಂಡವಾಳದಿಂದ '50000' ಮನೆ ಕಟ್ಟಿಸಿಕೊಡುತ್ತೇವೆಂದು ಆಶ್ವಾಸನೆ ನೀಡಿದ್ದು ಮಾತ್ರ ನೆನಪಿಗೆ ಬರುವುದಿಲ್ಲ. ವಾಸ್ತವವಾಗಿ ಅವರ ಜಿಲ್ಲೆಯ ಹತ್ತಾರು ಗ್ರಾಮಗಳ ನೆರೆ ಸಂತ್ರಸ್ತರಿಗೆ ಮನೆ ಕಟ್ಟಿಸಿ ಕೊಡುತ್ತಿರುವ ದಾನಿಗಳ ಪಟ್ಟಿಯಲ್ಲಿ ಈ ಸಚಿವರ ಕಂಪನಿಯ ಹೆಸರೇ ಇಲ್ಲ. ಇದು ರಾಜಕಾರಣವಲ್ಲ. ಇದು ಪಕ್ಷ ರಾಜಕಾರಣ.

ನಮ್ಮ ಉತ್ತರ ಕರ್ನಾಟಕದ ಜನರಿಗೆ, ಅದರಲ್ಲೂ ಗುಲಬರ್ಗಾ ವಿಭಾಗದ ಜನರು ತಾವು ಅನುಭವಿಸುತ್ತಿರುವ ಅಸಮಾನತೆ, ಪಕ್ಷಪಾತ, ತಾರತಮ್ಯಗಳನ್ನು ರಾಜಕೀಯಗೊಳಿಸುವುದರಲ್ಲಿ ವಿಫಲರಾಗಿದ್ದಾರೆ. ಡಾ.ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯ ಬಾಬ್ತು ವಾರ್ಷಿಕ ಗುಲಬರ್ಗಾ ವಿಭಾಗಕ್ಕೆ ದೊರೆಯುವ ಸಾವಿರಾರು ಕೋಟಿ ರೂಪಾಯಿಯನ್ನು ಪಡೆದುಕೊಳ್ಳುವುದು ಅದಕ್ಕೆ ಸಾಧ್ಯವಾಗಿಲ್ಲ. ಇದನ್ನು ರಾಜಕೀಯಗೊಳಿಸಬೇಕು. ಆದರೆ ಈ ವಿಭಾಗದ ಕೆಲವು ಶಾಸಕರು ಕೈಲಿರುವುದನ್ನು ಬಿಟ್ಟು 'ಸಂವಿಧಾನದ 321ನೆಯ ತಿದ್ದುಪಡಿ'ಯ ಬಗ್ಗೆ ಚಳುವಳಿ ನಡೆಸುವಲ್ಲಿ ನಿರತರಾಗಿದ್ದಾರೆ. ಈ ತಿದ್ದುಪಡಿ ಇರಲಿ. ಆದರೆ ಪ್ರತಿ ವರ್ಷ ಬಜೆಟ್ಟಿನಲ್ಲಿ ಘೋಷಿಸುವ ಸಾವಿರಾರು ಕೋಟಿ ರೂಪಾಯಿ ವಿಭಾಗಕ್ಕೆ ಯಾಕೆ ದೊರೆಯುತ್ತಿಲ್ಲ? ಅವನ್ನು ಪಡೆದುಕೊಳ್ಳುವುದು ನಮ್ಮ ಸದರಿ ವಿಭಾಗದ ಶಾಸಕರ ಜವಾಬುದಾರಿ ತಾನೆ? ಈ 'ಇರುವುದ ಬಿಟ್ಟು ಇರದುದರ ಕಡೆಗೆ' ಯಾಕೆ ವ್ಯಸನ ಬೆಳೆಸಿ ಕೊಳ್ಳಬೇಕು? ಇದು ಜನರ ರಾಜಕಾರಣವಲ್ಲ. ಅದು ಪ್ರತಿಷ್ಠಿತರ ರಾಜಕಾರಣ.

ಸಾಮಾಜಿಕ ರಾಜಕಾರಣ

ಸಾಮಾಜಿಕತೆಯೆಂದರೆ ನಮ್ಮ ಸಮಾಜದ ಬಹುರೂಪಿ ಸ್ವರೂಪವನ್ನು ಮನ್ನಿಸುವುದು. ನಮ್ಮದು ಮೂಲಭೂತವಾಗಿ ಬಹುರೂಪಿ ಸಂಸ್ಕೃತಿ. ಇದಕ್ಕೆ ಇಂದು ದಕ್ಕೆ ಉಂಟಾಗಿದೆ. ನಮ್ಮ ಸಮಾಜವನ್ನು ಏಕರೂಪೀಕರಣಕ್ಕೆ ಒಳಪಡಿಸುವ ಹುನ್ನಾರ ನಡೆದಿದೆ. ಈ ಹಿನ್ನೆಲೆಯಲ್ಲಿ ಜಾತಿಗಣತಿಯ ಬಗೆಗಿನ ವಿರೋಧವನ್ನು ನಾವು ಪರಿಭಾವಿಸಿಕೊಳ್ಳಬೇಕು. ನಮ್ಮ ಆರ್ಥಿಕ ನೀತಿಗಳು, ಅಭಿವೃದ್ಧಿ ಕಾರ್ಯಕ್ರಮಗಳು ಸಾಮಾಜಿಕತೆಗೆ ಬೆನ್ನು ತಿರುವಿರುವುದರಿಂದ ಅವುಗಳಿಗೆ ನಿರೀಕ್ಷಿಸಿದ ಮಟ್ಟದಲ್ಲಿ ಜನರಿಗೆ ಅನುಕೂಲಗಳನ್ನು ಒದಗಿಸುವುದು ಸಾಧ್ಯವಾಗುತ್ತಿಲ್ಲ.

ನಮ್ಮ ಸಮಾಜವು ಶ್ರೇಣೀಕರಣದಿಂದ ಕೂಡಿರುವುದರಿಂದ ಅಲ್ಲಿ ಅಭಿವೃದ್ಧಿಯೂ ಕೂಡ ಶ್ರೇಣೀಕೃತವಾಗಿ ಸಂಭವಿಸುತ್ತಿದೆ. ಇದನ್ನು ನಾವು ಗಮನಿಸಬೇಕಾಗುತ್ತದೆ. ಲಿಂಗ ಸಂಬಂಧಿ, ಜಾತಿ ಸಂಬಂಧಿ, ಪ್ರದೇಶ ಸಂಬಂಧಿ ಅಸಮಾನತೆಗಳ ಮೂಲದಲ್ಲಿ ಸಾಮಾಜಿಕತೆಯಿಂದ ಅಲಾಯದವಾಗಿರುವ ಆರ್ಥಿಕ ನೀತಿಗಳು ಮುಖ್ಯ ಕಾರಣಗಳಾಗಿವೆ. ಸಮಾಜದ ಬಹುರೂಪಿ ಸ್ವರೂಪವನ್ನು ಮನ್ನಿಸದೆ ನಾವು ನಮ್ಮ ಶಿಕ್ಷಣವನ್ನು ನಿರ್ವಹಿಸುತ್ತಿರುವುದರಿಂದ ಅಲ್ಲಿ ಜನರಿಗೆ ನಿರೀಕ್ಷಿಸಿದ ಸಾಧನೆ ಮಾಡುವುದು ಸಾಧ್ಯವಾಗುತ್ತಿಲ್ಲ. ಐಐಟಿಗಳು, ಐಐಎಂಗಳು, ಐಟಿ, ಬಿಟಿ, ಎನ್‌ಟಿಗಳು ಮುಂತಾದವುಗಳು ತಂದಿರುವ ಕ್ರಾಂತಿಯು ಜನರನ್ನು ಒಳಗೊಳ್ಳುವ ರೀತಿಯಲ್ಲಿಲ್ಲ. ಅಲ್ಲಿ ಸಾಮಾಜಿಕತೆಯನ್ನು ದೂರವಿಡಲಾಗಿದೆ. ಇದನ್ನು ಉದ್ದೇಶಪೂರ್ವಕವಾಗಿ ಮಾಡಲಾಗಿದೆ. ಅಲ್ಲಿ ಕೆಲಸ ಮಾಡುವ ಜನರಿಗೆ ಭಾರತವೆನ್ನುವುದು ಅಮೆರಿಕಕ್ಕಿಂತ ಭಿನ್ನವಾಗಿ ಕಾಣುವುದಿಲ್ಲ. ಅವರಿಗೆ ಟ್ರಾಫಿಕ್ ಜಾಮುಗಳು ಮುಖ್ಯ ಸಮಸ್ಯೆ. ಲೋಡ್ ಶೆಡ್ಡಿಂಗ್ ಅವರಿಗೆ ಕಿರಿಕಿರಿ ಉಂಟು ಮಾಡುತ್ತದೆ.

ನಮ್ಮ ಸಮಾಜವು ಶ್ರೇಣೀಕರಣದಿಂದ ಕೂಡಿರುವುದರಿಂದ ಅಲ್ಲಿ ಅಭಿವೃದ್ಧಿಯೂ ಕೂಡ ಶ್ರೇಣೀಕೃತವಾಗಿ ಸಂಭವಿಸುತ್ತಿದೆ. ಇದನ್ನು ನಾವು ಗಮನಿಸಬೇಕಾಗುತ್ತದೆ. ಲಿಂಗ ಸಂಬಂಧಿ, ಜಾತಿ ಸಂಬಂಧಿ, ಪ್ರದೇಶ ಸಂಬಂಧಿ ಅಸಮಾನತೆಗಳ ಮೂಲದಲ್ಲಿ ಸಾಮಾಜಿಕತೆಯಿಂದ ಅಲಾಯದವಾಗಿರುವ ಆರ್ಥಿಕ ನೀತಿಗಳು ಮುಖ್ಯ ಕಾರಣಗಳಾಗಿವೆ. ಸಮಾಜದ ಬಹುರೂಪಿ ಸ್ವರೂಪವನ್ನು ಮನ್ನಿಸದೆ ನಾವು ನಮ್ಮ ಶಿಕ್ಷಣವನ್ನು ನಿರ್ವಹಿಸುತ್ತಿರುವುದರಿಂದ ಅಲ್ಲಿ ಜನರಿಗೆ ನಿರೀಕ್ಷಿಸಿದ ಸಾಧನೆ ಮಾಡುವುದು ಸಾಧ್ಯವಾಗುತ್ತಿಲ್ಲ. ಐಐಟಿಗಳು, ಐಐಎಂಗಳು, ಐಟಿ, ಬಿಟಿ, ಎನ್‌ಟಿಗಳು ಮುಂತಾದವುಗಳು ತಂದಿರುವ ಕ್ರಾಂತಿಯು ಜನರನ್ನು ಒಳಗೊಳ್ಳುವ ರೀತಿಯಲ್ಲಿಲ್ಲ. ಅಲ್ಲಿ ಸಾಮಾಜಿಕತೆಯನ್ನು ದೂರವಿಡಲಾಗಿದೆ. ಇದನ್ನು ಉದ್ಧೇಶಪೂರ್ವಕವಾಗಿ ಮಾಡಲಾಗಿದೆ.

ನಮ್ಮ ದೇಶದಲ್ಲಿ ಇವು ನಮ್ಮ ಸಮಸ್ಯೆಗಳೆ? ಸಾಮಾಜಿಕತೆಗೆ ಕುರುಡಾದರೆ ಇಂತಹ ಸಮಸ್ಯೆಗಳು ಉದ್ಭವವಾಗುತ್ತವೆ. ನಮ್ಮಲ್ಲಿ ಭಾಷೆಗೆ ಸಂಬಂಧಿಸಿದಂತೆ ಯಾರೂ ಕೇಳದಿದ್ದ ಸಂಸ್ಕೃತ ಬಾಷೆಗೆ ಒಂದು ವಿಶ್ವವಿದ್ಯಾಲಯವನ್ನು ಸರ್ಕಾರ ನಿರ್ಮಿಸಿದೆ. ಇರುವ ವಿವಿಗಳಲ್ಲಿನ ಸಂಸ್ಕೃತ ವಿಭಾಗಗಳಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿಲ್ಲ. ಯಾರೂ ಕೇಳದಿದ್ದ ಶ್ರೀಕೃಷ್ಣದೇವರಾಯನಿಗೆ ಸರ್ಕಾರವು ನೂರಾರು ಕೋಟಿ ಅನುದಾನ ಕೊಟ್ಟು ಟ್ರಸ್ಟ್‌ವೊಂದನ್ನು ಸ್ಥಾಪಿಸಿದೆ. ಸರ್ಕಾರವೊಂದಕ್ಕೆ ಯಾವುದು ಸಮಾಜದಲ್ಲಿ ಮುಖ್ಯ, ಯಾವುದು ಅಲ್ಲ ಎಂಬುದರ ವಿವೇಚನೆ ಇಲ್ಲದಿದ್ದರೆ ಆಗುವುದೇ ಹೀಗೆ.

ಇಂದು ನಮ್ಮ ಸರ್ಕಾರಕ್ಕೆ ಸಾಮಾಜಿಕ ಹರವು ಇಲ್ಲ. ಅದು ತನ್ನ ದೇವರು-ದಿಂಡರ ನಡುವೆ ಮುಳುಗಿ ಹೋಗಿದೆ. ವೈದಿಕ ದೇವರುಗಳಿಗೆ ಒಳ್ಳೆಯ ಕಾಲ ಬಂದಿದೆ. ಲಕ್ಷಾಂತರ ಮಂದಿ ನೆರೆ ಹಾವಳಿಯಿಂದ ಮನೆ, ಆಸ್ತಿ, ಜಾನುವಾರುಗಳನ್ನು ಕಳೆದುಕೊಂಡು ಹಾಹಾಕಾರ ಪಡುತ್ತಿದ್ದರೆ ಸರ್ಕಾರವು ಮಂತ್ರಾಲಯಕ್ಕೆ ಹತ್ತು ಕೋಟಿ ಪರಿಹಾರವನ್ನು ನೀಡಿಬಿಡುತ್ತದೆ. ಅದೊಂದು ಸಾಮಾಜಿಕತೆಗೆ ಸೊಪ್ಪಾಕದ ಸಂಸ್ಥೆ. ಈ ಸರ್ಕಾರವು ಯಾರು ಯಾರಿಗೆ ಅನುದಾನ ನೀಡುತ್ತಿದೆಯೋ ಅವರೆಲ್ಲ ಸಾಮಾಜಿಕತೆಗೆ ಕುರುಡಾಗಿದ್ದಾರೆ.

ಆರ್ಥಿಕ ದಾರಿದ್ರ್ಯ

ಬಜೆಟ್ಟಿಗೆ ಜನಿವಾರ ತೊಡಿಸಲಾಗಿದೆ. ಅದರ ಅರ್ಥವನ್ನೇ ಭ್ರಷ್ಟಗೊಳಿಸಲಾಗಿದೆ. ಮೊನ್ನೆ ಮೊನ್ನೆ ಗುಲಬರ್ಗಾದಲ್ಲಿ ನಡೆದ ಸಂಪುಟ ಸಭೆಯಲ್ಲಿ ಆ ವಿಭಾಗದ ಅಭಿವೃದ್ಧಿಗೆ ರೂ 2676 ಕೋಟಿ ಮೊತ್ತದ ಕಾಮಗಾರಿಗಳನ್ನು ಘೋಷಿಸಲಾಗಿದೆ. ಈಗಾಗಲೆ ಅದಕ್ಕೆ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯಲ್ಲಿ 2010-11ನೆಯ ಸಾಲಿನಲ್ಲಿ ರೂ1000 ಕೋಟಿಗೂ ಮಿಕ್ಕಿ ಅನುದಾನ ನಿಗದಿಯಾಗಿದೆ.

ಅದನ್ನು ಖರ್ಚು ಮಾಡಲಾಗುತ್ತಿಲ್ಲ. ಕಳೆದ ವರ್ಷ ಅಂದರೆ 2008-09ರಲ್ಲಿ ಬಜೆಟ್ಟಿನಲ್ಲಿ ಸರ್ಕಾರ ನಿಗದಿಪಡಿಸಿದ್ದ ಯೋಜನಾ ವೆಚ್ಚ ರೂ25000 ಕೋಟಿ. ಆದರೆ ಅದು ಖರ್ಚು ಮಾಡಿದ್ದು ಕೇವಲ ರೂ22000 ಕೋಟಿ. ಅರ್ಥಶಾಸ್ತ್ರಕ್ಕೂ ಧರ್ಮಶಾಸ್ತ್ರಕ್ಕೂ ನಡುವೆ ಭಿನ್ನತೆಯನ್ನು ಇಂದು ಅಳಿಸಿ ಹಾಕಲಾಗಿದೆ. ಒಂದು ಸಾರಿ ಕೃಷಿಯ ಬಗ್ಗೆ, ಮತ್ತೊಮ್ಮೆ ಸಾವಯವ ಕೃಷಿಯ ಬಗ್ಗೆ, ಮಗದೊಮ್ಮೆ ಜಾಗತಿಕ ಹೂಡಿಕೆದಾರರ ಸಮಾವೇಶದ ಬಗ್ಗೆ, ಇನ್ನೊಮ್ಮೆ ಡಾ.ಡಿ.ಎಂ.ನಂಜುಂಡಪ್ಪ ಸಮಿತಿ ವರದಿ ಬಗ್ಗೆ ಮಾತನಾಡಲಾಗುತ್ತಿದೆ. ಆದರೆ ಇದಾವುದು ದಡ ಸೇರುತ್ತಿಲ್ಲ. ಅಭಿವೃದ್ಧಿಯೆನ್ನುವುದು ನಿಸ್ತೇಜವಾಗಿ ಬಿದ್ದು ಬಿಟ್ಟಿದೆ. ಜನರು ತಮ್ಮ ನೆಲೆಯಲ್ಲಿ ದುಡಿಮೆ ಮಾಡಿಕೊಳ್ಳುತ್ತಾ

ದೇಶವನ್ನು ಕಟ್ಟುತ್ತಿದ್ದಾರೆ. ಕುವೆಂಪು ಹೇಳಿದ ಹಾಗೆ
'ರಾಜ್ಯಗಳುದಿಸಲಿ, ರಾಜ್ಯಗಳಳಿಯಲಿ,
ಹಾರಲಿ ಗದ್ದುಗೆ ಮುಕುಟಗಳು,
ಮುತ್ತಿಗೆ ಹಾಕಲಿ ವೈರಿಗಳೆಲ್ಲ
ಬಿತ್ತುವುದನವ ಬಿಡುವುದೆ ಇಲ್ಲ'.

ದುಡಿಯುವ ವರ್ಗದ ಬಗ್ಗೆ ಇಂದಿನ ಸರ್ಕಾರಗಳು ತೋರಿಸುತ್ತಿರುವಷ್ಟು ಔದಾಸೀನ್ಯವನ್ನು ಹಿಂದೆ ಯಾವತ್ತೂ ಯಾವ ಸರ್ಕಾರಗಳು ತೋರಿಸಿರಲಿಲ್ಲ. 'ಜಮೀನು ನೀಡಿರಿ: ಉದ್ಯೋಗ ಪಡೆಯಿರಿ' ಎಂಬ ಘೋಷಣೆಯನ್ನು ಇಂದಿನ ಸರ್ಕಾರ ನಮಗೆ ನೀಡಿದೆ. ಆದರೆ ಈ ಖಾಸಗಿ ಉದ್ದಿಮೆಗಳು ನಮ್ಮ ರೈತಾಪಿ ಮಕ್ಕಳಿಗೆ ಯಾವ ಬಗೆಯ ಕೆಲಸ ಕೊಟ್ಟಾವು? ಒಂದು ವೇಳೆ ಅವು ಜಾಗತಿಕ ಬಿಕ್ಕಟ್ಟಿನಿಂದಾಗಿ ಮುಚ್ಚಿ ಬಿಟ್ಟರೆ ಜಮೀನು ಕಳೆದುಕೊಂಡ ರೈತ ಈಗ ಕೆಲಸವನ್ನು ಕಳೆದುಕೊಂಡು ಏನು ಮಾಡಬೇಕು? ಈ ಬಗೆಯ ಮುಂದಾಲೋಚನೆಯಿಲ್ಲದ ಸರ್ಕಾರ ನಮ್ಮ ಜನರನ್ನು ದಿವಾಳಿಯೆಬ್ಬಿಸುತ್ತಿದೆ.

ನಮ್ಮ ರಾಜ್ಯವು ಇಂದು ವರಮಾನದಲ್ಲಿ ಶ್ರೀಮಂತವಾಗಿರಬಹುದು. ಅದರ ವರಮಾನವು ತೀವ್ರ ಗತಿಯಲ್ಲಿ ಏರಿಕೆಯಾಗುತ್ತಿರಬಹುದು. ಆದರೆ ಜನರ ಬದುಕು ಯಾವ ರೀತಿಯಲ್ಲಿದೆ? ಶಾಲೆ ಬಿಟ್ಟ ಮಕ್ಕಳ ಬಗ್ಗೆ ಪ್ರಸ್ತುತ ಸರ್ಕಾರ ಏನು ಮಾಡುತ್ತಿದೆ? ದುಡಿಮೆಗಾರ ಮಹಿಳೆಯರ ಪೌಷ್ಟಿಕತೆ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ? ಬಂಡವಾಳದಿಂದ, ವಿದೇಶಿ ಬಂಡವಾಳದಿಂದ ಎಲ್ಲವನ್ನು ಸಾಧಿಸುತ್ತೇವೆ ಎಂಬುದು ಕೇವಲ ಹುಂಬತನವಾದೀತು. ಅಲ್ಲಿ ಅರ್ಥಿಕ ವಿವೇಕ ಕಾಣುವುದಿಲ್ಲ, ಪ್ರಧಾಮಮಂತ್ರಿಯಾಗಲಿ, ಹಣಕಾಸು ಮಂತ್ರಿಯಾಗಲಿ, ಯೋಜನಾ ಆಯೋಗದ ಉಪಾಧ್ಯಕ್ಷರಾಗಲಿ, ಹಣಕಾಸು ಸಚಿವಾಲಯದ ಅರ್ಥಿಕ ಸಲಹೆಗಾರರಾಗಲಿ ಎಲ್ಲರಿಗೂ ವರಮಾನದ ಏರಿಕೆ ಗತಿಯ ಬಗ್ಗೆ ಕಾಳಜಿ.

ಜನರ ಬಗ್ಗೆ ಕಾಳಜಿಯಿಲ್ಲ. 'ಗೋದಾಮುಗಳಲ್ಲಿ ಆಹಾರ ಪದಾರ್ಥಗಳನ್ನು ಕೆಡುವುದಕ್ಕೆ ಬಿಡದೆ ಬಡವರಿಗೆ ಹಂಚಬೇಕು' ಎಂದು ಸುಪ್ರೀಮ್ ಕೋರ್ಟು ಆದೇಶ ನೀಡಿದರೆ ನಮ್ಮ ಪ್ರಧಾನಮಂತ್ರಿಗಳು ಅದರಲ್ಲಿ ತಪ್ಪು ಹುಡುಕಲು ಪ್ರಯತ್ನಿಸುತ್ತಾರೆ. ಬಡವರ ಪ್ರಶ್ನೆ ಬಂದರೆ ನಮ್ಮ ಪ್ರಧಾನಮಂತ್ರಿಯವರಿಗೆ ಇನ್ನಿಲ್ಲದ ಸಿಟ್ಟು ಬಂದು ಬಿಡುತ್ತದೆ. ಆಹಾರ ವಿತರಣೆಯ ಜವಾಬುದಾರಿಯನ್ನು ಖಾಸಗಿಯವರಿಗೆ ನೀಡುವ ಬಗ್ಗೆ ಸರ್ಕಾರ ಯೋಚಿಸುತ್ತಿದೆ. ಇದು ಜನರಿಗೆ ಮಾಡುವ ದ್ರೋಹವಾಗಿದೆ. ಆಹಾರದ ಹಕ್ಕನ್ನು ಮಾನವ ಹಕ್ಕನ್ನಾಗಿ ನಾವು ಒಪ್ಪಿಕೊಂಡಿದ್ದೇವೆ. ಆದರೆ ಅದನ್ನು ಅನುಷ್ಠಾನಗೊಳಿಸಲು ನಾವು ಸಿದ್ದರಿಲ್ಲ.

ಒಟ್ಟಾರೆ ಕರ್ನಾಟಕವು ತೀವ್ರ ಕ್ರೈಸಿಸ್ಸಿನಲ್ಲಿದೆ. ಅಲ್ಲಿ ರಾಜಕಾರಣಕ್ಕೆ ಪ್ರತಿಯಾಗಿ ಪುಡಾರಿತನ ಮೆರೆಯುತ್ತಿದೆ. ಅಲ್ಲಿ ಸಂಸ್ಕೃತಿಯೆನ್ನುವುದು ದೇವಾಲಯ ಸುತ್ತುವುದಕ್ಕೆ ಸೀಮಿತವಾಗಿದೆ. ಸಾಮಾಜಿಕತೆಯೆನ್ನುವುದು ಮರೆಯಾಗಿ ಏಕರೂಪೀಕರಣದ ಕಡೆ ನಾಡು ಸಾಗುತ್ತಿದೆ. ಅಭಿವೃದ್ಧಿಯೆಂಬುದು ಕಡತಗಳಲ್ಲಿ, ವರದಿಗಳಲ್ಲಿ, ಬಜೆಟ್ಟಿನಲ್ಲಿ ಬಿದ್ದುಗೊಂಡಿದೆ. ಏಕೆಂದರೆ ಬಜೆಟ್ಟೆಂಬುದು ಇಂದು ಪುರಾಣ ಪ್ರವಚನವಾಗಿದೆ. ಬಜೆಟ್ಟಿಗೆ ಅನುಗುಣವಾಗಿ ಅಭಿವೃದ್ಧಿಯು ನಡೆಯುತ್ತಿಲ್ಲ. ಅದನ್ನು ಹಕ್ಕನ್ನಾಗಿ ಮಾಡುವ ದಿಶೆಯಲ್ಲಿ ಪ್ರಯತ್ನಗಳು ಜಾಗತಿಕವಾಗಿ, ಅಖಿಲ ಭಾರತ ಮಟ್ಟದಲ್ಲಿ ನಡೆಯುತ್ತಿದ್ದರೆ ನಮ್ಮಲ್ಲಿ ಅದನ್ನು ಹಂಗಿನ ಸಂಗತಿಯನ್ನಾಗಿ ಮಾಡಲಾಗುತ್ತಿದೆ. ಇದಕ್ಕೆ ನಮ್ಮ ನೆರೆ ಪರಿಹಾರ ಕಾರ್ಯಕ್ರಮವೇ ಸಾಕ್ಷಿ. ನೆರೆಯಲ್ಲಿ ಮನೆ ಕಳೆದುಕೊಂಡವರಿಗೆ ಮನೆ ಕಟ್ಟಿಸಿಕೊಡುವ ಜವಾಬುದಾರಿಯನ್ನು ಸರ್ಕಾರವು ತಾನು ವಹಿಸಿಕೊಳ್ಳುವುದಕ್ಕೆ ಪ್ರತಿಯಾಗಿ ದಾನಿಗಳ ಮರ್ಜಿಗೆ ಬಿಟ್ಟುಕೊಟ್ಟಿದೆ.

ದಲಿತ ಸಬಲೀಕರಣವೆನ್ನುವುದು ಕೇವಲ ಸಂಪುಟದಲ್ಲಿ ಮಂತ್ರಿಗಿರಿ ಕೊಡುವುದಕ್ಕೆ ಮಾತ್ರ ಸೀಮಿತವಾಗಿದೆ. ಮಹಿಳೆಯರ ಅಭಿವೃದ್ಧಿಯೆಂಬುದು ಸೀರೆ ಹಂಚುವ ಕಾರ್ಯಕ್ರಮವಾಗಿ ಬಿಟ್ಟಿದೆ. ಇಂದು ಭಾಷೆಯು ತೀವ್ರತರದ ಬಿಕ್ಕಟ್ಟನ್ನು ಎದುರಿಸುತ್ತಿದೆ. ಆದರೆ ನಮ್ಮ ಸರ್ಕಾರಕ್ಕೆ ಕನ್ನಡವನ್ನು ಬೆಳೆಸುವುದಕ್ಕೆ ಪ್ರತಿಯಾಗಿ ಸಂಸ್ಕೃತ ವಿಶ್ವವಿದ್ಯಾಲಯವು ಆದ್ಯತೆಯ ಸಂಗತಿಯಾಗಿದೆ. ಔದ್ಯಮೀಕರಣದ ಹೆಸರಿನಲ್ಲಿ ಇಂದು ರೈತರ, ಬಡವರ, ಊರೊಟ್ಟಿನ ಜಮೀನನ್ನು ದರೋಡೆ ಮಾಡುವುದೇ ಅಧಿಕಾರಸ್ಥರ ಕೆಲಸವಾಗಿದೆ.

ಈ ಹಿಂದೆ ನಾನು ಒಂದು ಮಾತನ್ನು ಹೇಳಿದ್ದೆ. ಕರ್ನಾಟಕವು ಇಂದು ಮತ್ತೆ 1970ರ ಸಂದರ್ಭದಲ್ಲಿ ಕಂಡ ರೀತಿಯ ಚಳುವಳಿಯನ್ನು ಎದುರು ನೋಡುತ್ತಿದೆ ಎಂದು. ಅದನ್ನು ಮತ್ತೆ ಈಗ ಹೇಳಬೇಕಾಗಿದೆ. ಸಮಾಜವು ದಿವಾಳಿಯಾಗಲು ನಾವು ಬಿಡಬಾರದು. ನಿಜ, ಜನರು ಹೇಗಿರುತ್ತಾರೋ ಅವರಿಗೆ ಅಂತಹದ್ದೆ ಸರ್ಕಾರ ದೊರೆಯುತ್ತದೆ ಎಂಬ ಮಾತಿದೆ. ಇದನ್ನು ಬಹಳ ಹಿಗ್ಗಿಸಲು ಸಾಧ್ಯವಿಲ್ಲ. ಏಕೆಂದರೆ ಜನರು ಕೇವಲ ಆಳುವ ಪಕ್ಷವನ್ನು ಮಾತ್ರ ಆರಿಸಿ ಕಳುಹಿಸಿಲ್ಲ. ಅದರಷ್ಟೇ ಬಲಶಾಲಿಯಾದ ವಿರೋಧ ಪಕ್ಷವನ್ನು ಆರಿಸಿ ಕಳುಹಿಸಿದೆ. ಆಳುವ ಪಕ್ಷಕ್ಕೆ ಶೇ 35ರಿಂದ 40ರಷ್ಟು ಮತಗಳು ಬಿದ್ದಿದ್ದರೆ ವಿರೋಧ ಪಕ್ಷಗಳಿಗೆ ಶೇ 30ರಿಂದ35 ರಷ್ಟು ಮತಗಳು ಬಿದ್ದಿದ್ದಾವೆ. ಉಳಿದ ಮತಗಳನ್ನು ಪಕ್ಷೇತರರು, ಸಣ್ಣ-ಪುಟ್ಟ ಪಕ್ಷಗಳು ಪಡೆದಿದ್ದಾವೆ.

ಈ ಶೇ 35ರಿಂದ 40ಸರಷ್ಟು ಮತಗಳನ್ನು ಪಡೆದುಕೊಂಡು 'ನಾನೇ ಸರ್ಕಾರ' ವೆಂದು ಬೀಗುವವರಿಗೆ ಜನರು ಮತ್ತು ಸಮಾಜ ಚೆನ್ನಾಗಿಯೇ ಬುದ್ಧಿ ಕಲಿಸುತ್ತಿದೆ. ಆಳುವ ಪಕ್ಷದವರು ನೂರಾ ನಾಲ್ಕೋ ಅಥವಾ ನೂರಾ ಐದೋ ಮಂದಿಯಿದ್ದರೆ ವಿರೋಧ ಪಕ್ಷದಲ್ಲಿ ನೂರಕ್ಕಿಂತ ಅಧಿಕ ಮಂದಿಯಿದ್ದಾರೆ. ಆದರೆ ನಮ್ಮನ್ನು ಆಳುತ್ತಿರುವವರಿಗೆ ಸರ್ಕಾರವೆಂದರೆ ಆಳುವ ಪಕ್ಷ ಮಾತ್ರ ಎನ್ನುವಂತೆ ಕಾಣುತ್ತಿದೆ. ಪ್ರಜಾತಂತ್ರದ ಅರ್ಥವೇ ಗೊತ್ತಿಲ್ಲದಂತೆ ಅವರು ವರ್ತಿಸುತ್ತಿದ್ದಾರೆ. ಕರ್ನಾಟಕವು ಇಂದು ಜನಾಂದೋಳನಕ್ಕಾಗಿ ಕಾದು ಕುಳಿತಿದೆ. ಅದು ಇಂದು ಸಾಗುತ್ತಿರುವ ವಿಕೃತಿಯ ನಡೆಯನ್ನು ತಡೆಯಬೇಕಾಗಿದೆ. ಈ ರಾಜ್ಯೋತ್ಸವವು ಅಂತಹ ಚಿಂತನೆಗೆ ದಾರಿ ಮಾಡಿಕೊಡಲಿ ಎಂದು ನಾವು ಹಾರೈಸಬಹುದು. □

ನಮ್ಮ ರಾಜ್ಯವು ಇಂದು ವರಮಾನದಲ್ಲಿ ಶ್ರೀಮಂತ ವಾಗಿರಬಹುದು. ಅದರ ವರಮಾನವು ತೀವ್ರಗತಿಯಲ್ಲಿ ಏರಿಕೆಯಾಗುತ್ತಿರಬಹುದು. ಆದರೆ ಜನರ ಬದುಕು ಯಾವ ರೀತಿಯಲ್ಲಿದೆ? ಶಾಲೆ ಬಿಟ್ಟ ಮಕ್ಕಳ ಬಗ್ಗೆ ಪ್ರಸ್ತುತ ಸರ್ಕಾರ ಏನು ಮಾಡುತ್ತಿದೆ? ದುಡಿಮೆಗಾರ ಮಹಿಳೆಯರ ಪೌಷ್ಟಿಕತೆ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ? ಬಂಡವಾಳದಿಂದ, ವಿದೇಶಿ ಬಂಡವಾಳದಿಂದ ಎಲ್ಲವನ್ನು ಸಾಧಿಸುತ್ತೇವೆ ಎಂಬುದು ಕೇವಲ ಹುಂಬತನವಾದೀತು. ಅಲ್ಲಿ ಅರ್ಥಿಕ ವಿವೇಕ ಕಾಣುವುದಿಲ್ಲ.

ಡಿಸೆಂಬರ್ ಸಂಚಿಕೆಯಿಂದ, ಸಂಸ್ಕೃತಿ ಚಿಂತಕ, ವಿಮರ್ಶಕ, ಅಂಕಣಕಾರ, ಅನುವಾದಕ ಮತ್ತು ಜನಪರ ಹೋರಾಟಗಾರರಾಗಿ ಪ್ರಸಿದ್ಧರಾಗಿರುವ ಬಂಜಗೆರೆ ಜಯಪ್ರಕಾಶ್ 'ಸಂವಾದ'ಕ್ಕಾಗಿ ಹೊಸ ಅಂಕಣ ಬರೆಯಲಿದ್ದಾರೆ.

ಜೆಪಿ ಹುಟ್ಟಿದ್ದು ಜೂನ್ ೧೭, ೧೯೬೫ರಲ್ಲಿ. ಹಿಂದುಳಿದ ಬುಡಕಟ್ಟು ಜಾತಿಯ ರೈತಾಪಿ ಕುಟುಂಬದ ಹಿನ್ನೆಲೆ. ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕಿನ ಬಂಜಗೆರೆ ಸ್ವಂತ ಊರು.

ಚಳ್ಳಕೆರೆ ಚಿತ್ರದುರ್ಗಗಳಲ್ಲಿ ಪಿಯುಸಿ ವರೆಗೆ ವಿದ್ಯಾಭ್ಯಾಸ. ೧೯೮೫ರಲ್ಲಿ ಮೈಸೂರು ಮಹಾರಾಜ ಕಾಲೇಜಿನಿಂದ ಪತ್ರಿಕೋದ್ಯಮ ಪದವಿ. ೧೯೮೭ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಎಂ ಎಸ್ ಡಬ್ಲ್ಯು ಪದವಿ. ಕನ್ನಡ ವಿಶ್ವವಿದ್ಯಾಲಯದಿಂದ ೧೯೯೯ರಲ್ಲಿ ಡಾಕ್ಟರ್ ಆಫ್ ಲಿಟರೇಚರ್ (ಡಿ.ಲಿಟ್) ಪದವಿ.

ಕನ್ನಡ ವಿಶ್ವವಿದ್ಯಾಲಯವು ಆರಂಭಿಸಿರುವ ದೇಸಿ ಸಂಸ್ಕೃತಿ ಅಧ್ಯಯನ ಕೇಂದ್ರದ ಅಧ್ಯಯನ ಮಂಡಲಿ ಸದಸ್ಯ. ೨೦೦೫ರಿಂದ ೨೦೦೮ರ ವರೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ.

ಕಳೆದ ಎರಡು ದಶಕಗಳಿಂದ ಜನಪರ ಚಳುವಳಿಗಳಲ್ಲಿ ಸಕ್ರಿಯ ಪಾತ್ರ ವಹಿಸಿರುವ ಜೆಪಿ ಸಾಹಿತ್ಯ, ಸಂಸ್ಕೃತಿ ಮತ್ತು ಜನಪರ ಕಾಳಜಿಗಳ ವಕ್ತಾರರಾಗಿ ಕರ್ನಾಟಕ ರಾಜ್ಯದಲ್ಲಿ ಸಕ್ರಿಯರಾಗಿದ್ದಾರೆ.

ಡಿಸೆಂಬರ್ ಸಂಚಿಕೆಯಿಂದ ಆರಂಭ



ಹಳ್ಳಿಗಳಲ್ಲಿ ಕೊಳೆಯುತ್ತಿರುವವರು

ಚಂದ್ರಭಾನ್ ಪ್ರಸಾದ್ ದಲಿತ್ ಡೈರಿ

ಅನು: ಸತ್ಯಪ್ರಕಾಶ್ ಎಂ ಆರ್

ಯೋಜನಾ ಆಯೋಗದ ಪ್ರಕಾರ 2011ರ ಹೊತ್ತಿಗೆ ಭಾರತದ ಸ್ಲಂಗಳಲ್ಲಿ ವಾಸಿಸುವವರ ಜನಸಂಖ್ಯೆ ಸುಮಾರು 93.06 ಮಿಲಿಯನ್ (ಒಟ್ಟಾರೆ ನಗರಗಳ ಜನಸಂಖ್ಯೆಯ ಸುಮಾರು 23.50%) ಮುಟ್ಟಲಿದೆ. ಸ್ಪೇನ್ ದೇಶದ ಜನಸಂಖ್ಯೆಗಿಂತ (40 ಮಿಲಿಯನ್) ದುಪ್ಪಟ್ಟು ಮಂದಿ ಸ್ಲಂಗಳಲ್ಲಿ ವಾಸಿಸಬಹುದೆಂಬ ವಿಚಾರ ಭಾರತದ ಬಹಳಷ್ಟು ಜನರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ.

ನರಕ ಹೇಗಿರುವುದೆಂದು ಯಾರೂ ನೋಡಿಲ್ಲ. ನರಕದ ಆರ್ಥಿಕ ವ್ಯವಸ್ಥೆ, ರಾಜಕಾರಣ ಮತ್ತು ಸಂಸ್ಕೃತಿಯ ಬಗ್ಗೆ ಕೂಡ ಯಾರಿಗೂ ಗೊತ್ತಿಲ್ಲ. ಆದರೆ ಭಾರತದಲ್ಲಿ ನರಕ ನಮ್ಮ ಕಣ್ಣ ಮುಂದೆಯೇ ಇದೆ. ಈ ಕಟು ಸತ್ಯವನ್ನು ಅರಿತುಕೊಳ್ಳಲು ನಿಮ್ಮ ಕಲ್ಪನಾ ಶಕ್ತಿಯ ಅಗತ್ಯವಿಲ್ಲ, ಒಂದು ಬಾರಿ ಸ್ಲಂಗೆ ಹೋಗಿ ಬನ್ನಿ ಸಾಕು. ನಾನೂ ಕೂಡ ಮುಂಬೈನ ಸ್ಲಂಗಳಲ್ಲಿ ವಾಸಿಸುವ ನನ್ನ ಸಂಬಂಧಿಕರ ಮನೆಗಳಲ್ಲಿ ಹಲವಾರು ದಿನಗಳನ್ನು ಕಳೆದಿದ್ದೇನೆ. ಸ್ಲಂ ನಿವಾಸಿಗಳ ದೈನಂದಿನ ಜೀವನದ ಕರಾಳತೆಯನ್ನು ನಾನು ಕಂಡಿದ್ದೇನೆ.

ನಾವು ಸ್ಲಂಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದು ಸರಿಯೇ ಅಥವಾ ಸ್ಲಂ ನಿವಾಸಿಗಳ ಜೀವನ ಮಟ್ಟವನ್ನು ಉತ್ತಮಪಡಿಸುವುದು ಸರಿಯೇ? ನಿಜ ಹೇಳಬೇಕೆಂದರೆ ಎಲ್ಲ ಸ್ಲಂ ನಿವಾಸಿಗಳನ್ನು ಒಂದು ರೂಂ ಇರುವ ಮನೆಗಳನ್ನು ನಿರ್ಮಿಸಿ, ಅಲ್ಲಿಗೆ ಸ್ಥಳಾಂತರಿಸುವುದು ಸೂಕ್ತ.

ಐದು ವರ್ಷಗಳಲ್ಲಿ 'ಸ್ಲಂ ಮುಕ್ತ ಭಾರತ'ವನ್ನು ಸೃಷ್ಟಿಸಲಾಗುವುದು ಎಂದು 2009ರಲ್ಲಿ ಸರ್ಕಾರ ಘೋಷಣೆ ಮಾಡಿತು. ಮುಂಬೈನಲ್ಲಿ ಈಗಾಗಲೇ ಈ ಪ್ರಕ್ರಿಯೆ ಆರಂಭವಾಗಿದೆ. ಸ್ಲಂ ನಿವಾಸಿಗಳಿಗಾಗಿ ಅವರು ವಾಸವಾಗಿರುವ ಪದೇಶದ ಸ್ವಲ್ಪ ಭಾಗದಲ್ಲಿ ಬಹುಮಹಡಿಯ ಒಂದು ರೂಂನ ಫ್ಲ್ಯಾಟ್‌ಗಳನ್ನು ನಿರ್ಮಿಸಲು ಖಾಸಗಿ ಬಿಲ್ಡರ್‌ಗಳಿಗೆ ಸರ್ಕಾರ ಅನುಮತಿ ನೀಡಿದ್ದು, ಬದಲಿಗೆ ಉಳಿದ ಸ್ಥಳವನ್ನು ಬಿಲ್ಡರ್‌ಗಳಿಗೆ ನೀಡಲು ನಿರ್ಧರಿಸಿದೆ. ಈ ಜಾಗವನ್ನು ಡೆವಲಪರ್‌ಗಳು ವಾಣಿಜ್ಯ ಉದ್ದೇಶಗಳಿಗಾಗಿ ಬಳಸಿಕೊಳ್ಳಬಹುದು. ಇದರ ಬಗ್ಗೆ ಯಾವುದೇ ತಕರಾರುಗಳಿಲ್ಲ.

ಭಾರತ ಸ್ಲಂಗಳಿಂದ ಮುಕ್ತವಾಗಬೇಕೆಂಬುದು ಬಹಳಷ್ಟು ಭಾರತೀಯರ ಇಂಗಿತ. ಸ್ಲಂಗಳು ಸುಂದರ ನಗರಗಳಿಗೆ ಕಪ್ಪು ಚುಕ್ಕೆ ಇದ್ದಂತೆ ಎಂಬ ಅಭಿಪ್ರಾಯ ಹೊಂದಿರುವ ನಗರವಾಸಿಗಳು ಇದರಲ್ಲಿ ಸೇರಿದ್ದಾರೆ. ಇವರು ಸ್ಲಂ ನಿವಾಸಿಗಳನ್ನು ಸಮಸ್ಯೆಯಾಗಿಯೇ ನೋಡುವುದು. ಸ್ಲಂಗಳಲ್ಲಿ ವಾಸಿಸುವ ಜನರಿಗೆ ನಾಗರಿಕ ಪ್ರಜ್ಞೆ ಇರುವುದಿಲ್ಲ ಎಂಬ ವಾದ ಇವರದು. ಆದರೆ ಇವರಿಗೆ ಮಾಸಿಕ 3,000 ರೂ.ಗೆ ಕೆಲಸ ಮಾಡುವ ಡ್ರೈವರ್‌ಗಳು, 1500 ರೂ.ಗೆ ಕೆಲಸ ಮಾಡುವ ಮನೆಗೆಲಸದವರು ಮಾತ್ರ ಬೇಕು. ಕಡಿಮೆ ಬೆಲೆಗೆ ಸೇವೆ ಒದಗಿಸುವ ಕೆಲಸಗಾರರೆಲ್ಲಾ ಸ್ಲಂಗಳನ್ನು ಬಿಟ್ಟು ಇನ್ನೆಲ್ಲಿ ವಾಸಿಸಲು ಸಾಧ್ಯ?

ಇದರ ಜೊತೆಗೆ ನಗರಗಳಿಗೆ ದಾಳಿಯಿಡುತ್ತಿರುವ ಗ್ರಾಮಸ್ಥರ ಬಗ್ಗೆ ಭಯಭೀತರಾಗಿರುವ ಉದಾರವಾದಿ ಗುಂಪೊಂದಿದೆ. ಕೈಗಾರಿಕೆಗಳು ನಗರಗಳಲ್ಲಿ ಮಾಲಿನ್ಯ ಉಂಟುಮಾಡುತ್ತವೆ ಎಂಬ ಕಾರಣವೊಡ್ಡಿ ನಗರಗಳ ಪರಿಧಿಯೊಳಗೆ ಕೈಗಾರಿಕಾ ಚಟುವಟಿಕೆಗಳು ನಡೆಯುವುದನ್ನು ಇವರು ವಿರೋಧಿಸುತ್ತಾರೆ. ದೆಹಲಿಯಲ್ಲಿ ಈಗಾಗಲೇ ಕೆಲವು ಉತ್ಪಾದನಾ ಕಾರ್ಖಾನೆಗಳು ಬಾಗಿಲು ಮುಚ್ಚಿದ್ದು, ಇಲ್ಲಿ ಕೆಲಸ ಮಾಡುತ್ತಿದ್ದ ಬಹಳಷ್ಟು ಮಂದಿ ವಲಸಿಗರು ಈಗ ನಿರುದ್ಯೋಗಿಗಳಾಗಿದ್ದಾರೆ. ಇವರಲ್ಲಿ ಬಹಳಷ್ಟು ಮಂದಿ ತಮ್ಮ ಹಳ್ಳಿಗಳಿಗೆ ಹಿಂದಿರುಗಿದ್ದಾರೆ. ಆದರೆ ಈ ಉದಾರವಾದಿಗಳಿಗೆ ಕೂಡ ಕಡಿಮೆ ವೇತನಕ್ಕಾಗಿ ಕೆಲಸ ಮಾಡುವ ಡ್ರೈವರ್‌ಗಳು, ಮನೆಗೆಲಸದವರು ಬೇಕು. ಗ್ರಾಮಸ್ಥರು ತಮ್ಮದೇ ದೇಶದ ನಗರಗಳಿಗೆ ಪ್ರವೇಶಿಸಲು ಪಾಸ್‌ಪೋರ್ಟ್ ರೀತಿಯ ಅನುಮತಿಯನ್ನು ಪಡೆಯುವಂತಹ ಪರಿಸ್ಥಿತಿ ಭಾರತದಲ್ಲಿಯೂ ನಿರ್ಮಾಣವಾಗುತ್ತಿದೆ.

ಭಾರತದ ಕೆಲವೆಡೆ ನೈಸರ್ಗಿಕ ಆಹಾರ ಪದ್ಧತಿಯ ಪರವಾಗಿರುವ, ಆದರೆ ಬಾಟಲ್‌ಗಳಲ್ಲಿ ಮಾರುವ ಮಿನರಲ್ ವಾಟರ್ ಬಳಸುವ 'ಜೋಲಾವಾಲಾ'ಗಳು ಕೆಳವರ್ಗದವರಿಗೆ ಕೆಲಸ ನೀಡಿ 'ಗ್ರಾಮಸ್ವರಾಜ್ಯ'ಗಳಿಗೆ ಕಳುಹಿಸುತ್ತಿದ್ದಾರೆ. ಹೌದು, ಶುದ್ಧ ಪರಿಸರದ ದೃಷ್ಟಿಯಿಂದ ಹಳ್ಳಿಗಳು ಯಾವಾಗಲೂ ಉತ್ತಮ. ಎಲ್ಲ ರೀತಿಯ ಸಂಪನ್ಮೂಲಗಳನ್ನು ಹೊಂದಿರುವ ಮತ್ತು ಕೆಲಸ ಮಾಡಲು ಕೂಲಿಗಳನ್ನು ಹೊಂದಿರುವವರ ಪಾಲಿಗೆ ಹಳ್ಳಿಗಳು ನಿಜಕ್ಕೂ ಸ್ವರ್ಗ.

ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಸಾವಿರಾರು ಮಾತೇ ಆಡದ ಮಂದಿ ಗ್ರಾಮಸ್ವರಾಜ್ಯ ಎಂಬ ನರಕದಿಂದ ಮುಕ್ತಿ ಬಯಸುತ್ತಿದ್ದಾರೆ. ನರಕ ಸದೃಶ ಸಾಮಾಜಿಕ ವ್ಯವಸ್ಥೆ ಹೊಂದಿರುವ ಗ್ರಾಮೀಣ ಭಾಗದ ಶೋಷಿತರ ಪಾಲಿಗೆ ನಗರಗಳ ಸ್ಲಂಗಳೂ ಕೂಡ ಸ್ವರ್ಗವಾಗಿ ಕಾಣಿಸುವುದು ಸಹಜ. ಹಾಗಿಲ್ಲದಿದ್ದರೆ ಶುದ್ಧ ಹಳ್ಳಿಯ ಪರಿಸರವನ್ನು ತೊರೆದು ನಗರಗಳ ಸ್ಲಂಗಳಿಗೆ ಈ ಮಂದಿ ಯಾಕೆ ಬರುತ್ತಿದ್ದರು? ಹಳ್ಳಿಗಳಲ್ಲಿ ವಾಸಿಸುವ ದಲಿತರ ಪಾಲಿಗಂತೂ ಹಳ್ಳಿಗಳು ಸಾಮಾಜಿಕ ಸೆರೆಮನೆಯೆಂದರೂ ತಪ್ಪಾಗುವುದಿಲ್ಲ.

ಭಾರತ ಸ್ಲಂಗಳಿಂದ ಮುಕ್ತವಾದ ನಂತರ ಮುಂದೇನು? ಈಗ ಸ್ಲಂಗಳಲ್ಲಿ ವಾಸಿಸುತ್ತಿರುವವರಿಗೇನೋ ಸರ್ಕಾರ ಒಂದು ರೂಂ ಇರುವ ಮನೆಗಳನ್ನು ನಿರ್ಮಿಸಿ ಕೊಡಬಹುದು. ಆದರೆ ಇದರ ಜೊತೆಗೆ, ಭಾರತ ಸ್ಲಂಗಳಿಂದ ಮುಕ್ತವಾಗಬೇಕಾದರೆ ಮುಂದೆ ಸ್ಲಂಗಳು ಹುಟ್ಟಿಕೊಳ್ಳುವುದನ್ನು ಕೂಡ ತಡೆಯಬೇಕಾಗುತ್ತದೆ. ಇದು ಹೊಸ ರೀತಿಯ ಸಮಸ್ಯೆಯನ್ನು ಸೃಷ್ಟಿಸುತ್ತದೆ.

ಭಾರತ ಸ್ಲಂಗಳಿಂದ ಮುಕ್ತವಾದರೆ ಮುಂದಿನ ದಿನಗಳಲ್ಲಿ ನಗರಗಳಿಗೆ ವಲಸೆ ಬರುವವರ ಪಾಡೇನು? ಗ್ರಾಮೀಣ ಪ್ರದೇಶಗಳಲ್ಲಿ ಭೂಮಾಲೀಕರ ದಬ್ಬಾಳಿಕೆಗೆ ಒಳಗಾಗಿರುವ ಲಕ್ಷಾಂತರ ಮಂದಿ ದಲಿತರು ಹಳ್ಳಿಗಳನ್ನು ತೊರೆದು ನಗರಗಳಿಗೆ ಬರುವವರಿದ್ದಾರೆ. ಪ್ರಸ್ತುತ ಈ ರೀತಿಯ ವಲಸಿಗರು ನಗರಗಳ ಹೊರವಲಯಗಳಲ್ಲಿ ಖಾಲಿ ಇರುವ ಭೂಮಿಯಲ್ಲಿ ಸಣ್ಣ ಗೂಡು ಕಟ್ಟಿಕೊಂಡು ವಾಸಿಸುತ್ತಿದ್ದಾರೆ. ವಲಸಿಗರು ಕೆಲವೇ ದಿನಗಳಲ್ಲಿ ತಮ್ಮ ಸಣ್ಣ ಮನೆಗಳಲ್ಲಿ ಮೊಟ್ಟ ಮೊದಲ ಬಾರಿಗೆ ಹೊಸ ಸ್ವತಂತ್ರ ಜೀವನ ಆರಂಭಿಸುತ್ತಾರೆ. ಆದರೆ 'ಸ್ಲಂ ಮುಕ್ತ ಭಾರತ'ದ ವಿಚಾರ ಜನಪ್ರಿಯವಾಗಿ, ಸಂಬಂಧಿತ ಯೋಜನೆ ಅನುಷ್ಠಾನಗೊಳ್ಳಲು ಶುರುವಾದರೆ ಈ ಕೆಳವರ್ಗದ ಜನ ಹಳ್ಳಿಗಳಲ್ಲಿಯೇ ಕೊಳೆಯಬೇಕಾಗುತ್ತದೆ.

> **ಭಾರತ ಸ್ಲಂಗಳಿಂದ ಮುಕ್ತವಾಗಬೇಕೆಂಬುದು ಬಹಳಷ್ಟು ಭಾರತೀಯರ ಇಂಗಿತ. ಸ್ಲಂಗಳು ಸುಂದರ ನಗರಗಳಿಗೆ ಕಪ್ಪು ಚುಕ್ಕೆ ಇದ್ದಂತೆ ಎಂಬ ಅಭಿಪ್ರಾಯ ಹೊಂದಿರುವ ನಗರವಾಸಿಗಳು ಇದರಲ್ಲಿ ಸೇರಿದ್ದಾರೆ. ಇವರು ಸ್ಲಂ ನಿವಾಸಿಗಳನ್ನು ಸಮಸ್ಯೆಯಾಗಿಯೇ ನೋಡುವುದು. ಸ್ಲಂಗಳಲ್ಲಿ ವಾಸಿಸುವ ಜನರಿಗೆ ನಾಗರಿಕ ಪ್ರಜ್ಞೆ ಇರುವುದಿಲ್ಲ ಎಂಬ ವಾದ ಇವರದು. ಆದರೆ ಇವರಿಗೆ ಮಾಸಿಕ ೩,೦೦೦ ರೂ.ಗೆ ಕೆಲಸ ಮಾಡುವ ಡ್ರೈವರ್‌ಗಳು, ೧೫೦೦ ರೂ.ಗೆ ಕೆಲಸ ಮಾಡುವ ಮನೆಗೆಲಸದವರು ಮಾತ್ರ ಬೇಕು. ಕಡಿಮೆ ಬೆಲೆಗೆ ಸೇವೆ ಒದಗಿಸುವ ಕೆಲಸಗಾರರೆಲ್ಲಾ ಸ್ಲಂಗಳನ್ನು ಬಿಟ್ಟು ಇನ್ನೆಲ್ಲಿ ವಾಸಿಸಲು ಸಾಧ್ಯ? ಇದರ ಜೊತೆಗೆ ನಗರಗಳಿಗೆ ದಾಳಿಯಿಡುತ್ತಿರುವ ಗ್ರಾಮಸ್ಥರ ಬಗ್ಗೆ ಭಯಭೀತರಾಗಿರುವ ಉದಾರವಾದಿ ಗುಂಪೊಂದಿದೆ.**

ಸ್ಲಂ-ಮುಕ್ತ ಭಾರತ!?

ದೇಶದಲ್ಲಿ ಎಲೈಟ್ ಮತ್ತು ಕೆಳವರ್ಗಗಳ ನಡುವ ಒಂದು ದೊಡ್ಡ ಅಂತರವಿದೆ. ಮೃದು ಹೃದಯದ, ಉತ್ತಮ ಆದರ್ಶ ಹೊಂದಿರುವ ಎಲೈಟ್ ವರ್ಗ, ಸ್ಲಂ ಜನರ ಜೀವನಶೈಲಿಯನ್ನು ತಮ್ಮ ಜೀವನಶೈಲಿಗೆ ಹೋಲಿಕೆ ಮಾಡಿಕೊಂಡು ನೊಂದುಕೊಳ್ಳುತ್ತಾರೆ. ನಗರಗಳ ಸ್ಲಂಗಳಿಗೂ ಮತ್ತು ಗ್ರಾಮಸ್ವರಾಜ್ಯಗಳ ಸಾಮಾಜಿಕ ವ್ಯವಸ್ಥೆಗೂ ಇರುವ ಅಂತರವನ್ನು ಅರ್ಥೈಸಿಕೊಳ್ಳಲು ಅವರು ಸೋಲುತ್ತಾರೆ.

ಭಾರತದಲ್ಲಿ ಆಲೋಚನೆಯೇ ಮಾಡದ ಇಷ್ಟೊಂದು ಮಂದಿ ಬುದ್ಧಿಜೀವಿಗಳಿರುವುದು ನಿಜಕ್ಕೂ ದುರದೃಷ್ಟಕರ.

* * * * * * *

ಭಾರತದ ದೊಡ್ಡ ನಗರಗಳ ಅಸಂಘಟಿತ ವಸತಿ ಪ್ರದೇಶಗಳಲ್ಲಿ ಒಂದು ರೂಂಗೆ ಕನಿಷ್ಠ 1,000 ರೂ. ಬಾಡಿಗೆ ಇದೆ. ಕೌಶಲ್ಯರಹಿತ, ಅನಕ್ಷರಸ್ಥ, ಅಥವಾ ಪ್ರೌಢಶಾಲೆವರೆಗೆ ಓದಿದ ವಲಸಿಗರು ನಗರಗಳಿಗೆ ಬಂದರೆ ಮಾಸಿಕ 3,000 ರೂ. ಅಥವಾ ಅದಕ್ಕಿಂತ ಕಡಿಮೆ ಸಂಬಳ ಪಡೆಯಬಹುದು. ಪರಿಸ್ಥಿತಿ ಹೀಗಿರುವಾಗ ತಿಂಗಳಿಗೆ 1,000 ರೂ. ಮನೆ ಬಾಡಿಗೆ ನೀಡಲು ಇವರಿಗೆ ಸಾಧ್ಯವಿದೆಯೇ?

ಭಾರತದ ಬಹುತೇಕ ಮಂದಿ ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಇವರಲ್ಲಿ ಕೆಲವು ಶ್ರೀಮಂತ ವರ್ಗಗಳಿಂದ ಬಂದವರು, ಉತ್ತಮ ಜೀವನ ಅರಸಿ ನಗರಗಳ ಕಡೆಗೆ ಮುಖ ಮಾಡಿದವರು. ಶಿಕ್ಷಣ, ಕೌಶಲ್ಯ ಎರಡನ್ನೂ ಹೊಂದಿರುವ ವಿವಿಧ ಜಾತಿಯ ಜನ ಸರ್ಕಾರಿ ಅಥವಾ ಖಾಸಗಿ ಕೆಲಸದಲ್ಲಿರುತ್ತಾರೆ. ಇವರೆಲ್ಲರೂ ನಗರಗಳಲ್ಲಿನ ವ್ಯವಸ್ಥಿತವಾದ ಉತ್ತಮ ವಸತಿ ಪ್ರದೇಶಗಳಲ್ಲಿ ಮನೆ ಬಾಡಿಗೆಗೆ ಪಡೆದು ವಾಸಿಸುತ್ತಾರೆ. ಮಾಸಿಕ 20,000 ರೂ. ವೇತನ ಪಡೆಯುವ ಪ್ರಾಥಮಿಕ ಶಾಲಾ ಶಿಕ್ಷಕರೂ ಕೂಡ ತಿಂಗಳಿಗೆ 5,000 ರೂ. ಬಾಡಿಗೆ ಮನೆಯಲ್ಲಿ ವಾಸಿಸಬಹುದು.

ಅದೇ ರೀತಿ ಬಹಳಷ್ಟು ಮಂದಿ ದಲಿತರೂ ಕೂಡ ಹಳ್ಳಿಗಳನ್ನು ತೊರೆದು ನಗರಗಳಿಗೆ ಬರುತ್ತಿದ್ದಾರೆ. ಹಸಿವು, ಅವಮಾನಗಳನ್ನು ಸಹಿಸಿಕೊಂಡು ಭೂಮಾಲೀಕರ ಕೈಕೆಳಗೆ ಕೆಲಸ ಮಾಡುವ ಬದಲು ನಗರಗಳಿಗೆ ವಲಸೆ ಬರುತ್ತಿದ್ದಾರೆ. ಸುಮಾರು 50% ದಲಿತರು ಅಕ್ಷರಸ್ಥರಾಗಿದ್ದು, ಇದರಲ್ಲಿ ಬಹುತೇಕ ಮಂದಿ ಪ್ರೌಢಶಾಲೆವರೆಗೆ ಶಿಕ್ಷಣ ಪಡೆದವರಾಗಿರುತ್ತಾರೆ. ಇವರಿಗೆ ಯಾವುದೇ ರೀತಿಯ ಕೌಶಲ್ಯಗಳಿರುವುದಿಲ್ಲ. ಹೀಗಾಗಿ ಇವರು ಮಾಸಿಕ 1,000 ರೂ. ಬಾಡಿಗೆ ಕೊಡಲು ಸಾಧ್ಯವಾಗುವುದಿಲ್ಲ. ಇವರ ಪಾಲಿಗೆ ಸ್ಲಂಗಳೇ ಆಶ್ರಯ ತಾಣಗಳು.

ಭಾರತದಲ್ಲಿ ಸುಮಾರು 250 ದಶಲಕ್ಷಗಳಿಗೂ ಅಧಿಕ ಸಂಖ್ಯೆಯ ದಲಿತರು ಮತ್ತು ಆದಿವಾಸಿಗಳಿದ್ದಾರೆ. ಈ ಎರಡು ಸಮುದಾಯಗಳು ಸುಮಾರು 5 ದಶಲಕ್ಷ ಸರ್ಕಾರಿ ಉದ್ಯೋಗಗಳ ಹಕ್ಕುದಾರರಾಗಿದ್ದಾರೆ. ಶತಮಾನಗಳಿಂದ ಪ್ರಬಲರಾಗಿದ್ದರೂ ಕೂಡ ಬ್ರಾಹ್ಮಣರೆಲ್ಲರೂ

ಭಾರತದ ಬಹುತೇಕ ಮಂದಿ ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಇವರಲ್ಲಿ ಕೆಲವು ಶ್ರೀಮಂತ ವರ್ಗಗಳಿಂದ ಬಂದವರು, ಉತ್ತಮ ಜೀವನ ಅರಸಿ ನಗರಗಳ ಕಡೆಗೆ ಮುಖ ಮಾಡಿದವರು. ಶಿಕ್ಷಣ, ಕೌಶಲ್ಯ ಎರಡನ್ನೂ ಹೊಂದಿರುವ ವಿವಿಧ ಜಾತಿಯ ಜನ ಸರ್ಕಾರಿ ಅಥವಾ ಖಾಸಗಿ ಕೆಲಸದಲ್ಲಿರುತ್ತಾರೆ. ಇವರೆಲ್ಲರೂ ನಗರಗಳಲ್ಲಿನ ವ್ಯವಸ್ಥಿತವಾದ ಉತ್ತಮ ವಸತಿ ಪ್ರದೇಶಗಳಲ್ಲಿ ಮನೆ ಬಾಡಿಗೆಗೆ ಪಡೆದು ವಾಸಿಸುತ್ತಾರೆ. ಮಾಸಿಕ 20,000 ರೂ. ವೇತನ ಪಡೆಯುವ ಪ್ರಾಥಮಿಕ ಶಾಲಾ ಶಿಕ್ಷಕರೂ ಕೂಡ ತಿಂಗಳಿಗೆ 5,000 ರೂ. ಬಾಡಿಗೆ ಮನೆಯಲ್ಲಿ ವಾಸಿಸಬಹುದು. ಅದೇರೀತಿ ಬಹಳಷ್ಟು ಮಂದಿ ದಲಿತರೂ ಕೂಡ ಹಳ್ಳಿಗಳನ್ನು ತೊರೆದು ನಗರಗಳಿಗೆ ಬರುತ್ತಿದ್ದಾರೆ.

ಸರ್ಕಾರಿ ಉದ್ಯೋಗ ಗಿಟ್ಟಿಸಲಾಗಿಲ್ಲ. ಬ್ರಾಹ್ಮಣರು ಇರಲಿ, ಭಾರತ ಅಷ್ಟೇ ಅಲ್ಲ, ಜಗತ್ತಿನ ಯಾವ ರಾಷ್ಟ್ರದಲ್ಲಿಯೂ ಎಲ್ಲ ನಾಗರಿಕರು ಸರ್ಕಾರಿ ಉದ್ಯೋಗ ಪಡೆಯಲು ಸಾಧ್ಯವಿಲ್ಲ. ಸರ್ಕಾರಿ ಉದ್ಯೋಗಾಕಾಂಕ್ಷಿಗಳು ಶೈಕ್ಷಣಿಕ ಅರ್ಹತೆಯನ್ನು ಹೊಂದಿರಬೇಕಾಗುತ್ತದೆ. ಸರ್ಕಾರಿ ನೌಕರಿ ಬೇಕಾದರೆ ದಲಿತರು ಬಹುಸಂಖ್ಯೆಯಲ್ಲಿ ನಗರಗಳಿಗೆ ವಲಸೆ ಬರಬೇಕಾಗುತ್ತದೆ. ಆದರೆ ಶಿಕ್ಷಿತರಲ್ಲದ ದಲಿತರು ಯಾವುದೋ ಸಣ್ಣ ಕೆಲಸವನ್ನು ಮಾಡಿಕೊಂಡು ಸ್ಲಂಗಳಲ್ಲಿ ತಳವೂರಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ 'ಸ್ಲಂ-ಮುಕ್ತ' ಭಾರತದ ಪರಿಕಲ್ಪನೆ ಅಪಾಯಕಾರಿಯಷ್ಟೇ ಅಲ್ಲ, ದಲಿತ ವಿರೋಧಿಯೂ ಹೌದು.

ಮೃದು ಹೃದಯದ ನಗರವಾಸಿಗಳಿಗೆ ಸ್ಲಂಗಳ ಬಗ್ಗೆ ವಿಚಿತ್ರವಾದ ತಿಳುವಳಿಕೆ ಇದೆ. ಒಮ್ಮೆ ಸ್ಲಂಗಳಿಗೆ ಬಂದರೆ ಇಲ್ಲಿನ ನಿವಾಸಿಗಳು ಜೀವನಪರ್ಯಂತ ಅಲ್ಲಿಯೇ ಕಳೆಯಬೇಕಾಗುತ್ತದೆ ಎಂಬ ಕಲ್ಪನೆ ಇದರಲ್ಲೊಂದು. ಸ್ಲಂಗಳಲ್ಲಿ ನೆಲೆ ನಿಂತ ಮೇಲೆ ನಂತರದ ಪೀಳಿಗೆ ಯಾವ ದಾರಿ ತುಳಿಯುತ್ತಾರೆ ಎಂಬ ಬಗ್ಗೆ ಬಹುಶಃ ಸಂಶೋಧನೆಗಳು ನಡೆದೇ ಇಲ್ಲ. ಹೀಗಾಗಿ, ದಶಕಗಳ ಹಿಂದೆ ನಗರಗಳ ಸ್ಲಂಗಳಿಗೆ ಬಂದು ಸೇರಿದ ನನ್ನ ಸಂಬಂಧಿಕರ ಕೆಲವು ನಿದರ್ಶನಗಳನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ.

ನನ್ನ ದೂರದ ಸಂಬಂಧಿಕರೊಬ್ಬರು ದೆಹಲಿಯ ಆಜಾದ್‌ಪುರ ತರಕಾರಿ ಮತ್ತು ಹಣ್ಣಿನ ಮಾರುಕಟ್ಟೆಯಲ್ಲಿ ಕೆಲಸ ಮಾಡಲು ದಶಕಗಳ ಹಿಂದೆ ಬಂದಿದ್ದರು. ಅನಕ್ಷರಸ್ಥರಾದ ಇವರು ಸ್ಲಂ ಒಂದರಲ್ಲಿ ನೆಲೆನಿಂತರು. ತರಕಾರಿ ಅಂಗಡಿಯಲ್ಲಿ ಸಹಾಯಕನಾಗಿ ಕೆಲವು ಸಮಯ ದುಡಿದ ಬಳಿಕ, ಹಣ್ಣು ವ್ಯಾಪಾರ ಆರಂಭಿಸಿದರು. ವ್ಯಾಪಾರದಲ್ಲಿ ಸ್ವಲ್ಪ ಯಶಸ್ಸು ಗಳಿಸಿದ ಇವರು ಅಸಂಘಟಿತ ವಸತಿ ಕಾಲೋನಿಯೊಂದಕ್ಕೆ ಮನೆ ಬದಲಾಯಿಸಿದರು. ಇವರ ಮಗ ವಿದ್ಯಾಭ್ಯಾಸದಲ್ಲಿ ಮುಂದಿದ್ದು ದೆಹಲಿ ಐಐಟಿಯಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣನಾಗಿದ್ದಾನೆ. ಈಗ ಅಮೆರಿಕಾದ ಐಟಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾನೆ. ನನ್ನ ಇನ್ನೊಬ್ಬ ಸಂಬಂಧಿಕ ನಾಲ್ಕು ದಶಕಗಳ ಹಿಂದೆ ಮುಂಬೈನ ಸ್ಲಂಗೆ ಬಂದು ನೆಲೆಸಿದ್ದರು. ಇವರ ಮಗ ಈಗ ಮೆಡಿಕಲ್ ರೆಪ್ರೆಸೆಂಟೆಟೀವ್ ಉದ್ಯೋಗ ಮಾಡುತ್ತಿದ್ದಾನೆ. ಮಗಳು ಜರ್ಮನಿಯಲ್ಲಿ ವೃತ್ತಿಪರ ಕೋರ್ಸ್ ಮಾಡುತ್ತಿದ್ದಾಳೆ. ಇಂತಹ ನೂರಾರು ನಿದರ್ಶನಗಳನ್ನು ನಾನು ನೀಡಬಲ್ಲೆ.

ನಗರಗಳ ಸ್ಲಂಗಳಲ್ಲಿ ವಾಸಿಸುತ್ತಿದ್ದವರೆಲ್ಲ ತಮ್ಮ ಹಳ್ಳಿಗಳಲ್ಲಿ ಇಟ್ಟಿಗೆಯ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಹೀಗಾಗಿ ಹಳ್ಳಿಗಳಲ್ಲಿ ವಾಸಿಸುತ್ತಿರುವ ಕುಟುಂಬದ ಇತರ ಸದಸ್ಯರು ಭೂ ಮಾಲೀಕರ ಬಿಗಿಹಿಡಿತದಿಂದ ಮುಕ್ತರಾಗುತ್ತಿದ್ದಾರೆ. ಅವರ ಆಹಾರ ಪದ್ಧತಿಯಲ್ಲಿ ಬದಲಾವಣೆಯಾಗುತ್ತಿದೆ. ಮಕ್ಕಳು ಶಾಲೆಗಳಿಗೆ ಹೋಗಲು ಪ್ರಾರಂಭಿಸಿದ್ದಾರೆ. ಬಹಳಷ್ಟು ಮಂದಿ ಕೃಷಿಯೇತರ ವೃತ್ತಿ ಮಾಡಲಾರಂಭಿಸಿದ್ದಾರೆ. ಅವರೇ ಹೇಳುವಂತೆ ಅವರೆಲ್ಲರಿಗೂ ಬಿಡುಗಡೆಯ ಆಶಾಕಿರಣ ಗೋಚರಿಸುತ್ತಿದೆ. ಈ ನಿದರ್ಶನಗಳ ಹಿನ್ನೆಲೆಯಲ್ಲಿ ನೋಡುವುದಾದರೆ, ಸ್ಲಂ ನಿವಾಸಿಗಳು ಜೀವನಪರ್ಯಂತ ಸ್ಲಂ ಬಿಟ್ಟು ಹೊರಬರಲಾಗುವುದಿಲ್ಲ ಎಂಬ ವಾದ ಮುಠ್ಠಾಳತನ ಎಂದರೆ ತಪ್ಪಾಗುವುದಿಲ್ಲ.

ಇತ್ತೀಚೆಗೆ ಹಿರಿಯ ದಲಿತ ಐಎಎಸ್ ಅಧಿಕಾರಿಯೊಬ್ಬರು ನನಗೆ ಹೇಳುತ್ತಿದ್ದರು; "ದಲಿತರ ಒಂದು ಪೀಳಿಗೆ ಸ್ಲಂಗಳಲ್ಲಿ ಬದುಕಬೇಕಾಗಿರುವುದು ಅನಿವಾರ್ಯ." ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ಬರುವ ವಲಸಿಗರಿಗಾಗಿ ಸರ್ಕಾರ ನಗರಗಳಲ್ಲಿ ಲಕ್ಷಾಂತರ ಮನೆಗಳನ್ನು ನಿರ್ಮಿಸಿ 'ಮೊದಲು ಬಂದವರಿಗೆ ಮೊದಲ ಆದ್ಯತೆ'ಯ ಆಧಾರದ ಮೇಲೆ ನೀಡುವಂತಾಗಬೇಕು. ಸ್ಲಂ-ಮುಕ್ತ ಭಾರತದ ಬಗ್ಗೆ ಮಾತನಾಡುವ ತಜ್ಞರು ಮತ್ತು ಸರ್ಕಾರ ಈ ವಿಚಾರವನ್ನು ಒಪ್ಪುತ್ತಾರೆಯೇ?

* * * * * * * * *

ದಲಿತರು ಮತ್ತು ದಲಿತೇತರರ ನಡುವೆ ಈ ಗೋಡೆಗಳು ಏಕೆ?

2009ರಲ್ಲಿ ತಮಿಳುನಾಡಿನ ಮದುರೈ ಜಿಲ್ಲೆಯ ಉತ್ತಪುರಂ ಎಂಬ ಹಳ್ಳಿಯಲ್ಲಿ ದಲಿತೇತರರು ದಲಿತರನ್ನು ಬೇರ್ಪಡಿಸಲು 600 ಮೀ. ಗೋಡೆಯನ್ನು ನಿರ್ಮಿಸಿದ ಘಟನೆ ದೊಡ್ಡ ಸುದ್ದಿಯಾಗಿತ್ತು. 2008ರಲ್ಲಿ ಮಹಾರಾಷ್ಟ್ರದ ಸತಾರ ಜಿಲ್ಲೆಯ ಭೀಮನಗರ ಎಂಬ ಹಳ್ಳಿಯಲ್ಲಿ ದಲಿತೇತರರು ದಲಿತರನ್ನು ಬೇರ್ಪಡಿಸಲು ಇಟ್ಟಿಗೆಯ ಗೋಡೆಯನ್ನು ನಿರ್ಮಿಸಿದ್ದರು. ನಾನು ಆಗ ಟಿವಿ ಸ್ಟುಡಿಯೋಗಳಲ್ಲಿ ಕುಳಿತು ಅಸ್ಪೃಶ್ಯತೆಯ ಕರಾಳತೆಯ ಬಗ್ಗೆ ಮಾತನಾಡಿದ್ದೆ. ಆದರೆ ವಾಸ್ತವವಾಗಿ ಪ್ರತ್ಯೇಕತೆ ಅಥವಾ ಸಾಮಾಜಿಕ ಬಹಿಷ್ಕಾರ ಹೊಸ ಸುದ್ದಿಯೇನಲ್ಲ. ಇದು ಭಾರತದಲ್ಲಿ ಶತಮಾನಗಳಿಂದ ಅಸ್ತಿತ್ವದಲ್ಲಿರುವ ಸತ್ಯ. ಆದರೆ ಪ್ರತ್ಯೇಕತೆ ಹೊಸ ಆಯಾಮವನ್ನು ಪಡೆದುಕೊಂಡಾಗ ಮಾತ್ರ ಸುದ್ದಿಯಾಗುತ್ತದೆ.

ತಮಿಳುನಾಡಿನಲ್ಲಿ ಇತ್ತೀಚೆಗೆ ಮತ್ತೊಂದು ವಿಚಿತ್ರ ಘಟನೆ ಬೆಳಕಿಗೆ ಬಂತು. ತಮಿಳುನಾಡು ಅಸ್ಪೃಶ್ಯತಾ ನಿರ್ಮೂಲನಾ ಒಕ್ಕೂಟ (ಟಿಎನ್‌ಯುಇಎಫ್) ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಅಸ್ಪೃಶ್ಯತೆಯ ವಿವಿಧ ಪ್ರಕಾರಗಳ ಬಗ್ಗೆ ಅಧ್ಯಯನವೊಂದನ್ನು ಕೈಗೊಂಡಿತ್ತು. ಇದರಲ್ಲಿ ವಿಚಿತ್ರವಾದ ಘಟನೆಯೊಂದನ್ನು ನೋಡಿ ಹೇಗಿದೆ. ದಲಿತರು ಸಾಕಿರುವ ಗಂಡು ನಾಯಿಗಳು ದಲಿತೇರರು ಸಾಕಿರುವ ಹೆಣ್ಣು ನಾಯಿಗಳ ಜೊತೆ ಬೆರೆಯುವ ಸಾಧ್ಯತೆ ಇರುತ್ತದೆ ಎಂಬ ಕಾರಣವೊಡ್ಡಿ ತಮಿಳುನಾಡಿನ ಕೆಲವು ಹಳ್ಳಿಗಳಲ್ಲಿ ದಲಿತೇರರು, ದಲಿತರು ಗಂಡು ನಾಯಿಗಳನ್ನು ಸಾಕಿಕೊಳ್ಳುವುದನ್ನು ನಿಷೇಧಿಸಿದ್ದಾರೆ. ಇದಕ್ಕಿಂತ ವಿಪರೀತದ ಉದಾಹರಣೆ ಇನ್ನೊಂದಿರಲು ಸಾಧ್ಯವೇ?

ನಾನು ತಮಿಳುನಾಡಿಗೆ ಭೇಟಿ ನೀಡಿದ ವೇಳೆ, ಸ್ಥಳೀಯ ದಲಿತ ಸ್ನೇಹಿತರೊಡನೆ ಮಾತನಾಡಿದಾಗ ಹೊಸ ವಿಚಾರಗಳನ್ನು ತಿಳಿದುಕೊಂಡೆ. ಅಸ್ಪೃಶ್ಯತೆ, ಪ್ರತ್ಯೇಕತೆಯ ಹೊಸ ಆಯಾಮಗಳನ್ನು ಕಂಡು ನಾನು ಆ ದಿನ ನಿದ್ದೆ ಮಾಡಲಿಲ್ಲ. ಅಂದು ನಾನು ಮನುಷ್ಯ ನಿರ್ಮಿಸಿರುವ ಅದ್ಭುತಗಳಲ್ಲಿ ಒಂದಾದ ಚೀನಾದ ಮಹಾ ಗೋಡೆಯನ್ನು ನೆನಪಿಸಿಕೊಂಡೆ. ನಮಗೆಲ್ಲರಿಗೂ ಗೊತ್ತಿರುವಂತೆ ವಿದೇಶಿಯರಿಂದ ದೇಶವನ್ನು ರಕ್ಷಿಸಲು ಚೀನಾದ ಮಹಾ ಗೋಡೆಯನ್ನು ನಿರ್ಮಿಸಲಾಯಿತು.

ದೆಹಲಿಗೆ ಹಿಂದಿರುಗಿದ ನಂತರ ನಾನು ಕೋಟೆ ಕೊತ್ತಲಗಳ ಇತಿಹಾಸದ ಬಗ್ಗೆ ಸ್ವಲ್ಪ ಅಧ್ಯಯನ ಮಾಡಿದೆ. ಎಲ್ಲ ನಿದರ್ಶನಗಳು ಕೂಡ ಒಂದೇ ವಿಚಾರವನ್ನು ಸ್ಪಷ್ಟಪಡಿಸುತ್ತದೆ. ಈ ಹಿಂದೆ ನಿರ್ಮಿಸಲಾಗಿರುವ ಎಲ್ಲ ಕೋಟೆಗಳು, ಗೋಡೆಗಳು, ವಿರೋಧಿಗಳಿಂದ ರಾಜ್ಯವನ್ನು ರಕ್ಷಿಸುವ ಉದ್ದೇಶದಿಂದ ನಿರ್ಮಾಣವಾಗಿರುವಂತಹವು. ಕೋಟೆಗಳನ್ನು, ಗೋಡೆಗಳನ್ನು ನಿರ್ಮಿಸಲು ಇದೇ ಕಾರಣವಾಗಿದ್ದರೆ, ಈ ಮೇಲೆ ಉಲ್ಲೇಖಿಸಿದ ಹಳ್ಳಿಗಳಲ್ಲಿ ಯಾವ ಕಾರಣಗಳಿಗಾಗಿ ಗೋಡೆಗಳನ್ನು ನಿರ್ಮಿಸಲಾಯಿತು? ದಲಿತರು ದಲಿತೇತರರ ವಸತಿ ಪ್ರದೇಶಗಳಿಗೆ ಬಂದು ಹೋಗಬೇಕಾಗಿರುವುದು ಅನಿವಾರ್ಯ. ಇಲ್ಲವಾದರೆ ಹಳ್ಳಿಗಳ ಆರ್ಥಿಕ ವ್ಯವಸ್ಥೆ ಕುಸಿದು ಬೀಳುತ್ತದೆ. ದಲಿತರು ಮೇಲ್ಜಾತಿಗಳಿಗೆ ಯಾವುದೇ ರೀತಿಯಲ್ಲಿ ಮಾರಕವಲ್ಲ. ಒಂದು ವೇಳೆ ದಲಿತರು ಸಬಲರಾದರೂ ಕೂಡ ಮೇಲ್ಜಾತಿಯವರಂತೆ ದಬ್ಬಾಳಿಕೆ ಮಾಡುವವರಲ್ಲ.

ವಾಸ್ತವಾಂಶ ಹೀಗಿರುವಾಗ, ಈ ಎರಡು ಹಳ್ಳಿಗಳಲ್ಲಿ ಗೋಡೆಗಳನ್ನು ಯಾಕೆ ನಿರ್ಮಿಸಲಾಯಿತು? ಎರಡು ಹಳ್ಳಿಗಳಲ್ಲಿ ದಲಿತೇತರರು ಗೋಡೆಗಳನ್ನು ನಿರ್ಮಿಸಿದ್ದನ್ನು ಇತರ ಹಳ್ಳಿಗಳ ದಲಿತೇತರರು ಮಾದರಿಯಾಗಿ ಪರಿಗಣಿಸಿದ್ದರೂ, ಗೋಡೆ ನಿರ್ಮಿಸುವ ಧೈರ್ಯ ಮಾಡಿರಲಿಕ್ಕಿಲ್ಲ.

ದಲಿತೇತರರು ಯಾರೂ ಕೂಡ ದಲಿತರ ಕೇರಿಗೆ ಹೋಗಬಾರದೆಂದು ಗೋಡೆಗಳನ್ನು ನಿರ್ಮಿಸಿದರೆ? ಹಾಗಾದರೆ ಅಷ್ಟೊಂದು ಹಣ ಖರ್ಚು ಮಾಡಿ ಗೋಡೆಗಳನ್ನು ಯಾಕೆ ನಿರ್ಮಿಸಿದರು? ಗೋಡೆಗಳನ್ನು ನಿರ್ಮಿಸಲು ಹಣ, ಸಮಯ, ಶಕ್ತಿ ಇರುವವರು ದಲಿತರ ಕೇರಿಯಲ್ಲಿ ಗೋಡೆ ಯಾಕೆ ನಿರ್ಮಿಸಬೇಕು? ದಲಿತೇತರ ಮಹಿಳೆಯರು ಗೋಡೆಗಳನ್ನು ನಿರ್ಮಿಸಲು ಕಾರಣಕರ್ತರೆ? ಖಂಡಿತ ಇಲ್ಲ. ಈ ರೀತಿಯ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸಾಮಾನ್ಯವಾಗಿ ಪುರುಷರು. ಮಹಿಳೆಯರು ಈ ಪ್ರಕ್ರಿಯೆಯಲ್ಲಿ ಭಾಗವಹಿಸಿರಲು ಸಾಧ್ಯವಿಲ್ಲ.

ದಲಿತೇತರ ಪುರುಷರು, ತಮ್ಮ ಮನೆಯ ಹೆಣ್ಣು ಮಕ್ಕಳು ದಲಿತರ ಕೇರಿಗೆ ಹೋಗದಂತೆ ತಡೆಗಟ್ಟಲು ಗೋಡೆಗಳನ್ನು ನಿರ್ಮಿಸಿದರೆ? ತಮಿಳುನಾಡಿಗೆ ಹೋದಾಗ ನನ್ನ ಗಮನಕ್ಕೆ ಬಂದ ವಿಚಾರ ಇದು. ದಲಿತೇತರ ಮಹಿಳೆಯರು ದಲಿತ ಯುವಕರನ್ನು ಇಷ್ಟಪಡುವುದು ಇಲ್ಲಿ ಗುಟ್ಟಾಗೇನೂ ಉಳಿದಿಲ್ಲ. 1990ರ ನಂತರ ತಮಿಳುನಾಡಿನಲ್ಲಿ ಈ ವಿಚಾರ ಸಾಕಷ್ಟು ವಿವಾದಗಳಿಗೆ ಕಾರಣವಾಗಿದೆ.

ರಾಷ್ಟ್ರಮಟ್ಟದಲ್ಲಿ ಕೂಡ ಗೌರವ ಹತ್ಯೆಗಳಲ್ಲಿ ಕೊಲೆಯಾಗಿರುವ ಬಹುತೇಕ ಮಂದಿ ದಲಿತರಾಗಿದ್ದು, ಇವರ ಪತ್ನಿಯರು ದಲಿತೇತರ ಮಹಿಳೆಯರಾಗಿರುತ್ತಾರೆ. ದಲಿತ ಪುರುಷರನ್ನು ದಲಿತೇತರ ಮಹಿಳೆಯರು ಇಷ್ಟಪಡಲು ಕಾರಣವೇನು ಎಂದು ನಾವು ಸಂಶೋಧನಾ ಅಂಕಿ ಅಂಶಗಳಿಲ್ಲದೆ ಹೇಳಲು ಸಾಧ್ಯವಿಲ್ಲ. ಇದರರ್ಥ ಏನು? ಭಾರತೀಯ ಸಮಾಜದಲ್ಲಿ ಸದ್ದಿಲ್ಲದೇ ಒಂದು ದೊಡ್ಡ ಬದಲಾವಣೆಯಾಗುತ್ತಿರುವುದಂತೂ ನಿಜ. ದಲಿತರು ಈಗ ಮೇಲ್ಜಾತಿ ಹಿಂದೂಗಳಿಂದ ಆಹಾರಕ್ಕೆ ಕೈ ಒಡ್ಡುವ ಸ್ಟಿರಿಯೋಟೈಪ್‌ನಿಂದ ಹೊರಬಂದಿದ್ದಾರೆ. ಸಾಕಷ್ಟು ಹಳ್ಳಿಗಳಲ್ಲಿ ದಲಿತರ ಬಳಿ ಅಗತ್ಯಕ್ಕಿಂತ ಹೆಚ್ಚು ಆಹಾರ ಇರುವುದು ಕಂಡು ಬರುತ್ತದೆ. ಇದಕ್ಕೆ ಪೂರಕವಾದ ಈ ಮುಂದಿನ ನಿದರ್ಶನವನ್ನು ಗಮನಿಸಿ.

ಕಳೆದ ವಾರ ಮಧ್ಯಪ್ರದೇಶದ ಮೊರೆನಾ ಜಿಲ್ಲೆಯ ಮಲಿಕ್‌ಪುರ್ ಎಂಬ ಹಳ್ಳಿಯಲ್ಲಿ ಠಾಕೂರರ 'ನಾಯಿ' 'ಅಸ್ಪೃಶ್ಯ ನಾಯಿ'ಯಾಗಿ ರಾತ್ರೋರಾತ್ರಿ ಬದಲಾದ ಸುದ್ದಿ ಎಲ್ಲೆಡೆ ಚರ್ಚೆಯಲ್ಲಿತ್ತು. ವಿಷಯ ಇಷ್ಟೆ, ಹಳ್ಳಿಯ ದಲಿತ ಕುಟುಂಬದವರು ಭೂಮಾಲೀಕ ಠಾಕೂರ್ ಕುಟುಂಬಕ್ಕೆ ಸೇರಿದ ನಾಯಿಗೆ ಬ್ರೆಡ್ ತಿನ್ನಿಸಿದ್ದರು. ವಿಷಯ ಗೊತ್ತಾದ ಬಳಿಕ ಠಾಕೂರ್ ಕುಟುಂಬ ತಮ್ಮ ನಾಯಿಯನ್ನು ಅಸ್ಪೃಶ್ಯ ಎಂದು ಘೋಷಿಸಿ ದಲಿತ ಕುಟುಂಬಕ್ಕೆ 15,000 ರೂ. ದಂಡ ವಿಧಿಸಿತು. ದಲಿತರ ಬಳಿ ದಲಿತೇತರರು ಸಾಕಿಕೊಂಡಿರುವ ನಾಯಿಗೆ ಬ್ರೆಡ್ ತಿನ್ನಿಸುವಷ್ಟು ಸಾಮರ್ಥ್ಯ ಬಂದಿರುವುದರಿಂದ ಜಾತಿ ಸಮಾಜಕ್ಕೆ ನಡುಕ ಉಂಟಾಗಿದೆ. ದಲಿತರು ಮೇಲ್ಜಾತಿಯವರ ಮನೆಗಳಲ್ಲಿ ಪ್ರತ್ಯೇಕವಾಗಿ ಕುಳಿತು ಊಟ ಮಾಡಿದ್ದನ್ನು ಈ ಹಿಂದೆ ನಾನೇ ಎಷ್ಟೋ ಬಾರಿ ಕಂಡಿದ್ದೇನೆ. ನಾಯಿಯನ್ನು ಅಸ್ಪೃಶ್ಯ ಎಂದು ಘೋಷಿಸುವುದರ ಹಿಂದೆ ಬ್ರೆಡ್ ತಿನ್ನಿಸಿರುವುದೊಂದೇ ಕಾರಣವೇ? ಅಥವಾ ದಲಿತರು ಭೂಮಾಲೀಕ ಠಾಕೂರ್ ಕುಟುಂಬದವರಿಗೆ ಆಹಾರ ನೀಡುವಷ್ಟು ದಾರ್ಷ್ಟ್ಯ ಬೆಳೆಸಿಕೊಂಡರೇ ಎಂಬ ಹುಂಬತನವೂ ಕೆಲಸ ಮಾಡಿರಬಹುದೇ?

> ರಾಷ್ಟ್ರಮಟ್ಟದಲ್ಲಿ ಕೂಡ ಗೌರವ ಹತ್ಯೆಗಳಲ್ಲಿ ಕೊಲೆಯಾಗಿರುವ ಬಹುತೇಕ ಮಂದಿ ದಲಿತರಾಗಿದ್ದು, ಇವರ ಪತ್ನಿಯರು ದಲಿತೇತರ ಮಹಿಳೆಯರಾಗಿರುತ್ತಾರೆ. ದಲಿತ ಪುರುಷರನ್ನು ದಲಿತೇತರ ಮಹಿಳೆಯರು ಇಷ್ಟಪಡಲು ಕಾರಣವೇನು ಎಂದು ನಾವು ಸಂಶೋಧನಾ ಅಂಕಿ ಅಂಶಗಳಿಲ್ಲದೆ ಹೇಳಲು ಸಾಧ್ಯವಿಲ್ಲ. ಇದರರ್ಥ ಏನು? ಭಾರತೀಯ ಸಮಾಜದಲ್ಲಿ ಸದ್ದಿಲ್ಲದೇ ಒಂದು ದೊಡ್ಡ ಬದಲಾವಣೆಯಾಗುತ್ತಿರುವುದಂತೂ ನಿಜ. ದಲಿತರು ಈಗ ಮೇಲ್ಜಾತಿ ಹಿಂದೂಗಳಿಂದ ಆಹಾರಕ್ಕೆ ಕೈ ಒಡ್ಡುವ ಸ್ಟಿರಿಯೋಟೈಪ್‌ನಿಂದ ಹೊರಬಂದಿದ್ದಾರೆ. ಸಾಕಷ್ಟು ಹಳ್ಳಿಗಳಲ್ಲಿ ದಲಿತರ ಬಳಿ ಅಗತ್ಯಕ್ಕಿಂತ ಹೆಚ್ಚು ಆಹಾರ ಇರುವುದು ಕಂಡು ಬರುತ್ತದೆ.

* * * * * * * *

ಭಾರತ 8% ದರದಲ್ಲಿ ಅಭಿವೃದ್ಧಿ ಕಾಣುತ್ತಿರುವುದು ಕೇವಲ ಆರ್ಥಿಕ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿನ ಬದಲಾವಣೆಯನ್ನು ಮಾತ್ರ ಪ್ರತಿನಿಧಿಸುವುದಿಲ್ಲ. ಸಮಾಜದ ಮೇಲೂ ಇದರ ಪರಿಣಾಮವನ್ನು ಕಾಣಬಹುದು. ಭಾರತೀಯ ಸಮಾಜದಲ್ಲಿ ಯಾರ ಗಮನಕ್ಕೂ ಬಾರದಂತೆ ಹೊಸದೊಂದು ವರ್ಗ ಹುಟ್ಟಿಕೊಳ್ಳುತ್ತಿದೆ. ದುರದೃಷ್ಟವಶಾತ್ ಈ ಬದಲಾವಣೆಯನ್ನು ಗ್ರಹಿಸಲು ಭಾರತದ ಬುದ್ಧಿಜೀವಿ ವರ್ಗಕ್ಕೆ ಇನ್ನೂ ಸಾಧ್ಯವಾಗಿಲ್ಲ.

ಕಳೆದ ವಾರ ನಾನು ಲಕ್ನೋದ ಗೆಳೆಯರೊಬ್ಬರ ಮನೆಯಲ್ಲಿ ತಂಗಿದ್ದೆ. ಮುಂಜಾನೆಯ ವಾಕ್ ಹೋಗುವ ವೇಳೆ ಸುತ್ತ ಮುತ್ತಲಲ್ಲಿ ಯಾವುದಾದರೂ 'ಹೊಸ ರೀತಿಯ ಸ್ಲಂಗಳು' ಇವೆಯೇ ಎಂದು ಸ್ನೇಹಿತ ವಿನೋದ್ ಕುಮಾರ್ ಶರ್ಮ ಅವರಿಗೆ ಕೇಳಿದೆ. 'ಹೊಸತು' ಯಾಕೆಂದರೆ ಖಾಲಿ ಜಾಗಗಳಲ್ಲಿ ವಾಸಿಸುವ ಕುಟುಂಬಗಳ ಸಂಖ್ಯೆ ಕಡಿಮೆ. ಒಂದು ಚದುರ ಮೈಲಿಗಿಂತ ಕಡಿಮೆ ಪ್ರದೇಶದಲ್ಲಿ ನೂರಾರು ಕುಟುಂಬಗಳು ವಾಸಿಸುತ್ತವೆ. ಸ್ಲಂಗಳಲ್ಲಿ ಸಾಮಾನ್ಯವಾಗಿ ಒಂದೆರಡು ಡಜನ್ ಮನೆಗಳಿದ್ದು, ಕೆಲವು ಸಂದರ್ಭಗಳಲ್ಲಿ ನೂರಾರು ಕುಟುಂಬಗಳು ನೀರು, ವಿದ್ಯುತ್, ಕಚ್ಚಾ ಚರಂಡಿ ಮತ್ತಿತರ ಕನಿಷ್ಠ ಮೂಲಭೂತ ಸೌಕರ್ಯಗಳೊಂದಿಗೆ ವಾಸಿಸುತ್ತಿರುತ್ತಾರೆ. ಆದರೆ ಈ 'ಹೊಸ ಸ್ಲಂ'ಗಳಲ್ಲಿ ಮನೆಗಳನ್ನು ಮರ ಅಥವಾ ಬಿದಿರಿನ ತುಂಡುಗಳು ಮತ್ತು ಪ್ಲಾಸ್ಟಿಕ್ ಶೀಟ್‌ಗಳಿಂದ ನಿರ್ಮಿಸಿರುತ್ತಾರೆ. ಇಲ್ಲಿ ವಿದ್ಯುತ್, ನೀರು, ಚರಂಡಿ ವ್ಯವಸ್ಥೆ ಯಾವುದೂ ಇರುವುದಿಲ್ಲ. ಆರ್ಥಿಕವಾಗಿ ತುಂಬಾ ಕಷ್ಟದಲ್ಲಿದ್ದಾಗ ಮಾತ್ರ ಜನ ಇಂತಹ ವಾತಾವರಣದಲ್ಲಿ ಬದುಕಲು ಸಾಧ್ಯ.

ರಾಷ್ಟ್ರೀಯ ಹೆದ್ದಾರಿ 24 ಅಥವಾ ಸೀತಾಪುರ್ ರಸ್ತೆಗೆ ಸಮೀಪವಿರುವ ವಸತಿ ಪ್ರದೇಶದಲ್ಲಿ ಮಧ್ಯಮ ವರ್ಗದವರು ಹೆಚ್ಚಾಗಿದ್ದಾರೆ. ಉತ್ತರ ಪ್ರದೇಶ ಸರ್ಕಾರದ ವಸತಿ ಯೋಜನೆ ಅನ್ವಯ, ಜನ ನಿವೇಶನ ಖರೀದಿಸಿ ಮನೆಗಳನ್ನು ನಿರ್ಮಿಸಿದ್ದಾರೆ. ಅತ್ಯಂತ ವ್ಯವಸ್ಥಿತವಾದ ಈ ವಸತಿ ಪ್ರದೇಶದಲ್ಲಿ ಸುಮಾರು 5% ನಿವೇಶನಗಳು ಖಾಲಿ ಉಳಿದಿವೆ. ಬಹಳಷ್ಟು ಮಂದಿ ಬಂಡವಾಳ ಹೂಡಿಕೆಗೆ ಈ

ಪ್ರತ್ಯೇಕತೆಯ ನೋವು

ಜಾತಿ ವ್ಯವಸ್ಥೆಯಿಂದ ವರ್ಗ ವ್ಯವಸ್ಥೆಯೆಡೆಗೆ

ನಿವೇಶನಗಳನ್ನು ಖರೀದಿಸಿ ಹಾಗೆ ಖಾಲಿ ಬಿಟ್ಟಿರುವುದು ಸ್ಪಷ್ಟ. ಲಕ್ನೋ ನಗರಕ್ಕೆ ಬಂದ ವಲಸಿಗರು ಇಂತಹಾ ಖಾಲಿ ನಿವೇಶನಗಳಲ್ಲಿ ನೆಲೆಸುತ್ತಾರೆ.

"ಇವರೆಲ್ಲಾ ಯಾರು?" ಎಂದು ನನ್ನ ಸ್ನೇಹಿತ ಶರ್ಮ ಪ್ರಶ್ನಿಸಿದರು. ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಸಾಮಾನ್ಯವಾಗಿ ಬ್ರಾಹ್ಮಣರು ಶರ್ಮ ಎಂದು ಹೆಸರಿಟ್ಟುಕೊಳ್ಳುತ್ತಾರೆ. ಆದರೆ ಪೂರ್ವಭಾಗದಲ್ಲಿ ಶರ್ಮ ಚಮ್ಮಾರ ಜಾತಿ ಸೂಚಕ ಪದವಾಗಿದೆ.

"ಇವರ್‍ಯಾರು ಎಂದರೆ ಏನು ಶರ್ಮಾಜಿ?" "ಇವರು ಎಲ್ಲಿಂದ ಬಂದಿದ್ದಾರೆ, ಲಕ್ನೋದಲ್ಲಿ ಏನು ಮಾಡುತ್ತಿದ್ದಾರೆ. ಇವರೆಲ್ಲಾ ಯಾವ ಜಾತಿಯವರು ಎಂದು ತಿಳಿದುಕೊಳ್ಳಲು ಸಾಧ್ಯವಿದೆಯೇ?" ಎಂದು ಕೇಳಿದೆ. "ಚಿಂತಿಸಬೇಡಿ ಇವರಲ್ಲಿ ಯಾರಾದರೊಬ್ಬರು ನಮ್ಮ ಮನೆಯ ಗೇಟ್‌ಗೆ ನಾಮಫಲಕ ಹಾಕಲು ಆಮೇಲೆ ಬರುತ್ತಾರೆ. 8ಗಂಟೆವರೆಗೆ ತಾಳ್ಮೆ ಇರಲಿ" ಎಂದರು ಶರ್ಮಾಜಿ. ಆಗ ಸಮಯ 7ಗಂಟೆ. ಮುಂಜಾನೆಯ ಕಾಫಿ ಹೀರುತ್ತಾ ನಾನು ಆ ವ್ಯಕ್ತಿಯ ಬರುವಿಕೆಗಾಗಿ ಕಾಯುತ್ತಾ ನಿಂತೆ.

8 ಗಂಟೆಗೆ ಸರಿಯಾಗಿ ರಾಮ ಚಂದರ್ ಎಂಬಾತ ತನ್ನ ಸಲಕರಣೆಗಳೊಂದಿಗೆ ಬಂದ. ನಾನು ಅವನನ್ನು ಮಾತನಾಡಿಸಿದಾಗ ಹೊಸ ವಿಚಾರಗಳು ಬೆಳಕಿಗೆ ಬಂತು. ಈತನ ಪೂರ್ಣ ಹೆಸರು ರಾಮ ಚಂದರ್ ಜೈಸ್ವಾಲ್. ಮೂಲತಃ ಛತ್ತೀಸ್‌ಗಢದ 'ದುರ್ಗ್' ಎಂಬ ಪ್ರದೇಶದವ. "ನಾವು ನಾಡ ಮದ್ಯವನ್ನು ತಯಾರಿಸುತ್ತಿದ್ದೆವು. ಇದಲ್ಲದೆ ಕೆಲವು ಸಾಮಾನ್ಯ ಉತ್ಪನ್ನಗಳ ವ್ಯಾಪಾರ ಮಾಡುತ್ತಿದ್ದೆವು. ನಾವು ವೈಶ್ಯರು" ಎಂದು ಆತ ಹೇಳಿದ. ಹಿಂದೂ ಸಾಮಾಜಿಕ ಶ್ರೇಣೀಕರಣ ವ್ಯವಸ್ಥೆಯಲ್ಲಿ ವೈಶ್ಯರು, ಬ್ರಾಹ್ಮಣರು, ಕ್ಷತ್ರಿಯರ ನಂತರ ಮೂರನೆಯ ಸ್ಥಾನದಲ್ಲಿ ಪರಿಗಣಿಸಲ್ಪಡುತ್ತಾರೆ.

ನಿಮ್ಮ ತಂದೆಯವರೇನಾದರೂ ಕಬ್ಬಿಣದ ಕೆಲಸವನ್ನು ಮಾಡುತ್ತಿದ್ದರೇ ಎಂಬ ನನ್ನ ಪ್ರಶ್ನೆಗೆ "ಖಂಡಿತ ಇಲ್ಲ" ಎಂದು ಉತ್ತರಿಸಿದ ಆತ. ಇದು ವೈಶ್ಯರು ಮಾಡುವ ಕೆಲಸ ಅಲ್ಲವಲ್ಲ ಎಂಬ ನನ್ನ ಪ್ರಶ್ನೆಗೆ, "ಊರಿನಲ್ಲಿ ಈಗ ಕೆಲಸ ಇಲ್ಲ. ಹಣ ದುಡಿಯುವ ಉದ್ದೇಶದಿಂದ ಇಲ್ಲಿಗೆ ಬಂದಿದ್ದೇವೆ. ನಾನೇನು ಕಳ್ಳತನ ಮಾಡುತ್ತಿಲ್ಲ. ನನ್ನ ಕುಟುಂಬದ ಸಲುವಾಗಿ ಕಠಿಣ ಪರಿಶ್ರಮ ವಹಿಸುತ್ತಿದ್ದೇನೆ" ಎಂದು ತನ್ನ ಹೊಸ ಕೆಲಸವನ್ನು ಆತ ಸಮರ್ಥಿಸಿಕೊಂಡ. ಕಬ್ಬಿಣದ ಕೆಲಸ ಮಾಡುವುದು ಕೀಳು ಎಂದು ಪರಿಗಣಿಸಲ್ಪಟ್ಟಿರುವುದು ಎಲ್ಲರಿಗೂ ತಿಳಿದಿರುವ ವಿಚಾರ.

"ನಮ್ಮ ಜಿಲ್ಲೆಯಲ್ಲಿರುವ ನೂರಾರು ಕುಟುಂಬಗಳು ಸಾಹು ಜಾತಿಗೆ ಸೇರಿವೆ." ಛತ್ತೀಸ್‌ಗಢದಲ್ಲಿ 'ಸಾಹು' ಎಂದರೆ ಎಣ್ಣೆ ತಯಾರಕರು. ಇವರು ಚಿಲ್ಲರೆ ವ್ಯಾಪಾರ ಮತ್ತು ಕೃಷಿಯಲ್ಲಿಯೂ ತೊಡಗಿಸಿಕೊಂಡಿದ್ದಾರೆ. ಸಾಂಪ್ರದಾಯಿಕ ಜಾತಿ ಶ್ರೇಣಿಯಲ್ಲಿ ಎಣ್ಣೆ ತಯಾರಕರನ್ನು ಕೀಳಾಗಿ ಕಾಣಲಾಗುತ್ತದೆ. ಆದರೆ ಈ ಜಾತಿ ತಮ್ಮನ್ನು ವೈಶ್ಯ ಎಂದು ಕರೆದುಕೊಳ್ಳುತ್ತದೆ. ಕಬ್ಬಿಣದ ಕೆಲಸ ಅಥವಾ ಕಟ್ಟಡ ಕೂಲಿ ಕೆಲಸ ಇವರ ಇತಿಹಾಸದಲ್ಲಿಯೇ ಇಲ್ಲ.

"ನಮ್ಮ ಜಿಲ್ಲೆಯಲ್ಲಿರುವ ನೂರಾರು ಕುಟುಂಬಗಳು ಸಾಹು ಜಾತಿಗೆ ಸೇರಿವೆ." ಛತ್ತೀಸ್‌ಗಢದಲ್ಲಿ 'ಸಾಹು' ಎಂದರೆ ಎಣ್ಣೆ ತಯಾರಕರು. ಇವರು ಚಿಲ್ಲರೆ ವ್ಯಾಪಾರ ಮತ್ತು ಕೃಷಿಯಲ್ಲಿಯೂ ತೊಡಗಿಸಿಕೊಂಡಿದ್ದಾರೆ. ಸಾಂಪ್ರದಾಯಿಕ ಜಾತಿ ಶ್ರೇಣಿಯಲ್ಲಿ ಎಣ್ಣೆ ತಯಾರಕರನ್ನು ಕೀಳಾಗಿ ಕಾಣಲಾಗುತ್ತದೆ. ಆದರೆ ಈ ಜಾತಿ ತಮ್ಮನ್ನು ವೈಶ್ಯ ಎಂದು ಕರೆದುಕೊಳ್ಳುತ್ತದೆ. ಕಬ್ಬಿಣದ ಕೆಲಸ ಅಥವಾ ಕಟ್ಟಡ ಕೂಲಿ ಕೆಲಸ ಇವರ ಇತಿಹಾಸದಲ್ಲಿಯೇ ಇಲ್ಲ. "ಇತ್ತೀಚಿನ ದಿನಗಳಲ್ಲಿ ನಗರಗಳಲ್ಲಿ ಕೆಲವು ವರ್ಷಗಳ ಅಂತರದಲ್ಲಿ ಮನೆ ದುರಸ್ತಿ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿ ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಇರುವುದರಿಂದ, ನಮ್ಮ ಜಿಲ್ಲೆಯ ಬಹಳಷ್ಟು ಮಂದಿ ಲಕ್ನೋದಲ್ಲಿ ಈ ಕೆಳ ಮಟ್ಟದ ಕಸುಬು ಮಾಡುತ್ತಿದ್ದಾರೆ.

"ಇತ್ತೀಚಿನ ದಿನಗಳಲ್ಲಿ ನಗರಗಳಲ್ಲಿ ಕೆಲವು ವರ್ಷಗಳ ಅಂತರದಲ್ಲಿ ಮನೆ ದುರಸ್ತಿ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿ ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಇರುವುದರಿಂದ, ನಮ್ಮ ಜಿಲ್ಲೆಯ ಬಹಳಷ್ಟು ಮಂದಿ ಲಕ್ನೋದಲ್ಲಿ ಈ ಕೆಳಮಟ್ಟದ ಕಸುಬು ಮಾಡುತ್ತಿದ್ದಾರೆ. ಎಲ್ಲರೂ ಕಬ್ಬಿಣದ ಕೆಲಸ ಮಾಡುತ್ತಿಲ್ಲ. ಕೆಲವರು ಕಟ್ಟಡ ಕೂಲಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಹೆಂಗಸರೂ ಕೂಡ ಕೆಲಸ ಮಾಡುತ್ತಾರೆ" ಎಂದು ಜೈಸ್ವಾಲ್ ವಿವರಿಸಿದರು.

"ಇದು ಮನುಧರ್ಮ ವಿರೋಧಿ ಎಂದೆನಿಸುವುದಿಲ್ಲವೇ?" ಎಂದು ಪ್ರಶ್ನಿಸಿದಾಗ, "ಮನುಧರ್ಮ ಎಂದರೇನು? ಮನು ಎಂದರೆ ಯಾರು?" ಎಂದು ಆತ ನನ್ನನ್ನೇ ಮರುಪ್ರಶ್ನಿಸಿದ.

ಕೆಲವೇ ವರ್ಷಗಳ ಹಿಂದೆ ಕಟ್ಟಡಗಳಲ್ಲಿ ಕೂಲಿಗಳಾಗಿ ಕೆಲಸ ಮಾಡುತ್ತಿದ್ದವರು ಸಾಮಾನ್ಯವಾಗಿ ದಲಿತರು ಅಥವಾ ಕೆಳ ಜಾತಿಯವರಾಗಿರುತ್ತಿದ್ದರು. ವೈಶ್ಯ ಸಮುದಾಯದವರು ಕೆಳಮಟ್ಟದ ಕೆಲಸಗಳನ್ನು ಮಾಡುತ್ತಿರುವುದಕ್ಕೆ ನನಗೆ ಖುಷಿಯಾಗಿದೆ ಎಂದೇನಲ್ಲ. ನಾನಿಲ್ಲಿ ದಾಖಲಿಸುತ್ತಿರುವುದು ಸಮಾಜದಲ್ಲಿ ನಡೆಯುತ್ತಿರುವ ಹೊಸ ಬದಲಾವಣೆಯನ್ನು ಮಾತ್ರ.

ಈ ಹಿಂದೆ ಹಲವಾರು ಸಂದರ್ಭಗಳಲ್ಲಿ ನಾನು ಬರೆದಿದ್ದೇನೆ. ಹೌದು, ಭಾರತದಲ್ಲಿ ಹೊಸ ವರ್ಗ ವ್ಯವಸ್ಥೆಯೊಂದು ಹುಟ್ಟಿಕೊಳ್ಳುತ್ತಿದೆ. ಭಾರತೀಯ ಸಮಾಜ, ಜಾತಿಯಾಧಾರಿತ ವ್ಯವಸ್ಥೆಯಿಂದ ಮುಕ್ತವಾಗಿ ವರ್ಗಾಧಾರಿತ ವ್ಯವಸ್ಥೆಯೆಡೆಗೆ ಹೊರಳುತ್ತಿರುವ ಸೂಚನೆಗಳು ಈಗ ಸ್ಪಷ್ಟವಾಗುತ್ತಿದೆ. □

ಪಾದಯಾತ್ರೆಯವರೆಗೆ

(27ನೇಪುಟದಿಂದ)

ವಿಭಿನ್ನ ಮಾರ್ಗಗಳನ್ನೂ ತೋರಿಸಿದ್ದಾರೆ.

ಮಾದಾರ ಚನ್ನಯ್ಯ ಸ್ವಾಮಿಗಳು ಈ ಧೋರಣೆಗಳನ್ನು ನಿರ್ಲಕ್ಷಿಸಿ, ಶ್ರೇಷ್ಠತೆಯ ಅಹಂಕಾರವನ್ನು ಪ್ರತಿಪಾದಿಸುವ ಹಿಂದೂ ವೈದಿಕ ಸಂಸ್ಕೃತಿಯ ಪಾದಪೂಜೆಯ ಸಂಪ್ರದಾಯಕ್ಕೆ ಬಲಿಯಾಗಿದ್ದಾರೆ. ಮತ್ತೊಬ್ಬರ ಕಾಲಿಗೆ ನಮಸ್ಕರಿಸುವುದು ವೈಯ್ಯಕ್ತಿಕ ಭಕ್ತಿ ಆರಾಧನಾ ಭಾವನೆಗಳ ದ್ಯೋತಕವೇನೋ ಹೌದು. ಆದರೆ ತನ್ನಂತೆಯೇ ಇರುವ ಮತ್ತೊಬ್ಬ ಮನುಷ್ಯನಿಂದ ಪಾದಕ್ಕೆ ನಮಸ್ಕಾರ ಮಾಡಿಸಿಕೊಳ್ಳುವ ಸಂಪ್ರದಾಯದ ಹಿಂದೆ, ಜಾತಿ ವ್ಯವಸ್ಥೆಯ ಶ್ರೇಷ್ಠತೆಯ ಪರಂಪರೆ ಅಡಗಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ತಾನು ಮತ್ತೊಬ್ಬರಿಗಿಂತಲೂ ಶ್ರೇಷ್ಠ ಎಂಬ ಅಹಂ ಇದ್ದಲ್ಲಿ ಮಾತ್ರ ನಮಸ್ಕಾರವನ್ನು ಸ್ವೀಕರಿಸಲು ಸಾಧ್ಯ. ಇದು ದಲಿತ ಅಂಬೇಡ್ಕರ್ ಪ್ರತಿಪಾದಿತ ದಲಿತ ಸಂವೇದನೆಗಷ್ಟೇ ಅಲ್ಲದೆ, ಭಾರತೀಯ ಮೂಲ ಜನಸಂಸ್ಕೃತಿಯ ಸಂವೇದನೆಗಳಿಗೂ ವಿರುದ್ಧವಾದುದು. ಆದರೆ ಬ್ರಾಹ್ಮಣ ಕೇರಿಗೆ ಹೋಗಿ, ಅಲ್ಲಿನ ವಿಪ್ರ ಶ್ರೇಷ್ಠ(!)ರಿಂದ ಪಾದಪೂಜೆ ಮಾಡಿಸಿಕೊಂಡು ಪುಳಕಿತರಾಗಿರುವ ಮಾದಾರ ಚನ್ನಯ್ಯ ಸ್ವಾಮಿಗಳು ತಮ್ಮ ಹಾಗು ತಾವು ಪ್ರತಿನಿಧಿಸುವ ಸಮುದಾಯದ ಮೂಲ ಸಿದ್ಧಾಂತವನ್ನಷ್ಟೇ ಅಲ್ಲದೆ, ನೈತಿಕತೆಯನ್ನೂ ಪಣಕ್ಕಿಟ್ಟಿದ್ದಾರೆ.

ತನ್ಮೂಲಕ ದಲಿತ ಸಮುದಾಯವನ್ನು ಗೊಂದಲಕ್ಕೆ ಸಿಲುಕಿಸಿರುವುದೇ ಅಲ್ಲದೆ ವೈದಿಕ ಸಂಸ್ಕೃತಿಯನ್ನು ಪ್ರತಿನಿಧಿಸುವ ಸಂಘಪರಿವಾರದ ಸುಪರ್ದಿಗೆ ಒಪ್ಪಿಸಿದ್ದಾರೆ. ಕರ್ನಾಟಕದಲ್ಲಿ ದಲಿತ-ವೈದಿಕ ಸಮ್ಮಿಲನ ಪ್ರಹಸನ ನಡೆಯುತ್ತಿರುವ ಸಂದರ್ಭದಲ್ಲೇ, ಭಾರತದ ಸೆಕ್ಯುಲಾರ್ ಧೋರಣೆಯನ್ನೇ ಪ್ರಶ್ನಿಸುವ ರೀತಿಯಲ್ಲಿ ರಾಮಜನ್ಮ ಭೂಮಿ ವಿವಾದ ಹೊಸ ತಿರುವು ಪಡೆದುಕೊಂಡಿದೆ. ಅನ್ಯ ಸಂಸ್ಕೃತಿಯ ದ್ಯೋತಕವಾದ ಸ್ಥಾವರವೊಂದನ್ನು ಧ್ವಂಸ ಮಾಡಿ ಅಲ್ಲಿ ತನ್ನ ಸಂಸ್ಕೃತಿಯನ್ನು ನೆಟ್ಟು ಪೋಷಿಸುವ ಹಿಂದುತ್ವವಾದಿಗಳ ಕೈಂಕರ್ಯಕ್ಕೆ ನ್ಯಾಯಾಂಗದ ಮನ್ನಣೆ ದೊರೆತಿರುವ ಹಿನ್ನೆಲೆಯಲ್ಲೇ, ಪೇಜಾವರರ ಪಾದಯಾತ್ರೆಯನ್ನೂ ನೋಡಬೇಕಿದೆ. ಇಲ್ಲಿಯೂ ಸಹ ಪೇಜಾವರರು ಮತ್ತು ದ್ವಿಜ ಸಂಪ್ರದಾಯದ ಆಧುನಿಕ ಹರಿಕಾರರು, ಅನ್ಯ ಸಂಸ್ಕೃತಿಯ ಸಾಂಸ್ಕೃತಿಕ-ಭೌದ್ಧಿಕ ಸ್ಥಾವರಗಳನ್ನು ಧ್ವಂಸ ಮಾಡಿ ಅಲ್ಲಿ ತಮ್ಮ ಸಾಂಸ್ಕೃತಿಕ ನೆಲೆಯನ್ನು ಸ್ಥಾಪಿಸಲು ಯತ್ನಿಸುತ್ತಿದ್ದಾರೆ. ರಾಮಮಂದಿರದ ನಿರ್ಮಾಣಕ್ಕೆ ಇಟ್ಟಿಗೆ ಹೊತ್ತ ದಲಿತ ಸಮುದಾಯದ ಕರ ಸೇವಕರನ್ನು ಪ್ರತಿನಿಧಿಸುವಂತೆ ಮಾದಾರ ಚನ್ನಯ್ಯ ಸ್ವಾಮಿಗಳು ಪೇಜಾವರರ ಇತಿಹಾಸ ನಿರ್ಮಾಣಕ್ಕೆ ಮೆಟ್ಟಿಲುಗಳನ್ನು ನಿರ್ಮಿಸಲೆತ್ನಿಸುತ್ತಿದ್ದಾರೆ.

ಸೋಮನಾಥ ರಥಯಾತ್ರೆಯ ಪರಿಣಾಮ ಭಾರತದ ಸೆಕ್ಯುಲರ್ ತಳಹದಿಯನ್ನೇ ಅಲುಗಾಡಿಸುತ್ತಿರುವ ಸಂದರ್ಭದಲ್ಲೇ ಪೇಜಾವರ-ಮಾದಾರರ ಪಾದಯಾತ್ರೆಗಳು ಜಾತಿ ವ್ಯವಸ್ಥೆಯ ಆಂತರ್ಯವನ್ನು ಶಾಶ್ವತಗೊಳಿಸುತ್ತಿರುವುದು ಸಮಕಾಲೀನ ಭಾರತದ ದುರಂತ ಎಂದಷ್ಟೇ ಹೇಳಬಹುದು. □



ಬುದ್ಧಾಯಣ

೬೨

ಹಳ್ಳಿಯ ಹಿನ್ನೆಲೆಯಿಂದ ಬಂದ ವರ್ತಕನು ಮುಗ್ಧನು, ಸೂಕ್ಷ್ಮಜ್ಞನು ಮತ್ತು ಪ್ರಾಮಾಣಿಕನೂ ಆಗಿದ್ದ. ಆದರೆ ನಗರದ ಹಿನ್ನೆಲೆಯಿಂದ ಬಂದ ವರ್ತಕನು ಮೋಸ, ಕುತಂತ್ರ ಮತ್ತು ದುರಾಸೆಯ ಬುದ್ಧಿಯುಳ್ಳವನಾಗಿದ್ದ. ಹೀಗಿರಲು ಒಂದು ಬಾರಿ ಐನೂರು ಬಂಡಿಗಳಲ್ಲಿ ಸರಕನ್ನು ತುಂಬಿಕೊಂಡು ದೂರದ ನಗರಕ್ಕೆ ವ್ಯಾಪಾರಕ್ಕೆಂದು ಹೋದರು. ಅಲ್ಲಿ ಒಳ್ಳೆಯ ಲಾಭಕ್ಕೆ ತಮ್ಮ ದಾಸ್ತಾನನ್ನು ಮಾರಿ ಹೆಚ್ಚಿನ ಲಾಭವನ್ನು ಗಳಿಸಿ ಮತ್ತೆ ವಾರಣಾಸಿಗೆ ಹಿಂದಿರುಗಿದರು. ಬಂದ ಲಾಭವನ್ನು ಸಮನಾಗಿ ಹಂಚಿಕೊಳ್ಳಲು ನಗರದ ವ್ಯಾಪಾರಿಗೆ ಮನಸ್ಸು ಬರಲಿಲ್ಲ.

ಸಿ. ಹೆಚ್. ರಾಜಶೇಖರ್

ಇಲಿಯು ಕಬ್ಬಿಣದ ಕುಳವನ್ನೆಲ್ಲಾದರೂ ತಿನ್ನ ಬಲ್ಲದೆ!!

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸಾವತ್ಥಿಯ ಜೇತವನದಲ್ಲಿ ತಂಗಿದ್ದರು. ಅದಕ್ಕೂ ಪೂರ್ವಕಾಲದಲ್ಲಿ ಬ್ರಹ್ಮದತ್ತ ರಾಜನು ವಾರಣಾಸಿ ರಾಜ್ಯವನ್ನು ಆಳುತ್ತಿದ್ದನು. ಅಂತಹ ಸಂದರ್ಭದಲ್ಲಿ ಬೋಧಿಸತ್ವರು ರಾಜನ ನ್ಯಾಯಾಸ್ಥಾನದಲ್ಲಿ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ನ್ಯಾಯಾಲಯಕ್ಕೆ ಬರುವ ಎಂತಹದೆ ಕಠಿಣ ಸಮಸ್ಯೆಯನ್ನು ಸೂಕ್ಷ್ಮತೆಯಿಂದ ಪರಿಶೀಲಿಸಿ ನಿರಪರಾಧಿಗೆ ನ್ಯಾಯವನ್ನು ಒದಗಿಸಿ ಕೊಡುತ್ತಿದ್ದರು.

ಅಂತಹ ಸಂದರ್ಭದಲ್ಲಿ ಇಬ್ಬರು ಮಿತ್ರರಿದ್ದರು. ಅವರು ವೃತ್ತಿಯಲ್ಲಿ ವರ್ತಕರಾಗಿದ್ದರು. ಒಬ್ಬ ಹಳ್ಳಿಗನಾಗಿದ್ದ. ಮತ್ತೊಬ್ಬ ನಗರದವನಾಗಿದ್ದ. ಹಳ್ಳಿಯ ಹಿನ್ನೆಲೆಯಿಂದ ಬಂದ ವರ್ತಕನು ಮುಗ್ಧನು, ಸೂಕ್ಷ್ಮಜ್ಞನು ಮತ್ತು ಪ್ರಾಮಾಣಿಕನೂ ಆಗಿದ್ದ. ಆದರೆ ನಗರದ ಹಿನ್ನೆಲೆಯಿಂದ ಬಂದ ವರ್ತಕನು ಮೋಸ, ಕುತಂತ್ರ ಮತ್ತು ದುರಾಸೆಯ ಬುದ್ಧಿಯುಳ್ಳವನಾಗಿದ್ದ. ಹೀಗಿರಲು ಒಂದು ಬಾರಿ ಐನೂರು ಬಂಡಿಗಳಲ್ಲಿ ಸರಕನ್ನು ತುಂಬಿಕೊಂಡು ದೂರದ ನಗರಕ್ಕೆ ವ್ಯಾಪಾರಕ್ಕೆಂದು ಹೋದರು. ಅಲ್ಲಿ ಒಳ್ಳೆಯ ಲಾಭಕ್ಕೆ ತಮ್ಮ ದಾಸ್ತಾನನ್ನು ಮಾರಿ ಹೆಚ್ಚಿನ ಲಾಭವನ್ನು ಗಳಿಸಿ ಮತ್ತೆ ವಾರಣಾಸಿಗೆ ಹಿಂದಿರುಗಿದರು. ಬಂದ ಲಾಭವನ್ನು ಸಮನಾಗಿ ಹಂಚಿಕೊಳ್ಳಲು ನಗರದ ವ್ಯಾಪಾರಿಗೆ ಮನಸ್ಸು ಬರಲಿಲ್ಲ. ಹೇಗಾದರು ಮಾಡಿ ಹಳ್ಳಿಯ ಮಿತ್ರನಿಗೆ ಮೋಸ ಮಾಡುವುದೆ ಅವನ ಮುಖ್ಯ ಉದ್ದೇಶವಾಗಿತ್ತು. ಹಳ್ಳಿಯ ವರ್ತಕ ಲಾಭದ ಹಂಚಿಕೆಯ ಬಗ್ಗೆ ಕೇಳಿದರೆ ;

"ಇಂದು ತಿಥಿ ಸರಿಯಾಗಿಲ್ಲ, ನಕ್ಷತ್ರ ಸರಿ ಇಲ್ಲ!" ಎಂದು ಏನಾದರು ಒಂದು ಸುಳ್ಳನ್ನು ಹೇಳಿ ಕಳುಹಿಸುತ್ತಿದ್ದ. ಹೀಗಿರಲು ಹಳ್ಳಿಗ ಮಿತ್ರನ ಮೇಲೆ ಸಂದೇಹಗೊಳ್ಳದೆ ಹಿಂದಿರುತ್ತಿದ್ದ. ಆದರೂ ಕೂಡ ಅವನನ್ನು ನಂಬಿ ಹೊಲ ಉಳುವ ಐನೂರು ಕಬ್ಬಿಣದ ಕುಳಗಳನ್ನು ಪೇಟೆಯಲ್ಲಿ ಖರೀದಿಸಿ;

"ಮಿತ್ರ, ಇನ್ನೊಮ್ಮೆ ನಗರಕ್ಕೆ ಬಂದಾಗ ತೆಗೆದುಕೊಂಡು ಹೋಗುತ್ತೇನೆ. ಅಲ್ಲಿಯ ತನಕ ನಿನ್ನ ಮನೆಯಲ್ಲಿಯೆ ಇರಲಿ" ಎಂದು ಹೇಳಿ ಇರಿಸಿ ಹೋದ. ದುರಾಸೆಗೆ ಒಳಗಾದ ನಗರದ ವರ್ತಕ ಆ ಕುಳಗಳನ್ನು ಮಾರಿ ಹಣವನ್ನು ಪಡೆದ. ಮಿತ್ರ ಬಂದರೆ ಏನು ಹೇಳುವುದು ಎಂಬ ಚಿಂತೆಯು ಕಾಡಲು, ಅವನು ಕುಳಗಳನ್ನು ಇಟ್ಟಿದ್ದ ಜಾಗದಲ್ಲಿ ಇಲಿಗಳ ಪಿಚಿಕೆಯ ರಾಶಿಯನ್ನು ಬೇರೆಡೆಯಿಂದ ತಂದು ಹಾಕಿದ. ಒಂದು ಮುಂಜಾನೆ ಹಳ್ಳಿಯ ರೈತ ಮಿತ್ರ ಬಂದು ತನ್ನ ಲಾಭದ ಪಾಲನ್ನು ಕೇಳಿದ. ಹಿಂದಿನಂತೆಯೇ ಸಬೂಬು ಹೇಳತೊಡಗಿದ. ಆಗ ಅವನ ಮನದಲ್ಲಿ ಸಂಶಯ ಮೂಡಿತು. ಈ ಬಾರಿ ಇರಲಿ ಮುಂದಿನ ಬಾರಿ ನೋಡೋಣ ಎಂದು ತೀರ್ಮಾನಿಸಿದ. ತಕ್ಷಣವೆ ತನ್ನ ನೇಗಿಲ ಕುಳಗಳ ನೆನಪಾಗಲು ಆತ ನಡೆದ. ಅಲ್ಲಿ ಕುಳಗಳು ಕಾಣಲಿಲ್ಲ. ಬದಲಿಗೆ ಇಲಿಗಳ ಪಿಚಿಕೆಯ ರಾಶಿ ಕಂಡು ಬಂದಿತು. ಆಶ್ಚರ್ಯದಿಂದ ಮಿತ್ರನನ್ನು ಉದ್ದೇಶಿಸಿ;

"ನನ್ನ ಐನೂರು ನೇಗಿಲ ಕುಳಗಳು ಕಾಣುತ್ತಿಲ್ಲವಲ್ಲ" ಎನ್ನಲು ಅವನು ನಿಶ್ಚಯಿಸಿ ಕೊಂಡವನಂತೆ;

"ಹೌದು ಮಿತ್ರ, ನಿನ್ನ ನೇಗಿಲ ಕುಳಗಳನ್ನು ಇಲಿಗಳು ತಿಂದು ಹೋಗಿದ್ದಾವೆ!" ಎಂದು ಉತ್ತರಿಸಿದ. ಆಗ ಅವನಿಗೆ ಸ್ಪಷ್ಟವಾಗಿ ಅರ್ಥವಾಯಿತು; ನಾನು ಮೋಸ ಹೋದೆ ಎಂಬ ಸಂಗತಿ. ಈಗ ನಾನು ಮರು ಮಾತನಾಡಿದರೆ ಸ್ನೇಹ – ಸಂಬಂಧವು ಹಾಳಾಗಿ ಹೋಗುತ್ತದೆ. ಈ ಮೋಸಗಾರನಿಗೆ ಮೋಸದಿಂದಲೇ ಬುದ್ಧಿಯನ್ನು ಕಲಿಸಬೇಕೆಂದು ತೀರ್ಮಾನಿಸಿದ. ಅವನು ತನ್ನ ನೋವು ಬೇಸರವನ್ನು ತೋರುಗೊಡದೆ;

"ಇರಲಿ ಬಿಡು ಮಿತ್ರ, ಮನೆಯಲ್ಲಿ ಇಲಿಗಳು ಹೆಚ್ಚಾದರೆ ಹೀಗೆಯೇ ಆಗುವುದು. ಎಲ್ಲಿ ನಿನ್ನ ಮಗನು ಕಾಣುತ್ತಿಲ್ಲವಲ್ಲ. ನಾನು ಮನೆಯಿಂದ ಬರುವಾಗ ಸ್ನಾನವನ್ನು ಮಾಡಿ ಬರಲಾಗಲಿಲ್ಲ. ನದಿಗೆ ಹೋಗಿ ಸ್ನಾನ ಮಾಡಬೇಕು. ಸಹಾಯಕ್ಕೆ ನನ್ನೊಂದಿಗೆ ನಿನ್ನ ಮಗನನ್ನು ಕಳುಹಿಸ ಬಲ್ಲೆಯಾ?" ಎನ್ನಲು ಸಂತೋಷದಿಂದ ಮಗನನ್ನು ಅವನೊಂದಿಗೆ ಕಳುಹಿಸಿ ಕೊಟ್ಟ. ಆ ರೈತ ವರ್ತಕನು ತನ್ನ ಗೆಳೆಯನೊಬ್ಬನ ಮನೆಗೆ ಹೋಗಿ ನಡೆದ ವಿಷಯವನ್ನು ತಿಳಿಸಿ ಆ ಹುಡುಗನನ್ನು ಅವನ ಮನೆಯಲ್ಲಿ ಗುಪ್ತವಾಗಿ ಇಟ್ಟುಕೊಳ್ಳಲು ತಿಳಿಸಿ ಒಂಟಿಯಾಗಿ ಮನೆಗೆ ಬಂದ. ಮಗನನ್ನು ಕಾಣದ , ವರ್ತಕನು ಗಾಬರಿಯಿಂದ;

"ಮಿತ್ರ, ಎಲ್ಲಿ ಹೋದ ನನ್ನ ಏಕೈಕ ಪುತ್ರ!"

"ನಾನು ಸ್ನಾನ ಮಾಡುವಾಗ ನಿನ್ನ ಮಗನು ನದಿಯ ದಡದಲ್ಲಿ ಕುಳಿತ್ತಿದ್ದ. ಒಂದು ಹಕ್ಕಿಯು ಹಾರಿ ಬಂದು ನಿನ್ನ ಮಗನನ್ನು ತನ್ನ ಉಗುರುಗಳಲ್ಲಿ ಹಿಡಿದುಕೊಂಡು ಆಕಾಶಕ್ಕೆ ಹಾರಿ ಹೋಯಿತು. ನಾನು ಕೈತಟ್ಟಿದೆ, ಕೂಗಿದೆ, ಬಲವಾಗಿ ಚೀರಿದೆ ಯಾವುದೇ ಪ್ರಯೋಜನವಾಗಲಿಲ್ಲ" ಎನ್ನಲು ಕ್ರೋಧಗೊಂಡ ಅವನು;

"ಎಲೈ, ನೀನು ಸುಳ್ಳು ಹೇಳುತ್ತಿರುವೆ. ಎಲ್ಲಿಯಾದರು ಮಗುವನ್ನು ಹಕ್ಕಿಯು ಎತ್ತಿಕೊಂಡು ಹಾರಿ ಹೋಗುವುದುಂಟೆ?"



"ನಿಜವೇ ಮಿತ್ರ, ಹಾಗಾದರೆ ಎಲ್ಲಿಯಾದರು ಇಲಿಯು ಕಬ್ಬಿಣದ ನೇಗಿಲ ಕುಳವನ್ನು ತಿನ್ನುವುದು ಉಂಟೆ?"

"ಎಲೈ, ನೀನು ದುಷ್ಟನಿರುವೆ. ಬೇಕೆಂದೆ ಸಂಚು ಮಾಡಿ ನನ್ನ ಮಗನನ್ನು ಅಪಹರಿಸಿರುವೆ. ನಾನು ನಿನ್ನನ್ನು ಸುಮ್ಮನೆ ಬಿಡುವುದಿಲ್ಲ. ಈಗಲೇ ನ್ಯಾಯಾಸ್ಥಾನಕ್ಕೆ ಹೋಗುತ್ತೇನೆ. ನಿನ್ನ ಮೇಲೆ ದೂರನ್ನು ಕೊಡುತ್ತೇನೆ!" ಎಂದ ಅವನು ಹಾಗೆಯೇ ಮಾಡಿದ.

ಮರುದಿನ ಹಳ್ಳಿಯ ವರ್ತಕ ನ್ಯಾಯಾಲಯದ ಮುಂದೆ ಹಾಜರಾದ. ಬೋಧಿಸತ್ವರು ಆತನನ್ನು ಕುರಿತು;

"ನಿನ್ನ ಮೇಲಿನ ಈ ಆಪಾಧನೆ ಸರಿಯೇ?" ಎನ್ನಲು ಆತ ನಡೆದದ್ದನ್ನು ನಡೆದಂತೆಯೇ ವಿವರಿಸಿ

ಹೇಳಿದ. ಬೋಧಿಸತ್ವರಿಗೆ ತಕ್ಷಣವೇ ಮುಂದಿನ ಎಲ್ಲವೂ ಸೂಕ್ಷ್ಮವಾಗಿ ಅರ್ಥವಾಯಿತು. ನಗರದ ವರ್ತಕನನ್ನು ಕುರಿತು;

"ಅಯ್ಯಾ, ಈ ಮಾತು ಸತ್ಯವೇ!" ಎನ್ನಲು ಇನ್ನೂ ನನ್ನ ಆಟ ನಡೆಯುವುದಿಲ್ಲ. ಮತ್ತೂ ತಂಟೆ ತೆಗೆದರೆ ನನಗೆ ಉಳಿಗಾಲವಿಲ್ಲ ಎಂಬ ಸತ್ಯವನ್ನು ಅರಿತ ಮೇಲೆ, ತನ್ನ ತಪ್ಪನ್ನು ಒಪ್ಪಿಕೊಂಡು ಆತನಿಗೆ ಸಲ್ಲಬೇಕಾದ ಲಾಭಾಂಶವನ್ನು ಮತ್ತು ಐನೂರು ಕಬ್ಬಿಣದ ನೇಗಿಲ ಕುಳಗಳನ್ನು ಹಿಂದಿರುಗಿಸಿದ. ಅದಕ್ಕೆ ಪ್ರತಿಯಾಗಿ ತನ್ನ ಏಕೈಕ ಪುತ್ರನನ್ನು ಪಡೆದನು. ಬಳಿಕ ತನ್ನ ಮಿತ್ರನನ್ನು ಉದ್ದೇಶಿಸಿ;

"ಮಿತ್ರ, ನಿನ್ನೆದುರು ನಾನು ಸೋತು ಹೋದೆ. ದುರಾಸೆಗೆ ದಾಸನಾದ ನಾನು ಮೋಸ ಮತ್ತು ಕುತಂತ್ರದಿಂದ ನಿನ್ನನ್ನು ವಂಚಿಸಲು ಪ್ರಯತ್ನಿಸಿದೆ. ಆದರೆ ನೀನು ಸತ್ಯ, ಅಹಿಂಸೆ, ತಾಳ್ಮೆ ಮತ್ತು ಸೂಕ್ಷ್ಮತೆಯಿಂದ ನನ್ನ ಕಣ್ಣನ್ನು ತೆರೆಸಿದೆ. ಹೌದು ಸತ್ಯವೇ ಶಾಶ್ವತ ಮಿಕ್ಕದ್ದೆಲ್ಲ ತಾತ್ಕಾಲಿಕ. ನನ್ನ ತಪ್ಪನ್ನು ಮನ್ನಿಸೆಂದು...!!" ಮುನ್ನಡೆದ.

* * * * * * * *

ದುಷ್ಟರೇಕೆ ಏಳಿಗೆ ಆಗುವುದಿಲ್ಲ...?!

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸಾವಸ್ಥಿಯ ಜೇತವನದಲ್ಲಿ ತಮ್ಮ ಅಪಾರ ಶಿಷ್ಯರೊಂದಿಗೆ ತಂಗಿದ್ದರು. ಅದಕ್ಕೂ ಪೂರ್ವಕಾಲದಲ್ಲಿ ವಾರಣಾಸಿ ರಾಜ್ಯವನ್ನು ಬ್ರಹ್ಮದತ್ತನೆಂಬ ರಾಜನು ಆಳುತ್ತಿದ್ದನು. ಅಂಥಹ ಸಮಯದಲ್ಲಿ ಬೋಧಿಸತ್ವರು ಒಂದು ಜಮೀನುದಾರ ಶ್ರೀಮಂತ ಕುಟುಂಬದಲ್ಲಿ ಜನಿಸಿದರು. ಅವರಿಗೊಬ್ಬ ತಮ್ಮನಿದ್ದ. ಅವರ ತಂದೆಯು ಅಪಾರ ಜಮೀನಿನ ಒಡೆಯರಾಗಿದ್ದರು. ಕೃಷಿಯ ಜೊತೆಗೆ ಬಡ್ಡಿಯ ವ್ಯವಹಾರವನ್ನು ನೆಡೆಸುತ್ತಿದ್ದರು. ತಮ್ಮ ಗ್ರಾಮ ಮತ್ತು ಅದರ ಸುತ್ತಮುತ್ತ ಇದ್ದ ಹಳ್ಳಿಗಳಿಗೆ ಬಡ್ಡಿಗಾಗಿ ಹಣವನ್ನು ಬಿಟ್ಟಿದ್ದರು. ರೈತರು ತೆಗೆದುಕೊಂಡ ವಾಯಿದೆ ಮುಗಿಯುತ್ತಿದ್ದಂತೆ ಅವರ ಮನೆಯ ಮುಂದೆ ನಿಂತು ಸಾಲವನ್ನು ಬಡ್ಡಿಯ ಸಮೇತ ವಸೂಲಿ ಮಾಡುತ್ತಿದ್ದರು. ಹೀಗಾಗಿ ಅವರ ಶ್ರೀಮಂತಿಕೆ ಬೆಳೆದಿತ್ತು.

ಹೀಗಿರಲು ಒಂದು ದಿನ ಅವರ ತಂದೆ ವಯಸ್ಸಾಗಿ ಕಾಯಿಲೆ ಮಲಗಿದರು. ತಾನು ಇನ್ನೂ ಸಾಯುವುದು ಖಚಿತ ಎಂಬುದನ್ನು ಅರಿತ ಅವರು ತನ್ನ ಇಬ್ಬರು ಮಕ್ಕಳನ್ನು ಕರೆದು. ತಾನು ಯಾರ್ಯಾರಿಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೇನೆ? ಅವರಿಂದ ಎಷ್ಟೆಷ್ಟು ಬಡ್ಡಿ ಬರಬೇಕು ಎಂಬ ಬಗ್ಗೆ ವಿವರವಾದ ಲೆಕ್ಕವನ್ನು ಕೊಟ್ಟರು ಆ ಹಣವನ್ನು ನೀವು ಹೇಗೆ ವಸೂಲಿ ಮಾಡಬೇಕು ಎಂಬುದನ್ನು ತಿಳಿಯ ಹೇಳಿದರು. ಬಂದ ಆ ಹಣವನ್ನು ತಾವು ಇಬ್ಬರೂ ಸಮನಾಗಿ ಹಂಚಿಕೊಂಡು ಸುಖವಾಗಿ ಬಾಳಿರಿ ಮತ್ತು ಸಂಪತ್ತನ್ನು ಅಭಿವೃದ್ಧಿ ಮಾಡಿಕೊಂಡು ಸಂಸಾರವನ್ನು ದಾರಿದ್ರ್ಯದಿಂದ ಪಾರು ಮಾಡಿಕೊಂಡು ಸುಖ ಜೀವನವನ್ನು ನೆಡೆಸುವ ಕಲೆಯನ್ನು ತಿಳಿಯ ಹೇಳಿದರು. ಕೊನೆಯದಾಗಿ ವ್ಯವಹಾರದಲ್ಲಿ ಧರ್ಮವಂತರಾದಂತೆ ಖಾಸಗಿ ಜೀವನದಲ್ಲಿಯೂ ಪ್ರಾಮಾಣಿಕರಾಗಿ ಬದುಕಿ ಆಗ ಮಾತ್ರ ಏಳಿಗೆಯಾಗುತ್ತದೆ. ಇಲ್ಲವೆಂದರೆ ದುರಂತ ತಪ್ಪಿದ್ದಲ್ಲ. ಲೋಭದಿಂದ ದುಷ್ಟತನ ಬೆಳೆಯುತ್ತದೆ. ಆದುದರಿಂದ ಲೋಭದಿಂದ ಮುಕ್ತರಾಗಿ ಎಂದು ತನ್ನ ಮಕ್ಕಳಿಗೆ ಹಿತವಚನ ನುಡಿದ ತಂದೆ ಕೆಲವೇ ದಿನಗಳಲ್ಲಿ ಮರಣ ಹೊಂದಿದರು.

ಬೋಧಿಸತ್ವರ ತಮ್ಮ ತಂದೆಯ ಸ್ವಭಾವಕ್ಕೆ ತದ್ವಿರುದ್ಧನಾಗಿದ್ದ. ತಂದೆಯ ಅಂತ್ಯಕ್ರಿಯೆ ನೆಡೆದ ಮರುದಿನ ಅಣ್ಣನನ್ನು ಕುರಿತು; "ಅಣ್ಣ, ನಾವು ಇನ್ನೂ ತಡ ಮಾಡುವಂತಿಲ್ಲ. ಈಗಲೇ ಸಾಲ ವಸೂಲಿಗೆ ಹೊರಡು" ಎಂದು ಒಂದು ಹಳ್ಳಿಗೆ ಕರೆದುಕೊಂಡು ಹೋದ. ಅಲ್ಲಿ ಒಂದು ಸಾವಿರ ನಾಣ್ಯ ಸಾಲವು ವಸೂಲಿಯಾಯಿತು. ಆ ಹಣವು ತಮ್ಮನ ಕೈ ಸೇರುತ್ತಿದ್ದಂತೆಯೇ ಅವನ ಲೋಭ ಮನೋಭಾವವು ಎಡೆಎತ್ತಿತು. ಇದರಲ್ಲಿ ಅಣ್ಣನಿಗೆ ಐನೂರು ನಾಣ್ಯಗಳ ಪಾಲು ಹೋಗಬೇಕು ಎಂಬುದನ್ನು ನೆನಯುತ್ತಿದ್ದಂತೆಯೆ ಕಸಿವಿಸಿಗೊಂಡ. ಅಣ್ಣ ತಮ್ಮಂದಿರು ನದಿಯ ದಡೆಗೆ ಬಂದರು. ನದಿಯಲ್ಲಿ ಕುಳಿತು ದೋಣಿ ದಾಟುವ ಮೊದಲು ತಂದ ಬುತ್ತಿಯನ್ನು ಬಿಚ್ಚಿ ಊಟಕ್ಕೆ ಕುಳಿತರು. ತಮ್ಮ ಬೇಗ ಬೇಗ ಊಟ ಮುಗಿಸಿ ಒಂದು ಪೊದೆಯ ಮರೆಗೆ ಬಂದ. ಕೈಯಲ್ಲಿದ್ದ ಒಂದು ಸಾವಿರದ ನಾಣ್ಯದ ತೂಕವನ್ನು ಅಂದಾಜು ಮಾಡಿಕೊಂಡ. ಅಷ್ಟೇ ತೂಕದ ಸಣ್ಣ ಸಣ್ಣ ಕಲ್ಲಿನ ಚೂರುಗಳನ್ನು ಆಯ್ದು ನಾಣ್ಯದ ಪೊಟ್ಟಣದಂತೆಯೆ ಮತ್ತೊಂದು ಪೊಟ್ಟಣವನ್ನು ತಯಾರುಮಾಡಿ ಹೆಗಲಲ್ಲಿ ನೇತಾಡುತ್ತಿದ್ದ ಚೀಲಕ್ಕೆ ಹಾಕಿಕೊಂಡ. ಅಣ್ಣ ಇನ್ನೂ ಊಟ ಮಾಡುತ್ತಿದ್ದನ್ನು ನೋಡಿ ನಿಟ್ಟೂಸಿರನ್ನು ಬಿಟ್ಟ. ಬಳಿಕ ಆ ಇಬ್ಬರೂ ದೋಣಿ ಹತ್ತಿ ಮನೆಯ ಕಡೆ ಹೊರಟರು.

ಮಾರ್ಗ ಮಧ್ಯೆ ದೋಣಿಯು ಇಳಿ ಮುಖವಾಗಿ ಚಲಿಸುವಾಗ ನೀರಿನ ರಭಸವು ಹೆಚ್ಚಾಯಿತು. ಈ ಸಮಯಕ್ಕಾಗಿ ಕಾದಿದ್ದ ತಮ್ಮನು ಹೆಗಲಲ್ಲಿದ್ದ ಚೀಲಕ್ಕೆ ಕೈಹಾಕಿದ. ತಾನು ಮೊದಲೇ ಗುರುತು ಮಾಡಿ ಇಟ್ಟಿದ್ದ ಕಲ್ಲಿನ ಪೊಟ್ಟಣವು ದೋಣಿಯ ಕುಲುಕಾಟದಲ್ಲಿ ಅದಲು ಬದಲಾಗಿತ್ತು. ಅದನ್ನು ಅರಿಯದ ತಮ್ಮ ಹಣವಿದ್ದ ಪೊಟ್ಟಣವನ್ನು ಕಲ್ಲಿನ ಪೊಟ್ಟಣವೆಂದು ಬಗೆದು ಕೈಗೆತ್ತಿಕೊಂಡ. ಅದನ್ನು ಕಂಡ ಬೋಧಿಸತ್ವರು;

"ತಮ್ಮಾ, ಹಣದ ಪೊಟಣವನ್ನೇಕೆ ಕೈಗೆ ಎತ್ತಿಕೊಂಡೆ?"

"ಒಂದು ಪಕ್ಷ ಅಲೆಯ ರಭಸಕ್ಕೆ ದೋಣಿಯು ಮಗುಚಿದರೆ ನದಿಗೆ ಹಾರಿ ಈಜಿ ಹಣದ ಪೊಟ್ಟಣದೊಂದಿಗೆ ದಡ ಸೇರಬಹುದು ಅದಕ್ಕಾಗಿ!" ಎಂದ. ತಮ್ಮನ ಮುಂಜಾಗರೂಕತೆಯನ್ನು ಕಂಡ ಅಣ್ಣ ಮನದಲ್ಲಿಯೇ ಮೆಚ್ಚಿಕೊಂಡ. ಹೀಗೆಯೆ ದೋಣಿಯು ಸಾಗುತ್ತಿತ್ತು. ಸ್ವಲ್ಪ ಮುಂದೆ ಹೋದ ನಂತರ ನೀರಿನ ಆರ್ಭಟ ಜಾಸ್ತಿಯಾಯಿತು. ಇದೇ ಸರಿಯಾದ ಸಮಯವೆಂದು ಅರಿತ ತಮ್ಮನು ಕೈಯಲ್ಲಿದ್ದ ಪೊಟ್ಟಣವನ್ನು ನೀರಿಗೆ ಬೇಕೆಂದೆ ಬಿಟ್ಟು ಅಳತೊಡಗಿದ. ಬೋಧಿಸತ್ವರು ಏಕೆ?

ಎಂದು ವಿಚಾರಿಸಿದಾಗ ಅಲೆಯ ರಭಸವನ್ನು ತಾಳಲಾರದೆ ಕೈ ಜಾರಿ ಬಿತ್ತು ಎನ್ನಲು ಇರಲಿ ಬಿಡು ಅದು ದಕ್ಕುವ ಪುಣ್ಯ ನಮಗಿರಲಿಲ್ಲ ಎಂದು ಕಾಣಿಸುತ್ತದೆ ಎಂದು ತಮ್ಮನನ್ನು ಸಮಾಧಾನ ಮಾಡಿದರು. ತಮ್ಮನಿಗೆ ಒಳಗೊಳಗೆ ಸಂತೋಷವಾಯಿತು. ಪೂರ್ಣ ಹಣ ನನಗೊಬ್ಬನಿಗೆ ದಕ್ಕಿತು ಎಂದು ಮನೆಯನ್ನು ತಲುಪಿದ ಅವನು ಅತುರಾತುರವಾಗಿ ತನ್ನ ಕೋಣೆಯನ್ನು ತಲುಪಿದ. ಚೀಲದಲ್ಲಿದ್ದ ಪೊಟ್ಟಣವನ್ನು ಹೊರ ತೆಗೆದು ಅದನ್ನು ಬಿಚ್ಚಿ ನೋಡುತ್ತಾನೆ. ಅದರಲ್ಲಿ ತಾನೇ ಕಟ್ಟಿದ್ದ ಸಣ್ಣ ಸಣ್ಣ ಕಲ್ಲಿನ ಚೂರುಗಳಿದ್ದುದ್ದನ್ನು ಕಂಡು ಕುಸಿದು ಕುಳಿತ.

ಅದೇ ಸಮಯಕ್ಕೆ ಸರಿಯಾಗಿ ಬೆಸ್ತನೊಬ್ಬ ಮೀನನ್ನು ಮಾರುತ್ತಾ ಬೋಧಿತ್ವರ ಮನೆಯಬಳಿ ಬಂದು "ಸ್ವಾಮೀ, ಒಂದೇ ಒಂದು ದೊಡ್ಡ ಮೀನು ಉಳಿದಿದೆ. ದುಬಾರಿಯ ಹಣ ತೆತ್ತು ಈ ಮೀನನ್ನು ಯಾರೂ ಕೊಳ್ಳುತ್ತಿಲ್ಲ. ತಾವು ಕೃಪೆ ತೋರಿ ಕೊಂಡರೆ ಇಂದು ನನ್ನ ಹೆಂಡತಿ ಮಕ್ಕಳ ಅನ್ನಕ್ಕೆ ದಾರಿಯಾಗುತ್ತದೆ. ಇಲ್ಲವೆಂದರೆ ಅವರೆಲ್ಲರ ಹೊಟ್ಟೆಯ ಮೇಲೆ ತಣ್ಣೀರಿನ ಬಟ್ಟೆಯೆ ಗತಿ" ಎನ್ನಲು ಮೀನುಗಾರ ಹೇಳಿದ ಬೆಲೆಯನ್ನು ಕೊಟ್ಟು ಆ ಮೀನನ್ನು ಕೊಂಡುಕೊಂಡು ತನ್ನ ಹೆಂಡತಿಗೆ ಕೊಟ್ಟರು. ಆಕೆ ಆ ಮೀನಿನ ಮೇಲ್ಭಾಗವನ್ನು ಸ್ವಚ್ಛಗೊಳಿಸಿ ಹೊಟ್ಟೆಯನ್ನು ಸೀಳಿದಾಗ ಅಲ್ಲಿ ಒಂದು ಪೊಟ್ಟಣವನ್ನು ಕಂಡು ಬೆರಗಾದಳು. ಆಶ್ಚರ್ಯದಿಂದ ತನ್ನ ಪತಿಯನ್ನು ಕೂಗಿ ಕರೆದು ಅದನ್ನು ಬೋಧಿಸತ್ವರ ಕೈಗಿತ್ತಳು. ಅದು ತಾವು ಇಂದು ಬೆಳಿಗ್ಗೆ ಸಾಲ ವಸೂಲಿ ಮಾಡಿದ ಹಣದ ಪೊಟ್ಟಣವೆಂದು ಗುರುತುಹಿಡಿದ. ಹಾಗಾದರೆ ತಮ್ಮನ ಕೈಯಿಂದ ಜಾರಿದ ಪೊಟ್ಟಣದಲ್ಲಿ ಏನಿತ್ತು? ಆತ ಏಕೆ ಹೀಗೆ ಮಾಡಿದ ಎಂಬುದನ್ನು ಚಿಂತಿಸಿದಾಗ ಮುಂದಿನ ಒಳಸಂಚು ತಿಳಿದು ತಮ್ಮನ ಮೇಲೆ ತಾವು ಇಟ್ಟಿದ್ದ ಪ್ರೀತಿ, ವಿಶ್ವಾಸ ಮತ್ತು ನಂಬಿಕೆಗೆ ಅರ್ಥವಿಲ್ಲ ಎನ್ನಿಸಿತು. ಆದರೂ ಆತನ ಮೇಲಿನ ಕರುಣೆಯಿಂದ ಅವನ ಮನೆಗೆ ಬಂದರು.

ಅವನು ತನ್ನ ಕುತಂತ್ರವು ತಲೆಕೆಳಗಾದುದರಿಂದ ಅಪಾರ ದುಃಖಕ್ಕೆ ತುತ್ತಾಗಿ ಮಂಚದ ಕೆಳಗೆ ಮಲಗಿ ರೋಧಿಸುತ್ತಿದ್ದ. ಅವನನ್ನು ಹೊರಗೆ ಕರೆದು ಹೀಗೆ ಪ್ರಶ್ನಿಸಿದರು;

"ಸಹೋದರ, ಸಾಲಗಾರ ಕೊಟ್ಟ ಹಣವನ್ನು ಎಷ್ಟು ಪೊಟ್ಟಣದಲ್ಲಿ ಕಟ್ಟಿದ್ದೆ?"

"ಒಂದು ಪೊಟ್ಟಣದಲ್ಲಿ!"

"ಆ ಪೊಟ್ಟಣವು ಕೈಜಾರಿ ನದಿಯಲ್ಲಿ ಬಿತ್ತು ಅಲ್ಲವೆ?"

"ಹೌದು, ಅದಕ್ಕಾಗಿಯೇ ನಾನುದುಃಖಿಸುತ್ತಿದ್ದೇನೆ!" ಎನ್ನಲು ಬೋಧಿಸತ್ವರು ಅಸಲಿ ಹಣದ ಪೊಟ್ಟಣವನ್ನು ಅವನ ಎದುರಿಗೆ ಹಿಡಿಯುತ್ತಾ;

"ತಮ್ಮಾ, ಹಾಗಾದರೆ ಈ ಪೊಟ್ಟಣ ಯಾವುದು?" ಎನ್ನಲು ಅವನು ಸತ್ಯವು ಅಣ್ಣನಿಗೆ ತಿಳಿದು ಹೋಯಿತು ಎಂದು ಕುಸಿದು ಕುಳಿತ. ತಮ್ಮ ಪಾಲಿನ ಐನೂರು ನಾಣ್ಯಗಳನ್ನು ತೆಗೆದುಕೊಂಡು ಉಳಿದ ಐನೂರು ನಾಣ್ಯಗಳನ್ನು ತಮ್ಮನಿಗೆ ಕೊಟ್ಟರು. ಆಗ ಆತನಿಗೆ ತನ್ನ ತಪ್ಪಿನ ಅರಿವಾಗಲು;

"ಹೌದು, ತಂದೆಯ ಮಾತಿನಲ್ಲಿ ಸತ್ಯವಿದೆ. ಲೋಭವೇ ದುಷ್ಟತನದ ಮೂಲ. ನಾನು ಸ್ವಾರ್ಥಕ್ಕೆ ತುತ್ತಾಗಿ ಮೂಲ ಧನವನ್ನೆ ಕಳೆದುಕೊಂಡೆ. ನೀನು ಧರ್ಮದ ದಾರಿಯಲ್ಲಿ ನೆಡೆದು ನನ್ನ ಕಣ್ಣು ತೆರೆಸಿದೆ...!!" ಎಂದು ತಲೆಬಾಗಿ ವಂದಿಸಿದ. □

'SAMVADA' Kannada Monthly, November 2010 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month

ಕೇಂದ್ರ ಸಾಹಿತ್ಯ ಅಕಾದೆಮಿ
ಹೊಸ ಪ್ರಕಟಣೆಗಳು

ಮಧುಪುರ ಬಹುದೂರ
– ಶೀಲಭದ್ರ,
ಅನು : ಗೀತಾ ವಿಜಯಕುಮಾರ್
ರೂ. : 75

ಹನ್ನೆರಡು ಕಥೆಗಳ ಈ ಸಂಕಲನದಲ್ಲಿ ಕಥೆಗಾರ ಅಸಂಖ್ಯಾತ, ವಿವಿಧ ವಿಚಿತ್ರ ಸ್ವಭಾವದ ವ್ಯಕ್ತಿಗಳನ್ನು ಪರಿಚಯ ಮಾಡಿಕೊಡುತ್ತಾರೆ. ಆದರೆ ವ್ಯಕ್ತಿಗತವಾಗಿ ಯಾರನ್ನೂ ಉದ್ದೇಶಿಸದೇ ಮಾನವ ಸಂಬಂಧಗಳ ವಾಸ್ತವ ಪ್ರತಿಬಿಂಬವನ್ನು ತೋರಿಸಿದ್ದಾರೆ. ಸ್ಪಷ್ಟವಾದ, ಸುಲಭವಾದ ಶೈಲಿಯಲ್ಲಿ, ಕಲಾತ್ಮಕವಾದ ಕಾಲದಿಂದ ಬಂದಂತಹ ಈ ಕಥೆಗಳನ್ನು ಓದುವಾಗ ಓದುಗ ಆಗಾಗ ತನ್ನ ಮುಖವನ್ನು ಪರಿಚಿತವಾದ ಪರಿಧಿಯೊಳಗೆ ನೋಡುತ್ತಾನೆ.

ಯಜ್ಞ
ಕಾಳೀಪಟ್ನಂ ರಾಮಾರವ್ –
ಅನು : ಚಿದಾನಂದ ಸಾಲಿ
ರೂ. 200

ಅತಿ ದೀರ್ಘ ಕಥನಕಗಳು, ಅತ್ಯಂತ ಚಿಕ್ಕ ಕಲೆಬರಹಗಳು, ಸಾವಧಾನವಾಗಿ ಸಮಸ್ತವನ್ನು ಪರಿಶೀಲಿಸುವ ಸೂಕ್ಷ್ಮಾತಿಸೂಕ್ಷ್ಮ ವಿವರಗಳು, ಇಡಿಕಿರಿದು ತುಂಬಿರುವ ನೂರೆಂಟು ಬಗೆಯ ಪಾತ್ರಗಳು, ಸರಳ–ನಿರಾಳ ನಿರೂಪಣಾ ಶೈಲಿ... ಹೀಗೆ ಇವು ಕಥೆಗಳೆಂದರೆ ಬರೀ ಕಥೆಗಳಲ್ಲ; ಬದಲಿಗೆ ಆ ಕಥನಾವಕಾಶದಲ್ಲಿ ಸದ್ದಿಲ್ಲದೆ ಓದುಗನನ್ನು ಒಳಗು ಮಾಡಿಕೊಳ್ಳುವ ವಿಶಿಷ್ಟ ಅನುಭವ ಕಥನಕಗಳು.

ವಿ.ಕೃ. ಗೋಕಾಕ್
– ಸುರೇಂದ್ರನಾಥ ಮಿಣಜಗಿ
ಅನು : ಮಾಧವ ಕುಲಕರ್ಣಿ
ರೂ. 40

ಗೋಕಾಕರು ತಮ್ಮ ಕಾವ್ಯ, ಕಾದಂಬರಿ ಮತ್ತು ವಿಮರ್ಶೆಗಳಲ್ಲಿ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಗಳ 'ಸಮನ್ವಯ'ವನ್ನು ಸಾಧಿಸಿದವರು. ತಮ್ಮ 'ದ್ಯಾವಾ ಪೃಥ್ವೀ'ಗೆ ಕೇಂದ್ರ ಸಾಹಿತ್ಯ ಅಕಾದೆಮಿಯ ಮತ್ತು 'ಭಾರತ ಸಿಂಧು ರಶ್ಮಿ'ಗೆ ಜ್ಞಾನಪೀಠ ಪುರಸ್ಕಾರವನ್ನು ಪಡೆದವರು. 1978ರಿಂದ 1988ರವರೆಗೆ ಕೇಂದ್ರ ಸಾಹಿತ್ಯ ಅಕಾದೆಮಿಯ ಉಪಾಧ್ಯಕ್ಷರು ಮತ್ತು ಅಧ್ಯಕ್ಷರಾಗಿದ್ದರು. ಈ ಪುಟ್ಟ ಪರಿಚಯಾತ್ಮಕ ಪುಸ್ತಕವು ಅವರ ಜೀವನ ಮತ್ತು ಕೃತಿಗಳಿಗೆ ಸಂಕ್ಷಿಪ್ತವಾದ, ಆದರೂ ಸಮಗ್ರತೆ ಮತ್ತು ಸರಳ ಮೌಲ್ಯ ಮಾಪನವನ್ನು ಒದಗಿಸುವ ಕೃತಿಯಾಗಿದೆ.

ಹೊನ್ನ ಕಣಜ
(ಶ್ರೀಮತಿ ಹೊನ್ನಮ್ಮನವರ ಜಾನಪದ ಸಿರಿಯ ಸಂಗ್ರಹ)
ಸಂ. : ಟಿ. ಗೋವಿಂದರಾಜು
ರೂ. 125

ಶ್ರೀಮತಿ ಹೊನ್ನಮ್ಮನವರು ಈ ಹೊತ್ತಿಗೂ ಜಾನಪದವನ್ನು ಪ್ರತಿನಿಧಿಸುತ್ತಿರುವ, ಜಾನಪದದಲ್ಲಿ ಬದುಕುತ್ತಿರುವ ಚೈತನ್ಯಶೀಲ ಮಹಿಳೆ. ಅವರ ಜಾನಪದ ಸಂವೇದನೆ ಶಿಷ್ಟ ಸಂವೇದನೆಯ ಭೇದದಿಂದ ಅತೀತವಾದುದು. ವ್ಯಕ್ತಿಯೊಬ್ಬಳ ಮನೋನೆಲೆಗಳನ್ನು ಸಮೀಪದಿಂದ ಸೂಕ್ಷ್ಮವಾಗಿ ಗ್ರಹಿಸಿದಾಗ ಮಾತ್ರ ಜಾನಪದ ವ್ಯಷ್ಟಿ ಪ್ರಜ್ಞೆ ಎಂತಹದೆಂದು ತಿಳಿಯಲು ಸಾಧ್ಯವಾಗಬಹುದು. ವ್ಯಷ್ಟಿ ಪ್ರಜ್ಞೆಯಲ್ಲಿ ಅಡಗಿರುವ ಸಮಷ್ಟಿಯ ಲಯಗಳು ಮತ್ತು ವ್ಯಷ್ಟಿಯ ಛಾಪುಗಳನ್ನು ಹೊತ್ತು ಸಮಷ್ಟಿಯೇ ಆಗುವ ಪ್ರಕ್ರಿಯೆಯನ್ನು ಈ ಕೃತಿಯು ಮನವರಿಕೆ ಮಾಡಿಕೊಡುತ್ತದೆ.

ಸಾದತ್ ಹಸನ್ ಮಾಂಟೊ
– ವಾರಿಸ್ ಅಲ್ವಿ
ಅನು : ಕೆ.ಹೆಚ್. ಶ್ರೀನಿವಾಸ
ರೂ. 40

ಮಂಟೋ ಅವರ ಸೃಜನಶಕ್ತಿಯ ಹರವು, ಮಿತವಾದ ಕಥಾ ನಿರೂಪಣೆ, ಶೈಲಿ ಹಾಗೂ ತಂತ್ರ ಉತ್ತಮ ಅಭಿರುಚಿಗೆ ಹಿಡಿದ ಕನ್ನಡಿ. ಮನುಷ್ಯ ಸ್ವಭಾವದ ಬಗ್ಗೆ ಅತ್ಯಂತ ಸೂಕ್ಷ್ಮ ಪರಿಜ್ಞಾನ ಅವರಿಗಿತ್ತು. ಜೀವನಾನುಭವಗಳನ್ನು ಅವಲೋಕಿಸಿ ಅವುಗಳನ್ನು ಅವರ ಸುಂದರ ಪ್ರಭಾವಿಯುತ ಕಥೆಗಳಲ್ಲಿ ಮೂರ್ತೀಕರಿಸುವ ರೀತಿ ನಮ್ಮನ್ನು ಬೆರಗುಗೊಳಿಸುತ್ತದೆ. ಉರ್ದು ಸಣ್ಣ ಕಥಾಲೋಕ ಮಂಟೊರವರ ಕಥೆಗಳಿಂದಾಗಿ ಶ್ರೀಮಂತವಾಗಿರುವುದಕ್ಕಾಗಿ, ಕಥಾಲೋಕದಲ್ಲಿ ಹೆಮ್ಮೆಯಿಂದ ಬೀಗುವ ಸ್ಥಾನವನ್ನು ತನ್ನದಾಗಿಸಿಕೊಂಡಿದೆ.

ಅಮೃತಲಾಲ್ ನಾಗರ್
– ಶ್ರೀಲಾಲ್ ಶುಕ್ಲ
ಅನು : 'ನಾ' ವುಜಿರೆ
ರೂ. 40

ಅಮೃತಲಾಲ್ ನಾಗರ ಅವರು ಹಿಂದಿಯಲ್ಲಿ ಸಾರ್ವತ್ರಿಕವಾದ ಮೆಚ್ಚುಗೆಗಳಿಸಿದ ಜನಪ್ರಿಯ ಸಾಹಿತಿಯಾಗಿದ್ದಾರೆ. ಅವರ ಪ್ರತಿಭೆ ಬಹುಮುಖಿಯಾಗಿದ್ದು, ಅದು ಅವರ ಸಣ್ಣ ಕಥೆ, ಹಾಸ್ಯ–ಹರಟೆ, ಏಕಾಂತ ನಾಟಕ, ಪ್ರಬಂಧ ಮತ್ತು ಕಾದಂಬರಿಗಳಲ್ಲಿ ಹೊರಹೊಮ್ಮಿತು. ಆದರೆ ಎಲ್ಲದಕ್ಕಿಂತ ಮೊದಲು ಅವರೊಬ್ಬ ಸಮರ್ಥ ಹಾಗೂ ಅಸಾಮಾನ್ಯ ಕಥೆಗಾರರಾಗಿದ್ದರು. ಹಿಂದಿಯಲ್ಲಿ ಮಾತ್ರವಲ್ಲ, ಇಡೀ ಭಾರತೀಯ ಸಾಹಿತ್ಯ ಕ್ಷೇತ್ರದಲ್ಲೇ ಅವರೊಬ್ಬ ಜನಮನ್ನಣೆ ಪಡೆದ ವಿಶಿಷ್ಟ ಬರಹಗಾರರು.

ಒರೆಸ್ತಿಯಾ
– ಇಸ್ಕಿಲಸ್
ಅನು : ವಿಜಯಾ ಗುತ್ತಲ
ರೂ. 100

ಒರೆಸ್ತಿಯಾ ಗ್ರೀಕ್ ಸಂಸ್ಕೃತಿಯಲ್ಲಿ ಬದಲಾವಣೆಯ ಒಂದು ಪ್ರಮುಖ ಘಟ್ಟದ ಚಿತ್ರವನ್ನು ಹಿಡಿದಿಟ್ಟಿದೆ. ಜಗತ್ತಿನ ಅತೀ ಪ್ರಾಚೀನ ನಾಟಕಗಳಲ್ಲೊಂದಾದರೂ, ನಾಟಕದ ಪಾತ್ರಗಳನ್ನು, ನಾಟಕದ ಸಂದರ್ಭವನ್ನು ಅತ್ಯಂತ ನೈಜವಾಗಿ ಪ್ರತಿಬಿಂಬಿಸುತ್ತದೆ. ನಿಜವಾದ ನ್ಯಾಯ ಯಾವುದು, ಮಾನವ ಮತ್ತು ದೇವತೆಗಳ ನಡುವಿನ ಸಂಬಂಧ ಎಂಥದು, ಮನುಷ್ಯ ಮನುಷ್ಯರ ನಡುವಿನ ಸಂಬಂಧ ಯಾವ ಬಗೆಯದು ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ ಮಾಡುತ್ತದೆ.

ಹಂಪಿಯಿಂದ ಹರಪ್ಪಾದವರೆಗೆ
– ತಿರುಮಲ ರಾಮಚಂದ್ರ
ಅನು : ಆರ್. ಶೇಷಶಾಸ್ತ್ರಿ
ರೂ. 325

ಈ ಆತ್ಮಕಥೆಯು ಲೇಖಕರ ವಿದ್ವತ್ತು, ಪತ್ರಿಕೋದ್ಯಮದ ಹೊಳಹುಗಳು, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಇತಿಹಾಸ ಇತ್ಯಾದಿಗಳಿಂದ ಒಂದು ಅಮೂಲ್ಯ ಹಾಗೂ ಅನನ್ಯ ನಿರೂಪಣೆಯ ಪುಸ್ತಕವಾಗಿ ಹೆಸರುವಾಸಿಯಾಗಿದೆ.

ಅದೆಷ್ಟು ಪಾಕಿಸ್ತಾನಗಳು
– ಕಮಲೇಶ್ವರ್
ಅನು : ಡಿ. ಎನ್. ಶ್ರೀನಾಥ್
ರೂ. 275

ಈ ಕಾದಂಬರಿ ಮಾನವತೆಯ ಬಾಗಿಲ ಮೇಲೆ ಕಟ್ಟುವ ಇತಿಹಾಸ ಮತ್ತು ಕಾಲಚಕ್ರದ ಒಂದು ಸದ್ದಾಗಿದೆ. ಭಾರತ ಮಾತ್ರವಲ್ಲ, ಜಗತ್ತಿನಲ್ಲಿ ಒಂದಾದ ಮೇಲೆ ಒಂದರಂತೆ ಮತ್ತೊಂದು ಪಾಕಿಸ್ತಾನವನ್ನು ಸೃಷ್ಟಿಸುವ ಈ ರಕ್ತ–ಸಿಕ್ತ ಪರಂಪರೆ ಇನ್ನಾದರೂ ಕೊನೆಗೊಳ್ಳಲಿ ಎಂಬ ಆಶಯವು ಈ ಕಾದಂಬರಿಯಲ್ಲಿ ಮೂಡಿಬಂದಿದೆ.

Subscribe Akademi's Bi-monthly Journal in English
Indian Literature
Single Copy : Rs. 50, One Year : Rs. 250, Three Years Rs. 650
Please send your subscription to Sahitya Akademi, Central College Campus, Dr. B. R. Ambedkar Veedhi, Bengaluru - 560 001
Ph : 080-22245152, e-mail : sahityakademi@gmail.com